ವಿಶ್ವವಾಣಿ
ವಿಶ್ವಾಸವೇ ವಿಶ್ವ

ಬಾರಿಸು ಕನ್ನಡ ಡಿಂಡಿಮವ
ಓ ಕರ್ನಾಟಕ ಹೃದಯ ಶಿವ
ಸತ್ತಂತಿಹರನು ಬಡಿದೆಚ್ಚರಿಸು
ಕಚ್ಚಾಡುವರನು ಕೂಡಿಸಿ ಒಲಿಸು
ಹೊಟ್ಟೆಯ ಕಿಚ್ಚಿಗೆ ಕಣ್ಣೀರ್ ಸುರಿಸು
ಒಟ್ಟಿಗೆ ಬಾಳುವ ತೆರದಲಿ ಹರಸು
ಚೈತ್ರ ಶಿವೇತರ ಕೃತಿ ಕೃತಿಯಲ್ಲಿ
ಮೂಡಲಿ ಮಂಗಳ ಮತಿ ಮತಿಯಲ್ಲಿ
ಕವಿ ಋಷಿ ಸಂತರ ಆದರ್ಶದಲಿ
ಸರ್ವೋದಯವಾಗಲಿ ಸರ್ವರಲಿ.
-ಕುವೆಂಪು

ತಾಯೆ ಬಾರ ಮೊಗವ ತೋರ
ಕನ್ನಡಿಗರ ಮಾತೆಯೇ, ಹರಸು
ತಾಯೆ ಸುತರ ಕಾಯೆ ನಮ್ಮ
ಜನ್ಮದಾತೆಯೇ
ಮಂಜೇಶ್ವರ ಗೋವಿಂದ ಪೈ

ಎಲ್ಲಾದರು ಇರು ಎಂತಾದರು
ಇರು, ಎಂದೆಂದಿಗು ನೀ
ಕನ್ನಡವಾಗಿರು, ಕನ್ನಡವೇ ಸತ್ಯ,
ಕನ್ನಡವೇ ನಿತ್ಯ
ಕುವೆಂಪು

ಆರಂಕುಶವಿಟ್ಟೊಡಂ ನೆನೆವುದೆನ್ನ
ಮನಂ ಬನವಾಸಿ ದೇಶಮಂ
ಪಂಪ

ಜೋಗದ ಸಿರಿ ಬೆಳಕಿನಲ್ಲಿ,
ತುಂಗೆಯ ತೆನೆ ಬಳುಕಿನಲ್ಲಿ,
ಸಹ್ಯಾದ್ರಿಯ ಲೋಹದದಿರ
ಉತ್ತುಂಗದ ನಿಲುಕಿನಲ್ಲಿ, ನಿತ್ಯ
ಹರಿದ್ವರ್ಣವನದ ತೇಗ ಗಂಧ
ತರುಗಳಲ್ಲಿ, ನಿತ್ಯೋತ್ಸವ ತಾಯೆ
ನಿತ್ಯೋತ್ಸವ
ಕೆ.ಎಸ್.ನಿಸಾರ್ ಅಹಮದ್

ಕನ್ನಡದ ಕುಲದೇವಿ ಕಾಪಾಡು ಬಾ
ತಾಯೇ, ಮುನ್ನಡೆಯ ಕನ್ನಡದ
ದಾರಿದೀವಿಗೆ ನೀನೇ
ಜಿ.ವಿ.ಅಯ್ಯರ್

ನರಕಕ್ಕಿಳ್ಸಿ ನಾಲ್ಗೆ ಸೀಳ್ಸಿ ಬಾಯಿ
ಒಲಿಸಾಕಿದ್ರೂನೆ, ಮೂಗ್ನಲ್
ಕನ್ನಡ ಪದವಾಡ್ತೀನಿ ನನ್
ಮನಸನ್ ನೀ ಕಾಣೆ
ಜಿ.ಪಿ.ರಾಜರತ್ನಂ
ಹುಟ್ಟಿದರೆ ಕನ್ನಡನಾಡಲ್

ಹುಟ್ಟಬೇಕು, ಮೆಟ್ಟಿದರೆ ಕನ್ನಡ
ಮಣ್ಣ ಮೆಟ್ಟಬೇಕು, ಬದುಕಿದು
ಜಟಕಾಬಂಡಿ, ಇದು
ವಿಧಿಯೋಡಿಸುವಾ ಬಂಡಿ
- ಹಂಸಲೇಖ

ಜೇನಿನ ಹೊಳೆಯೋ, ಹಾಲಿನ
ಮಳೆಯೋ, ಸುಧೆಯೋ ಕನ್ನಡ
ಸವಿನುಡಿಯೋ, ವಾಣಿಯ
ವೀಣೆಯ ಸ್ವರಮಾಧುರ್ಯವೋ
ಸುಮಧುರ ಸುಂದರ ನುಡಿಯೋ
ಚಿ.ಉದಯಶಂಕರ್

ಸಿರಿವಂತನಾದರೂ ಕನ್ನಡ ನಾಡಲ್ಲೆ
ಮೆರೆವೆ, ಭಿಕ್ಷುಕನಾದರೂ ಕನ್ನಡ
ನಾಡಲ್ಲೆ ಮಡಿವೆ
ಸಿ.ವಿ.ಶಿವಶಂಕರ್

70ನೇ ಕರ್ನಾಟಕ ರಾಜ್ಯೋತ್ಸವದ ಹೊಸ್ತಿಲಿನಲ್ಲಿರುವ ಕನ್ನಡ ನಾಡಿನಲ್ಲಿ ಈಗಲೂ ಕನ್ನಡ ಭಾಷೆಯ ಸ್ಥಿತಿಗತಿ ಬಗ್ಗೆ ಚರ್ಚೆಯಾಗುತ್ತಿವೆ. ಇದನ್ನು ಮುಂದಿಟ್ಟುಕೊಂಡು ವಿಶ್ವವಾಣಿ ನಾಡಿನ ಚಿಂತಕರು, ಹೋರಾಟಗಾರರ ಮುಂದೆ ಕನ್ನಡ ಅನ್ನದ ಭಾಷೆಯಾಗಿದೆಯೇ?, ಕರ್ನಾಟಕದಲ್ಲಿ ದ್ವಿಭಾಷಾ ನೀತಿ ಅಳವಡಿಸಿಕೊಳ್ಳಬೇಕೆ? ಎಂಬ ಎರಡು ಪ್ರಶ್ನೆಗಳನ್ನು ಮುಂದಿಟ್ಟು ಉತ್ತರ ಪಡೆಯುವ ಪ್ರಯತ್ನ ನಡೆಸಿದೆ. ಗಣ್ಯರ ಅಭಿಪ್ರಾಯಗಳು ಇಲ್ಲಿವೆ.

ಚಿನ್ನದ ಭಾಷೆ, ಅನ್ನದ ಭಾಷೆಯೂ ಆಗಲಿ

ಉದ್ಯೋಗದಲ್ಲಿ ಮೀಸಲು ನೀಡಬೇಕು

ಕರ್ನಾಟಕದಲ್ಲಿ ಕನ್ನಡವೇ ಅನ್ನದ ಭಾಷೆ ಯಾಗ ಬೇಕು ಎಂದು ಹೇಳುವುದು ಸರಿ. ಆದರೆ ಅದಕ್ಕೆ ನಾವು ಹಾಗೂ ನಮ್ಮನ್ನು ಆಳುವ ಸರಕಾರಗಳು ಏನು ಮಾಡಿವೆ ಎನ್ನುವ ಬಗ್ಗೆ ಆಲೋಚಿಸ ಬೇಕಿದೆ. ಅನ್ನದ ಭಾಷೆಯನ್ನಾಗಿ ಮಾಡುವುದಕ್ಕೆ ನಮ್ಮ ಆಲೋಚನೆಯಿಲ್ಲದೇ ಹೋದರೆ, ಯುವಕರಿಗೆ ಕನ್ನಡ ಬಳಸಿ, ಮಾತಾಡಿ, ಓದಿ ಎಂದು ಹೇಳುವುದು ಕಷ್ಟವಾಗುತ್ತದೆ.

ರಾಜ್ಯದಲ್ಲಿ ಈವರೆಗೆ ಕನ್ನಡ ಅನ್ನದ ಭಾಷೆ ಯಾಗಿಲ್ಲ. ಆದ್ದರಿಂದ ರಾಜ್ಯ ಸರಕಾರಗಳು ಸರಕಾರಿ ಉದ್ಯೋಗ ವನ್ನು ಜಾತಿ, ಧರ್ಮದ ಆಧಾರದಲ್ಲಿ ನೀಡುವ ಬದಲು ಭಾಷೆಯ ಆಧಾರದಲ್ಲಿ ನೀಡಿದಾಗ ಕನ್ನಡ ಅನ್ನದ ಭಾಷೆ ಯಾಗಲು ಸಾಧ್ಯ. ನಾವು ಕನ್ನಡಕ್ಕೆ ಈ ರೀತಿಯ ಮಹತ್ವದ ನೀಡದೇ ಕನ್ನಡವನ್ನು ಬಳಸಿ, ಮಾತನಾಡಿ, ಓದಿಕೊಳ್ಳಿ ಎಂದು ಹೇಳಿದರೆ ಅದು ಪಾಲನೆಯಾಗು ವುದು ಕಷ್ಟವಾಗುತ್ತದೆ. ಆದ್ದ ರಿಂದ ಯಾವುದೇ ಕ್ಷೇತ್ರ ದಲ್ಲಿ ಉದ್ಯೋಗ ನೀಡು ವಾಗ ಇಂತಿಷ್ಟು ಮೀಸಲನ್ನು ಕನ್ನಡಿಗರಿಗೆ ನೀಡುವ ನಿಟ್ಟಿನಲ್ಲಿ ಸರಕಾರ ಚಿಂತನೆ ನಡೆಸಬೇಕಿದೆ.

ಕೇಂದ್ರ ಸರಕಾರಿ ಹುದ್ದೆಗಳಿಗೆ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಮಾತ್ರ ಬರೆಯಲು ಅವಕಾಶ ನೀಡುತ್ತಿರುವುದು ಕನ್ನಡಕ್ಕೆ ಆಗುತ್ತಿರುವ ಅನ್ಯಾಯ. ಕರ್ನಾಟಕದಲ್ಲಿ ಹಿಂದಿ ಆಡಳಿತ ಭಾಷೆಯೂ ಅಲ್ಲ, ಮಾತೃಭಾಷೆಯೂ ಅಲ್ಲ. ಹೀಗಿರುವಾಗ, ವಿದ್ಯಾರ್ಥಿಗಳು ಹಿಂದಿಯನ್ನು ಏಕೆ ಓದಬೇಕು? ಆದರೆ ಹಿಂದಿ ಭಾಷಿಗ ರಾಜ್ಯ ಗಳಿಂದ ಬರುವ ಅಭ್ಯರ್ಥಿಗಳಿಗೆ ಹಿಂದಿಯ ಮೇಲೆ ಹಿಡಿತವಿರುತ್ತದೆ. ಆದ್ದರಿಂದ ಆ ರಾಜ್ಯದ ವಿದ್ಯಾರ್ಥಿ ಗಳು ಮೆರಿಟ್ ಬರುತ್ತಾರೆ. ಕೇಂದ್ರ ಸರಕಾರ ನಡೆಸುವ ಪರೀಕ್ಷೆ ಗಳಲ್ಲಿ ಕನ್ನಡದಲ್ಲಿ ಬರೆಯಲು ಅವಕಾಶ ನೀಡಿದಾಗ ಮಾತ್ರ ಕನ್ನಡ ಅನ್ನದ ಭಾಷೆಯಾಗಲಿದೆ.

ಇನ್ನು ದ್ವಿಭಾಷಾ ಸೂತ್ರದ ಬಗ್ಗೆ ಮಾತನಾಡು ವುದಾದರೆ, ಕರ್ನಾಟಕದಲ್ಲಿ ತ್ರಿಭಾಷಾ ಸೂತ್ರದ ಅಗತ್ಯವೇನಿದೆ? ಈಗಾಗಲೇ ನೆರೆ ರಾಜ್ಯ ತಮಿಳು ನಾಡಿನಲ್ಲಿ ಹಲವು ವರ್ಷ ಗಳ ಹಿಂದೆಯೇ ದ್ವಿಭಾಷಾ ಸೂತ್ರವನ್ನು ಅಳವಡಿಸಿ ಕೊಳ್ಳಲಾಗಿದೆ. ಬಿಜೆಪಿ ಅಧಿಕಾರದಲ್ಲಿರುವ ಮಹಾರಾಷ್ಟ್ರ ದಲ್ಲಿಯೂ ದ್ವಿಭಾಷಾ ಸೂತ್ರ ಅಳವಡಿಸಿ ಕೊಳ್ಳಲಾಗಿದೆ. ಹೀಗಿರು ವಾಗ ಕರ್ನಾಟಕ ದಲ್ಲಿ ಮಾತ್ರ ಏಕೆ ತ್ರಿಭಾಷಾ ಸೂತ್ರ ಬೇಕು? ತ್ರಿಭಾಷಾ

ನಾರಾಯಣ ಗೌಡ
ಅಧ್ಯಕ್ಷ, ಕನ್ನಡ ರಕ್ಷಣಾ ವೇದಿಕೆ

ಸೂತ್ರದಿಂದ ವಲಸೆ ಬಂದವರಿಗೆ ಅನೂಕುಲವಾಗು ತ್ತಿದೆಯೇ ಹೊರತು ಮೂಲ ಕನ್ನಡಿಗರಿ ಗಲ್ಲ. ಹಾಗೇ ನೋಡಿದರೆ, ಕಳೆದ ಮೂರು ವರ್ಷದ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಸುಮಾರು ಮೂರು ಲಕ್ಷ ವಿದ್ಯಾ ರ್ಥಿಗಳು ಹಿಂದಿ ವಿಷಯ ದಲ್ಲಿ ಫೇಲಾಗಿದ್ದಾರೆ. 2022-23 ರಲ್ಲಿ 1.05 ಲಕ್ಷ ವಿದ್ಯಾರ್ಥಿಗಳು, 2023- 24ರಲ್ಲಿ 96 ಸಾವಿರ ಹಾಗೂ ಪ್ರಸಕ್ತ ವರ್ಷ 1.12 ಲಕ್ಷ ವಿದ್ಯಾರ್ಥಿಗಳು ಹಿಂದಿ ಭಾಷಾ ವಿಷಯದಲ್ಲಿ ಫೇಲಾಗಿ ದ್ದಾರೆ. ಇದಕ್ಕೆ ಹೊಣೆ ಯಾರು? ಆದ್ದರಿಂದ ಕನ್ನಡಿಗರ ಮೇಲೆ ಒತ್ತಡ ಹೇರಿ ತ್ರಿಭಾಷಾ ಸೂತ್ರವನ್ನು ಅಳವಡಿಸು ವುದಕ್ಕಿಂತ ದ್ವಿಭಾಷಾ ಸೂತ್ರ ಅನುಕೂಲವಾಗಲಿದೆ. ನಮ್ಮ ದೇಶ ರಚನೆಯಾಗಿರು ವುದೇ ಭಾಷೆಯ ಆಧಾರ ದಲ್ಲಿ. ಯಾವ ಭಾರತವನ್ನು ರಾಜ್ಯ ಆಡಳಿತ, ಬದುಕಿನ, ಅನ್ನ ಭಾಷೆ

ಯಾವುದು ಎನ್ನುವುದನ್ನು ನೋಡಿಕೊಂಡೇ ವಿಂಗಡಿಸಲಾಗಿದೆ. ಹೀಗಿರುವಾಗ 'ರಾಷ್ಟ್ರೀಯ ಭಾಷೆ ಹಿಂದಿ' ಎನ್ನುವ ಸುಳ್ಳು ಮಾಹಿತಿಯಲ್ಲಿ ನಮ್ಮ ಹೇರಿಕೆ ಮಾಡುವು ದೇಕೆ? ಭಾಷೆಯಿಂದಲೇ ವಿಗಂಡನೆ ಯಾಗಿರುವ ಒಕ್ಕೂಟ ವ್ಯವಸ್ಥೆಗೆ ಇದು ಧಕ್ಕೆಯಾಗು ವುದಿಲ್ಲವೇ? ಈ ಎಲ್ಲವನ್ನು ಮೀರಿ ಕನ್ನಡಕ್ಕೆ ಅದರದ್ದೇಯಾದ ಇತಿಹಾಸವಿದೆ. ಅದನ್ನು ಉಳಿಸಿಕೊಳ್ಳು ವುದು ನಮ್ಮ ಕರ್ತವ್ಯ. ಆದ್ದರಿಂದ ಕನ್ನಡವನ್ನು ಅನ್ನದ ಭಾಷೆಯನ್ನಾಗಿ ಸ್ವೀಕರಿಸಿದರೆ ಮಾತ್ರ ಭಾಷೆಯ ಉಳಿಯು ಸಾಧ್ಯ. ಈ ನಿಟ್ಟಿನಲ್ಲಿ ಎಲ್ಲ ರಾಜಕೀಯ ಪಕ್ಷಗಳು ಆಲೋಚಿಸುವುದು ಉತ್ತಮ.

(ನಿರೂಪಣೆ: ರಂಜಿತ್ ಎಚ್. ಅಶ್ವತ್ಥ)

ಪರೀಕ್ಷೆಗಳು ಕನ್ನಡದಲ್ಲೇ ನಡೆಯಬೇಕು

ಕನ್ನಡ ಸ್ವಲ್ಪ ಮಟ್ಟಿನ ಅನ್ನದ ಭಾಷೆ ಯಾಗಿದೆ. ಏಕೆಂದರೆ ರೈಲ್ವೆ, ಬ್ಯಾಂಕಿಂಗ್ ಪರೀಕ್ಷೆಗಳು ಕನ್ನಡ ಭಾಷೆಯಲ್ಲಿ ನಡೆಯುತ್ತಿವೆ. ಬೇರೆ ಬೇರೆ

ಮನು ಬಳಿಗಾರ್
ನಿಕಟಪೂರ್ವ ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್

ಕಡೆಗಳಲ್ಲಿಯೂ ಕನ್ನಡದ ಬಳಕೆ ಆರಂಭ ವಾಗಿದ್ದು, ಎಲ್ಲಾ ಕಡೆಗಳಲ್ಲಿಯೂ ಕನ್ನಡ ವಿಜೃಂಭಿಸಬೇಕು. ಕೇಂದ್ರ ಸರಕಾರದ ವರು ಎಲ್ಲಾ ಕೇಂದ್ರ ಸರಕಾರದ ನೌಕರಿ ಯಲ್ಲಿ ಕನ್ನಡ ಬಳಕೆಯನ್ನು ಮಾಡಲು ಅವಕಾಶ ನೀಡಬೇಕು. 1986ರಿಂದಲೂ ಐಎಎಸ್ ಪರೀಕ್ಷೆಯನ್ನು ಕನ್ನಡ ಭಾಷೆ ಯಲ್ಲಿಯೇ ಬರೆಯಲು ಅವಕಾಶ ನೀಡಲಾಗಿತ್ತು. ಇನ್ನು ಮುಂದಿನ ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರದ ಉದ್ಯೋಗಾಧಾರಿತ ಪರೀಕ್ಷೆಗಳು ಕನ್ನಡ ದಲ್ಲಿ ಬರುವಂತಾಗಬೇಕು. ಎರಡು ಸರಕಾರಗಳೂ ಈ ಕುರಿತು ಗಮನಹರಿಸ ಬೇಕು. ಹಳ್ಳಿಯಿಂದ ಬಂದಂತಹವರಿಗೆ ಪ್ರತಿಭೆಯಿದ್ದರೂ ಆಂಗ್ಲ ಭಾಷೆ ಬರುವು ದಿಲ್ಲ ಎನ್ನುವ ಕಾರಣದಿಂದ ಅವಕಾಶ ವಂಚಿತರಾಗುತ್ತಿದ್ದಾರೆ. ಕನ್ನಡ ಮಾಧ್ಯ ಮವನ್ನು ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆ ಗಳಲ್ಲಿ ಕಡ್ಡಾಯ ಗೊಳಿಸಬೇಕು. ಸಂವಿ ಧಾನದಲ್ಲಿ ಎಲ್ಲಾ ಭಾಷೆಗಳೂ ಗುರುತಿ ಸಲ್ಪಟ್ಟಿವೆ ಕೇವಲ ಹಿಂದಿ ಆಂಗ್ಲ ಭಾಷೆ ಮಾತ್ರವಲ್ಲ. ಹಿಂದಿಯಲ್ಲಿ ಮಾಡಲಿ ಅದಕ್ಕೇನೂ ವಿರೋಧವಿಲ್ಲ ಆದರೆ ಪ್ರಾಂತೀಯ ಭಾಷೆಗಳಲ್ಲಿಯೂ ಸಮಾನ ಅವಖಾಶ ದೊರೆಯಬೇಕು. ಬೇರೆ ಬ್ಯಾಂಕ್‌ಗಳಲ್ಲಿ ಬೇರೆ ರಾಜ್ಯದ ವರೇ ತುಂಬಿದ್ದಾರೆ, ರೈಲ್ವೆ ಯಲ್ಲಿಯೂ ಕನ್ನಡಿಗರ ಸಂಖ್ಯೆಯಿಲ್ಲ. ಕೇಂದ್ರ ಸರಕಾರದ ಉದ್ದಿಮೆಗಳಲ್ಲಿ ಕನ್ನಡ ಭಾಷೆ ಬಳಕೆಗೆ ಬರಬೇಕು. ಎಲ್ಲಾ ಉದ್ದಿಮೆ ಗಳಲ್ಲಿಯೂ ಶೇ.80ರಷ್ಟು 'ಡಿ' ಗ್ರೂಪ್, ಸಿ ಗ್ರೂಪ್ ಎನ್ನದೇ ಎಲ್ಲಾ ಹುದ್ದೆಗಳಿಗೂ ಕನ್ನಡ ಭಾಷೆಯ ಬಳಕೆ ಬರಬೇಕು. ಕನ್ನಡ ಮಾಧ್ಯಮದಲ್ಲಿ ಕಲಿತವರು ದೇಶ ದಲ್ಲೇ ರ್‍ಯಾಂಕ್ ಗಳಿಸಿದ್ದಾರೆ. ಕನ್ನಡ ಶಾಲೆಗೆ ಮೂಲ ಸೌಕರ್ಯ ಒದಗಿಸು ವತ್ತ ಲಕ್ಷ್ಯ ವಹಿಸಬೇಕು.

ದ್ವಿಭಾಷ ಸೂತ್ರ ಅಳವಡಿಕೆ ಸೂಕ್ತ: ದ್ವಿ ಭಾಷಾ ಸೂತ್ರ ಅಳವಡಿಸಲಿ, ಅದು ಒಳ್ಳೆಯದ್ದು. ಆದರೆ ಮೂರನೇ ಭಾಷೆ ಯನ್ನು ಕಲಿಯಲು ಅವಕಾಶ ವನ್ನೂ ನೀಡಲಿ. ದ್ವಿ ಭಾಷಾ ಸೂತ್ರ ಕಲಿಯಲು ಅವಕಾಶವಿರಲಿ ಕಡ್ಡಾಯ ಮಾಡಬಾ ರದು. ಜ್ಞಾನಕ್ಕಾಗಿ ಉತ್ತಮವೇ ಆದರೆ ಹಿಂದಿಯಾಗಲೀ, ಆಂಗ್ಲ ಭಾಷೆಯ ಹೇರಿಕೆಯಾಗಬಾರದು. ಶಿಕ್ಷಣದಲ್ಲಿ ಕನ್ನಡ ಮಾಧ್ಯಮ ಪ್ರಾಧ್ಯಾಪಕರಿಗೆ, ಶಿಕ್ಷಕರಿಗೆ ಸಂಬಳ ದುಪ್ಪಟ್ಟಾಗಬೇಕು. ವಿವಿ ಹಂತಗಳಲ್ಲಿ ಕನ್ನಡ ವಿಭಾಗವು ಮುಚ್ಚಲು ಅವಕಾಶದ ಕೊರತೆಯೇ ಮುಖ್ಯ ಕಾರಣ. ಕನ್ನಡ ಶಿಕ್ಷಕರಿಗೆ ಉತ್ತಮ ಸಂಬಳವಿಲ್ಲ, ಕನ್ನಡ ಪದವಿ ಪಡೆದವರಿಗೆ ಉದ್ಯೋಗವಿಲ್ಲದ ರೀತಿ ಯಾಗಿದೆ. ಇದರ ಕುರಿತು ರಾಜ್ಯ, ಕೇಂದ್ರ ಸರಕಾರ ಗಮನಕೊಡಬೇಕು. ನಾವು ಮಾತ್ರ ಭಾಷೆಗೆ ಆದ್ಯತೆ ಕೊಡು ತ್ತೇವೆ ಎಂದು ಹೇಳುತ್ತಾರಷ್ಟೇ, ಆದರೆ ಕಾರ್ಯರೂಪಕ್ಕೆ ಬರುವುದಿಲ್ಲ. ಆದು ಕಾರ್ಯರೂಪಕ್ಕೆ ಬರಬೇಕು. ಯಾವುದೇ ಕಾರಣಕ್ಕೂ ಭಾರತೀಯ ಪ್ರಾದೇಶಿಕ ಭಾಷೆಗಳು ಅಳಿಸಿ ಹೋಗ ಬಾರದು, ಮಹತ್ವ ಕಳೆದು ಕೊಳ್ಳಬಾರದು. ಶಿಕ್ಷಣ ಮತ್ತು ಉದ್ಯೋಗದಲ್ಲಿ ಕನ್ನಡ ಬರಬೇಕು. ಕೇಂದ್ರ ಸರಕಾರ ಕನ್ನಡ ಭಾಷೆಯನ್ನು ಕಡ್ಡಾಯವಾಗಿಸ ಬೇಕು. ನಮ್ಮವರು ಹೇಗೆ ಹಿಂದಿ ಕಲಿ ಯುತ್ತಾರೋ ಹಿಂದಿ ಹುಡು ಗರು ಇತರೆ ಭಾಷೆಗಳನ್ನು ಕಲಿಯಲಿ. ಆಯಾಯಾ ಪ್ರಾದೇಶಿಕ ಭಾಷೆಗಳನ್ನು ಎಲ್ಲರೂ ಕಲಿ ಯಲಿ. ಕನ್ನಡ ಮತ್ತು ಸಂಸ್ಕೃತಿ ಇಲಾ ಖೆಗೆ ಹೆಚ್ಚಿನ ಅನುದಾನ ಕೊಡಬೇಕು. ಕಲಾವಿದರು, ಸಾಹಿತಿಗಳು ಸಂಪರ್ಕದ ಲ್ಲಿರುತ್ತಾರೆ. ಈಗಿರುವ ಅನುದಾನಕ್ಕಿಂತ ಹೆಚ್ಚಿನ ಅನುದಾನದ ಅಗತ್ಯವಿದೆ. ಆಗ ಮಾತ್ರ ಕನ್ನಡದ ಉಳಿವಿಗೆ ಸಹಕಾರ ಆಗುವುದು.

(ನಿರೂಪಣೆ: ಅಪರ್ಣಾ ಎ.ಎಸ್.)

ಸಂವಿಧಾನಕ್ಕೆ ತಿದ್ದುಪಡಿ ತರುವುದು ಅಗತ್ಯ

ಕನ್ನಡ ಅನ್ನ ಭಾಷೆಯಾಗಿದೆಯೇ ಎನ್ನುವ ಪ್ರಶ್ನೆಗಳು ಬಂದಾಗ ನನಗೆ ಸದಾ ಅನಿಸುವುದು, ಕನ್ನಡ ಭಾಷೆ ಅನ್ನದ ಭಾಷೆಯಾ ಎನ್ನುವ ಪ್ರಶ್ನೆಯನ್ನು ಎತ್ತುವ ಬದಲು, ಕನ್ನಡವನ್ನು ಅನ್ನದ ಭಾಷೆಯನ್ನಾಗಿ ಮಾಡಲು ಏನು ಮಾಡಬೇಕು ಎನ್ನುವುದನ್ನು ಆಲೋಚಿಸಬೇಕಿದೆ.

ನಮ್ಮ ದೇಶದಲ್ಲಿ ಹಿಂದಿಗೆ ಯಾವ ಪ್ರಮಾಣದಲ್ಲಿ ಪ್ರಾಮುಖ್ಯತೆ ಸಿಗುತ್ತಿದೆಯೋ ಅಷ್ಟೇ ಪ್ರಮಾಣದ ಪ್ರಾಮುಖ್ಯತೆಯನ್ನು ಕರ್ನಾಟಕದಲ್ಲಿ ಕನ್ನಡ ಬದಲಾಗುವುದು ಅಗತ್ಯ. ಈ ನಿಟ್ಟಿನಲ್ಲಿ ಭಾಷಾ ಸಂವಿಧಾನಕ್ಕೆ ಕೆಲ ತಿದ್ದುಪಡಿ ತರಬೇಕಿದೆ. ಈಗಿರುವಂತೆ ಕೇವಲ ಹಿಂದಿಗೆ ಮಾತ್ರ ಅವಕಾಶ ನೀಡದೇ, ಎಲ್ಲ ಭಾಷೆಗಳಿಗೂ ಸಮಾನ ಪ್ರಾಮುಖ್ಯತೆ, ಅವಕಾಶ ಸಿಗುವಂತೆ ಸಂವಿಧಾನದಲ್ಲಿ ತಿದ್ದುಪಡಿ ತಂದಾಗ ಮಾತ್ರ ಅನ್ನದ ಭಾಷೆ ಮಾಡಲು ಸಾಧ್ಯ. ಎಲ್ಲಕ್ಕಿಂತ ಮುಖ್ಯವಾಗಿ ಯಾವುದೇ ಭಾಷೆ ಅನ್ನದ ಭಾಷೆಯ ನ್ನಾಗಿಸಲು ಉದ್ಯೋಗಾವಕಾಶ ಇರಬೇಕು. ಆದ್ದರಿಂದ ಕೇಂದ್ರ ಸರಕಾರದ ಯಾವುದೇ ಉದ್ಯೋಗವಿರಲಿ, ಅದರಲ್ಲಿ ಕೇವಲ ಇಂಗ್ಲಿಷ್ ಹಾಗೂ ಹಿಂದಿಗೆ ಮಾತ್ರ ಪಾಲು ನೀಡುವ ಸಂಪ್ರದಾಯವನ್ನು ಕೈಬಿಡಬೇಕು. ಅದರ ಬದಲಿಗೆ ಪ್ರಾದೇಶಿಕ ಭಾಷೆಗಳಲ್ಲಿ ಉತ್ತರಿಸುವುದಕ್ಕೆ ಅವಕಾಶ ನೀಡ ಬೇಕು. ಇದರೊಂದಿಗೆ ಸಂದರ್ಶನದ ಸಮಯದಲ್ಲಿ ಸ್ಥಳೀಯ ಭಾಷೆಯಲ್ಲಿಯೇ ಸಂದರ್ಶನದಲ್ಲಿ ಭಾಗವಹಿ ಸಲು ಅನುಕೂಲವಾಗುವಂತೆ

ಟಿ.ಎಸ್.ನಾಗಾಭರಣ
ನಿಕಟಪೂರ್ವ ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಕ್ರಮವಹಿಸಬೇಕು. ಕೇಂದ್ರ ಸರಕಾರಿ ನೌಕರರ ಸಂದರ್ಶನ ಗಳನ್ನು ಆಯಾ ರಾಜ್ಯಗಳಿಗೆ ವಿಕೇಂದ್ರೀಕರಣಗೊಳಿಸಬೇಕು.

ಈ ಹಿಂದೆ ರಾಜ್ಯಾವಾರು ಸಂದರ್ಶನಗಳು ನಡೆಯುತ್ತಿತ್ತು. ಆಗ ಅಲ್ಲಿಯವರಿಗೆ ಕೆಲಸ ಸಿಗುತ್ತಿತ್ತು. ಈಗ ಸಂಪೂರ್ಣವಾಗಿ ಹಿಂದಿಯವರೇ ಆವರಿಸಿಕೊಂಡಿದ್ದಾರೆ. ಅದಕ್ಕೆ ಕಾರಣ ಕೇವಲ ಹಿಂದಿ ಹಾಗೂ ಆಂಗ್ಲ ಭಾಷೆಯನ್ನೇ ಬಳಕೆ ಮಾಡುತ್ತಿರುವುದು. ಇದರಿಂದಾಗಿ ಕೇಂದ್ರೀಯ ಉದ್ಯೋಗಗಳು ಅವರ ಪಾಲಾ ಗಿದೆ. ಆದ್ದರಿಂದ ಇದನ್ನು ಮೊದಲು ರದ್ದುಪಡಿಸ ಬೇಕು (ಅಬೊಲಿಶ್). ಐಎಎಸ್, ಐಪಿಎಸ್ ಇತ್ಯಾದಿಗಳು ಆಯಾ ಭಾಷೆಯಲ್ಲಾಗಬೇಕು. ಎಲ್ಲವನ್ನೂ ಕೇಂದ್ರೀಕೃತ ಮಾಡಿ ಕೊಂಡು ಸಂಪೂರ್ಣ ಭಾರತದ ಒಕ್ಕೂಟ ವ್ಯವಸ್ಥೆಯನ್ನು ಏಕೀಕೃತ ವ್ಯವಸ್ಥೆಯನ್ನಾಗಿ ಮಾಡುತ್ತಿರುವುದು ತಪ್ಪು. ಕೆಲವು ಏಕೀಕೃತವಾಗಬೇಕು ಹಾಗೆಂದ ಮಾತ್ರಕ್ಕೆ ಎಲ್ಲವೂ ಏಕೀಕೃತವಾಗಬಾರದು. ಭಾಷೆ ವಿವಿಧತೆಯನ್ನು ಹೇಳುವಂತ ಹದ್ದು, ನಾವು ಒಗ್ಗೂಡಿರುವುದೇ ಭಾಷೆಯ ಮುಖಾಂತರ ಎಲ್ಲಾ ಭಾಷೆಗಳನ್ನು ಗೌರವಿಸುತ್ತೇವೆ ಎನ್ನುವ ಮಾತಿಗಾಗಿಯೇ ಎಲ್ಲರೂ ಒಗ್ಗೂಡಿರುವುದು. ಅಂತಹದ್ದರಲ್ಲಿ ಆಭೆಯನ್ನು ಬಳಸುವ ಕ್ರಮ ಬೇರೆ ರೀತಿಯಾಗಿ ಬಿಟ್ಟಿದೆ.

ಶಿಕ್ಷಣದಲ್ಲಿ ಅನ್ನದ ಭಾಷೆಯನ್ನು ಕಡ್ಡಾಯವಾಗಿಸಬೇಕು. ಮೊದಲನೇ ತರಗತಿಯಿಂದ ಕಡ್ಡಾಯವಾಗಿಸಿದರೆ ಮಾತ್ರ ಇದಾಗಲು ಸಾಧ್ಯ. ಮಾಂಟೆಸ್ಸರಿಯಲ್ಲಿ ಆಂಗ್ಲ ಭಾಷೆ ಹೇಳಿಕೊಡಿ ಎನ್ನುವುದು ರದ್ದಾಗಬೇಕು. ಆಗ ಮಾತ್ರ ಕನ್ನಡಕ್ಕೆ ಹಾಗೂ ಆಯಾಯ ಭಾಷೆಗಳಿಗೆ ಮೌಲ್ಯ ದೊರೆಯುವುದು. ಆಯಾಯ ರಾಜ್ಯಭಾಷೆಗಳಿಗೆ ದೊರೆಯಬೇಕಾದ ಸ್ಥಾನ ಮಾನ, ಗೌರವ, ಮರ್ಯಾದೆ ಎಲ್ಲಾ ಕೊಟ್ಟರೆ ಎಲ್ಲವೂ ಸರಿಯಾಗುತ್ತದೆ. ಇದನ್ನು ಯಾವ ಸರಕಾರವೂ ಮಾಡಲಿಚ್ಛಿಸು ವುದಿಲ್ಲ. ಇನ್ನು ದ್ವಿಭಾಷಾ ಸೂತ್ರಕ್ಕೆ ಒಪ್ಪಿಕೊಂಡವರು ಯಾರು? ರಾಜಕೀಯವಾಗಿ ತಮ್ಮ ಬೇಳೆ ಬೇಯಿಸಿ ಕೊಳ್ಳುವುದಕ್ಕಾಗಿ ತ್ರಿಭಾಷಾ ಸೂತ್ರವನ್ನು ಒಪ್ಪಿಕೊಂಡಿರುವ ಎಲ್ಲಾ ಸರಕಾರಗಳಿಗೂ ಧಿಕ್ಕಾರ. ಮೂರು ಭಾಷೆ ಕಲಿತರೆ ಬೇಡ ಎನ್ನುವುದಿಲ್ಲ. ಕಲಿಯೋಕೆ ಕೋಟಿ ಭಾಷೆ ಆಡೋಕೆ ಒಂದೇ ಭಾಷೆ ಕನ್ನಡ. ಅಂತಿಮವಾಗಿ ನಾವು ಆಚರಿಸುತ್ತಿರುವುದು ಕನ್ನಡ ರಾಜ್ಯೋತ್ಸವ ಅಲ್ಲ. ಕರ್ನಾಟಕ ರಾಜ್ಯೋತ್ಸವ; ಕನ್ನಡದ ನಿತ್ಯೋತ್ಸವ. ಏಕೆಂದರೆ, ಕನ್ನಡಕ್ಕೆ ಸಾವಿರಾರು ವರ್ಷದ ಇತಿಹಾಸವಿದೆ. ನ.1 ಕರ್ನಾಟಕ ರಾಜ್ಯವನ್ನಾಗಿ ಘೋಷಿಸಿದ ದಿನ. ಆದ್ದರಿಂದ ಇದು ಕರ್ನಾಟಕ ರಾಜ್ಯೋತ್ಸವ. ಸಮಸ್ತ ಕನ್ನಡಿಗರಿಗೆ ಕರ್ನಾಟಕ ರಾಜ್ಯೋತ್ಸವದ ಶುಭಾಷಯಗಳು.

(ನಿರೂಪಣೆ: ಅಪರ್ಣಾ ಎ.ಎಸ್.)

ಮಲ್ಲಿಕಾ ಘಂಟಿ
ನಿವೃತ್ತ ಕುಲಪತಿ, ಹಂಪಿ ವಿಶ್ವವಿದ್ಯಾಲಯ

ಆಶಯ ವಾಸ್ತವಾಗಲಿ

ಕನ್ನಡ ಅನ್ನದ ಭಾಷೆಯಾಗಬೇಕು ಎನ್ನುವುದು ಅನೇಕರ ಆಶಯವಾಗಿದ್ದರೂ, ಅದು ವಾಸ್ತವವಾಗಿ ಆಗಿದೆಯೇ ಎನ್ನುವ ಪ್ರಶ್ನೆಯನ್ನು ಕೇಳಿಕೊಂಡಾಗ 'ಇಲ್ಲ' ಎನ್ನುವ ಉತ್ತರ ಬರುತ್ತದೆ. 70ರ ರಾಜ್ಯೋತ್ಸವದ ಸಂಭ್ರಮದಲ್ಲಿಯೂ ಈ ಪ್ರಶ್ನೆಗೆ ಈ ಉತ್ತರ ಬೇಸರ ತರುತ್ತದೆ. ಆದರೆ ಅನ್ನದ ಭಾಷೆಯಾಗದೇ ಇರಲು ಕಾರಣ ಏನು? ಅನ್ನದ ಭಾಷೆಯಾಗಲು ಬೇಕಿರುವ ಶಕ್ತಿ ಏನು ಎನ್ನುವುದನ್ನು ನೋಡಬೇಕಿರುವುದು ಇಂದಿಗ ಅಗತ್ಯ.

ಕನ್ನಡವನ್ನು ಅನ್ನದ ಭಾಷೆಯನ್ನಾಗಿಸಲು ಮೊದಲಿಗೆ ಇಚ್ಛಾಶಕ್ತಿ ಬೇಕಿದೆ. ರಾಜ್ಯವನ್ನು ಆಳುವ, ನೀತಿ ನಿರೂಪಣೆ ಮಾಡುವ ರಾಜಕಾರಣಿಗಳಿಗೆ ಕನ್ನಡದ ಬಗ್ಗೆ ಬದ್ಧತೆ ಇದ್ದಾಗ ಮಾತ್ರ ಅನ್ನದ ಭಾಷೆಯಾಗಲು ಸಾಧ್ಯ. ಹಾಗೇ ನೋಡಿದರೆ, ಇಂದಿನ ಜಾಗತೀಕರಣ ಹಾಗೂ ಖಾಸಗೀಕರಣದ ವ್ಯವಸ್ಥೆಯಲ್ಲಿ ಕನ್ನಡವನ್ನು ಅನ್ನದ ಭಾಷೆಯನ್ನಾಗಿ ಮಾಡಬೇಕು ಎಂದರೆ, ವೈಜ್ಞಾನಿಕ ಆವಿಷ್ಕಾರ, ತಂತ್ರ ಜ್ಞಾನದಲ್ಲಿಯೂ ಕನ್ನಡವನ್ನು ಬೆಳೆಸುವ ನಿಟ್ಟಿನಲ್ಲಿ ನೋಡಬೇಕಿದೆ.

ಜಾಗತೀಕರಣ ಹಾಗೂ ಖಾಸಗಿಕರಣಕ್ಕೆ ತಂತ್ರಜ್ಞಾನದ ಸ್ಪರ್ಶ ಸಿಗುತ್ತಿರುವ ಈ ಹೊತ್ತಿನಲ್ಲಿ ಸರಕಾರ, ಖಾಸಗಿ ಕ್ಷೇತ್ರದಲ್ಲಿ ಉದ್ಯೋಗ ಅವಕಾಶಗಳು ಕ್ಷೀಣಿಸುತ್ತಿದೆ. ಆದರೆ ಈ ಸಮಯದಲ್ಲಿಯೂ ಕನ್ನಡವನ್ನು ಉಳಿಸಿಕೊಳ್ಳಬೇಕಿದೆ. ಇದು ರಾಜಕಾರಣಿಗಳಿಂದ ಮಾತ್ರ ಸಾಧ್ಯ. ನೀತಿಗಳನ್ನು ಸಿದ್ಧಪಡಿಸುವಾಗ ಕನ್ನಡದ ಬಗ್ಗೆ ಬದ್ಧತೆಯಿಟ್ಟುಕೊಂಡು ಕಾರ್ಯನಿರ್ವಹಿಸಿದಾಗ ಕನ್ನಡ ಅನ್ನದ ಭಾಷೆಯಾಗಲು ಸಾಧ್ಯವಾಗುತ್ತದೆ.

ರಾಜ್ಯದಲ್ಲಿ ಹಲವು ವರ್ಷಗಳಿಂದ ದ್ವಿಭಾಷಾ ನೀತಿಯ ಬಗ್ಗೆ ಕೂಗುಗಳು ಕೇಳಿಬರುತ್ತಿದೆ. ಕರ್ನಾಟಕಕ್ಕೆ ದ್ವಿಭಾಷಾ ನೀತಿ ಅಗತ್ಯ ಎನ್ನುವುದು ಎಷ್ಟು ಸತ್ಯವೋ? ದ್ವಿಭಾಷಾ ನೀತಿಯಲ್ಲಿ ಕನ್ನಡದ ಜತೆಯಲ್ಲಿ ಯಾವ ಭಾಷೆಯನ್ನು ಕಲಿಸಲಾಗುತ್ತದೆ ಎನ್ನುವುದನ್ನು ನೋಡಬೇಕಿದೆ. ಕನ್ನಡದ ಜತೆ ಹಿಂದಿಯನ್ನು ಹೇರಲು ಮುಂದಾದರೆ ಅದು ರಾಜಕಾರಣವಾಗುತ್ತದೆ. ಅದರ ಬದಲು, ಇಂದಿನ ಜಾಗತೀಕರಣ ಯುಗದಲ್ಲಿ ವಿಶ್ವದ ಮುಂದೆ ನಮ್ಮ ಮಕ್ಕಳು ತೆರೆದುಕೊಳ್ಳಲು, ಪ್ರಪಂಚದಾದ್ಯಂತ ಅವಕಾಶವನ್ನು ಬಳಸಿಕೊಳ್ಳಲು ಇಂಗ್ಲಿಷ್ ಕಲಿಸಿದರೆ ಅನುಕೂಲವಾಗುತ್ತದೆ. ಆದ್ದರಿಂದ ಈ ವಿಷಯದಲ್ಲಿ ರಾಜಕಾರಣಿಗಳು ರಾಜಕೀಯ ಬಯಸದೇ, ಜಾಗತಿಕ ಮಟ್ಟದಲ್ಲಿ ಕನ್ನಡಿಗರಿಗೆ ಅವಕಾಶ ಸಿಗುವಂತೆ ಮಾಡುವ ಬಹುದೊಡ್ಡ ಜವಾಬ್ದಾರಿ ನಮ್ಮ ಮೇಲಿರುವುದರಿಂದ ಜಾಗತಿಕ ಸಂಪರ್ಕ ಭಾಷೆಯಾಗಿ ಇಂಗಿಷ್ ಕಲಿಸುವ ಅಗತ್ಯವಿದೆ.

ಭಾಷೆ, ನಮ್ ಬದುಕು

ಇಂದು ಸಮಗ್ರ ಕರ್ನಾಟಕವನ್ನು ನೋಡಿದಾಗ ಕನ್ನಡ ಉಳಿಯುತ್ತಿದೆ, ಬೆಳೆಯುತ್ತಿದೆ ಎನ್ನಬಹುದು. ಅದೇ ಬೆಂಗಳೂರಿನಂತಹ ಮಹಾನಗರಿ ನೋಡಿದಾಗ ಕನ್ನಡವನ್ನು ಹುಡಕಬೇಕಿದೆ. ಹಳ್ಳಿಯ ಜನ ನಿಜವಾಗಿಯೂ ಕನ್ನಡವನ್ನು, ಕನ್ನಡ ತನವನ್ನು ಉಳಿಸುತ್ತಿದ್ದಾರೆ. ನಾವೆಲ್ಲ ತೋರಿಕೆಗೆ ಕನ್ನಡದ ಬಗ್ಗೆ ಪ್ರೀತಿ ವ್ಯಕ್ತಪಡಿಸುತ್ತೇವೆ. ಆದರೆ ನಮ್ಮ ಮಕ್ಕಳಲ್ಲಿ ಆಂಗ್ಲ ಭಾಷೆಯ ವ್ಯಾಮೋಹ ಬಿತ್ತುತ್ತಿದ್ದೇವೆ. ಇಂದು ಶಾಲೆಗಳಲ್ಲಿ ಕನ್ನಡವನ್ನು ಕಲಿಯಲು ಬಿಡುತ್ತಿದ್ದಾರಾ ಎಂಬುದೇ ಸಂಶಯವಾಗಿದೆ.

ಅರುಣ್ ಸಾಗರ್
ನಟ, ನಿರ್ದೇಶಕ

ನಮ್ಮಲ್ಲಿಯೇ ಇರುವ ಶೇ.70 ರಷ್ಟು ಶಾಲೆಗಳಲ್ಲಿ ಕನ್ನಡವನ್ನೇ ಹೇಳಿಕೊಡುತ್ತಿಲ್ಲ, ಅಲ್ಲಿ ಆಂಗ್ಲ ಭಾಷೆಯೇ ಮೊದಲ ಆದ್ಯತೆ ಯಾಗಿದೆ. ಹಾಗಾಗಿ ಮಕ್ಕಳಿಗೆ ಕನ್ನಡವೇ ಗೊತ್ತಿಲ್ಲ. ಹಿಂದೆ ನಮಗೆಲ್ಲಾ ಮನೆಯ ಹಿರಿಯವರು ಅಜ್ಜಿ, ದೊಡ್ಡಮ್ಮ, ಚಿಕ್ಕಮ್ಮ ಮಡಿಲಲ್ಲಿ ಕೂರಿಸಿಕೊಂಡು ಕನ್ನಡದ ವರ್ಣಮಾಲೆಯನ್ನು ಹೇಳಿ ಕಲಿಸುತ್ತಿದ್ದರು. ಈಗ ಅವರೆಲ್ಲಿದ್ದಾರೆ. ದೈನಂದಿನ ಬದುಕಿನ ಸಂಬಂಧಗಳೇ ದೂರಾದ ಮೇಲೆ ಭಾಷೆ ಉಳಿಯುವುದಾದರು ಹೇಗೆ. ಕನ್ನಡ ಕೃಷಿಯಾಗಿ, ಫಸಲಾಗಿ, ನಿತ್ಯಹರಿದ್ವರ್ಣ ಕಾಡಾಗಿ, ಬೆಳೆದು ಸುಗಂದವನ್ನು ಸೂಸುವಾಗ ಅದನ್ನು ಸವಿಯುವ ಮನಸುಗಳೇ ಇಲ್ಲ. ಇಂದು ಮಕ್ಕಳ ಸಾಹಿತ್ಯದ ಬಗ್ಗೆ ಎಲ್ಲಿ ಕೆಲಸಗಳಾಗುತ್ತಿವೆ. ಹಾಗಿದ್ದ ಮೇಲೆ ಮಕ್ಕಳಲ್ಲಿ ಕನ್ನಡದ ಬಗ್ಗೆ ಪ್ರೀತಿ ಮೂಡಿಸುವುದಾದರೂ ಹೇಗೆ. ಸಾಹಿತ್ಯ ಸಮ್ಮೇಳನದ ಬದಲಾಗಿ, ಕನ್ನಡದ ಶಾಲೆಗಳಿಗೆ ಉತ್ತಮ ಕನ್ನಡ ಶಿಕ್ಷಕರನ್ನು ನೇಮಿಸಿ, ಶಾಲೆಗಳನ್ನು ಅಭಿವೃದ್ಧಿಪಡಿಸುವತ್ತ ಗಮನಹರಿಸಬೇಕು. ಆಗ ಮಾತ್ರ ಕನ್ನಡ ಉಳಿಯುತ್ತದೆ.

ಹಿಂದೆ ಕೇಳಿಬರುತ್ತಿದ್ದ ಜಾನಪದಗಳಲ್ಲಿ ಕನ್ನಡದ ಸೊಬಗಿತ್ತು, ಸೊಗಡಿತ್ತು. ಅಲ್ಲಿ ಕನ್ನಡ ಉಳಿದಿತ್ತು. ಇತ್ತೀಚಿನ ದಿನಗಳಲ್ಲಿ ವ್ಯಕ್ತಿಗಳ ನಡುವೆಯೇ ಸಂಭಾಷಣೆ ಇಲ್ಲದಂತಾಗಿದೆ. ಒಂದು ಭಾಷೆ ಅದು ಅನ್ನದ ಭಾಷೆಯಾಗಿ ಉಳಿದಿದೆ ಎಂದರೆ ಅದು ಶ್ರಮವಹಿಸಿ ದುಡಿಯುವ ವರ್ಗದಲ್ಲಿದೆ. ಇವತ್ತು ಗ್ರಾಮೀಣ ಭಾಗಗಳಲ್ಲಿಯೂ ಕನ್ನಡದ ಕೆಲಸಗಾರರು ಸಿಗೋದು ಕಷ್ಟ. ಅಲ್ಲೆಲ್ಲ, ಅನ್ಯ ರಾಜ್ಯದವರೇ ಆಕ್ರಮಿಸಿಕೊಂಡಿದ್ದಾರೆ. ಒಂದು ದೇಶವನ್ನು ಸಮಗ್ರವಾಗಿ ನೋಡಬೇಕು ಎಂದಾಗ ಎಲ್ಲಾ ಭಾಷೆಗಳೂ ಬೇಕು. ಹಾಗಂತ ಅದು ಹೇರಿಕೆಯಾಗಬಾರದು. ಹಿಂದಿಯನ್ನು ಕಡ್ಡಾಯವಾಗಿ ಕಲಿಯಬೇಕು ಎಂದು ಬಲವಂತವಾಗಿ ಹೇರಬಾರದು.

(ನಿರೂಪಣೆ : ಪ್ರಶಾಂತ್ ಟಿ.ಆರ್)

ಸಪ್ನ ಬುಕ್ ಹೌಸ್®
ಭಾರತದ ಅತಿದೊಡ್ಡ ಪುಸ್ತಕ ಭಂಡಾರ
'ಓದಿನ ಅರಮನೆ ತೆರೆದಿದೆ ಓದುಗ'
ಒಳಗೆ ಬಂದೊಮ್ಮೆ ನೋಡು,
ಕನ್ನಡವಿಲ್ಲಿ ಕನ್ನಡಿಸುತ್ತಿರುವುದ
ನೋಡಿ ನೀನು ಹಾಡು
ಕನ್ನಡ ರಾಜ್ಯೋತ್ಸವದ ಪ್ರಯುಕ್ತ
ಕನ್ನಡ ಪುಸ್ತಕಗಳ ಪ್ರದರ್ಶನ ಹಾಗೂ ಮಾರಾಟ
01-11-2025 ರಿಂದ 30-11-2025 ರವರೆಗೆ
ಓದು ಬೆಳಗಲಿ ಬದುಕನು
ಅಕ್ಷರ ಬೆಳೆಸಲಿ ಕನಸನು
ಪುಸ್ತಕ ದೀಪದ ಬೆಳಕಿನಲಿ
ಸಮಾನತೆ ರೂಪವ ತಳೆದಿರಲಿ
ಕನ್ನಡ ಪುಸ್ತಕಗಳಿಗೆ ಶೇ.10% ರಿಂದ ಶೇ.25% ರಿಯಾಯಿತಿ
ರೂ. 500/-ರ ಮೇಲ್ಪಟ್ಟ ಕನ್ನಡ ಪುಸ್ತಕಗಳ ನಿವ್ವಳ ಖರೀದಿಗೆ
ಸದಸ್ಯತ್ವ ಕಾರ್ಡು ವರ್ಷಪೂರ್ತಿ ಶೇ. 10% ರಿಯಾಯಿತಿ
*T&C Apply
ಇಂದು ಗಾಂಧಿನಗರದ ಸಪ್ನ ಬುಕ್ ಹೌಸ್‌ನಲ್ಲಿ ರಾಜ್ಯೋತ್ಸವದ ಪ್ರಯುಕ್ತ
ಪುಸ್ತಕ ಜಾತ್ರೆ
ಕನ್ನಡ ಬರಹಗಾರರ ಸಮ್ಮಿಲನ
ಸಮಯ: ಬೆಳಗ್ಗೆ 10 ಗಂಟೆಗೆ
ದಯವಿಟ್ಟು ಬನ್ನಿ
R.O: 3ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು – 560 009
ದೂರವಾಣಿ (080) 40114455
e-mail: customercare@sapnaretail.com
ಶಾಖೆಗಳು
ಗಾಂಧಿನಗರ | ಸದಾಶಿವನಗರ | ಜಯನಗರ | ಇಂದಿರಾನಗರ | ಕೋರಮಂಗಲ | ಆರ್. ಆರ್. ನಗರ
ರಾಯಲ್ ಮೀನಾಕ್ಷಿ ಮಾಲ್ (ಬನ್ನೇರುಘಟ್ಟ ರಸ್ತೆ) | ಎಲಿಮೆಂಟ್ಸ್ ಮಾಲ್ (ನಾಗವಾರ ಜಂಕ್ಷನ್) | ದಿ ಗ್ಯಾಲರಿಯಾ ಮಾಲ್ (ಯಲಹಂಕ) | ಎಚ್.ಎಸ್.ಆರ್. ಲೇಔಟ್ (7ನೇ ಸೆಕ್ಟರ್) | M5 E-CITY MALL (ಎಲೆಕ್ಟ್ರಾನಿಕ್ ಸಿಟಿ)
ಹಾಗೂ
ಮೈಸೂರು | ಮಂಗಳೂರು | ಹುಬ್ಬಳ್ಳಿ | ಧಾರವಾಡ | ಕಲಬುರಗಿ | ಬೆಳಗಾವಿ | ಹಾಸನ | ದಾವಣಗೆರೆ
ಕೊಯಮತ್ತೂರು: ಆರ್.ಎಸ್.ಪುರಂ, ಪ್ರೋಜೋನ್‌ಮಾಲ್ | ಈರೋಡು | ನವದೆಹಲಿ
India's Largest Book Mall sapna Online.com
Choose from a wide range of:
Books | Stationery | Art & Craft | Gifts | Toys & Sports | Office Supplies
Tech Accessories | School Products | Food & Chocolates | ಕನ್ನಡ ಪುಸ್ತಕಗಳು

70ನೇ ಕರ್ನಾಟಕ ರಾಜ್ಯೋತ್ಸವದ ಹೊಸ್ತಿಲಿನಲ್ಲಿರುವ ಕರ್ನಾಟಕದಲ್ಲಿ ಈಗಲೂ ಕನ್ನಡದ ಸ್ಥಿತಿಗತಿ ಬಗ್ಗೆ ಚರ್ಚೆಯಾಗುತ್ತಿವೆ. ಇದನ್ನು ಮುಂದಿಟ್ಟು ಕೊಂಡು ವಿಶ್ವವಾಣಿ ನಾಡಿನ ಚಿಂತಕರು, ಹೋರಾಟಗಾರರ ಮುಂದೆ ಕನ್ನಡ ಅನ್ನದ ಭಾಷೆಯಾಗಿದೆಯೇ?, ಕರ್ನಾಟಕದಲ್ಲಿ ದ್ವಿಭಾಷಾ ನೀತಿ ಅಳವಡಿಸಿಕೊಳ್ಳಬೇಕೆ? ಎಂಬ ಎರಡು ಪ್ರಶ್ನೆಗಳನ್ನು ಮುಂದಿಟ್ಟು ಉತ್ತರ ಪಡೆಯುವ ಪ್ರಯತ್ನ ನಡೆಸಿದೆ. ಗಣ್ಯರ ಅಭಿಪ್ರಾಯಗಳು ಇಲ್ಲಿವೆ.

ಅಭಿಮಾನ, ದೃಢಸಂಕಲ್ಪ ಅಗತ್ಯ

ಭಾಷೆ ಭಾವನಾತ್ಮಕವಾದದ್ದು ಮತ್ತು ಪ್ರಯೋಜನಾತ್ಮಕವಾದದ್ದು ಹೌದು. ಕೇವಲ ಭಾವನಾತ್ಮಕ ಕಾರಣಗಳಿಗಾಗಿ ಭಾಷೆ ಉಳಿಸಿಕೊಳ್ಳಲು ಆಗುವುದಿಲ್ಲ. ಅದು ಪ್ರಯೋಜನಾತ್ಮಕವಾಗಿಯೂ ದೃಢವಾಗಿ ಇರಬೇಕು ಮತ್ತು ಶಕ್ತಿಶಾಲಿಯಾಗಿ ಇರಬೇಕು. ಆಧುನಿಕ ಜಗತ್ತಿನಲ್ಲಿ ನಮಗೆ ಎಲ್ಲ ಭಾಷಾ ಸಮಾಜಗಳ ಜತೆ ಸಂಪರ್ಕ ತುಂಬಾ ಸುಲಭ ಆಗಿರುವುದರಿಂದ ಒಂದು ಭಾಷೆ ಇನ್ನೊಂದು ಭಾಷೆಯ ಮೇಲೆ, ಒಂದು ಸಂಸ್ಕೃತಿ ಇನ್ನೊಂದು ಸಂಸ್ಕೃತಿಯ ಮೇಲೆ ಒಂದು ರಾಜಕಾರಣವು ಮತ್ತೊಂದು ರಾಜಕಾರಣದ ಮೇಲೆ ಪ್ರಭಾವ ಬೀರುವುದು ಅತ್ಯಂತ ಸಹಜವಾಗಿದೆ. ಪ್ರಪಂಚದಲ್ಲಿ ಪ್ರಭಾವಿ ಮತ್ತು ಪ್ರಬಲ

ಪ್ರೊಫೆಸರ್ ಕೃಷ್ಣೇಗೌಡ

ವಾದ ಭಾಷಾ ಸಮುದಾಯಗಳೂ ಇವೆ. ಅವುಗಳ ಎದುರಿಗೆ ಕೂಡ ಕನ್ನಡ ಭಾಷೆ ಉಳಿಯಬೇಕಾದರೆ, ಕನ್ನಡಿಗರಿಗೆ ತಮ್ಮ ಅಸ್ಮಿತೆಯನ್ನು ಉಳಿಸಿಕೊಳ್ಳಬೇಕೆಂಬ ಪ್ರಬಲವಾದ ಇಚ್ಛೆ ಇರಬೇಕು. ಕನ್ನಡ ನಾಡನ್ನು ಆಳುವವರಿಗೂ ಇಂಥದ್ದೇ ಪ್ರಬಲ ಇಚ್ಛೆ ಇರಬೇಕು. ಈ ಜಗತ್ತಿನಲ್ಲಿ ಈಗ ಎಲ್ಲ ಸಮುದಾಯಗಳು ಪ್ರಯೋಜನವನ್ನು ಮಾತ್ರವೇ ಎದುರು ನೋಡುತ್ತವೆ. ಆದ್ದರಿಂದ ಬಹಳ ಸುಲಭವಾಗಿ ಪ್ರಬಲವಾದಂತಹ ಮತ್ತೊಂದು ಸಂಸ್ಕೃತಿಗೆ, ಮತ್ತೊಂದು ಭಾಷೆಗೆ ಮನಸೋಲುವುದು ಅನಿವಾರ್ಯ ಎನ್ನುವಂತಾಗಿದೆ. ಹಾಗಿರುವಾಗ ನಮ್ಮ ಅಸ್ಮಿತೆಯ ಬಗ್ಗೆ ಅಭಿಮಾನ ಮತ್ತು ದೃಢ ಸಂಕಲ್ಪ ಇಲ್ಲದಿದ್ದರೆ ನಾವು ಉಳಿದುಕೊಳ್ಳುವುದು ಕಷ್ಟ.

ಭಾಷೆ ಎನ್ನುವುದು ಕೇವಲ ಅಭಿವ್ಯಕ್ತಿ ಮಾಧ್ಯಮ ಅಲ್ಲ. ಅದು ಕನ್ನಡ ನಾಡಿನ ಒಟ್ಟು ಅಸ್ಮಿತೆ. ಈವರೆಗಿನ ನಮ್ಮ ಬದುಕು, ಹೋರಾಟಗಳು, ಜ್ಞಾನ, ವಿವೇಕ ಇತ್ಯಾದಿ ಸಕಲವೂ ನಮ್ಮ ಭಾಷೆಯಲ್ಲಿ ಸಾಂದ್ರವಾಗಿ ಇರುತ್ತವೆ. ಆದ್ದರಿಂದ ನಮ್ಮ ಭಾಷೆಯನ್ನು ಉಳಿಸಿಕೊಳ್ಳುವುದು ಮತ್ತು ಗೌರವಿಸುವುದು ಎಂದರೆ ನಮ್ಮ ಒಟ್ಟು ಬದುಕಿನ ಸಕಲವನ್ನೂ ಉಳಿಸಿಕೊಳ್ಳುವುದು ಎಂದೇ ಅರ್ಥ. ಆದ್ದರಿಂದ ರಾಜ್ಯೋತ್ಸವವೂ ಕೇವಲ ಆಚರಣೆ ಉತ್ಸವಗಳಲ್ಲಿ ಮುಗಿಯದೆ ಪ್ರತಿ ವರ್ಷವೂ ನಮ್ಮ ಸರಕಾರ ಮತ್ತು ಜನತೆ ಅತ್ಯಂತ ಖಚಿತವಾದ ಕೆಲವು ತೀರ್ಮಾನಗಳನ್ನು ಕೈಗೊಳ್ಳಬೇಕಾಗುತ್ತದೆ. ಹಾಗೆ ನೋಡಿದರೆ ಕನ್ನಡ ಭಾಷೆ ಸಂಸ್ಕೃತಿ, ಬದುಕು ಜಗತ್ತಿನ ಯಾವ ಭಾಷೆಗೂ ಎರಡನೆಯದ್ದಲ್ಲ. ಆದರೆ ಅತಿಯಾದ ಬಳಕೆದಾರ ಪ್ರವೃತ್ತಿಗೆ (ಕನ್ಸ್ಯೂಮರಿಸಂ) ಬಲಿಯಾಗಿರುವ ನಮಗೆ ಇದರ ಅರಿವು ಮೂಡಿಸುವುದು ತುರ್ತು ಅಗತ್ಯ. ಹಾಗಾಗಿ ಕನ್ನಡ ನಾಡಿನ ಆಡಳಿತಗಾರರು, ಚಿಂತಕರು, ಸಾಹಿತಿಗಳು, ಕಲಾವಿದರು, ತಂತ್ರಜ್ಞರು ತಮ್ಮ ಪಕ್ಷ, ಸಿದ್ಧಾಂತ ಇತ್ಯಾದಿಯಾದ ಎಲ್ಲ ಬಂಧನಗಳಿಂದಲೂ ಹೊರಗೆ ಬರಬೇಕು. ಈ ದಿಕ್ಕಿನಲ್ಲಿ ಕಾರ್ಯಪ್ರವೃತ್ತರಾಗುವುದು ಅಗತ್ಯವಿದೆ. ಕನ್ನಡವನ್ನು ಆಧುನಿಕ ಬದುಕಿನ ಅಗತ್ಯಗಳಿಗೆ ಉಪಯೋಗ ವಾಗುವಂತೆ ಸಮೃದ್ಧವಾಗಿ ಮತ್ತು ಸುಪುಷ್ಟವಾಗಿ ಕಟ್ಟುವ ಅಗತ್ಯ ಹಿಂದೆಂದಿಗಿಂತಲೂ ಇಂದು ಅನಿವಾರ್ಯವಾಗಿದೆ.

ದ್ವಿಭಾಷಾ ಸೂತ್ರ ಅಳವಡಿಸಿಕೊಳ್ಳಬೇಕೇ ?: ಕನ್ನಡ ನಮ್ಮ ಮಾತೃ ಭಾಷೆ. ಇಂಗ್ಲಿಷ್ ಸಂಪರ್ಕ ಭಾಷೆ ಹಾಗೂ ಈ ಕಾಲದ ಅತ್ಯಂತ ಪ್ರಭಾವಿ ಭಾಷೆ. ಆದ್ದರಿಂದ ಇವೆರಡೂ ಭಾಷೆಗಳನ್ನು ಕಲಿಸಬೇಕಾದುದು ಮತ್ತು ಕಲಿಯಬೇಕಾದುದು ಈ ಕಾಲದ ಅನಿವಾರ್ಯ. ಹಿಂದಿಯೂ ಸೇರಿ ಯಾವುದೇ ಭಾಷೆಯನ್ನು ಕಲಿಯುವುದರಿಂದ ನಮ್ಮ ದೃಷ್ಟಿ ಮತ್ತು ಜ್ಞಾನ ವಿಕಾಸವಾಗುತ್ತದೆ. ಆದ್ದರಿಂದ ಕನ್ನಡ ಮತ್ತು ಇಂಗ್ಲಿಷ್ ನಮಗೂ, ನಮ್ಮ ಮಕ್ಕಳಿಗೂ ಅನಿವಾರ್ಯ. ಇನ್ನುಳಿದ ಎಲ್ಲ ಭಾಷೆಗಳು ಆಯ್ಕೆಯ ಮತ್ತು ಆಸಕ್ತಿಯ ಭಾಷೆಗಳು. ಬಾರಿಸು ಕನ್ನಡ ಡಿಂಡಿಮವ, ಓ ಕರ್ನಾಟಕ ಹೃದಯ ಶಿವ.

(ನಿರೂಪಣೆ: ಲೋಕೇಶ್ ಕಾಯರ್ಗ)

ಕನ್ನಡ ಮನಸಿನ ಕನಸಿನ ಭಾಷೆ

ನಾವೆಲ್ಲಾ ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸುತ್ತಿದ್ದೇವೆ. ಕನ್ನಡ ಭಾಷೆಗೆ ಲಕ್ಷಾಂತರ ವರ್ಷಗಳ ಇತಿಹಾಸವಿದೆ. ಕನ್ನಡ ಹಲವರನ್ನು ಪೋಷಿಸಿ, ಪೊರೆದಿದೆ. ಹಾಗಾಗಿ ನಮ್ಮ ಅಸ್ತಿತ್ವ ಕನ್ನಡ ಭಾಷೆಯ ಮುಂದೆ ಚಿಕ್ಕದು ಎಂಬುದನ್ನು ನಾನು ನಂಬುತ್ತೇನೆ. ಕನ್ನಡ ಉಳಿಸಿ ಬೆಳೆಸುವ ಸಾಮರ್ಥ್ಯ ನಮಗಿಲ್ಲ. ಯಾಕೆಂದರೆ ಕನ್ನಡ ತಾಯಿ ನಮ್ಮನ್ನು ಸಾಕಿ ಸಲಹಿದ್ದಾಳೆ. ಹಾಗಾಗಿ ನಾವು ಕನ್ನಡ ತಾಯಿಯ ಸೇವೆ ಮಾಡಬೇಕು. ಇಂದೂ ಸಹ, ಕನ್ನಡಕ್ಕೆ ಸಾಕಷ್ಟು ಪ್ರಾಮುಖ್ಯತೆ ಇದೆ. ಅದೇ ನಮಗೆ ಅನ್ನ ಕೊಡುವ ಭಾಷೆಯಾಗಿದೆ. ಬೇರಿದ್ದರೆ ಮರವಿರುತ್ತದೆ. ಬೇರಿನಂತೆ ನಮ್ಮಲ್ಲಿ ಕನ್ನಡವನ್ನು ರೂಢಿಸಿಕೊಂಡರೆ ಅದು ಅಸ್ತಿತ್ವದಲ್ಲಿರುತ್ತದೆ.

ಅಂಕಿತಾ ಅಮರ್
ಕಿರುತೆರೆ, ಚಲನಚಿತ್ರ ನಟಿ

ಎಷ್ಟೇ ವರ್ಷಗಳು ಕಳೆದರೂ ಕನ್ನಡ ನಮ್ಮ ಮನಸಿನ, ಹೃದಯದ ಭಾಷೆಯಾಗಿಯೇ ಇರುತ್ತದೆ. ಅದರ ಅಂದ ಚೆಂದವೇ ಬೇರೆ. ಹೊರಗಡೆ ಯಾವ ಭಾಷೆ ಮತಾಡಿದರು. ಮನಸಿನಲ್ಲಿ ಮಾತನಾಡುವ ಕನಸಿನಲ್ಲಿ ಕಾಡುವ ಭಾಷೆ ಕನ್ನಡವಾಗಿದೆ. ನಮ್ಮ ಅಸ್ತಿತ್ವಕ್ಕೆ ಕನ್ನಡವೇ ಬುನಾದಿಯಾಗಿದೆ. ಹಾಗಾಗಿ ಕನ್ನಡ ನಶಿಸುತ್ತಿದ್ದೆ ಎಂಬುದು ಸುಳ್ಳು. ನಮ್ಮ ತಾಯಿ ಭಾಷೆಯನ್ನು ನಾವು ಸದಾ ಇಷ್ಟಪಡುತ್ತೇವೆ. ನಮ್ಮ ಭಾಷೆಯ ಸೊಗಡನ್ನು ಕಲಿತರೆ ಬೇರೆ ಭಾಷೆಗೂ ಗೌರವ ನೀಡುತ್ತೇವೆ. ಯಾವ ಪ್ರಾಂತ್ಯಕ್ಕೆ ಯಾವ ಭಾಷೆಯ ಅವಶ್ಯಕತೆ, ಅಗತ್ಯವಿದೆಯೋ ಅಲ್ಲಿ ಯಾವ ಭಾಷೆಯಾದರೂ ಮಾತನಾಡಬಹುದು. ಮೊದಲು ಭಾವನೆಗಳಿಗೆ, ಆಶಯಗಳಿಗೆ ಬೆಲೆ ಕೊಡಬೇಕು. ನಮ್ಮ ಭಾಷೆ ನಮಗೆ ಮುಖ್ಯವಾಗಿರಬೇಕು. ಅದನ್ನು ಬಿಟ್ಟು ದಬ್ಬಾಳಿಕೆ, ಹೇರಿಕೆ ಇರಬಾರದು.

ನವೆಂಬರ್‌ನಲ್ಲಾದರೂ ಕನ್ನಡ ನೆನಪಾಗುತ್ತದಲ್ಲ

ಕನ್ನಡ ಅಂದಾಗ ನವೆಂಬರ್‌ನಲ್ಲಿ ಎದ್ದು ಕೂರುತ್ತಿದ್ದೇವೆ. ಅಲ್ಲಿವರೆಗೆ ಅದರ ಬಗ್ಗೆ ಗಮನ ಇರೋದಿಲ್ಲ. ನವೆಂಬರ್ ನಲ್ಲಿಯಾದರೂ ಕನ್ನಡದ ನೆನಪಾಗುತ್ತದಲ್ಲ ಎನ್ನುವುದು ಸಮಾಧಾನಕರ ವಿಚಾರ. ಭಾಷೆಯ ಬಗ್ಗೆ ಚಿಂತನೆ ಮಾಡಲು, ಅದು ಚಿಂತನಾ ವಿಷಯವೂ ಅಲ್ಲ. ಅದು ನಿತ್ಯ ಪರಿವರ್ತನಾ ಶೀಲ ಅನ್ನೋದು ತಿಳಿದಿದೆ. ಭಾಷೆ ಅಂದರೆ ಕೇವಲ ಸಂವಹನ ಮಾಧ್ಯಮವೆ. ನಮ್ಮ ಉಸಿರು, ಬದುಕಿನ ಬಸಿರು, ಇದೆಲ್ಲವನ್ನೂ ಮೇಳೈಸಿಕೊಳ್ಳುವುದೇ ಆಗಿದೆ. ಭಾಷೆ ನಮ್ಮ ಸಂಸ್ಕೃತಿ, ಪರಂಪರೆ, ಅಸ್ತಿತ್ವ, ಅಸ್ಮಿತೆಯನ್ನು, ಕನಸು, ದುಃಖ ದುಮ್ಮಾನವನ್ನು, ಹರ್ಷವನ್ನು, ಸಂತವನ್ನು ಹಂಚಿಕೊಳ್ಳೋದಕ್ಕಿದೆ. ನಾನು ನಾನಿಗಿರೋದಕ್ಕೆ ವ್ಯಕ್ತಿತ್ವವನ್ನು ರೂಪಿಸುವುದಕ್ಕೆ ಅಂದುಕೊಂಡಿದ್ದು ಸಿಗದೇ ಇದ್ದಾಗ ಹಲುಬುವುದಕ್ಕೆ ಹೀಗೆ ಎಲ್ಲದಕ್ಕೂ ಭಾಷೆ ಸಹಕಾರಿ.

ಒಂದು ಭಾಷೆ ಎಂದರೆ ಕೇವಲ ನಾಡು, ನುಡಿ, ಭಾವುಟ ಅಂತ ಹೇಳುತ್ತಿದ್ದೇವೆ. ಅದು ಅಷ್ಟಕ್ಕೆ ಸೀಮಿತ ಅಂತ ಭಾವಿಸದೇ ಇದ್ದಾಗ ಭಾಷೆ ನಮಗೆ ಒಲಿಯುತ್ತದೆ. ಅದಕ್ಕೆ ಹಿರಿಯರು ಬೇಡದ ಭಾಷೆಗೆ ಸಂಬಂಧಪಟ್ಟ ಸಂಸ್ಕೃತಿ, ಪರಂಪರೆ ಇದೆಲ್ಲವನ್ನೂ ತೇದು ಆಚೀಚನ ಸಮುದ್ರಗಳಿಗೆ ಚೆಲ್ಲಿ ಎಂದಿದ್ದಾರೆ. ದ್ರಾವಿಡ ಭಾಷೆಗಳಲ್ಲಿ ಕನ್ನಡಕ್ಕೆ ಇರುವ ಅಂಕಿ ಅಂಶಗಳು ಬೇರೆ ಭಾಷೆಗಳಲ್ಲಿ ಕಂಡಿಲ್ಲ. ಅಂತಹ ಅಂಕಿಗಳನ್ನು ನಾವು ಆಡಳಿತ ಶಕ್ತಿ ಕೇಂದ್ರದಲ್ಲಿಯೇ ಕಾಣುತ್ತಿಲ್ಲವಲ್ಲ ಎಂಬುದು ನೋವಿನ ಸಂಗತಿ. ನವೆಂಬರ್ ಮಾಹೆಯಲ್ಲಿಯಾದರೂ ಕನ್ನಡದ ಕುರಿತಾಗಿ ಚಿಂತನ ಮಂಥನ ನಡೆಯುತ್ತಿದೆ. ಈ ಕಾರಣಕ್ಕಾಗಿ ನಾವು ನಮಗೆ ಹೇಳಿಕೊಳ್ಳಬೇಕಾದದ್ದು ಏನೆಂದರೆ ಇತರರನ್ನು ಜರೆದು ಧರೆಗೆ ದೊಡ್ಡವರಾದವರು ಇಲ್ಲ ಎಂದು. ನಾವು ಅರಿಶಿಣ ಕುಂಕುಮದಂತಹ ಸುಂದರ ಬಾವುಟವನ್ನು ಹಿಡಿದು ಅಡ್ಡಾಡುತ್ತೇವೆಯೇ ಹೊರತು, ನನ್ನ ಭಾಷೆಯನ್ನು ಕಳೆಕೊಂಡರೆ ಏನೆಲ್ಲಾ ಘಟಿಸಬಹುದು, ಕಳೆದುಕೊಳ್ಳಬಹುದು ಎಂಬುದನ್ನು ಯಾರೂ ಚಿಂತಿಸಿದಂತಿಲ್ಲ.

ಎಲ್ಲರೂ ಮಾನಿಗಳಾಗಬೇಕು, ಗುಮಾನಿಗೆ ಅವಕಾಶ ಇಲ್ಲದ ರೀತಿಯಲ್ಲಿ ಬದುಕಬೇಕು. ಹಿರಿಯರು ನಮಗೆ ಬಿಟ್ಟು ಹೋದ, ಉಂಬಳಿ, ಆಸ್ತಿ ಸ್ವತ್ತು ಏನಿದೆ, ಇದನ್ನು ನಾವು ಹೇಗೆ ಕಾಪಾಡಿಕೊಳ್ಳಬೇಕು ಎಂಬುದನ್ನು ಅರಿಯಬೇಕು. ಇಂದು ಸ್ವಚ್ಛ ರೂಪದಲ್ಲಿ ಯಾರಾದರೂ ನಾಲ್ಕು ವಾಕ್ಯಗಳನ್ನು ಕನ್ನಡದಲ್ಲಿ ಮಾತನಾಡುವ, ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವೂ ಇಲ್ಲದಾಗಿದೆ. ಇದುವರೆಗೆ ಇಪ್ಪತ್ತೇಳು ಬಾರಿ ಸುತ್ತೋಲೆ ಹೊರಟು ಆಡಳಿತ ವ್ಯವಹಾರವೆಲ್ಲ ಕನ್ನಡದಲ್ಲಿಯೇ ಅಂತ ಹೇಳುವವರು ಸದನದಲ್ಲಿಯೇ ಕನ್ನಡ ಮಾತಾನಾಡದೆ ಮಿಶ್ರತಳಿಯನ್ನು ಬಳಸುತ್ತಾರೆ. ಇವೆಲ್ಲವೂ ತೀರಾ ವಿಷಾದಮಯ. ಯಾರು ಕನ್ನಡ ಕನ್ನಡ ಎನ್ನುತ್ತಿದ್ದಾರೆ ಅವರೆಲ್ಲರಿಗೂ ಕನ್ನಡ ಬೇಕಿಲ್ಲ. ಅವರ ಸುಪುತ್ರರು, ಸುಪುತ್ರಿಯರು, ಬಂಧುಗಳು ಕನ್ನಡ ಶಾಲೆಗಳಿಗೆ ಹೋಗುವುದಿಲ್ಲ.

ನಮ್ಮದು ಅನೇಕ ಭಾಷೆಗಳು, ಬಹು ಭಾಷೆಗಳ ವಿಕಾಸದ ಒಡಲು. ದ್ವಿಭಾಷಾ ಅಂತ ಸೀಮಿತಗೊಳಿಸಿದರೆ ಭಾಷಾ ಕಲಿಕೆಗೆ ಅವಕಾಶ ಇರೋದಿಲ್ಲ. ಈಗಾಗಲೇ ಸಂಸ್ಕೃತವನ್ನು ಕೊಂದಾಯಿತು. ಈಗ ತಮಿಳು ಅತ್ಯಂತ ಪ್ರಾಚೀನ ಭಾಷೆ ಎಂದು ಘೋಷಿಸಲಾಗಿದೆ. ಕನ್ನಡಕ್ಕೆ ಲಕ್ಷಾಂತರ ವರ್ಷದ ಇತಿಹಾಸವಿದೆ. ನಮಗೆ ಪ್ರಾಚೀನತೆ ಯನ್ನು ಸಾಧಿಸುವುದು ಮುಖ್ಯವಲ್ಲ, ಅದು ಬೆಳೆದುಬಂದ ಹಾದಿಯ ಅವಲೋಕನ, ಸುಪುಷ್ಟತೆ ಮುಖ್ಯ. ಅದನ್ನು ಯಾರೂ ಅರ್ಥ ಮಾಡಿಕೊಂಡಿಲ್ಲ.

ಸುಚೇಂದ್ರ ಪ್ರಸಾದ್
ಹಿರಿಯ ನಟ

ವಿವಾದದ ಹೇಳಿಕೆ ಇಟ್ಟಿಕೊಂಡು ದ್ವೇಷ ಸಾಧಿಸುವ ಅಗತ್ಯ ಇಲ್ಲ. ಇದೆಲ್ಲವನ್ನೂ ಗಮನಿಸದಾಗ ನಾವ್ಯಾರೂ ಅಧ್ಯಯನಶೀಲರಲ್ಲ ಅನ್ನಿಸುತ್ತದೆ. ಯಾಕಂದರೆ ಇಂದು ವಿಶ್ವವಿದ್ಯಾಲಯಗಳಲ್ಲಿ, ವೈಶ್ವಿಕ ನೋಟವೇ ಇಲ್ಲ. ವಿಶ್ವವಿದ್ಯಾಲಯಗಳು ಆಲಯವಾಗಿಯೂ ಉಳಿದಿಲ್ಲ. ಅಲ್ಲಿಯೂ ಅಪವಾದಗಳಿವೆ. ಹಿಂದೆ ನಮ್ಮ ನಡುವೆ ಎಂತಹ ಹಿರಿಯರು, ಧುರೀಣರಿದ್ದರು. ಅವರಿಗೆ ಇದ್ದ ಕನ್ನಡದ ಬದ್ಧತೆ, ಜ್ಞಾನದ ಸೊಬಗು, ಸೊಗಸು ನಮಗೆ ಹರಿದು ಬಂದಿಲ್ಲ ಎಂಬುದು ವಿಷಾಧನೀಯ. ಅಂಕಗಳನ್ನು ಪಡೆದು, ಹೊಟ್ಟೆ ಹೊರೆಯುವದಕ್ಕೆ ಕೆಲಸ ಸೀಮಿತವಾದರೆ ಅದು ಖಂಡನೀಯ. ನಾವು ಹಿರಿಯವರಂತೆ ಬಾಳಿ ಬದುಕ ಬೇಕಿತ್ತು. ಸುಮಧುರವಾಗಿ ಯಾವುದು ಕರ್ಣಕ್ಕೆ ಇಂಬು ಕೊಡುತ್ತದೆಯೋ ಅದು ಕರ್ನಾಟಕ. ಆದರೆ ಈಗ ವಿಧ್ವಂಸದ ಕೆಲಸಕ್ಕೆ ಕನಾಟಕ ಸಿಲುಕಿದೆಯೆ ಎಂಬುದನ್ನು ನೋವಿನಿಂದ ನುಡಿಯ ಬೇಕಾಗಿದೆ. ಕರ್ನಾಟಕ ವಿಧ್ವಂಸಕ್ಕಲ್ಲ, ಎಲ್ಲರೂ ವಿದ್ವಾಂಸರಾಗಬೇಕು. ಅದು ನಮ್ಮ ಸಂಸ್ಕೃತಿ, ಪರಂಪರೆ ಅನ್ನೋದು ನನ್ನ ಇಂಗಿತ.

ಇಂದು ಕನ್ನಡದ ಸಿನಿಮಾಗಳು ದೇಶ ಮಾತ್ರವಲ್ಲ ಜಗತ್ತಿನಾದ್ಯಂತ ಸದ್ದು ಮಾಡುತ್ತಿವೆ. ಎಲ್ಲರೂ ಚಂದನವನದತ್ತ ತಿರುಗಿ ನೋಡುವಂತಾಗಿದೆ. ಅದಕ್ಕೆ ಕಾರಣ, ನಮ್ಮಲ್ಲಿ ಮೂಡಿಬರುತ್ತಿರುವ ಚೆಂದದ ಚಿತ್ರಗಳು. ಅದರಲ್ಲಿಯೂ ನಮ್ಮ ನೆಲದ ಕಥೆಗಳು ಎಲ್ಲರಿಗೂ ಹಿಡಿಸುತ್ತಿವೆ. ಮೆಚ್ಚುಗೆಯಾಗುತ್ತಿವೆ. ಹಾಗಾಗಿಯೇ ಪರಭಾಷೆಯ ನಟರೂ ಕನ್ನಡ ಚಿತ್ರರಂಗದತ್ತಲೇ ಮುಖ ಮಾಡುತ್ತಿದ್ದಾರೆ. ಹಾಗಂತ ಕನ್ನಡ ಸಿನಿಮಾಗಳಿಗೆ ಬೇಡಿಕೆ ಹೆಚ್ಚಾಗಿದ್ದು ಇಂದು ನಿನ್ನೆಯದಲ್ಲ. ಬಲು ಹಿಂದಿನಿಂದಲೂ ಬಲು ಬೇಡಿಕೆ ಇದೆ. ಹಾಗಾಗಿ ಪರಭಾಷೆಯ ಹಲವು ಕಲಾವಿದರು ಕನ್ನಡ ಚಿತ್ರರಂಗದಲ್ಲಿ ಗಟ್ಟಿಯಾಗಿ ನೆಲೆನಿಂತಿದ್ದಾರೆ. ಕನ್ನಡ ರಾಜ್ಯೋತ್ಸವದ ಈ ಸುಸಂದರ್ಭದಲ್ಲಿ ಅವರ ಒಂದಿಷ್ಟು ಮಾಹಿತಿ ನೋಟ ಇಲ್ಲಿದೆ.

ದೂರದೂರಿನಿಂದ ಬಂದರು ಕನ್ನಡಕ್ಕೆ ಮಾರು ಹೋದರು

ಪ್ರಿಯಾಂಕಾ ಉಪೇಂದ್ರ

ಕನ್ನಡ ಚಿತ್ರರಂಗದಲ್ಲಿ ಬೇಡಿಕೆಯ ನಟಿಯಾಗಿ ಗುರುತಿಸಿಕೊಂಡಿರುವ ಪ್ರಿಯಾಂಕಾ ಉಪೇಂದ್ರ ಮೂಲತಃ ಪಶ್ಚಿಮ ಬಂಗಾಳದ ವರು. ಬೆಂಗಾಲಿ ಸಿನಿಮಾದ ಮೂಲಕ ನಟಿಯಾಗಿ ಗುರುತಿಸಿಕೊಂಡ ಪ್ರಿಯಾಂಕಾ, ಕೋಟಿಗೊಬ್ಬನ ಜತೆ ಯಾಗಿ ಚಂದನವನದಲ್ಲಿ ಮಿಂಚಿದರು. ಬಳಿಕ ಎಚ್2ಒ ಸೂತ್ರ ಹೇಳಿ ಮನಗೆದ್ದರು. ಹೂವೇ.. ಹೂವೇ ಅನ್ನುತ್ತಾ ಹಾಡಿ ಸಿನಿಪ್ರಿಯರ ಮನಸೂರೆ ಗೊಂಡರು. ಮೊದಮೊದಲು ಕನ್ನಡ ಮಾತನಾಡಲು ಕಷ್ಟಪಡುತ್ತಿದ್ದ ಪ್ರಿಯಾಂಕಾ ಬಳಿಕ ಕನ್ನಡದ ಬಗ್ಗೆ ಆಸಕ್ತಿ ತಾಳಿ ಇಷ್ಟಪಟ್ಟು ಕನ್ನಡ ಕಲಿತರು. ಉಪೇಂದ್ರ ಅವರನ್ನು ವರಿಸಿದ ಮೇಲೆ, ಕರ್ನಾಟಕವೇ ನಮ್ಮ ನಾಡು, ಕನ್ನಡವೇ ಉಸಿರು ಎಂದರು. ಪ್ರಿಯಾಂಕಾ ಇಂದು ಎಲ್ಲೇ ಹೋದರೂ ಕನ್ನಡದಲ್ಲಿಯೇ ಮಾತನಾ ಡುತ್ತಾರೆ. ಪ್ರಿಯಾಂಕಾ ಇಂದಿಗೂ ಬೇಡಿಕೆಯ ನಟಿಯಾಗಿ ಗುರುತಿಸಿಕೊಂಡಿದ್ದಾರೆ. ಕನ್ನಡದ ಸಾಲು ಸಾಲು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಪ್ರಿಯಾಂಕಾಗೆ ಪರಭಾಷೆಯಲ್ಲಿ ಬೇಡಿಕೆ ಬಂದರೂ ಕನ್ನಡ ಚಿತ್ರಗಳಿಗೆ ಮೊದಲ ಆದ್ಯತೆ ನೀಡುತ್ತಾರೆ. ಅದರಲ್ಲಿಯೂ ಹೆಚ್ಚಾಗಿ ಮಹಿಳಾ ಪ್ರಧಾನ ಕಥೆಯನ್ನು ಆಯ್ದು ಕೊಳ್ಳುತ್ತಿದ್ದಾರೆ. ನಾನು ಈಗ ಅಪ್ಪಟ ಕನ್ನಡತಿ ಹಾಗಾಗಿ ಕನ್ನಡ ಭಾಷೆಯೆ ಸಿನಿಮಾಗಳು ಇಷ್ಟ ಎನ್ನುತ್ತಾರೆ.

ಪೂಜಾ ಗಾಂಧಿ

ಮುಂಗಾರು ಮಳೆ ಸಿನಿಮಾ ತೆರೆಗೆ ಬಂದಿದ್ದೇ ತಡ ಪೂಜಾ ಗಾಂಧಿ ರಾತ್ರೋರಾತ್ರಿ ಪ್ರಸಿದ್ಧ ನಟಿಯರ ಸಾಲಿನಲ್ಲಿ ಗುರುತಿಸಿ ಕೊಂಡರು. ಚಂದನವನ ದಲ್ಲಿ ಮಳೆ ಹುಡುಗಿ ಯಂತಲೇ ಗುರುತಿಸಿ ಕೊಂಡರು. ಹಾಗಂತ ಪೂಜಾ ಗಾಂಧಿ ಕರ್ನಾಟಕ ದವರಲ್ಲ, ಉತ್ತರ ಪ್ರದೇಶ ದವರು. ಕನ್ನಡ ಸಿನಿಮಾ ಗಳನ್ನು ಹೆಚ್ಚಾಗಿ ಇಷ್ಟಪಡುತ್ತಿದ್ದ ಪೂಜಾ ಚಂದನವನಕ್ಕೆ ಬಂದರು, ಮುಂಗಾರು ಮಳೆಯಲ್ಲಿ ಹಾಡಿ ಕುಣಿದರು. ಮೊದಮೊದಲು ಪೂಜಾ ಗಾಂಧಿ ಕನ್ನಡ ಮಾತನಾಡಲು ಹರಸಾಹಸ ಪಡುತ್ತಿದ್ದರು. ಆದರೆ ತಾನು ಕನ್ನಡ ಸಿನಿಮಾ ಗಳಲ್ಲಿ ನಟಿಸುತ್ತಿದ್ದೇನೆ. ಹಾಗಾಗಿ ಕನ್ನಡ ಕಲಿಯಲೇಬೇಕು ಎಂದು ಇಷ್ಟಪಟ್ಟು ಕನ್ನಡ ಕಲಿತವರು. ಮೊದಮೊದಲು ಪೂಜಾ ಗಾಂಧಿ ಪಾತ್ರಗಳಿಗೆ ಬೇರೆ ಕಲಾವಿದರು ಕಂಠದಾನ ಮಾಡುತ್ತಿದ್ದರು. ಆ ಬಳಿಕ ಪೂಜಾ ತಾವೇ ಕನ್ನಡ ಕಲಿತು, ತಮ್ಮ ಪಾತ್ರಕ್ಕೆ ಧ್ವನಿ ನೀಡಿದರು. ಅವರಿಗೆ ಕನ್ನಡ ಭಾಷೆ ಎಷ್ಟು ಇಷ್ಟವಾಗಿತ್ತೆಂದರೆ, ಪೂಜಾ ಬಿಗ್ ಬಾಸ್ ಮನೆಯಲ್ಲಿದ್ದಾಗ ಅವರ ಕನ್ನಡ ಭಾಷೆ ಕೇಳಿ ಅಭಿಮಾನಿಗಳು ಮರುಳಾಗಿದ್ದರು. ನನ್ನನ್ನು ಒಬ್ಬ ಕಲಾವಿದೆಯಾಗಿ ಗುರುತಿಸಿದ್ದು ಕರ್ನಾಟಕ, ಕನ್ನಡ. ಹಾಗಾಗಿ ನಾನು ಸದಾ ಕರುನಾಡಿಗೆ ಚಿರರುಣಿ ಎನ್ನುತ್ತಾರೆ ಪೂಜಾ.

ಐಂದ್ರಿತಾ ರೇ

ಚಂದನವನದ ಮುದ್ದಾದ ಬೆಡಗಿ ಐಂದ್ರಿತಾ ರೈ ಕೂಡ ಕನ್ನಡದ ನಟಿಮಣಿಯರಲ್ಲಿ ಮುಂಚೂಣಿಯ ಸಾಲಿನಲ್ಲಿದ್ದಾರೆ. ಐಂದ್ರಿತಾ ಮೂಲತಃ ರಾಜಸ್ಥಾನದವರು. ಆದರೆ ನಟಿಯಾಗಿ ಮಿಂಚಿದ್ದು ಕನ್ನಡ ಚಿತ್ರರಂಗದಲ್ಲಿ. ಐಂದ್ರಿತಾ ಕನ್ನಡವನ್ನು ಮನಸಾರೆ ಆರಾಧಿಸುತ್ತಾರೆ. ಹಾಗಾಗಿ ತಾವು ನಟಿಸುವ ಚಿತ್ರಗಳಲ್ಲಿ ತಮ್ಮ ಪಾತ್ರಗಳಿಗೆ ಅವರೇ ಧ್ವನಿಯಾಗುತ್ತಾರೆ. ಮುದ್ದು ಮುಖದ ಬೆಡಗಿಯ, ಮುದ್ದಾದ ಮಾತಿಗೆ ಅಭಿಮಾನಿಗಳು ಮಾರು ಹೋಗಿದ್ದಾರೆ. ನಟ ದಿಗಂತ್ ಅವರನ್ನು ವರಿಸಿದ ಐಂದ್ರಿತಾ ಕರುನಾಡಿನ ಸೊಸೆಯಾಗಿ, ಕನ್ನಡದ ಮನೆಮಗಳಾಗಿದ್ದಾರೆ. ಐಂದ್ರಿತಾ ಹಿಂದಿ, ಬೆಂಗಾಲಿಯ ಭಾಷೆಯ ಸಿನಿಮಾಗಳಲ್ಲಿ ನಟಿಸಿದವರು. ನಟನೆಯಲ್ಲಿ ಮನಗೆದ್ದವರು. ಹಾಗಾಗಿ ಅವರಿಗೆ ಇಂದಿಗೂ ಪರಭಾಷೆಯ ಸಿನಿಮಾಗಳಲ್ಲಿ ಬಲು ಬೇಡಿಕೆಯಿದೆ. ಆದರೂ ಕನ್ನಡ ಚಿತ್ರಗಳಿಗೆ ಮೊದಲ ಆದ್ಯತೆ ನೀಡುತ್ತಾರೆ. ಕನ್ನಡವನ್ನು ಕಲಿತು ಸುಲಲಿತವಾಗಿ ಮಾತನಾಡುತ್ತಾರೆ.

ಅಕುಲ್ ಬಾಲಾಜಿ

ಕನ್ನಡದ ಕಿರುತೆರೆಯ ನಿರೂಪಕರಲ್ಲಿ ಬೆರಳೆಣಿಕೆಯ ಮಂದಿಯಷ್ಟೇ ಇಂದಿಗೂ ಜನಜನಿತ. ಅದರಲ್ಲಿ ಅಕುಲ್ ಬಾಲಾಜಿ ಮುಂಚೂಣಿಯಲ್ಲಿದ್ದಾರೆ. ಅಕುಲ್ ಮಾತಿಗೆ ಮರುಳಾಗದವರೇ ಇಲ್ಲ. ಅಕುಲ್ ಅಷ್ಟು ಅಚ್ಚುಕಟ್ಟಾಗಿ ಕನ್ನಡವನ್ನು ಮಾತನಾಡುತ್ತಾರೆ. ಹಾಸ್ಯದ ಸಂಭಾಷಣೆ ಯಲ್ಲಿ ಕಿಚಾಯಿಸುತ್ತಾರೆ. ಅಕುಲ್ ಆಂಧ್ರಪ್ರದೇಶ ಮೂಲದವರಾದರೂ ಭಾಷಾ ಗಡಿಯನ್ನು ಮೀರಿ ಬೆಳೆದವರು. ಕನ್ನಡದ ಬಗ್ಗೆ ಪ್ರೀತಿ ಬೆಳೆಸಿಕೊಂಡವರು. ಇಂದಿಗೂ ಯಾವುದೇ ಸಿನಿಮಾರಂಗದ ಪ್ರಶಸ್ತಿ ಪ್ರದಾನ ಸಮಾರಂಭವಿರಬಹುದು, ಕಿರುತೆರೆಯಲ್ಲಿನ ಅನುಬಂಧದಂತಹ ಕಾರ್ಯಕ್ರಮ ಗಳಿರಬಹುದು ಅಲ್ಲಿ ಅಕುಲ್‌ಗೆ ಮೊದಲು ಮಣೆ ಹಾಕುತ್ತಾರೆ. ಜತೆಗೆ ರಿಯಾಲಿಟಿ ಶೋಗಳಲ್ಲೂ ಅಕುಲ್‌ಗೆ ಮೊದಲ ಆದ್ಯತೆ, ಯಾಕೆಂದರೆ ಅವರು ಮಾತಿನಲ್ಲಿಯೇ ಮೋಡಿ ಮಾಡುವ ಚತುರ. ಕನ್ನಡವನ್ನು ಹರಳು ಹುರಿದವರಂತೆ ಅಚ್ಚುಕಟ್ಟಾಗಿ ಮಾತನಾಡುವ ಅಕುಲ್ ಹಲವು ಭಾಷೆಗಳನ್ನು ಬಲ್ಲವರು. ಅವರಿಗಾಗಿ ತೆಲುಗಿನ ಹಲವು ನಿರ್ಮಾಣ ಸಂಸ್ಥೆಗಳು ಬಂಡವಾಳ ಹೂಡಲು ಸಿದ್ಧವಾಗಿದ್ದವು. ಆದರೆ ಅವರು ಆಯ್ದುಕೊಂಡಿದ್ದು ಕನ್ನಡ ಚಿತ್ರರಂಗವನ್ನು. ಅಂತಹ ಪ್ರತಿಭಾನ್ವಿತ ನಿರೂಪಕ ಅಕುಲ್ ಕನ್ನಡವೇ ನನ್ನುಸಿರು ಎನ್ನುತ್ತಾರೆ.

ಭಾರತದ ನಂ.1 ಜನಪ್ರಿಯ ಸೆಲೆಬ್ರಿಟಿ ತಾರಾ ಪಟ್ಟ ರಿಷಬ್ ಶೆಟ್ಟಿ ಮುಡಿಗೆ
ಕರ್ನಾಟಕದ ಸಿನಿಮಾ ರಂಗದಲ್ಲಿ ಪಡಿಮೂಡಿದ ಹೆಮ್ಮೆಯ ಕನ್ನಡಿಗ

ಜಿತೇಂದ್ರ ಕುಂದೇಶ್ವರ ಮಂಗಳೂರು

ಕನ್ನಡ ಸಿನಿಮಾ ಧ್ವಜ ಜಾಗತಿಕ ಮಟ್ಟಕ್ಕೆ ಹಾರಿಸಿದ ಡಿವೈನ್ ಸ್ಟಾರ್

ಕರ್ನಾಟಕದ ಸಂಸ್ಕೃತಿಯನ್ನು ದೇಶದಲ್ಲೇ ಮಾತ್ರವಲ್ಲದೆ ಅಂತರಾಷ್ಟ್ರೀಯ ಮಟ್ಟಕ್ಕೂ ಪರಿಚಯಿಸಿದ ಕೀರ್ತಿ ರಿಷಬ್ ಶೆಟ್ಟರಿಗೆ ಸಲ್ಲುತ್ತದೆ. ಏಕತಾನತೆಯಲ್ಲಿ ಬಳಲುತ್ತಿದ್ದ ಭಾರತೀಯ ಚಿತ್ರರಂಗಕ್ಕೆ ಹೊಸ ಹುಮ್ಮಸ್ಸು, ಹೊಸ ರೂಪ ಕೊಟ್ಟ ರಿಷಬ್ ಶೆಟ್ಟರು ತುಳುನಾಡಿನ ಭೂತಕೋಲ, ಕಂಬಳ ಮಾತ್ರವಲ್ಲದೆ ತುಳುನಾಡಿನ ಇತಿಹಾಸದ ತುಣುಕುಗಳನ್ನು ಪ್ರಕೃತಿ ರಮಣೀಯತೆಯನ್ನು ಸಿನಿಮಾದಲ್ಲಿ ಸುಂದರವಾಗಿ ತೋರಿಸಿ ಸಿನಿಮಾ ಪ್ರೇಕ್ಷಕರನ್ನು ರಂಜಿಸಿದರು. ಇವರು ಕರ್ನಾಟಕದ ಸಿನಿಮಾ ರಂಗದಲ್ಲಿ ಪಡಿಮೂಡಿದ ಹೆಮ್ಮೆಯ ಕನ್ನಡಿಗ.

ಹೆಮ್ಮೆಯ ಕನ್ನಡಿಗ: 2006ರಲ್ಲಿ ಕ್ಲ್ಯಾಪ್ ಬಾಯ್ ಆಗಿ ಏಟು ತಿಂದಿದ್ದ ಕುಂದಾಪುರ ಕನ್ನಡದ ಹುಡುಗ ಪ್ರಶಾಂತ್, 2025ರಲ್ಲಿ ದೇಶವೇ ಹೆಮ್ಮೆ ಪಡುವಂತಹ ಡಿವೈನ್ ಸ್ಟಾರ್ ರಿಷಬ್ ಶೆಟ್ಟಿ ಆಗಿ ಬೆಳೆದಿದ್ದಾರೆ. ಇಂಟರ್‌ನೆಟ್ ಮೂವೀ ಡೇಟಾಬೇಸ್ ಸಂಸ್ಥೆ ಪ್ರತಿ ವಾರ ಭಾರತದಲ್ಲಿರುವ ಜನಪ್ರಿಯ ಸೆಲೆಬ್ರಿಟಿಗಳ ಪಟ್ಟಿ ಬಿಡುಗಡೆಗೊಳಿಸುತ್ತದೆ. ಇದರಲ್ಲಿ ಭಾರತದ ನಂ.1 ಜನಪ್ರಿಯ ಸೆಲೆಬ್ರಿಟಿ ತಾರಾಪಟ್ಟ ರಿಷಬ್ ಶೆಟ್ಟಿಗೆ ಒಲಿದಿದೆ.

ಕುಂದಾಪುರದ ಕೆರಾಡಿಯಲ್ಲಿ 1983ರಲ್ಲಿ ಜನಿಸಿದ ರಿಷಬ್ ಶೆಟ್ಟಿ (ಪ್ರಶಾಂತ್ ಶೆಟ್ಟಿ) ಗೆ ಸಿನಿಮಾ ಸೆಳೆತ. ಇದೇ ಆಸೆಯಲ್ಲಿ ಬೆಂಗಳೂರಿಗೆ ಬಂದಿದ್ದ ರಿಷಬ್ ಆರಂಭದಲ್ಲಿ ವಾಟರ್ ಕ್ಯಾನ್ ಬ್ಯುಸಿನೆಸ್ ಮಾಡುತ್ತಿದ್ದರು. 2005-06ರಲ್ಲಿ 'ಸೈನೆಡ್' ಸಿನಿಮಾದ ನಿರ್ದೇಶಕರ ಬಳಿ ಕೆಲಸ ಮಾಡಿದ್ದರು. ಬಳಿಕ ರವಿ ಶ್ರೀವತ್ಸ ಅವರ 'ಗಂಡ ಹೆಂಡತಿ' ಸಿನಿಮಾಗೆ ಕ್ಲ್ಯಾಪ್ ಬಾಯ್ ಆಗಿದ್ದರು. ಕೆನ್ನೆಗೆ ಏಟು ಮಾತ್ರವಲ್ಲ ಮನಸ್ಸಿಗೂ ಆಘಾತ ಕೊಟ್ಟಿದ್ದ ದಿನಗಳವು. ವಾಟರ್ ಕ್ಯಾನ್ ವ್ಯವಹಾರದ ಲಾಭದ ಹಣವನ್ನು ಹೋಟೆಲ್ ಉದ್ಯಮಕ್ಕೆ ಸುರಿಯುತ್ತಾರೆ. ಆದರೆ ಮೂರೇ ತಿಂಗಳಲ್ಲಿ ದುಡಿದ ಹಣವೆಲ್ಲಾ ಕರಗಿಹೋಯಿತು.

ಇದರ ಮೇಲೆ ತಲೆ ಮೇಲೆ ಲಕ್ಷಾಂತರ ರು. ಸಾಲದ ಹೊರೆ. ಆದರೆ ಸಿನಿಮಾ ಹೋರಾಟ ನಡುವೆ ಜಾರಿ ಇತ್ತು. ಈ ಎಲ್ಲ ಸೋಲು ನೋವು ಮರೆಯಲು 2012ರ ಸಮಯದಲ್ಲಿ 'ರಿಷಬ್ ಶೆಟ್ಟಿ' ಎಂಬ ಹೊಸ ಹೆಸರಿನೊಂದಿಗೆ ಫೀಲ್ಡಿಗೆ ಇಳಿಯುತ್ತಾರೆ.

2016ರಲ್ಲಿ 'ರಿಕ್ಕಿ' ಮೂಲಕ ರಿಷಬ್ ನಿರ್ದೇಶಕರೂ ಆದರು. 2016ರ ಡಿಸೆಂಬರ್‌ನಲ್ಲಿ 'ಕಿರಿಕ್ ಪಾರ್ಟಿ' ಬಿಡುಗಡೆಯಾಗಿ ದೊಡ್ಡ ಗೆಲುವು ಸಿಗುತ್ತದೆ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಾಸರಗೋಡು ಎಂಬ ಮಕ್ಕಳ ಸಿನಿಮಾ! ಅತ್ಯುತ್ತಮ ಚಿತ್ರ, ಬಾಕ್ಸ್ ಆಫೀಸ್ ಯಶಸ್ಸಿನ ಜತೆಗೆ ರಾಷ್ಟ್ರ ಪ್ರಶಸ್ತಿ ಕೂಡ ರಿಷಬ್ ಪಾಲಿಗೆ ಭಾಗ್ಯದಂತೆ ಲಭಿಸುತ್ತದೆ. 2019ರಲ್ಲಿ ತೆರೆಕಂಡ 'ಬೆಲ್ ಬಾಟಂ' ಸಿನಿಮಾ ರಿಷಷ್ ಅವರನ್ನು ಯಶಸ್ವಿ ನಾಯಕನನ್ನಾಗಿಸಿತು.

ಪ್ಯಾನ್ ಇಂಡಿಯಾ ಸಿನಿಮಾ: ಕನ್ನಡ ಸಿನಿಮಾವಾಗಿ ತೆರೆಗೆ ಬಂದ 'ಕಾಂತಾರ' ನಂತರ 'ಪ್ಯಾನ್ ಇಂಡಿಯಾ ಸಿನಿಮಾ' ಪಟ್ಟ ಪಡೆದುಕೊಂಡಿತು. ಡಿವೈನ್ ಸ್ಟಾರ್ ಎಂಬ ಬಿರುದು ರಿಷಬ್ ಶೆಟ್ಟಿ ಹೆಸರಿನ ಜತೆ ಸೇರಿತು. 'ಅತ್ಯುತ್ತಮ ನಟ ರಾಷ್ಟ್ರ ಪ್ರಶಸ್ತಿ' ಕೂಡ ರಿಷಬ್ ಮುಡಿಗೇರಿತು. ಹೊಂಬಾಳೆ ತಂಡದ ಕಾಂತಾರ ಚಾಪ್ಟರ್-1 ಸಿನಿಮಾ ಕೋಟಿ ಕೋಟಿ ಬಾಚಿ ರಿಷಬ್ ಶೆಟ್ಟರನ್ನು ದೇಶದಲ್ಲೇ ಮೆಗಾ ಸ್ಟಾರ್ ಮಾಡಿಸಿದೆ.

ಕರ್ನಾಟಕ ಸರ್ಕಾರ

ಕರ್ನಾಟಕದ ನವ ನಿರ್ಮಾಣಕ್ಕೆ
ಗ್ಯಾರಂಟಿ ಸರ್ಕಾರ

ಪ್ರಜ್ವಲಿಸುತ್ತಿದೆ ೭೦ರ ದೀಪ
ಮಾಡೋಣ ಕನ್ನಡ ಕಟ್ಟುವ ಸಂಕಲ್ಪ!

ರಾಜ್ಯೋತ್ಸವದ ಈ ದಿನ, ನಮ್ಮ ನಾಡಿನ ಇತಿಹಾಸ, ಸಂಸ್ಕೃತಿ ಮತ್ತು ವೈವಿಧ್ಯತೆಯನ್ನು ಮನದುಂಬಿ ಆಚರಿಸೋಣ.

ಕನ್ನಡ ಭಾಷೆ, ಕಲೆ ಮತ್ತು ನೆಲದ ಬಗ್ಗೆ ಹೆಮ್ಮೆ ಪಡುತ್ತಾ, ಸಮೃದ್ಧ ಕರ್ನಾಟಕ ನಿರ್ಮಾಣಕ್ಕೆ ಕೈಜೋಡಿಸೋಣ.

ನಾಡಿನ ಸಮಸ್ತ ಜನತೆಗೆ
೭೦ನೇ ಕನ್ನಡ ರಾಜ್ಯೋತ್ಸವದ ಶುಭಾಶಯಗಳು

ಶಕ್ತಿ | ಅನ್ನಭಾಗ್ಯ | ಗೃಹ ಜ್ಯೋತಿ | ಗೃಹಲಕ್ಷ್ಮಿ | ಯುವನಿಧಿ

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

CMofKarnataka https://dipr.karnataka.gov.in ಕರ್ನಾಟಕ ವಾರ್ತೆ

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯ ಮಂತ್ರಿಗಳು

"ಕನ್ನಡ ನಾಡು ನುಡಿ ಸಂಸ್ಕೃತಿಗಾಗಿ ಮಿಡಿದ, ಮಡಿದ, ಮೆರೆದ ಎಲ್ಲ ಮಹನೀಯರನ್ನು ಸ್ಮರಿಸೋಣ, ಕರ್ನಾಟಕ ಏಕೀಕರಣದ ರೂವಾರಿಗಳ ಆಶಯಗಳನ್ನು ಸಾಕಾರಗೊಳಿಸೋಣ, ಆರೋಗ್ಯ ಮತ್ತು ಅಭಿವೃದ್ಧಿ ಸಾಧಿಸುವತ್ತ ಮುನ್ನಡೆಯೋಣ."

ರಾಜ್ಯೋತ್ಸವ
ಪ್ರಶಸ್ತಿ ಪ್ರದಾನ ಸಮಾರಂಭ ೨೦೨೫

ದಿನಾಂಕ : ೦೧-೧೧-೨೦೨೫ ಶನಿವಾರ, ಸಂಜೆ : ೬.೩೦ ಗಂಟೆಗೆ
ಸ್ಥಳ : ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಬೆಂಗಳೂರು

ಪ್ರಶಸ್ತಿ ಪ್ರದಾನ
ಶ್ರೀ ಸಿದ್ದರಾಮಯ್ಯ
ಮಾನ್ಯ ಮುಖ್ಯ ಮಂತ್ರಿಗಳು
ಕರ್ನಾಟಕ ಸರ್ಕಾರ

ಘನ ಉಪಸ್ಥಿತಿ
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯ ಮಂತ್ರಿಗಳು
ಕರ್ನಾಟಕ ಸರ್ಕಾರ

ಅಧ್ಯಕ್ಷತೆ
ಶ್ರೀ ಶಿವರಾಜ ಎಸ್. ತಂಗಡಗಿ
ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು, ಕರ್ನಾಟಕ ಸರ್ಕಾರ

ಮುಖ್ಯ ಅತಿಥಿಗಳು
ಶ್ರೀ ಉದಯ ಬಿ. ಗರುಡಾಚಾರ್
ಮಾನ್ಯ ಶಾಸಕರು
ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರೊಂದಿಗೆ ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶ್ರೀ ಶಿವರಾಜ ಎಸ್. ತಂಗಡಗಿ ಅವರು ಸಮಾರಂಭದಲ್ಲಿ ಭಾಗವಹಿಸಿರುವುದು

ನಾಡಿನ ಸಮಸ್ತ ಜನತೆಗೆ
ಕರ್ನಾಟಕ ರಾಜ್ಯೋತ್ಸವದ
ಶುಭಾಶಯಗಳು

ಸರ್ವರಿಗೂ ಆದರದ ಸುಸ್ವಾಗತ

ಡಾ. ವೆಂಕಟೇಶ್ ಎಂ.ವಿ., ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕೆ.ಎಂ. ಗಾಯಿತ್ರಿ, ಭಾ.ಆ.ಸೇ
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ನುಡಿದಂತೆ ನಡೆದಿದ್ದೇವೆ...
ಶಕ್ತಿ – ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಗೃಹ ಜ್ಯೋತಿ – ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ
ಅನ್ನಭಾಗ್ಯ – ಬಡವರಿಗೆ ಪ್ರತಿ ತಿಂಗಳು 10 kg
ಗೃಹಲಕ್ಷ್ಮಿ – ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000
ಯುವನಿಧಿ – ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 | ₹1500

ಠರಾವಿನಲ್ಲೇ ಉಳಿದ ನಿರ್ಣಯಗಳು

ಕನ್ನಡ ಭಾಷಾ ಅಭಿವೃದ್ಧಿ ಅಧಿನಿಯಮ-2022 ಹಾಗೂ ಸರೋಜಿನಿ ಮಹಿಷಿ ವರದಿ ನನೆಗುದಿಗೆ

ಕನ್ನಡ ಸಾಹಿತ್ಯ ಸಮ್ಮೇಳನಗಳ ವೈಶಿಷ್ಟ್ಯ

- ಕನ್ನಡದ ಮೊದಲ ಸಾಹಿತ್ಯ ಸಮ್ಮೇಳನ 1915ರ ಮೇ 3ರಿಂದ 6ರವರೆಗೆ ಬೆಂಗಳೂರಿನಲ್ಲಿ ಜರುಗಿದೆ. 2ನೇ ಸಮ್ಮೇಳನ 1916ರ ಮೇ 6ರಂದು ಬೆಂಗಳೂರಿನಲ್ಲಿ, 3ನೇ ಸಮ್ಮೇಳನ ಮೈಸೂರಿನಲ್ಲಿ 1917ರ ಜೂ.8 ರಂದು ಜರುಗಿವೆ. ಮೊದಲ ಮೂರೂ ಸಮ್ಮೇಳನಗಳೂ ಎಚ್.ವಿ.ನಂಜುಂಡಯ್ಯ ಅವರ ಅಧ್ಯಕ್ಷತೆಯಲ್ಲೇ ನಡೆದಿವೆ ಎಂಬುದೇ ವಿಶೇಷ.
- 1936, 1942, 1946, 1953, 1959, 1962, 1964, 1966, 1968, 1969, ಆ ಬಳಿಕ 1972ರಿಂದ 1975ರವರೆಗೂ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಿಲ್ಲ. 1977, 1983, 1986, 1988, 1989, 1991, 1998, 2001, 2018, 2021, 2022ರಲ್ಲಿಯೂ ಸಮ್ಮೇಳನ ಜರುಗಿಲ್ಲ.
- 1981(ಮಾರ್ಚ್-ನವೆಂಬರ್) ಮತ್ತು 2003ರಲ್ಲಿ (ಮಾರ್ಚ್-ಡಿಸೆಂಬರ್) ಹಾಗೂ 2011 (ಫೆಬ್ರವರಿ-ಡಿಸೆಂಬರ್) ಒಂದೇ ವರ್ಷದಲ್ಲಿ ಎರಡು ಬಾರಿ ಸಮ್ಮೇಳನ ಜರುಗಿವೆ.
- 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಬಳ್ಳಾರಿಯಲ್ಲಿ 2025ರ ಡಿಸೆಂಬರ್‌ನಲ್ಲಿ ನಡೆಯಲಿದ್ದು, ಬೂಕರ್ ಪ್ರಶಸ್ತಿ ಪುರಸ್ಕೃತ ಲೇಖಕಿ ಬಾನು ಮುಷ್ತಾಕ್ ಸಮ್ಮೇಳನ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.



ಪ್ರತಿ ಬಾರಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಾಗಲೂ ಕೆಲವು ಮಹತ್ವದ ನಿರ್ಣಯಗಳನ್ನು ಕೈಗೊಳ್ಳಲಾಗುತ್ತದೆ. ಈ ನಿರ್ಣಯಗಳು ಬಹುತೇಕವಾಗಿ ಕನ್ನಡ ಭಾಷೆಯ ಸಂವರ್ಧನೆ, ಶಿಕ್ಷಣ ಮತ್ತು ಭಾಷೆ ಮತ್ತು ಕನ್ನಡಿಗರ ಬದುಕಿಗೆ ಸಂಬಂಧಿಸಿದ ವಿಷಯಗಳಾಗಿರುತ್ತವೆ ಎಂಬುದು ಉಲ್ಲೇಖಾರ್ಹ. ಆದರೆ, ಆ ನಿರ್ಣಯಗಳಲ್ಲಿ ಎಷ್ಟು ಅನುಷ್ಠಾನಗೊಂಡಿವೆ, ಯಾವುದೆಲ್ಲಾ ಬಾಕಿಯಾಗಿವೆ ಎಂಬುದು ಕೂಡಾ ಚರ್ಚಾರ್ಹ ಸಂಗತಿ.

2024ರಲ್ಲಿ ಮಂಡ್ಯ ನಗರದಲ್ಲಿ ನಡೆದ 87ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿಯೂ ನಿರ್ಣಯಗಳನ್ನು ಕೈಗೊಳ್ಳಲಾಗಿದೆ. ಕನ್ನಡ ಭಾಷಾ ಅಭಿವೃದ್ಧಿ ಅಧಿನಿಯಮ-2022ರ ಸಮಗ್ರ ಜಾರಿಗೆ ಆಗ್ರಹ, ರಾಜ್ಯದ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ತಕ್ಷಣವೇ ಭರ್ತಿ ಮಾಡಬೇಕೆಂದು ಆಗ್ರಹಿಸಲಾಗಿದೆ, ಸರೋಜಿನಿ ಮಹಿಷಿ ವರದಿಯ ಸಮಗ್ರ ಅನುಷ್ಠಾನಕ್ಕೆ ಒತ್ತಾಯಿಸಲಾಗಿದೆ. ಕನ್ನಡಿಗರಿಗೆ ರಾಷ್ಟ್ರಕವಿ ಪ್ರಶಸ್ತಿ ಘೋಷಣೆಗೂ ಸರಕಾರವನ್ನು ಆಗ್ರಹಿಸಲಾಗಿದೆ.

ಈ ನಾಲ್ಕು ಪ್ರಮುಖ ನಿರ್ಣಯಗಳಲ್ಲದೇ ಇತರೆ ಹಲವು ಗಮನಾರ್ಹ ನಿರ್ಣಯಗಳನ್ನೂ ಮಂಡ್ಯದಲ್ಲಿ ನಡೆದ 87ನೇ ಸಾಹಿತ್ಯ ಸಮ್ಮೇಳನದಲ್ಲಿ ಕೈಗೊಳ್ಳಲಾಗಿದೆ.

ಈ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳಲ್ಲಿ 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ-2022ರ ಪೂರ್ಣ ಅನುಷ್ಠಾನ' ಎಂಬ ನಿರ್ಣಯ ಬಹಳ ಪ್ರಮುಖವಾದುದಾಗಿದೆ. ಈ ಅಧಿನಿಯಮವನ್ನು ಕನ್ನಡ ಭಾಷೆಯ ಪ್ರಚಾರ ಮತ್ತು ಶಿಕ್ಷಣ ಹಾಗೂ ಉದ್ಯೋಗದಲ್ಲಿ ಕನ್ನಡಿಗರಿಗೆ ಉತ್ತಮ ಅವಕಾಶಗಳನ್ನು ಒದಗಿಸಲೆಂದೇ ರಚಿಸಲಾಗಿದೆ. ಆದರೆ ಅಧಿನಿಯಮ 2022ರಲ್ಲಿ ರಚನೆಯಾದರೂ ಈವರೆಗೂ ಕಟ್ಟುನಿಟ್ಟಾಗಿ ಮತ್ತು ಸಮಗ್ರವಾಗಿ ಜಾರಿಗೊಂಡಿಲ್ಲ. ಹಾಗಾಗಿಯೇ 87ನೇ ಸಮ್ಮೇಳನದಲ್ಲೂ ಈ ನಿರ್ಣಯ ಪುನರಾವರ್ತನೆಗೊಂಡಿದೆ.

ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲು ಸೌಲಭ್ಯ ದೊರಕಿಸಿಕೊಡುವಂತೆ ಶಿಫಾರಸು ಮಾಡಿರುವ ಸರೋಜಿನಿ ಮಹಿಷಿ ಆಯೋಗದ ವರದಿಯನ್ನು ಕಾನೂನು ಅಥವಾ ಸರಕಾರದ ಪ್ರಮುಖ ನೀತಿಯಾಗಿಸಿ ಸಮಗ್ರವಾಗಿ ಹಾಗೂ ಪರಿಣಾಮಕಾರಿಯಾಗಿ ಜಾರಿಗೊಳಿಸಲು 87ನೇ ಸಮ್ಮೇಳನದಲ್ಲೂ ಒತ್ತಾಯಿಸಲಾಗಿದೆ.

ರಾಜ್ಯದ ಎಲ್ಲಾ ಕನ್ನಡ ಮಾಧ್ಯಮ ಶಾಲೆಗಳಿಗೆ ಅಗತ್ಯ ಕಟ್ಟಡಗಳು, ಗ್ರಂಥಾಲಯಗಳು, ಆಟದ ಮೈದಾನಗಳು, ಶಿಕ್ಷಕರು ಮತ್ತು ಇತರ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರಕಾರವು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಲಾಗಿದೆ.

ಕೇಂದ್ರ ಸರಕಾರದ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಉದ್ಯೋಗದಲ್ಲಿಯೂ ಕನ್ನಡಿಗರಿಗೆ ಮೀಸಲಾತಿ ಸಿಗುವಂತಾಗಬೇಕು. ಹಾಗಾಗಿ ಕೇಂದ್ರ ಸರಕಾರದ ವಿವಿಧ ಇಲಾಖೆಗಳು ಮತ್ತು ಸಂಸ್ಥೆಗಳಲ್ಲಿ ಹಾಗೂ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕನ್ನಡಿಗರಿಗೆ ಶೇ.50ರಷ್ಟು ಉದ್ಯೋಗ ಮೀಸಲಿಡಬೇಕು ಎಂಬುದು ಈವರೆಗೂ ಈಡೇರದ ಪ್ರಮುಖ ಬೇಡಿಕೆಗಳಲ್ಲಿ ಸೇರಿಕೊಂಡಿದೆ.

ಕನ್ನಡಿಗರಿಗೆ ಉದ್ಯೋಗ ಮೀಸಲಾತಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಸರಕಾರ ಪರಿಣಾಮಕಾರಿಯಾಗಿ ನಿಭಾಯಿಸಬೇಕು ಎಂದು 87ನೇ ಸಾಹಿತ್ಯ ಸಮ್ಮೇಳನದಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

ಹಿಂದಿನ ಸಮ್ಮೇಳನದ ನಿರ್ಣಯಗಳೂ ಬಾಕಿ!

ಹಾವೇರಿಯಲ್ಲಿ ನಡೆದ 86ನೇ ಸಾಹಿತ್ಯ ಸಮ್ಮೇಳನದಲ್ಲಿ ಕೈಗೊಂಡಿದ್ದ ನಿರ್ಣಯದಲ್ಲಿ ಪ್ರಮುಖವಾದ, 'ಕನ್ನಡ ಸಮಗ್ರ ಭಾಷಾ ಅಭಿವೃದ್ಧಿ ವಿಧೇಯಕದ ಜಾರಿಗೆ ಸುಗ್ರೀವಾಜ್ಞೆ ಹೊರಡಿಸಬೇಕು. ಆ ಮೂಲಕ ಪರಿಪೂರ್ಣ ಕಾನೂನಿನ ರೂಪವನ್ನು ನೀಡಬೇಕು. ಅದರಿಂದ ಶಿಕ್ಷಣ, ನ್ಯಾಯಾಂಗ ಮತ್ತು ಸರಕಾರದ ಆಡಳಿತದ ವಿವಿಧ ಇಲಾಖೆಗಳಲ್ಲಿ ಕನ್ನಡವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅನುವು ಮಾಡಿಕೊಡಬೇಕು ಎಂದೂ ಆಗ್ರಹಿಸಲಾಯಿತು. ಕರ್ನಾಟಕ-ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ ಸುಪ್ರೀಂ ಕೋರ್ಟ್ ತೀರ್ಪಿನಂತೆ ಕ್ರಮ ಕೈಗೊಳ್ಳಲೂ 86ನೇ ಸಮ್ಮೇಳನದಲ್ಲಿ ಒತ್ತಾಯಿಸಲಾಯಿತು. ಅದನ್ನೇ 87ನೇ ಸಮ್ಮೇಳನದಲ್ಲೂ ನಿರ್ಣಯವಾಗಿ ಕೈಗೊಳ್ಳುವ ಮೂಲಕ ಮತ್ತೆ ನೆನಪಿಸಲಾಗಿದೆ.

ಕಲಬುರಗಿಯಲ್ಲಿ ನಡೆದ 85ನೇ ಸಮ್ಮೇಳನದಲ್ಲಿ ರಾಜ್ಯದಲ್ಲಿನ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡವನ್ನು ಬೋಧನಾ ಮಾಧ್ಯಮವಾಗಿ ಮಾಡಬೇಕೆಂದು ನಿರ್ಣಯ ಕೈಗೊಳ್ಳಲಾಗಿತ್ತು. ಇದೇ ನಿರ್ಣಯವನ್ನು ಈ ಹಿಂದಿನ ಸಮ್ಮೇಳನಗಳಲ್ಲೂ ಹಲವು ಬಾರಿ ಕೈಗೊಳ್ಳಲಾಗಿದೆ. ಹಾಗಿದ್ದರೂ ಈವರೆಗೂ ಕಾರ್ಯರೂಪಕ್ಕೆ ಬಂದಿಲ್ಲ ಎಂದು ವಿಷಾದಿಸಲಾಗಿದೆ. 87ನೇ ಸಮ್ಮೇಳದಲ್ಲೂ ಮತ್ತೊಮ್ಮೆ ನೆನಪಿಸಲಾಗಿದೆ.

ಸಮಿತಿ ರಚನೆ

1983ರಲ್ಲಿ ರಾಜ್ಯದಲ್ಲಿ ಆಡಳಿತ ನಡೆಸಿದ್ದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ನೇತೃತ್ವದ ಸರಕಾರ, ಕರ್ನಾಟಕದಲ್ಲಿ ಕನ್ನಡಿಗರಿಗೆ ದೊರೆಯುತ್ತಿದ್ದ ಉದ್ಯೋಗಾವಕಾಶ ಎಷ್ಟಿದೆ ಎಂಬುದನ್ನು ಪರಿಶೀಲಿಸಲು ಸರೋಜಿನಿ ಮಹಿಷಿ ಅವರ ನೇತೃತ್ವದಲ್ಲಿ ಸಮಿತಿ ರಚಿಸಿತು.

ಸತತ ಮೂರು ವರ್ಷಗಳ ಕಾಲ ಸಮಿತಿಯು ಅಧ್ಯಯನ ನಡೆಸಿ, ಉದ್ಯೋಗ ವಲಯದ ಹಲವು ಅಂಶಗಳನ್ನು ಪರಿಶೀಲಿಸಿ 1986ರಲ್ಲಿ ಸರ್ಕಾರಕ್ಕೆ 58 ಶಿಫಾರಸು ಅಂಶಗಳನ್ನು ಒಳಗೊಂಡ ವರದಿ ಸಲ್ಲಿಸಿತು. ಅದನ್ನೇ 'ಸರೋಜಿನಿ ಮಹಿಷಿ ವರದಿ' ಎಂದು ಕರೆಯಲಾಗುತ್ತಿದೆ.

87ನೇ ಸಮ್ಮೇಳನದ ನೆನಪು

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ 2024ರ ಡಿ.20-22ರವರೆಗೆ ಮಂಡ್ಯ ನಗರದ ಸರ್ ಎಂ.ವಿಶ್ವೇಶ್ವರಯ್ಯ ಮೈದಾನದ ಬಳಿ ನಡೆಯಿತು. 30 ವರ್ಷಗಳಷ್ಟು ಸುದೀರ್ಘ ಅಂತರದ ನಂತರ ಮಂಡ್ಯದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಲಾಗಿತ್ತು. ಮಂಡ್ಯದಲ್ಲಿ ನಡೆದ 3ನೇ ಸಾಹಿತ್ಯ ಸಮ್ಮೇಳನ ಎನಿಸಿಕೊಂಡಿತು. ಹಿರಿಯ ಸಾಹಿತಿ ಮತ್ತು ಜಾನಪದ ವಿದ್ವಾಂಸ ಗೋ.ರು. ಚನ್ನಬಸಪ್ಪ (ಗೋ.ರು.ಚ) ಅವರು ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮ್ಮೇಳನವನ್ನು ಉದ್ಘಾಟಿಸಿದರು.

ಸರೋಜಿನಿ ಮಹಿಷಿ ವರದಿ ಜಾರಿಗೆ ಬಂದರೆ ಕನ್ನಡಿಗರಿಗೆ ಲಾಭ

ಕೇಂದ್ರ ಮತ್ತು ರಾಜ್ಯದ ಸರಕಾರದ ವಿವಿಧ ಇಲಾಖೆಗಳು -ಸಂಸ್ಥೆಗಳಲ್ಲಿನ ಉದ್ಯೋಗಗಳಲ್ಲಿ ಹಾಗೂ ಖಾಸಗಿ ಕ್ಷೇತ್ರದ ಕಂಪನಿಗಳಲ್ಲಿನ ನೌಕರಿಯಲ್ಲಿಯೂ ಕನ್ನಡಿಗರಿಗೆ ಆದ್ಯತೆ ನೀಡಬೇಕು ಹಾಗೂ ಸರೋಜಿನಿ ಮಹಿಷಿ ವರದಿಯನ್ನು ಜಾರಿಗೆ ತರಬೇಕು ಎಂಬ ಒತ್ತಾಯ ಹಲವು ವರ್ಷಗಳಿಂದಲೂ ಕೇಳಿಬರುತ್ತಲೇ ಇದೆ. ಸರೋಜಿನಿ ಮಹಿಷಿ ವರದಿಯ ಸಮಗ್ರ ಜಾರಿಗೆ ಎಂದು ಒತ್ತಾಯಿಸಿ ಕನ್ನಡ ಪರ ಸಂಘಟನೆಗಳು ಕರ್ನಾಟಕ ಬಂದ್ ಕೂಡಾ ನಡೆಸಿವೆ.

ಸರೋಜಿನಿ ಮಹಿಷಿ ಪರಿಚಯ

ಸರೋಜಿನಿ ಮಹಿಷಿ ಅವರು ಮೂಲತಃ ಧಾರವಾಡ ಜಿಲ್ಲೆಯವರು. 1927ರಲ್ಲಿ ಧಾರವಾಡದಲ್ಲಿ ಜನಿಸಿದ ಅವರು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಹುಟ್ಟೂರಿನಲ್ಲೇ ಪೂರ್ಣಗೊಳಿಸಿದರು. ನಂತರದಲ್ಲಿ ಸಾಂಗ್ಲಿಯ ವಿಲಿಂಗಟನ್ ಕಾಲೇಜಿನಲ್ಲಿ ಕನ್ನಡ ಹಾಗೂ ಸಂಸ್ಕೃತ ವಿಷಯದಲ್ಲಿ ಬಿಎ ಪದವಿ ಪಡೆದರು. ಎಂಎ ಪದವಿಯನ್ನು ಮುಂಬೈನಲ್ಲಿ ಪಡೆದರು. ಧಾರವಾಡದಲ್ಲಿ ಕಾನೂನು ಪ್ರಾಧ್ಯಾಪಕಿಯಾಗಿದ್ದ ಅವರು ಬಳಿಕ ವಕೀಲಿ ವೃತ್ತಿಯಲ್ಲಿ ಕೆಲಕಾಲ ಮುಂದುವರಿದರು. ಧಾರವಾಡ ಲೋಕಸಭಾ ಕ್ಷೇತ್ರದಲ್ಲಿ 4 ಬಾರಿ ಸಂಸದೆಯಾಗಿದ್ದರು. ಎರಡು ಅವಧಿಗೆ ರಾಜ್ಯಸಭೆ ಸದಸ್ಯೆಯೂ ಆಗಿದ್ದರು.

45 ಶಿಫಾರಸುಗಳಿಗೆ ಒಪ್ಪಿಗೆ

ಕರ್ನಾಟಕ ಸರಕಾರಕ್ಕೆ ಸರೋಜಿನಿ ಮಹಿಷಿ ಸಮಿತಿ ಸಲ್ಲಿಸಿದ ವರದಿಯಲ್ಲಿದ್ದ 58 ಶಿಫಾರಸುಗಳಲ್ಲಿ 45 ಶಿಫಾರಸುಗಳನ್ನು ಜಾರಿಗೊಳಿಸುವುದಕ್ಕೆ ರಾಜ್ಯ ಸರಕಾರ ಒಪ್ಪಿಗೆ ನೀಡಿತ್ತು. ಆದರೆ, ವರದಿಯ ಪ್ರಮುಖ ಶಿಫಾರಸುಗಳಲ್ಲಿ ಬಲು ಮುಖ್ಯವಾದ 'ಸರಕಾರಿ ಹಾಗೂ ಖಾಸಗಿ ಉದ್ಯೋಗಗಳಲ್ಲಿ ಕನ್ನಡಿಗರಿಗೆ ಮೀಸಲಾತಿ' ಎಂಬ ಅಂಶವೇ ಸರಕಾರದಿಂದ ಈವರೆಗೂ ಜಾರಿಗೊಂಡಿಲ್ಲ.

ವರದಿಯಲ್ಲಿ: ಕರ್ನಾಟಕದಲ್ಲಿ ಉದ್ಯೋಗ ವಿಚಾರ ಬಂದಾಗ ಕನ್ನಡಿಗರಿಗೆ ಮೋಸವಾಗುತ್ತಿದೆ. ಸರಕಾರಿ ಇಲಾಖೆಗಳು ಮತ್ತು ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗ ನೀಡುವ ಸಂದರ್ಭ ಕನ್ನಡಿಗರನ್ನು ಆದ್ಯತೆ ಮೇರೆಗೆ ಪರಿಗಣಿಸಬೇಕು ಎಂಬ ಅಂಶವೇ ಸರೋಜಿನಿ ಮಹಿಷಿ ವರದಿಯಲ್ಲಿ ಪ್ರಮುಖವಾಗಿದೆ.

- ರಾಜ್ಯ ಸರಕಾರಿ ಸಂಸ್ಥೆಗಳು ಮತ್ತು ಸಾರ್ವಜನಿಕ ವಲಯದ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಶೇ.100ರಷ್ಟು ಮೀಸಲಾತಿ ನೀಡಬೇಕು.
- ಕರ್ನಾಟಕದಲ್ಲಿ ಕಾರ್ಯನಿರ್ವಹಿಸುವ ಕೇಂದ್ರ ಸರಕಾರದ ಇಲಾಖೆಗಳು ಹಾಗೂ ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳಲ್ಲಿನ 'ಸಿ' ಮತ್ತು 'ಡಿ' ಗುಂಪಿನ ಉದ್ಯೋಗಗಳಲ್ಲಿ ಕನ್ನಡಿಗರಿಗೆ ಶೇ.100 ಮೀಸಲು ಸೌಲಭ್ಯ ನೀಡಬೇಕು.
- ಕರ್ನಾಟಕದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೇಂದ್ರ ಸರಕಾರದ ಸಂಸ್ಥೆಗಳಲ್ಲಿನ ನೌಕರಿಗಳಲ್ಲಿ ಗ್ರೂಪ್ 'ಬಿ'ಯಲ್ಲಿ ಕನ್ನಡಿಗರಿಗೆ ಶೇ. 80 ಹಾಗೂ ಗ್ರೂಪ್ 'ಎ' ಹುದ್ದೆಗಳಲ್ಲಿ ಶೇ.65ರಷ್ಟು ಮೀಸಲು ಒದಗಿಸಬೇಕು.
- ರಾಜ್ಯದಲ್ಲಿರುವ ಎಲ್ಲಾ ಬಗೆಯ ಕೈಗಾರಿಕೆಗಳಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ನೇಮಕದಲ್ಲಿ ಕನ್ನಡಿಗರಿಗೆ ಆದ್ಯತೆ ಇರಬೇಕು.
- ಕನ್ನಡ ಶಾಲೆಗಳಲ್ಲಿ ಓದಿತ ವಿದ್ಯಾರ್ಥಿಗಳಿಗೆ ರಾಜ್ಯ ಸರಕಾರದ ಕೆಲಸದಲ್ಲಿ ಶೇ.5 ಮೀಸಲಾತಿ ನೀಡಬೇಕು.
- ರಾಜ್ಯದಲ್ಲಿರುವ ಕಾರ್ಯನಿರ್ವಹಿಸುವ ಬಹುರಾಷ್ಟ್ರೀಯ ಕಂಪನಿ(ಎಂಎನ್‌ಸಿ)ಗಳಲ್ಲಿನ ಉದ್ಯೋಗಗಳಲ್ಲಿಯೂ ಕನ್ನಡಿಗರಿಗೆ ಮೀಸಲಾತಿ ನೀಡಬೇಕು ಎಂಬುದು ವರದಿಯಲ್ಲಿ 58 ಶಿಫಾರಸುಗಳಲ್ಲಿ ಪ್ರಮುಖವಾಗಿವೆ.

ಗಡಿನಾಡಿನಲ್ಲಿ ಕನ್ನಡದ ದುಸ್ಥಿತಿ: ಭಾಷಾ ಬೆಳವಣಿಗೆಗೆ ಸವಾಲು

> 1956ರಲ್ಲಿ ಭಾಷಾವಾರು ಪ್ರಾಂತ್ಯ ವಿಭಜನೆಯ ಸಂದರ್ಭದಲ್ಲಿ ಆದ ಅನ್ಯಾಯವನ್ನು ಸರಿಪಡಿಸಲು ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಮೆಹರ್ ಚಂದ್ ಮಹಾಜನ್ ಅವರ ನೇತೃತ್ವದಲ್ಲಿ ಗಡಿ ವಿವಾದ ಪರಿಹರಿಸುವ ಆಯೋಗ ರಚನೆಯೂ ಆಗಿತ್ತು. ಕೇರಳ-ಕರ್ನಾಟಕ ನಡುವಿನ ಕಾಸರಗೋಡು ಗಡಿ ವಿವಾದ ಮತ್ತು ಬೆಳಗಾವಿ ಗಡಿ ವಿವಾದದ ಎಲ್ಲಾ ಅಂಶಗಳನ್ನೂ ಮಹಾಜನ್ ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ಆದರೆ ಮಹಾಜನ್ ವರದಿ ಸರ್ವಾನುಮತದಿಂದ ಜಾರಿಗೆ ಬರದೆ ಇರುವುದು ಕರ್ನಾಟಕದ ಪಾಲಿಗಂತೂ ತುಂಬಲಾರದ ನಷ್ಟ.

ನರೇಂದ್ರ ಪಾರೆಕಟ್

ಇದು ಏಳು ವರ್ಷಗಳ ಹಿಂದಿನ ಮಾತು..

'ಸಂಸತ್ತಿಗೆ ಸಂಸದರು ಬರೋದಿಲ್ಲ ಎಂದು ಪಾರ್ಲಿಮೆಂಟನ್ನು ಮುಚ್ಚೋಲ್ಲ, ಐಸಿಯುಗೆ ರೋಗಿಗಳು ಬರೋದಿಲ್ಲ ಎಂದು ಅದನ್ನು ಮುಚ್ಚೋಕೆ ಆಗೋದಿಲ್ಲ. ಅದೇ ರೀತಿ ಕಾಸರಗೋಡಿನ ಕನ್ನಡ ಮಾಧ್ಯಮ ಶಾಲೆಯಲ್ಲಿ ಒಂದು ಮಗು ಇದ್ದರೂ ಅಲ್ಲಿ ಕನ್ನಡಿಗ ಶಿಕ್ಷಕರು ಬೇಕು, ಅದನ್ನು ಬಿಟ್ಟು ಶಾಲೆ ಮುಚ್ಚೋದನ್ನು ಯೋಚಿಸುವುದು ಯಾವ ಸೀಮೆ ನ್ಯಾಯ...?'

ಈ ಸಿನಿಮಾ ಸಂಭಾಷಣೆ ಥಿಯೇಟರ್‌ಗಳಲ್ಲಿ ಕೇಳಿದ ಲಕ್ಷಾಂತರ ಕನ್ನಡಿಗರ ಚಪ್ಪಾಳೆ ಮುಗಿಲು ಮುಟ್ಟಿತು. ಕನ್ನಡಿಗರ ಸ್ವಾಭಿಮಾನದ ಕಿಚ್ಚು ಹೀಗಿರಬೇಕು ಎಂದು ಒಂದೆರಡು ತಿಂಗಳು ಪರಸ್ಪರ ಮಾತಾಡಿಕೊಂಡರು, ಸೋಶಿಯಲ್ ಮೀಡಿಯಾಗಳಲ್ಲಿ ಕಾಸರಗೋಡಿನ ಕುರಿತಾದ ಕನ್ನಡ ಸಾಹಿತ್ಯದ ಮಹಾಪೂರವೂ ಹರಿದು ಬಂತು.

ಆದರೆ ಆದದ್ದು ಅಷ್ಟೇ, ಬೆರಳೆಣಿಕೆಯ ತಿಂಗಳಲ್ಲೇ ಬಹುತೇಕ ಕನ್ನಡಿಗರು ಆ ಸಂಭಾಷಣೆಯನ್ನು ಮರೆತರು. ಸರಕಾರವೇ ಇರಲಿ, ಯಾವುದೇ ಕನ್ನಡ ಪರ ಸಂಘಟನೆಯೇ ಆಗಿರಲಿ ಆ ಕುರಿತು ಪ್ರಬಲವಾದ ಅಭಿಯಾನ ಬಿಡಿ, ಯಾವುದೇ ದೊಡ್ಡ ಮಟ್ಟಿಗಿನ ಧ್ವನಿಯೂ ಹೊರಬಂದಿಲ್ಲ. ಸಿನಿಮಾ ಸಂಭಾಷಣೆಯೇ ಬೇರೆ, ವಾಸ್ತವವೇ ಬೇರೆ. ಈ ವಿಷಯ ಕಾಸರಗೋಡಿನವರಿಗೂ ಚೆನ್ನಾಗಿಯೇ ಅರಿವಿತ್ತು. ಹಾಗಾಗಿ ತಮ್ಮೂರಿನಲ್ಲಿ ಕನ್ನಡ ಉಳಿವಿಗಾಗಿ ನಮ್ಮ ಜತೆ ಪ್ರಬಲರಾಗಿ ಕೈಜೋಡಿಸುವವರು ಖಂಡಿತಾ ಇಲ್ಲ ಎಂದು ತಿಳಿದಿದ್ದರಿಂದ ಅಲ್ಲಿನವರೂ ಚಾತಕಪಕ್ಷಿಯಂತೆ ಯಾರಿಗೂ ಕಾಯದೆ ಸುಮ್ಮನಾದರು.

ಕಾಸರಗೋಡು ಮಾತ್ರ ಅಲ್ಲ, ರಾಜ್ಯದ ಗಡಿನಾಡು ಪ್ರದೇಶಗಳ ಪರಿಸ್ಥಿತಿಗಳೆಲ್ಲವೂ ಹಾಗೆ. ಗಡಿನಾಡಿನಲ್ಲಿ ದಿನೇ ದಿನೇ ಕನ್ನಡ ಅಸ್ಮಿತೆ ಮಂಕಾಗುತ್ತಿದೆ ಎಂಬುದಂತೂ ಸುಳ್ಳಲ್ಲ. ನಮ್ಮ ದೇಶದಲ್ಲಿ ಭಾಷಾವಾರು ಪ್ರಾಂತ್ಯ ರಚನೆ ಆದಾಗ ಅದೊಂದು ಸಮರ್ಪಕ ಪ್ರಕ್ರಿಯೆ ಆಗಿಲ್ಲ ಎಂಬುದನ್ನು ಹೆಚ್ಚಿನವರು ಒಪ್ಪಿರುವ ವಿಷಯ. ಆ ಕಾರಣಕ್ಕಾಗಿ ಈ ಹಿಂದಿನ ಮೈಸೂರು ಪ್ರಾಂತ್ಯದಲ್ಲಿನ ಕಾಸರಗೋಡು ಭೌಗೋಳಿಕವಾಗಿ ಕೇರಳ ಸೇರುವಂತಾಯಿತು, ಹಾಗೆಯೇ ಬೆಳಗಾವಿಯ ಕೆಲವು ಪ್ರದೇಶಗಳೂ ವಿವಾದ ಪ್ರದೇಶಗಳೆನಿಸಿದವು.

ನಮ್ಮ ರಾಜ್ಯದ ದ.ಕ ಜಿಲ್ಲೆಯ ಮಂಗಳೂರಿಗೆ ಹೊಂದಿಕೊಂಡಿರುವ ಕಾಸರಗೋಡಿನಲ್ಲಿ ಹತ್ತಾರು ಮಾತೃಭಾಷೆಯನ್ನಾಡುವ ಜನರಿದ್ದಾರೆ, ಆದರೆ ಅಲ್ಲಿನ ಹೆಚ್ಚಿನವರ ಹೃದಯದ ಭಾಷೆ ಕನ್ನಡ. ಅವರೆಲ್ಲರೂ ತಮ್ಮ ನೆಲದಲ್ಲಿ ಕನ್ನಡ ವಿದ್ಯಾರ್ಜನೆಗೈದು ಉದ್ಯೋಗವನ್ನರಸುತ್ತಿರುವುದು ಕರ್ನಾಟಕದಲ್ಲೇ ಎಂಬುವುದೂ ಕೂಡಾ ಸತ್ಯ. ಕಳೆದ 70 ವರ್ಷಗಳಲ್ಲಿ ಕಾಸರಗೋಡಿನಲ್ಲಿ ಕನ್ನಡದ ಪರಿಸ್ಥಿತಿ ಯಾವ ರೀತಿ ಮಂಕಾಗಿದೆ ಎಂಬುವುದು ಅವಲೋಕಿಸಬೇಕಾದುದು ಒಂದು ಪ್ರಮುಖ ವಿಷಯ. ಕರ್ನಾಟಕದ ಗಡಿ ಪ್ರದೇಶವಾದ ಮಂಜೇಶ್ವರದಿಂದ ಕಾಸರಗೋಡು ಜಿಲ್ಲೆಯ ಕಾಂಞಂಗಾಡಿನ ವರೆಗೂ ಕನ್ನಡ ಆಗಲೂ ಇದೆ, ಈಗಲೂ ಇದೆ ಎಂಬುವುದರಲ್ಲಿ ಸಂಶಯ ಏನಿಲ್ಲ, ಆದರೆ ಅದರ ಪ್ರಮಾಣದ ಬಗ್ಗೆಯೇ ಪ್ರಚಲಿತ ಚರ್ಚೆ ಮತ್ತು ಕುತೂಹಲ.

ಕನ್ನಡ ಮಾಧ್ಯಮ ಶಾಲೆಗಳ ಪಾತ್ರ

ಕಾಸರಗೋಡಿನಲ್ಲಿ ಕನ್ನಡ ಉಳಿಯಲು ಕಾರಣವಾಗಿರುವುದಕ್ಕೆ ಪ್ರಮುಖ ಕಾರಣ ಕನ್ನಡ ಮಾಧ್ಯಮ ಶಾಲೆಗಳು. 25 ವರ್ಷಗಳ ಹಿಂದಿನ ವರೆಗೂ ಒಂದು ಶಾಲೆಯಲ್ಲಿ ಒಂದು ಸಾವಿರಕ್ಕಿಂತಲೂ ಹೆಚ್ಚಿನ ಕನ್ನಡ ವಿದ್ಯಾರ್ಥಿಗಳಿದ್ದರು, ಆದರೆ ಈಗ ಆ ಸಂಖ್ಯೆ ನೂರಕ್ಕೆ ಇಳಿದಿದೆ ಎಂಬುದು ಆಘಾತಕರ ಮಾಹಿತಿ. ಕನ್ನಡ ಭಾಷೆ ಓದಿದರೆ ಸರಕಾರಿ ಉದ್ಯೋಗಾವಕಾಶ ಸಾಧ್ಯತೆ ಇಲ್ಲ ಎಂದೇ ಒಲ್ಲದ ಮನಸ್ಸಿನಿಂದಲೇ ಮಲೆಯಾಳಂ ಭಾಷೆ ಓದಿ ಕೇರಳದಲ್ಲಿ ಹೇಗಾದರೂ ಉದ್ಯೋಗ ಪಡೆಯಲು ಪ್ರಯತ್ನಿಸಬಹುದೆಂಬ ಯೋಚನೆ ಹಲವರದ್ದಾಗಿದೆ. ಕಾಸರಗೋಡಿನ ನಾಡಕವಿ, ಹಿರಿಯ ಹೋರಾಟಗಾರರಾಗಿದ್ದ ಕಯ್ಯಾರ ಕಿಂಞಣ್ಣ ರೈಗಳ 'ಬೆಂಕಿ ಬಿದ್ದಿದೆ ಮನೆಗೆ ಓ ಬೇಗ ಬನ್ನಿ' ಹಾಡು ಕರ್ನಾಟಕದ ಮನೆ-ಮನದೊಳಕ್ಕೆ ತಲುಪಿದ್ದರೂ ಅದಕ್ಕೆ ದೊರೆತ ಸ್ಪಂದನೆ ಜಾಣಮೌನ.

ಕಡ್ಡಾಯ ಮಲೆಯಾಳ ಭಾಷಾ ಮಸೂದೆ ವಿರುದ್ಧ ಕಾಸರಗೋಡಿನಲ್ಲಿ ನಡೆದ ಪ್ರತಿಭಟನೆ.

ಕಾಸರಗೋಡು ಕನ್ನಡಿಗರ ಪಾಲಿನ ಕರಾಳ ಶಾಸನ

ಕನ್ನಡಿಗರ ಧ್ವನಿಯನ್ನು ಸದ್ದಡಗಿಸಲು ಕಾಸರಗೋಡಿನ ಎಲ್ಲಾ ಶಾಲೆಗಳಲ್ಲೂ ಮಲೆಯಾಳಂ ಭಾಷಾ ಕಲಿಕೆ ಕಡ್ಡಾಯ ಮಾಡುವುದಕ್ಕೆ ಕೇರಳ ಸರಕಾರ ಹಿಂದಿನಿಂದಲೂ ಪ್ರಯತ್ನಾ ಮಾಡುತ್ತಾ ಇದೆ. ಕಳೆದ ಮೇ ತಿಂಗಳಿನಲ್ಲಿ ಅದನ್ನು ಸುಗ್ರೀವಾಜ್ಞೆಯ ಮೂಲಕ ಜಾರಿಗೊಳಿಸಲು ರಾಷ್ಟ್ರಪತಿಗೆ ಕಳಿಸಿಕೊಡಲಾಯಿತು. ಆದರೆ ರಾಷ್ಟ್ರಪತಿಯವರು ಅದರ ಸಾಧಕ-ಭಾದಕಗಳನ್ನು ನೋಡಿ ತಿರಸ್ಕರಿಸಿದ್ದರು. ತನ್ನ ಮುಖಭಂಗ ತಪ್ಪಿಸಲು ಕೇರಳ ಸರಕಾರ ಮತ್ತೊಮ್ಮೆ ಅದನ್ನು ಕಳುಹಿಸಿಕೊಟ್ಟು ಶಾಸನ ಜಾರಿ ಮಾಡಲು ಮುಂದಾಗಿದೆ. ಆ ನಂತರವಂತೂ ಕಾಸರಗೋಡಿನಲ್ಲಿ ಕನ್ನಡ ಕಲಿಯುವ ವಿದ್ಯಾರ್ಥಿಗಳ ಪರಿಸ್ಥಿತಿ ತ್ರಿಶಂಕು ಸ್ವರ್ಗ ಎಂಬುದಂತೂ ಸತ್ಯ.

ಬೆಳಗಾವಿ ಗಡಿಯಲ್ಲಿ ಕನ್ನಡದ ಪರಿಸ್ಥಿತಿ

ಕಾಸರಗೋಡಿನಲ್ಲಿ ಹೇಗೆ ಕನ್ನಡಕ್ಕೆ ದುರ್ಗತಿ ಬಂದಿದೆಯೋ, ಬೆಳಗಾವಿ ಗಡಿ ಪ್ರದೇಶದಲ್ಲಿ ಪರಿಸ್ಥಿತಿ ಅದಕ್ಕಿಂತಲೂ ವಿಭಿನ್ನವಾದುದೇನಲ್ಲ. ಅಲ್ಲಿ ಕೆಲವು ಪ್ರದೇಶಗಳಲ್ಲಿ ಕನ್ನಡ ಭಾಷೆ ಇದ್ದೂ ಇಲ್ಲದ ಪರಿಸ್ಥಿತಿ ಒಂದೆಡೆಯಾದರೆ ಮಹಾರಾಷ್ಟ್ರಕ್ಕೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿರುವ ಕನ್ನಡಿಗರಿಗೆ ತಾವು ಆದಷ್ಟು ಬೇಗ ಕರ್ನಾಟಕ ರಾಜ್ಯದವರಾಗಬೇಕೆಂಬ ತವಕದ ಕನಸು.

1956ರಲ್ಲಿ ಭಾಷಾವಾರು ಪ್ರಾಂತ್ಯ ವಿಭಜನೆಯ ಸಂದರ್ಭದಲ್ಲಿ ಆದ ಅನ್ಯಾಯವನ್ನು ಸರಿಪಡಿಸಲು ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಮೆಹರ್ ಚಂದ್ ಮಹಾಜನ್ ಅವರ ನೇತೃತ್ವದಲ್ಲಿ ಗಡಿ ವಿವಾದ ಪರಿಹರಿಸುವ ಆಯೋಗ ರಚನೆಯೂ ಆಗಿತ್ತು. ಆ ವರದಿಯಂತೆ ಬೆಳಗಾವಿಯ ಸುತ್ತಮುತ್ತಲ ದಕ್ಷಿಣ ಸೊಲ್ಲಾಪುರದ 65 ಹಳ್ಳಿಗಳು, ಇಡೀ ಅಕ್ಕಲಕೋಟೆ ತಾಲೂಕು, ಜತ್ತ ತಾಲೂಕಿನ ಹಳ್ಳಿ, ಗಡಹಿಂಗ್ಲಜ ತಾಲೂಕಿನ 15 ಹಳ್ಳಿಗಳು ಕರ್ನಾಟಕ ಸುರ್ಪದಿಗೆ ಬರಬೇಕೆಂಬ ಶಿಫಾರಸನ್ನೂ ನೀಡಲಾಯಿತು.

ಆದರೆ ಬೆಳಗಾವಿ ನಗರ ತನಗೆ ಸಿಗುವುದಿಲ್ಲ ಎಂದು ಗೊತ್ತಾದಾಗ ಮಹಾರಾಷ್ಟ್ರ ಮಹಾಜನ ಆಯೋಗದ ವರದಿಯನ್ನು ಒಪ್ಪಿಕೊಳ್ಳದೆ ಅನಗತ್ಯ ಗಡಿ ವಿವಾದಗಳನ್ನೂ ಹುಟ್ಟು ಹಾಕಿತು ಎಂಬುವುದು ನಿಸ್ಸಂಶಯ. ಆ ವಿಷಯ ಸದ್ಯ ಸುಪ್ರೀಂ ಕೋರ್ಟಿನ ಅಂಗಳದಲ್ಲಿದೆ. ಆದರೂ ರಾಜಕೀಯ ಲಾಭಕ್ಕಾಗಿ ಈಗಲೂ ಮಹಾರಾಷ್ಟ್ರ ವಿಧಾನಸಭೆಯ ಪ್ರತಿಯೊಂದು ವಿಧಾನಸಭಾ ಅಧಿವೇಶನದಲ್ಲೂ ವಿಷಯ ಪ್ರಸ್ತಾಪವಾಗಿ ನಿರ್ಣಯ, ಮಂಡನೆಗಳೂ ಆಗುತ್ತಿವೆ. ಅಷ್ಟೇ ಅಲ್ಲದೆ, ಗಡಿ ಪ್ರದೇಶದಲ್ಲಿ ಕನ್ನಡಿಗರ ಮೇಲೆ ಮರಾಠಿ ಭಾಷಿಗರಿಂದ ಹಲ್ಲೆಗಳೂ ಆಗುತ್ತಿವೆ. ಕರ್ನಾಟಕದ ಬಸ್‌ಗಳ ಮೇಲೆ ಕಲ್ಲು ತೂರಾಟ ಸೇರಿದಂತೆ ಬೇರೆ ಬೇರೆ ರೀತಿಯ ಪ್ರತಿಭಟನೆಗಳೂ ಮುಂದುವರಿಯುತ್ತಿರುವುದಂತೂ ಸುಳ್ಳಲ್ಲ. ಕರ್ನಾಟಕದ ಭಾಲ್ಕಿ, ಬೀದರ್, ನಿಪ್ಪಾಣಿ ಸೇರಿದಂತೆ ಹಲವೆಡೆ ಮರಾಠಿ ಭಾಷಿಗರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ, ಹಾಗಾಗಿ ಆ ಪ್ರದೇಶವೆಲ್ಲವೂ ಮಹಾರಾಷ್ಟ್ರಕ್ಕೆ ಸೇರಬೇಕು ಎಂಬುದು ಗಡಿಪ್ರದೇಶದ ಬಗ್ಗೆ ಆಗಾಗ ವಿವಾದ ಎಬ್ಬಿಸುತ್ತಿರುವ ಮಹಾರಾಷ್ಟ್ರ ಏಕೀಕರಣ ಸಮಿತಿಯ ವಿವಾದಾತ್ಮಕ ವಾದ.

ಒಟ್ಟಾರೆಯಾಗಿ ವಿಶ್ಲೇಷಿಸುವುದಾದರೆ ನಮ್ಮನಾಳಿದ, ನಮ್ಮನಾಳುವ ಸರಕಾರಗಳ ಇಚ್ಛಾಶಕ್ತಿಯ ಕೊರತೆ ಗಡಿ ಸಮಸ್ಯೆಗಳಿಗೆಲ್ಲಾ ಮೂಲ ಕಾರಣ. ಸಾಮಾನ್ಯವಾಗಿ ಎಲ್ಲಾ ರಾಜಕೀಯ ಪಕ್ಷಗಳಿಗೆ ಗೆಲುವು ಸಾಧಿಸಲು ವೋಟ್ ಬ್ಯಾಂಕೇ ಪ್ರಮುಖ ಅಸ್ತ್ರ. ಗಡಿಪ್ರದೇಶದಲ್ಲಿ ಇರುವ ಮಂದಿಯ ಅಲ್ಪ ಸಂಖ್ಯಾತರ ಮತಗಳು ವೋಟ್ ಬ್ಯಾಂಕ್‌ನ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ, ಹಾಗಾಗಿ ಸರಕಾರ ಗಡಿ ಸಮಸ್ಯೆ, ಅಲ್ಲಿನ ಭಾಷಾ ಸಮಸ್ಯೆಯನ್ನು ಕೇವಲ ಜೀವಂತವಾಗಿ ಇಟ್ಟಿದೆಯೇ ವಿನ: ಪರಿಹರಿಸಲು ಮುಂದಾಗಿಲ್ಲ ಎನ್ನುವುದೂ ವಾಸ್ತವದ ವಿಷಯ.

ಮಹಾರಾಷ್ಟ್ರ ಸರಕಾರದ ನಡೆ ಖಂಡಿಸಿ ಬೆಳಗಾವಿಯಲ್ಲಿ ನಡೆದ ಕನ್ನಡ ಪರ ಸಂಸ್ಥೆಗಳ ಪ್ರತಿಭಟನೆ.

ಕರ್ನಾಟಕ-ಮಹಾರಾಷ್ಟ್ರ ಗಡಿ ವಿವಾದ: ನಾಲ್ಕು ಪ್ರತ್ಯೇಕ ಅಧ್ಯಯನಗಳು ವರದಿಗಳು

1. ಗಡಿನಾಡು ವರದಿ-2000 (ಡಿ.ಎಂ. ನಂಜುಂಡಪ್ಪ)
2. ಗಡಿನಾಡು ಮಧ್ಯಂತರ ವರದಿ-2000 (ವಾಟಾಳ್ ನಾಗರಾಜ್)
3. ಗಡಿನಾಡು ಅಧ್ಯಯನ ವರದಿ-2002 (ಪ್ರೊ. ಬರಗೂರು ರಾಮಚಂದ್ರಪ್ಪ)
4. ಗಡಿ ಕನ್ನಡಿಗರ ಕಥೆ/ವ್ಯಥೆ-2006 (ಮುಖ್ಯಮಂತ್ರಿ ಚಂದ್ರು)

ನೀರು ಕೊಡಿ ಇಲ್ಲವಾದರೆ ಕರ್ನಾಟಕಕ್ಕೇ ಹೋಗುತ್ತೇವೆ..

ಕಳೆದ ಒಂದೆರಡು ವರ್ಷಗಳ ಹಿಂದೆ ಮಹಾರಾಷ್ಟ್ರದ ಜತ್ ತಾಲೂಕಿನ ಜನರಿಗೆ ಕುಡಿಯುವ ನೀರಿನ ಅಭಾವ ಎದುರಾಯಿತು. ನಮಗೆ ನೀರು ಕೊಡಿ ಇಲ್ಲವಾದರೆ ಕರ್ನಾಟಕಕ್ಕೆ ಹೋಗುತ್ತೇವೆಂದು ತಾಲೂಕಿನ ಉಮದಿ ಗ್ರಾಮದ ಜನ ಆಗ ಆಕ್ರೋಶ ಹೊರ ಹಾಕಿದ್ದರು. ಜತ್ ತಾಲೂಕು ನೀರಾವರಿ ಹೋರಾಟ ಸಮಿತಿ ನೇತೃತ್ವದಲ್ಲಿ ಜತ್ ತಾಲೂಕಿನ 42 ಹಳ್ಳಿಗಳ ಜನರು ಉಮದಿ ಗ್ರಾಮದಲ್ಲಿ ಸಭೆ ಸೇರಿ, ಮಹಾರಾಷ್ಟ್ರ ಸರಕಾರದ ವಿರುದ್ಧ ಆಕ್ರೋಶ ಹೊರ ಹಾಕಿದ್ದರು.

ವಿದೇಶದಲ್ಲಿ ಕನ್ನಡ ಡಿಂಡಿಮ ಬಾರಿಸುತ್ತಿರುವವರು

ಬೆಂಕಿ ಬಸಣ್ಣ, ನ್ಯೂಯಾರ್ಕ್

ಸುಮಾರು ಎರಡು ಸಾವಿರಕ್ಕೂ ಹೆಚ್ಚು ವರ್ಷಗಳ ಇತಿಹಾಸವಿರುವ ಕನ್ನಡದ ಭವಿಷ್ಯದ ಬಗ್ಗೆ ಪ್ರತಿಬಾರಿ 'ಚಿಂತಕ'ರ ಚಾವಡಿಯಲ್ಲಿ ಚರ್ಚೆಗೆ ಬರುವ ಬಹುಸಹಜ ವಿಷಯಗಳಲ್ಲಿ ಒಂದು. ಕನ್ನಡ ಮಾತಾಡುವವರು ಕ್ಷೀಣಿಸುತ್ತಿದ್ದಾರೆ, ಮಕ್ಕಳನ್ನು ಕನ್ನಡ ಮಾಧ್ಯಮಕ್ಕೆ ಸೇರಿಸಲು ಪೋಷಕರು ಹಿಂದೇಟು ಹಾಕುತ್ತಿದ್ದಾರೆ. ಕನ್ನಡ ಅನ್ನದ ಭಾಷೆಯಾಗಿದೆಯೇ? ಎನ್ನುವ ಹತ್ತು ಹಲವು ಪ್ರಶ್ನೆಗಳು ಕರುನಾಡಿನಲ್ಲಿಯೇ ಹುಟ್ಟಿಕೊಂಡಿರುವ ಈ ಸಮಯದಲ್ಲಿ ಕನ್ನಡಮ್ಮನ ಸೇವೆಯನ್ನು ಸದ್ದಿಲ್ಲದೇ ಮಾಡುತ್ತಿರುವವರು ಅನಿವಾಸಿ ಕನ್ನಡಿಗರು.

ಕರ್ನಾಟಕದಲ್ಲಿ ಹುಟ್ಟಿ ವಿದೇಶದಲ್ಲಿ ನೆಲೆಸಿರುವ, ಕೆಲಸ ಅರಸಿ ತೆರಳಿರುವ ಲಕ್ಷಾಂತರ ಕನ್ನಡಿಗರು ಇಂದಿಗೂ ತಮ್ಮ ಮಾತೃಭಾಷೆಯನ್ನು ಕನ್ನಡವಾಗಿಸಿಕೊಂಡಿದ್ದಾರೆ. ಕನ್ನಡದಲ್ಲಿ ಮಾತನಾಡಿದರೆ ಏನೆಂದುಕೊಳ್ಳುತ್ತಾರೋ ಎನ್ನುವ ಕೀಳರಿಮೆಯಲ್ಲಿ ಕರ್ನಾಟಕದಲ್ಲಿರುವ ಅನೇಕರಿದ್ದರೂ, ವಿದೇಶ ನೆಲದಲ್ಲಿರುವ ಕನ್ನಡಿಗರಿಗೆ ಎಂದಿಗೂ ಈ ಕೀಳರಿಮೆಯಿಲ್ಲ. ಕನ್ನಡವನ್ನು ಸರಿಯಾದ ರೀತಿಯಲ್ಲಿ ಬಳಸುವುದೇ ಭಾಷೆಯನ್ನು ಉಳಿಸುವುದಕ್ಕೆ ಕೊಡಬಹುದಾದ ಬಹುದೊಡ್ಡ ಕೊಡುಗೆ ಎಂದು ವಿದೇಶಿ ನೆಲದಲ್ಲಿಯೂ ಕನ್ನಡದ ಕಂಪನ್ನು ಸೂಸಲು ಪ್ರತಿವರ್ಷ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ ನಿರಂತರ ಕಾರ್ಯಕ್ರಮಗಳನ್ನು ಆಯೋಜಿಸಿಕೊಂಡು ಬರುತ್ತಿರುವವರು ಅನಿವಾಸಿ ಕನ್ನಡಿಗರು. ಜಗತ್ತಿನ ಮೂಲೆ ಮೂಲೆಯಲ್ಲಿಯೂ ನೆಲೆಸಿರುವ ಕನ್ನಡಿಗರು ವಿಶ್ವದ ಬಹುತೇಕ ರಾಷ್ಟ್ರಗಳಲ್ಲಿ ಕನ್ನಡ ಸಂಘಗಳನ್ನು ಕಟ್ಟಿಕೊಂಡು ತಮ್ಮ ಸೇವೆಯನ್ನು ಮಾಡಿಕೊಂಡು ಬರುತ್ತಿದ್ದಾರೆ.

ಈ ಎಲ್ಲ ಸಂಘಟನೆಗಳು ಕೇವಲ ಮನೋರಂಜನೆಯ ಉದ್ದೇಶದಿಂದ ಕನ್ನಡ ಸಂಘಗಳನ್ನು ಕಟ್ಟಿಕೊಂಡು ಕಾರ್ಯನಿರ್ವಹಿಸದೇ, ವಿದೇಶಿಗರಿಗೆ ಕನ್ನಡದ ಶಕ್ತಿ ತೋರಿಸುವ, ಕರ್ನಾಟಕದಲ್ಲಿರುವ ಕಲಾವಿದರಿಗೆ ವಿದೇಶಿ ನೆಲದಲ್ಲಿ ವೇದಿಕೆ ಕಲ್ಪಿಸುವ, ಅನಿವಾಸಿ ಕನ್ನಡಿಗರ ಮಕ್ಕಳಿಗೆ ಕನ್ನಡವನ್ನು ಕಲಿಸುವ ನಿಟ್ಟಿನಲ್ಲಿ ನಿರಂತರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿವೆ. ವಿದೇಶಿ ನೆಲದಲ್ಲಿರುವ ಕನ್ನಡ ಸಂಘಟನೆಗಳು ಎಂದ ಕೂಡಲೇ ಎಂಟತ್ತು ಸಂಘಟನೆಗಳು ನೆನಪಾಗುತ್ತವೆ. ಆದರೆ ಅವುಗಳನ್ನು ಮೀರಿ ನೂರಾರು ಸಂಘಟನೆಗಳು ತಮ್ಮ ಕಾರ್ಯವನ್ನು ನಡೆಸುತ್ತಿವೆ. ಈ ರೀತಿ ಎಲೆಮರೆಯ ಕಾಯಿಯಂತೆ ಕಾರ್ಯನಿರ್ವಹಿಸುತ್ತಿರುವ ಕನ್ನಡ ಸಂಘಟನೆಗಳನ್ನು ಪರಿಚಯಿಸುವುದು ಇಂದಿನ ಅಗತ್ಯವೂ ಹೌದು.

ಈ ನಿಟ್ಟಿನಲ್ಲಿ ಮಂಡ್ಯದಲ್ಲಿ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿದೇಶಿ ನೆಲದಲ್ಲಿ ಕನ್ನಡ ಕೈಂಕರ್ಯ ಮಾಡುತ್ತಿರುವ ಸಂಘಟನೆಗಳ ಬಗ್ಗೆ ಸ್ಥೂಲ ಚಿತ್ರಣವನ್ನು ಕಟ್ಟಿಕೊಡುವ ಉದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಡಾ. ಮಹೇಶ್ ಜೋಶಿ ಅವರು ವಿಶ್ವದ ಎಲ್ಲ ಮೂಲೆಯಲ್ಲಿರುವ ಕನ್ನಡ ಸಂಘಟನೆಗಳ ಬಗ್ಗೆ ಸಮಗ್ರ ಮಾಹಿತಿಯನ್ನು ಕಲೆಹಾಕಿ ಪುಸ್ತಕ ರೂಪದಲ್ಲಿ ಕನ್ನಡಿಗರ ಮಡಿಲಿಗೆ ಹಾಕಬೇಕು ಎಂದು 'ವಿಶ್ವ ಕನ್ನಡ ಕೂಟಗಳ ಕೈಪಿಡಿ'ಯನ್ನು ಸಿದ್ಧಪಡಿಸಲು ತೀರ್ಮಾನಿಸಿದರು. ಈ ಕೈಪಿಡಿಯ ಪ್ರಧಾನ ಸಂಪಾದಕನಾಗಿದ್ದ ನನಗೆ ಜರ್ಮನಿಯಲ್ಲಿ ನೆಲೆಸಿರುವ ಶೋಭಾ ಚೌಹಾನ್, ಸಿಂಗಾಪುರದಲ್ಲಿ ನೆಲೆಸಿರುವ ವೆಂಕಟ ರತ್ನಯ್ಯ, ಆಸ್ಟ್ರೇಲಿಯಾದಲ್ಲಿ ನೆಲೆಸಿರುವ ಭಾಗ್ಯ ಪಾಟೀಲ್ ಶಂಕರ್, ಅಮೆರಿಕದಲ್ಲಿರುವ ಅಕ್ಷತಾ ಎಚ್.ಕೆ., ವಿ. ಪ್ರಸನ್ನ ಕುಮಾರ್, ಅರ್ಪಿತಾ ಎಚ್.ಕೆ., ಕತಾರ್‌ನ ಸುಬ್ರಹ್ಮಣ್ಯ ಹೆಬ್ಬಾಗಿಲು, ದುಬೈನ ಶಶಿಧರ ನಾಗರಾಜಪ್ಪ ಅವರು ಬೆಂಬಲಿಸಿದ್ದರಿಂದ ಕಡಿಮೆ ಅವಧಿಯಲ್ಲಿ ಈ ಕೈಪಿಡಿ ಸಿದ್ಧವಾಗಲು ಅನುಕೂಲವಾಯಿತು. ಇದೀಗ 70ನೇ ಕನ್ನಡ ರಾಜ್ಯೋತ್ಸವದ ತಿಂಗಳಿನಲ್ಲಿರುವ ಕರುನಾಡಿಗೆ ವಿದೇಶದಲ್ಲಿರುವ ಕನ್ನಡ ಕೂಟಗಳ ಬಗ್ಗೆ ಇಡೀ ತಿಂಗಳು ಮಾಹಿತಿ ನೀಡುವುದು ಈ ಸರಣಿ ಲೇಖನ ಆಶಯವಾಗಿದೆ.

ವಿಶ್ವದಲ್ಲಿರುವ ಏಳು ಖಂಡಗಳಲ್ಲಿ ಅಂಟಾರ್ಟಿಕ ಹೊರತುಪಡಿಸಿ ಇನ್ನುಳಿದ ಆರು ಖಂಡಗಳಲ್ಲಿ ಕನ್ನಡ ಒಕ್ಕೂಟಗಳಿರುವುದು ಕನ್ನಡಿಗರ 'ಶಕ್ತಿ'ಯನ್ನು ತೋರಿಸುತ್ತದೆ. ಅಮೆರಿಕದಲ್ಲಿಯೇ ಅತಿಹೆಚ್ಚು ಕನ್ನಡ ಸಂಘಟನೆಗಳಿದ್ದು, ಬಳಿಕ ಯುರೋಪ್‌ನಲ್ಲಿ ಹೆಚ್ಚು ಸಂಘಟನೆಗಳಿವೆ. ಕ್ಯಾಲಿಫೋರ್ನಿಯಾದಲ್ಲಿ 1973ರಲ್ಲಿ ಆರಂಭವಾದ ಕರ್ನಾಟಕ ಸಾಂಸ್ಕೃತಿಕ ಸಂಘ ಕನ್ನಡದ ಎಲ್ಲ ಒಕ್ಕೂಟಗಳಿಗೆ ಹಿರಿಯಣ್ಣನಂತೆ ಎಂದರೆ ತಪ್ಪಾಗುವುದಿಲ್ಲ.

ಕರ್ನಾಟಕ ಸಾಂಸ್ಕೃತಿಕ ಸಂಘ, ದಕ್ಷಿಣ ಕ್ಯಾಲಿಫೋರ್ನಿಯಾ

1973ರಲ್ಲಿ ಸ್ಥಾಪನೆಗೊಂಡ ಕನ್ನಡ ಕೂಟ 1984ರಲ್ಲಿ-ಕರ್ನಾಟಕ ಸಾಂಸ್ಕೃತಿಕ ಸಂಘ, ದಕ್ಷಿಣ ಕ್ಯಾಲಿಫೋರ್ನಿಯಾ ಎಂದು ಮರುನಾಮಕರಣಗೊಂಡು ಐವತ್ತು ವರ್ಷಗಳನ್ನು ಪೂರೈಸಿದೆ. 2024ರಲ್ಲಿ ಸುವರ್ಣ ಮಹೋತ್ಸವವನ್ನು ಆಚರಿಸಿದೆ. ಕನ್ನಡ ನಾಡಿನಿಂದ ದೂರವಾದರು ಕನ್ನಡ ಕನ್ನಡಿಗರಿಗೆ ಒಂದು ಆಧಾರ-ಆಶ್ರಯ ತಾಣವಾಗಿ, ಸಂಸ್ಕೃತಿ, ಸಾಹಿತ್ಯ, ಕನ್ನಡ ಕಲಿಕೆ, ಕ್ರೀಡೆ, ಮನರಂಜನೆ ಇತ್ಯಾದಿ ಕಾರ್ಯಕ್ರಮಗಳನ್ನು ಆಯೋಜಿಸುತ್ತ, ಕನ್ನಡಿಗರ ಮನೋಕಾಮನೆಗಳನ್ನು ಇಡೇರಿಸುತ್ತಾ ಬಂದಿದೆ.

ಐವತ್ತು ವರ್ಷಗಳನ್ನು ದಾಟಿ, ನಮ್ಮ ಕನ್ನಡ ಕೂಟ ಸುವರ್ಣ ಸಂಭ್ರಮದಿಂದ ಬೀಗುತಿದೆ. ಹಿಂದಿನದನ್ನು ನೆನದು, ಮುಂದಿನದನ್ನು ರೂಪಿಸಿಕೊಳ್ಳುವ ಹವಣಿಕೆಯಲ್ಲಿ ಉತ್ಸಹಿತವಾಗಿದೆ. ಕಾಲಕ್ಕೆ ತಕ್ಕಂತೆ ಕೂಟವು ತನ್ನನು ಮತ್ತೆ ಅರ್ಥೈಸಿಕೊಂಡಿದೆ. ತಾಯಿನಾಡಿನಿಂದ ದೂರ ಬಂದ ಕನ್ನಡಿಗರು ಗೆಳೆಯರಾಗಿ ಗುಂಪು ಕಟ್ಟಿಕೊಂಡರು. ನಂತರ ಕನ್ನಡ ಕೂಟ ಸ್ಥಾಪನೆಯಾದಾಗ ಮೂಲ ಉದ್ದೇಶ ಇದ್ದದು ಮಕ್ಕಳಿಗೆ ನಮ್ಮ ಸಂಸ್ಕೃತಿಯ ಪರಿಚಯ ಮಾಡಿಕೊಡುವುದು ಆಗಿತು. ಹಬ್ಬಗಳ ಆಚರಣೆ, ಸಂಗೀತ ನೃತ್ಯಗಳ ಪ್ರದರ್ಶನ, ಕನ್ನಡ ನಾಡಿನ ಪರಿಚಯ, ಮತ್ತು ಕನ್ನಡ ಕಲಿಕೆ ಇವು ಚಾಲತಿಯಲ್ಲಿ ಬಂದವು. ಮಕ್ಕಳು ಬೆಳೆದಂತೆ. ದೊಡ್ಡವರ ಬಯಕೆಗಳಿಗೆ ಹೆಚ್ಚಿನ ಪ್ರಾಧಾನ್ಯತೆ ದೊರೆಯಿತು. ಕನ್ನಡ ಭವನದ ಕನಸು ಕಟ್ಟಲಾಯಿತು. ಕಾಲಚಕ್ರ ಉರುಳಿ, ಮತ್ತೆ ಮಕ್ಕಳ ಮೇಲೆ ಕೇಂದ್ರೀಕೃತವಾದ ಕಾರ್ಯಕ್ರಮಗಳು ಮತ್ತು ಕನ್ನಡ ಕಲಿ ಅಂತ ಯೋಜನೆಗಳು ಹುಟ್ಟಿಕೊಂಡವು. ವರ್ಷದಲ್ಲಿ 4 ಕಾರ್ಯಕ್ರಮಗಳು ಅಂದರೆ ಗಣೇಶೋತ್ಸವ, ನಾಡ ಹಬ್ಬ, ನಾಟಕೋತ್ಸವ,ಸುಗ್ಗಿ ಹಬ್ಬ, ವನ

ವಿಹಾರ ಹಾಗು ಯುಗಾದಿ ಹಬ್ಬ ಆಚರಣೆ ನಿಯಮಿತವಾಗಿ ನಡೆಸಿ ಕೊಂಡು ಬಂದಿದೆ. ವಾರ್ಷಿಕವಾಗಿ ಸಂಗಮ ಮ್ಯಾಗಜಿನ್ ನಮ್ಮ ಸಮುದಾಯದ ಸದಸ್ಯರಿಗೋಸ್ಕರ ಸದಸ್ಯರಿಂದ ಬರೆದ ಲೇಖನಗಳು, ಪದ್ಯ, ಗದ್ಯ, ಚುಟುಕುಗಳು,ಯುವ ಸಮಿತಿಯ ಸದಸ್ಯರು ಬರೆದ ಲೇಖನಗಳನ್ನು ಅದರಲ್ಲಿ ಪ್ರಕಟಿಸಲಾಗುತ್ತಿದೆ.

- ಅಮೆರಿಕವೊಂದರಲ್ಲಿಯೇ 50ಕ್ಕೂ ಕನ್ನಡ ಒಕ್ಕೂಟ
- ಅಂಟಾಟ್ರಿಕ ಹೊರತುಪಡಿಸಿ ಇನ್ನುಳಿದ ಎಲ್ಲ ಖಂಡಗಳಲ್ಲಿಯೂ ಕನ್ನಡ ಒಕ್ಕೂಟ
- ವಿಶ್ವಾದ್ಯಂತ ಕನ್ನಡ ಕಂಪನ್ನು ಹರಡಿಸುತ್ತಿರುವ ನಾವಿಕ ಸಮ್ಮೇಳನ
- ಪ್ರತಿವರ್ಷ ಎರಡು ವರ್ಷಕ್ಕೊಮ್ಮೆ ಅಮೆರಿಕದ ವಿವಿಧ ನಗರಗಳಲ್ಲಿ ನಡೆಯುತ್ತಿರುವ ಅಕ್ಕ ಸಮ್ಮೇಳನ
- ಕರೋನಾ ಕಾಲದಲ್ಲಿಯೂ ಅಕ್ಕ ಹಾಗೂ ನಾವಿಕ ಸಂಘಟನೆಯಿಂದ ಆನ್‌ಲೈನ್ ಸಮಾವೇಶ

ನವೆಂಬರ್ ಮಾಸದಲ್ಲಿ ನಿತ್ಯ ವಿಶ್ವದ ವಿವಿಧ ಭಾಗದಲ್ಲಿರುವ ಕನ್ನಡ ಸಂಘಟನೆಗಳ ಪರಿಚಯ ವಿಶ್ವವಾಣಿಯಲ್ಲಿ ಪ್ರಕಟವಾಗಲಿದೆ

ನಾವು ವಿಶ್ವ ಕನ್ನಡಿಗರು (ನಾವಿಕ)

ಲಕ್ಷಾಂತರ ಕನ್ನಡಿಗರು ಶಿಕ್ಷಣ, ಉದ್ಯೋಗ ನಿಮಿತ್ತ ಮಾತೃ ಭೂಮಿ ಕರ್ನಾಟಕದಿಂದ ವಲಸೆ ಹೋಗಿ ವಿಶ್ವದ ವಿವಿಧ ದೇಶಗಳಲ್ಲಿ ನೆಲೆಸಿರುತ್ತಾರೆ. ಈ ಅನಿವಾಸಿ ಕನ್ನಡಿಗರು ಶೈಕ್ಷಣಿಕ, ವಾಣಿಜ್ಯ, ಆರ್ಥಿಕ ಕ್ಷೇತ್ರಗಳು ಸೇರಿದಂತೆ ಅನೇಕ ವೃತ್ತಿಗಳಲ್ಲಿ ಗಮನಾರ್ಹ ಸಾಧನೆಗಳನ್ನು ಮಾಡಿದ್ದಾರೆ. ಕನ್ನಡನಾಡು-ನುಡಿ, ಸಾಹಿತ್ಯ, ಸಂಸ್ಕೃತಿ, ಸಾಂಸ್ಕೃತಿಕ ಪರಂಪರೆಯ ಹಿರಿಮೆಯನ್ನು ತಮ್ಮ ಮುಂದಿನ ಪೀಳಿಗೆಗೂ ಮುಂದುವರಿಸಿಕೊಂಡು ಹೋಗಲು ಅವಿರತವಾಗಿ ಪರಿಶ್ರಮಿಸುತ್ತಿದ್ದಾರೆ. ವಿಶ್ವದ ವಿವಿಧ ದೇಶಗಳಲ್ಲಿ ನೆಲೆಸಿರುವ ಲಕ್ಷಾಂತರ ಅನಿವಾಸಿ ಕನ್ನಡಿಗರನ್ನು ಒಗ್ಗೂಡಿಸಿ ಅವರಿಗೆ ವೇದಿಕೆಯನ್ನು ಕೊಡಲು ನಾವಿಕ ಸಂಸ್ಥೆಯನ್ನು ಅಮೇರಿಕಾದಲ್ಲಿ ಸ್ಥಾಪಿಸಲಾಯಿತು. ಅಮೇರಿಕಾ ದೇಶದಲ್ಲಿ ನೆಲೆಸಿರುವ ಕನ್ನಡಿಗರನ್ನು ಮಾತ್ರವಲ್ಲದೇ ವಿಶ್ವದ ವಿವಿಧ ದೇಶಗಳಲ್ಲಿ ನೆಲೆಸಿರುವ ಸಮಸ್ತ ಕನ್ನಡಿಗರನ್ನು ಸಾಂಸ್ಕೃತಿಕವಾಗಿ ಸಂಘಟಿಸುವ ದೃಷ್ಟಿಯಿಂದ ನಾವಿಕ (ನಾವು ವಿಶ್ವ ಕನ್ನಡಿಗರು) ಸಂಸ್ಥೆಯನ್ನು 2009ರಲ್ಲಿ ಸ್ಥಾಪಿಸಲಾಯಿತು.

ನಾವಿಕ ಸಂಸ್ಥೆಯು ಒಂದು ವರ್ಷ ಅಮೆರಿಕದ ಒಳಗಡೆ ಮತ್ತೊಂದು ವರ್ಷ ಅಮೇರಿಕಾದ ಹೊರಗಡೆ ವಿಶ್ವಕನ್ನಡ ಸಮ್ಮೇಳನಗಳನ್ನು ನಡೆಸುತ್ತಾ ಬಂದಿದೆ. ಬೆಸ ವರ್ಷಗಳಲ್ಲಿ ಅಮೆರಿಕದಲ್ಲಿ ನಾವಿಕ ವಿಶ್ವ ಕನ್ನಡ ಸಮಾವೇಶಗಳನ್ನು ಮತ್ತು ಸಮ ವರ್ಷಗಳಲ್ಲಿ ಅಮೆರಿಕದ ಹೊರಗಡೆ ಅಂದರೆ ಕರ್ನಾಟಕ, ಆಫ್ರಿಕಾ, ಯುರೋಪು ಮುಂತಾದ ಕಡೆ ನಾವಿಕೋತ್ಸವ ವಿಶ್ವ ಕನ್ನಡ ಸಮ್ಮೇಳನಗಳನ್ನು ಆಯೋಜಿಸುತ್ತಾ ಬಂದಿದೆ. ನಾವಿಕ ಸಂಸ್ಥೆಯು ಇಲ್ಲಿಯವರೆಗೆ ಅಮೆರಿಕದ ವಿವಿಧ ನಗರಗಳಲ್ಲಿ ಏಳು ನಾವಿಕ ಸಮಾವೇಶಗಳನ್ನು ಹಾಗೂ ಮೂರು ನಾವಿಕೋತ್ಸವಗಳನ್ನು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ, ಒಂದು ನಾವಿಕೋತ್ಸವವನ್ನು ಮೈಸೂರಿನ ರಂಗಮಂದಿರದಲ್ಲಿ, ಒಂದು ನಾವಿಕೋತ್ಸವವನ್ನು ಆಫ್ರಿಕಾ ಖಂಡದ ಕೀನ್ಯಾ ದೇಶದ ನೈರೋಬಿಯಲ್ಲಿ ಮತ್ತು ಒಂದು ನಾವಿಕೋತ್ಸವವನ್ನು ಯುರೋಪ ಖಂಡದ ಜರ್ಮನಿಯ ಫ್ರಾಂಕ್‌ಫರ್ಟ್‌ನಲ್ಲಿ ಬಹು ಯಶಸ್ವಿಯಾಗಿ ಅದ್ಭುತವಾಗಿ ಆಯೋಜನೆಮಾಡಿದೆ.

ನಾವಿಕ ವಿಶ್ವ ಕನ್ನಡ ಸಮ್ಮೇಳನಗಳಲ್ಲಿ ಕರುನಾಡ ಸೊಗಡಿನ ಕಲೆ, ಸಾಹಿತ್ಯ, ಸಂಸ್ಕೃತಿ ಮತ್ತು ಜನಪದ ಜಾತ್ರೆ ನಡೆಯುತ್ತವೆ. 'ಸಾವಿರಾರು ಕನ್ನಡಾಭಿಮಾನಿಗಳು ಒಂದೆಡೆ ಸೇರಿ ಸಂಭ್ರಮದಿಂದ ಕನ್ನಡಮ್ಮನ ಹಬ್ಬ ಆಚರಿಸುತ್ತಾರೆ. ಈ ಸಮ್ಮೇಳನಗಳಲ್ಲಿ ಕರ್ನಾಟಕದ ಪ್ರಸಿದ್ಧ ಕಲಾವಿದರು, ಕವಿಗಳು, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರು ಭಾಗವಹಿಸುತ್ತಾರೆ. ಅದಲ್ಲದೆ ಅಮೇರಿಕ ಹಾಗೂ ಹೊರದೇಶಗಳ ಕಲಾಪ್ರತಿಭೆಗಳಿಗೂ ಪ್ರದರ್ಶಿಸುವ ಅವಕಾಶ ದೊರೆಯುತ್ತದೆ. ಶಿವರಾಜಕುಮಾರ್, ಎಂ.ಡಿ. ಪಲ್ಲವಿ, ಅರ್ಜುನ್ ಜನ್ಯ, ಮುಖ್ಯಮಂತ್ರಿ ಚಂದ್ರು, ಕೃಷ್ಣೇಗೌಡ, ವಿದ್ಯಾಭೂಷಣ, ಕೆ.ಎಸ್. ನಿಸ್ಸಾರ್ ಅಹಮದ್, ಯಕ್ಷಗಾನ ತಂಡ, ಯಮುನಾ ಶ್ರೀನಿಧಿ ಮತ್ತು ಅನೇಕ ಹೆಸರಾಂತ ಕಲಾವಿದರು ಭಾಗವಹಿಸಿದ್ದಾರೆ. ಕರ್ನಾಟಕ ಸರ್ಕಾರದ ಹಲವಾರು ಕ್ಯಾಬಿನೆಟ್ ದರ್ಜೆಯ ಮಂತ್ರಿಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದಾರೆ.

ಜನೋಪಯೋಗಿ ಚಟುವಟಿಕೆಗಳು

- ಉತ್ತರ ಕರ್ನಾಟಕ ಪ್ರವಾಹ ಪರಿಹಾರ (ಮುಖ್ಯಮಂತ್ರಿಗಳ ಪರಿಹಾರ ನಿಧಿ)
- ಆಮ್ಲಜನಕ ಟ್ಯಾಂಕ್‌ಗಳು ಕರ್ನಾಟಕದ ಕೋವಿಡ್ ಸಂತ್ರಸ್ತರಿಗೆ
- ಜ್ಞಾನ ದೀವಿಗೆ ಕಂಪ್ಯೂಟರ್ ಟ್ಯಾಬ್ಲೆಟ್‌ಗಳು ಕರ್ನಾಟಕದ ಗ್ರಾಮಾಂತರ ಮಕ್ಕಳಿಗಾಗಿ.
- ಆಶಾ ಕಾರ್ಯಕರ್ತೆಯರು, ಕನ್ನಡ ಕಲಾವಿದರಿಗೆ - ಕೋವಿಡ್ ಸಮಯದಲ್ಲಿ ಪರಿಹಾರ.
- ಕನ್ನಡ ಕಲಿಯೋಣ ಕಾರ್ಯಕ್ರಮ ಅಮೆರಿಕದ ಮಕ್ಕಳಿಗಾಗಿ.

ನಾವಿಕ ಸಮ್ಮೇಳನದ ವಿವರ

2010 : ಲಾಸ್ ಏಂಜಲೀಸ್, ಕ್ಯಾಲಿಫೋರ್ನಿಯಾ
2012 : ಬೆಂಗಳೂರು
2013 : ಬೋಸ್ಟನ್, ಮ್ಯಾಸಚೂಸೆಟ್ಸ್
2015 : ರೇಲಿ, ಉತ್ತರ ಕೆರೊಲಿನಾ
2016 : ಬೆಂಗಳೂರು.
2017 : ಡಲ್ಲಾಸ್, ಟೆಕ್ಸಾಸ್
2018 : ಮೈಸೂರು
2019 : ಸಿನ್ಸಿನಾಟಿ, ಓಹಿಯೋ
2020 : ಆನ್‌ಲೈನ್ ಸಮ್ಮೇಳನ (ಕರೋನಾ ಕಾರಣ)
2021 : ಆನ್‌ಲೈನ್ ಸಮ್ಮೇಳನ (ಕರೋನಾ ಕಾರಣ)
2022 : ನೈರೋಬಿ, ಕೀನ್ಯಾ
2023 : ಆಸ್ಟಿನ, ಟೆಕ್ಸಾಸ್
2024 : ಫ್ರಾಂಕ್‌ಫರ್ಟ್, ಜರ್ಮನಿ

ಎನ್‌ಡಬ್ಲ್ಯೂಎ ಕನ್ನಡ ಸಂಘ, ಅರ್ಕಾನ್ಸಾಸ್, ಯುಎಸ್‌ಎ

ಎನ್ ಡಬ್ಲ್ಯೂಎ ಕನ್ನಡ ಸಂಘವು ಹದಿನಾಲ್ಕು ವರ್ಷಗಳಿಂದ ಅಮೆರಿಕ ದೇಶದ ಅರ್ಕಾನ್ಸಾಸ್ ರಾಜ್ಯದ ನಾರ್ಥವೆಸ್ಟ್ ಅರ್ಕಾನ್ಸಾಸ್ ಪ್ರಾಂತ್ಯದಲ್ಲಿ ಕನ್ನಡಿಗರನ್ನು ಒಗ್ಗೂಡಿಸುವಲ್ಲಿ ಯಶಸ್ವಿಯಾಗಿದೆ. ಕಳೆದ ವರ್ಷ 2023ರಲ್ಲಿ ಲಾಭರಹಿತ ಸಂಸ್ಥೆಯಾಗಿ ನೋಂದಣಿಯನ್ನು ಪಡೆದಿದೆ. ನೋಂದಣಿ ಪಡೆದ ಈ ಪ್ರಾರಂಭಿಕ ವರ್ಷದಲ್ಲಿ, ಸರಾಸರಿ ನೂರು ಸದಸ್ಯರನ್ನು ಹೊಂದಿದೆ.

ಪ್ರತಿ ವರ್ಷ ಸಂಘದ ಅತಿ ದೊಡ್ಡ ಕಾರ್ಯಕ್ರಮವಾದ ಕನ್ನಡ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಗುತ್ತದೆ. ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ ಒಂದೆಡೆಯಾದರೆ, ಪ್ರೇಕ್ಷಕರಿಗೆ ಕರ್ನಾಟಕದ ಸಾಂಪ್ರದಾಯಿಕ ಅಡುಗೆಗಳ ರಸದೌತಣವನ್ನು ಆಯೋಜಿಸಲಾಗುವುದು. ಜತೆಗೆ ಸಂಘದ ಕಾರ್ಯಕ್ರಮಗಳ ಮೇಲೆ ಬೆಳಕು ಚೆಲ್ಲಿ, ಇವಕ್ಕೆ ಸಮಯ ಹಾಗು ಶ್ರಮ ಧಾರೆಯೆರೆದ ಸ್ವಯಂಸೇವಕರಿಗೆ ಧನ್ಯವಾದ ಸಲ್ಲಿಸಲಾಗುತ್ತದೆ. ಜನರು ಒಟ್ಟಿಗೆ ಸೇರಲು ಮತ್ತು ಮುಖ್ಯವಾಗಿ ಇತ್ತೀಚೆಗೆ ಈ ಪ್ರದೇಶಕ್ಕೆ ನೆಲೆಬೀರಲು ಬಂದ ಜನರಿಗೆ ಇತರೆ ಕನ್ನಡಿಗರನ್ನು ಭೇಟಿ ಮಾಡಲು ಅವಕಾಶವನ್ನು ಸೃಷ್ಟಿಸುವ ಸಲುವಾಗಿ ವರ್ಷದಲ್ಲಿ ಎರಡು ಅಥವಾ ಮೂರು ಬಾರಿ ಪಾಟ್ಲಕ್ ಅಥವಾ ಪಿಕ್‌ನಿಕ್ ಆಯೋಜಿಸಲಾಗುತ್ತಿದೆ. ಇದೇ ರೀತಿ ಹೊರಾಂಗಣದಲ್ಲಿ ಮೋಜಿನಿಂದ ಕಾಲ ಕಳೆಯಲು ಗೇಮ್ ಡೇ ಎನ್ನುವ ಕಾರ್ಯಕ್ರಮವನ್ನು ಆಯೋಜಿಸಿಸಲಾಗುತ್ತಿದೆ.

ಮಹಾಶಿವರಾತ್ರಿ ಪ್ರಸಾದ ಸೇವೆ: ಪ್ರತಿವರ್ಷ ಇಲ್ಲಿನ ಹಿಂದೂ ದೇವಸ್ಥಾನದಲ್ಲಿ ಆಚರಿಸುವ ಮಹಾಶಿವರಾತ್ರಿ ಹಬ್ಬದ ದಿನದಂದು, ಭಕ್ತಾದಿಗಳಿಗೆ ಫಲಾಹಾರ ಹಾಗು ಪ್ರಸಾದದ ತಯಾರಿಕೆ ಹಾಗು ವಿತರಣೆಯ ಜವಾಬ್ದಾರಿಯನ್ನು ನಮ್ಮ ಕನ್ನಡ ಸಂಘದ ವತಿಯಿಂದ ನಿಭಾಯಿಸುತ್ತೇವೆ. ಇದರೊಂದಿಗೆ ಸಂಘದ ಸಹಭಾಗಿತ್ವದಲ್ಲಿ ಮಕ್ಕಳಿಗಾಗಿ ಕನ್ನಡ ಶಾಲೆಯನ್ನು ನಡೆಸುತ್ತಿದ್ದೇವೆ. ನಾವು ಸುಮಾರು 30 ವಿದ್ಯಾರ್ಥಿಗಳೊಂದಿಗೆ 6 ತರಗತಿಗಳನ್ನು ಹೊಂದಿದೆ.

ಸಮುದಾಯಕ್ಕೆ ಉತ್ಕಟಭಾವದಿಂದ ಸೇವೆ ಸಲ್ಲಿಸುವ ಮತ್ತು ಸಮಾಜಕ್ಕೆ ಬದಲಾವಣೆಯನ್ನು ತರುವಂತಹ ವ್ಯಕ್ತಿಗಳು ಅಥವಾ ಸಂಸ್ಥೆಗಳನ್ನು ನಾಮನಿರ್ದೇಶನ ಮಾಡಲು ಸ್ಥಳೀಯ ಜನರಿಗೆ ತಿಳಿಸಿ, ಸಲ್ಲಿಸಲಾದ ನಾಮನಿರ್ದೇಶನಗಳಲ್ಲಿ, ವಿಜೇತರ ಆಯ್ಕೆ ಒಂದು ಸಮಿತಿಯಿಂದ ಆಗುತ್ತದೆ. ಈ ಉಪಕ್ರಮವು ವ್ಯಾಪಕವಾಗಿ ಮೆಚ್ಚುಗೆ ಪಡೆದು, ಪ್ರದೇಶದ ಇತರ ಸಂಸ್ಥೆಗಳೂ ಸಹ ಇದೇ ರೀತಿಯ ಮಾನ್ಯತೆ ಪ್ರಶಸ್ತಿ ನೀಡಲು ಪ್ರೇರೇಪಿಸಿದೆ.

ಉತ್ತರ ಕ್ಯಾಲಿಫೋರ್ನಿಯಾದಲ್ಲಿನ ಕನ್ನಡ ಕೂಟ

1973ರಲ್ಲಿ ಕೆಲವೇ ಸದಸ್ಯರಿಂದ ಪ್ರಾರಂಭವಾದ ಕನ್ನಡ ಕೂಟ ವರ್ಷದಿಂದ ವರ್ಷಕ್ಕೆ ಬೆಳೆಯುತ್ತ ಸಾಗಿದೆ. ಕಳೆದ ವರ್ಷ ಸುವರ್ಣ ಮಹೋತ್ಸವನ್ನು ಆಚರಿಸಿಕೊಂಡು ಈಗ ಹೊಸ ದಿಗಂತದೆಡೆಗೆ ತನ್ನ ಪಯಣ ಮುಂದುವರೆಸಿದೆ. ಉತ್ತರ ಕ್ಯಾಲಿಫೋರ್ನಿಯಾ ಕನ್ನಡ ಕೂಟಕ್ಕೆ ಅಮೆರಿಕದ ಫೆಡರಲ್ ಸರಕಾರದಿಂದ ಲಾಭೋದ್ದೇಶವಿಲ್ಲದ ದತ್ತಿ ಸಂಸ್ಥೆ ಎಂಬ ಮಾನ್ಯತೆ ಸಿಕ್ಕಿದೆ. ಧಾರ್ಮಿಕ, ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ, ಸಮುದಾಯ ಅಭಿವೃದ್ಧಿ ಮತ್ತು ದತ್ತಿ / ಸೇವಾ ಚಟುವಟಿಕೆಗಳನ್ನು ಮುಂದುವರಿ ಸಲು ಸ್ಥಳೀಯ ಕನ್ನಡಿಗರಿಗೆ ವೇದಿಕೆ ಒದಗಿಸುವ ಮೂಲಕ ಉತ್ತರ ಕ್ಯಾಲಿಫೋರ್ನಿಯಾದ ಕನ್ನಡ ಸಮುದಾಯವನ್ನು ಬಲಪಡಿಸುವುದು ಕೆಕೆಎನ್‌ಸಿಯ ಉದ್ದೇಶವಾಗಿದೆ.

ತನ್ನ ಐವತ್ತೊಂದನೇ ವಯಸ್ಸಿನ ತಾರುಣ್ಯದಲ್ಲಿರುವ ಕನ್ನಡ ಕೂಟವು ಉತ್ತರ ಕ್ಯಾಲಿಫೋರ್ನಿಯಾದ ಮಹಾನ್ ಕನ್ನಡ ಸಮುದಾಯವು ಅಕ್ಕರೆಯಿಂದ ಪಾಲಿಸಿ, ಪೋಷಿಸಿ ಬೆಳೆಸಿದೆ. ನಿತ್ಯ ಜೀವನದ ಏಕತಾನತೆಯಲ್ಲಿ ಹಬ್ಬಗಳ ಸಂಭ್ರಮವನ್ನು ತರಲು ಕನ್ನಡ ಕೂಟದ ಚಟುವಟಿಕೆಗಳ ಭಾಗವಾಗಿ ನಾಲ್ಕು ಪ್ರಮುಖ ಉತ್ಸವಗಳನ್ನು ಆಚರಿಸಲಾಗುತ್ತದೆ. ಸಂಕ್ರಾಂತಿ, ಯುಗಾದಿ, ದೀಪಾವಳಿ ಮತ್ತು ಕನ್ನಡೋತ್ಸವ.

ಕನ್ನಡ ಕೂಟದ ಯುವಕರ ವಿಭಾಗವು ಉತ್ತರ ಕ್ಯಾಲಿಫೋರ್ನಿಯಾ ಕನ್ನಡ ಸಮುದಾಯದ ಯುವಕರಲ್ಲಿ ಕನ್ನಡ-ಕರ್ನಾಟಕ-ಕನ್ನಡಿಗ ಎಂಬ ಮಂತ್ರದೊಂದಿಗೆ ಹೊಸ ಪೀಳಿಗೆಯಲ್ಲಿ ಕನ್ನಡ ಸಂಸ್ಕೃತಿಯನ್ನು ಬೆಳೆಸಲು ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತದೆ. ಕನ್ನಡ ಕೂಟದ ಗ್ರಂಥಾಲಯವು ಕನ್ನಡ ಕವಿಗಳು. ಬರಹಗಾರರು ಮತ್ತು ಕಾದಂಬರಿಕಾರರ ಅನೇಕ ಮಹಾನ್ ಕೃತಿಗಳನ್ನು ಹೊಂದಿದೆ. ಸಾಂಸ್ಕೃತಿಕ ಕಾರ್ಯಕ್ರಮಗಳ ಹೊರತಾಗಿ ಕನ್ನಡಕೂಟವು ಸ್ವಾತಂತ್ರ್ಯ ದಿನಾಚರಣೆ, ಕ್ಯಾಂಪಿಂಗ್, ಕ್ರೀಡಾ ಮತ್ತು ಕರ್ನಾಟಕ ಆಹಾರ ಮೇಳಗಳನ್ನು ಸಹ ಸಂಯೋಜಿಸುತ್ತದೆ. ಬೇಸಿಗೆ ಶಿಬಿರಗಳು ಮತ್ತು ಕ್ರೀಡಾ ದಿನ ಸಮುದಾಯದ ವಿನೋದ ಮತ್ತು ಆಟಗಳ ಕಾಲವಾಗಿದೆ.

ಕನ್ನಡ ಕೂಟದ ಮುಖ್ಯ ಅಂಗವಾದ 'ಕನ್ನಡ ಕಲಿ' ಇಲ್ಲಿಯ ಮಕ್ಕಳಿಗೆ ವಾರಾಂತ್ಯದಲ್ಲಿ ಕನ್ನಡ ಶಾಲೆಗಳನ್ನು ನಡೆಸುತ್ತದೆ. ಶಿಶುವಿಹಾರದಿಂದ ಆರಂಭವಾಗಿ ಆರನೇ ತರಗತಿಯವರೆಗೆ ನಡೆಯುವ ಈ ಶಾಲೆಗಳು ಪ್ರಸ್ತುತ ಐದು ಕೇಂದ್ರಗಳಲ್ಲಿ 600ಕ್ಕೂ ಹೆಚ್ಚು ಮಕ್ಕಳಿಗೆ ಕನ್ನಡ ಕಲಿಸುತ್ತಿದೆ. ತನ್ನದೇ ಆದ ಪಠ್ಯಕ್ರಮವನ್ನು ಸಹ ಉಳ್ಳ ಈ ಶಾಲೆಗಳನ್ನು ಸ್ಥಳೀಯ ಕನ್ನಡಿಗರು ಸ್ವಯಂಸೇವಕರು ಕಳೆದ ಹದಿನೈದು ವರ್ಷಗಳಿಂದ ಸಮರ್ಥವಾಗಿ ನಡೆಸುತ್ತಿದ್ದಾರೆ. ವರ್ಷದಿಂದ ವರ್ಷಕ್ಕೆ ಬೆಳೆಯುತ್ತಿರುವ ಈ ವಿಭಾಗಕ್ಕೆ ತನ್ನದೇ ಆದ ಆಡಳಿತ ಮಂಡಳಿಯನ್ನು 2023 ರಿಂದ ನೇಮಿಸಲಾಗಿದೆ. ಜತೆಯಲ್ಲಿ ಕನ್ನಡ ಕೂಟದ ಸಾಹಿತ್ಯ ಸಮಿತಿ ಸ್ಥಳೀಯ ಕನ್ನಡಿಗರಿಗೆ ಹಲವಾರು ಉಪಕ್ರಮಗಳನ್ನು ನಡೆಸಿಕೊಡುತ್ತದೆ. ಕನ್ನಡ ಸಾಹಿತ್ಯವನ್ನು ಅಭ್ಯಾಸ ಮಾಡಲು ತಿಂಗಳಿಗೊಮ್ಮೆ ಹೊತ್ತಿಗೆ ಹೊತ್ತು ಕಾರ್ಯಕ್ರಮ, ಹಾಡುಗಳ ಮೂಲಕ ಕನ್ನಡ ಪಸರಿಸಲು ವಾರಕ್ಕೊಂದು ಕನ್ನಡ ಹಾಡು ಎಂಬ ಇಂಟರ್‌ನೆಟ್ ವಿಡಿಯೊ ಪ್ರಸಾರ, ಕನ್ನಡ ಕಿಶೋರ-ಕಿಶೋರಿಯರಿಗೆ ಕನ್ನಡ ಕಿಶೋರ ಕೆಫೆ ಇತ್ಯಾದಿ ಹಲವಾರು ಯೋಜನೆಗಳನ್ನು ಯಶಸ್ವಿಯಾಗಿ ನಡೆಸಿಕೊಡುತ್ತದೆ. ವಾರಕ್ಕೊಮ್ಮೆ ಕನ್ನಡದಲ್ಲಿ ವಾರಪತ್ರಿಕೆ, ಕಥೆ-ಕವನ-ಪ್ರಬಂಧಗಳ ಸ್ವರ್ಣಸೇತು ಎಂಬ ವಾರ್ಷಿಕ ಸಂಚಿಕೆ ಇವೆಲ್ಲವೂ ಕನ್ನಡ ಕೂಟದ ಸಾಹಿತ್ಯ ಚಟುವಟಿಕೆಗಳು. ಈ ವರ್ಷದಿಂದ ನುಡಿ-ಹಬ್ಬ ಎಂಬ ಹೊಸ ಕಾರ್ಯಕ್ರಮವನ್ನು ಆರಂಭಿಸಿ ಕರ್ನಾಟಕದ ಹಾಗೂ ಸ್ಥಳೀಯ ಹೆಮ್ಮೆಯ ಕನ್ನಡಿಗರೊಡನೆ ಸಂವಾದ ಕಾರ್ಯಕ್ರಮಗಳನ್ನು ಆನ್ಲೈನ್ ಮೂಲಕ ಯಶಸ್ವಿಯಾಗಿ ನಡೆಸಲಾಯಿತು. ಈ ಮೂಲಕ ಕೆ ಕೆ ಎನ್ ಸಿ ಸ್ಥಳೀಯ ಕನ್ನಡಿಗರನ್ನಷ್ಟೇ ಅಲ್ಲದೆ ವಿಶ್ವದ ಸಮಸ್ತ ಕನ್ನಡಿಗರನ್ನು ತಲುಪಲು ಪ್ರಯತ್ನಿಸುತ್ತಿದೆ. ಕನ್ನಡ ಭವನದ ನಿರ್ಮಾಣದ ಜತೆಗೆ ಇಲ್ಲಿಯದೇ ದೊಡ್ಡ ಮಟ್ಟದ ಕನ್ನಡದ ಮುಂದಿನ ಪೀಳಿಗೆ, ಕನ್ನಡ ಸಾಹಿತ್ಯ ಸೃಷ್ಟಿ ಎಲ್ಲವೂ ಆಗಬೇಕೆಂಬ ಮಹತ್ವದ ಉದ್ದೇಶದಿಂದ ನಮ್ಮ ಕನ್ನಡ ಕೂಟ ಹೊಸದಿಗಂತದೆಡೆಗೆ ಸಾಗುತ್ತಿದೆ.

ಅಮೆರಿಕ ಕನ್ನಡ ಕೂಟಗಳ ಆಗರ (ಅಕ್ಕ)

'ಅಕ್ಕ' ಹೆಸರಿನಲ್ಲೇ ಅದೆಷ್ಟು ವಿಷಯ ಅಡಗಿದೆ. ಅಮೆರಿಕ ಕನ್ನಡ ಕೂಟಗಳ ಆಗರ. ಅಓಓಅ ಎಂಬ ಈ ನಾಲ್ಕು ಆಂಗ್ಲ ಭಾಷೆಯ ಅಕ್ಷರಗಳನ್ನು ವಿಸ್ತರಿಸಿದಾಗ ಬರುವಳು ಅದೇ, ಸಕ್ಕರೆಯನ್ನು ಅಕ್ಕರೆಯಿಂದ ಹಂಚುವ ಅಮೆರಿಕದ ಅಕ್ಕ. 1998ರಲ್ಲಿ ಅಮೆರಿಕದ ಫಿನಿಕ್ಸ್ ಪಟ್ಟಣದಲ್ಲಿ ನಡೆದ ಮೊದಲ ವಿಶ್ವ ಕನ್ನಡ ಸಮ್ಮೇಳನದಲ್ಲಿ ಅಕ್ಕ ಸಂಸ್ಥೆಯ ಸ್ಥಾಪನೆಗೆ ಮಾತುಕತೆ ಶುರುವಾಯಿತು. ಹಲವಾರು ಹಿರಿಯ ಕನ್ನಡಿಗರಿಂದ ಅಕ್ಕ ಸಂಸ್ಥೆ ಆರಂಭ ಆಗಿಯೇ ಬಿಟ್ಟಿತು. ಕರ್ನಾಟಕ ರಾಜ್ಯದ ಕಲೆ ಸಂಸ್ಕೃತಿ ಯನ್ನು ದೂರದ ಅಮೆರಿಕದಲ್ಲಿ ಉಳಿಸಿ ಬೆಳಸಿ ಅಮೆರಿಕನ್ನಡಿಗರಿಗೆ ತಮ್ಮ ಪ್ರತಿಭಾ ಪ್ರದರ್ಶನಕ್ಕೆ ಒಂದು ವೇದಿಕೆಯನ್ನು ಸೃಷ್ಟಿಸುವುದರ ಜೊತೆಗೆ ದಾನ ಧರ್ಮ ಕಾರ್ಯಗಳಲ್ಲಿ ನಿರತವಾಗಿದೆ.

ಅಮೆರಿಕದ ವಿವಿಧ ರಾಜ್ಯಗಳಲ್ಲಿ ಇರುವ ಸುಮಾರು 50ಕ್ಕೂ ಹೆಚ್ಚಿನ ಕನ್ನಡ ಕೂಟಗಳಿಗೆ ಆಗರ. ಈ ಅಕ್ಕ. ಎರಡು ವರ್ಷಕ್ಕೊಮ್ಮೆ ಚುನಾವಣೆಯ ಮೂಲಕ ಅಕ್ಕ ಸಂಸ್ಥೆಯ ನೂತನ ಅಧ್ಯಕ್ಷರು ಹಾಗೂ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗುತ್ತೆ. ಮಿಲಿನಿಯಂ ವರ್ಷವಾದ 2000ರ ಸೆಪ್ಟೆಂಬರ್ ಲೇಬರ್ ಡೇ ವಾರಾಂತ್ಯದಲ್ಲಿ ಮೊಟ್ಟ ಮೊದಲ ಅಕ್ಕ ವಿಶ್ವ ಕನ್ನಡ ಸಮ್ಮೇಳನ ಟೆಕ್ಸಾಸ್ ರಾಜ್ಯದ ಹೂಸ್ಟನ್ ಪಟ್ಟಣದಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಈ ಚೊಚ್ಚಲ ಅಕ್ಕ ಸಮ್ಮೇಳನದಲ್ಲಿ ಕರ್ನಾಟಕದ ಹೆಸರಾಂತ ಕಲಾವಿದರಲ್ಲದೆ ಅಮೆರಿಕ ರಾಷ್ಟ್ರದ ವಿವಿಧ ರಾಜ್ಯಗಳಿಂದ ಆಗಮಿಸಿದ್ದ ಸ್ಥಳೀಯ ಕಲಾವಿದರಿಂದ ಸಂಗೀತ, ನೃತ್ಯ, ನಾಟಕ, ಸಾಹಿತ್ಯ ಗೋಷ್ಠಿ ಅಲ್ಲದೆ ಮೆರವಣಿಗೆ, ಫ್ಯಾಷನ್ ಶೋ ಹಾಗೂ ವಿವಿಧ ಸ್ಪರ್ಧೆಗಳನ್ನು ನಡೆಸಲಾಯಿತು. ಸುಮಾರು 3000 ಕನ್ನಡಿಗರು ಪಾಲ್ಗೊಂಡಿದ್ದ ಈ ಕನ್ನಡದ ಉತ್ಸವ ಬರುವ ವರುಷಗಳಲ್ಲಿ ನಡೆಸುವ ಸಮ್ಮೇಳನಗಳಿಗೆ ಒಂದು ರೀತಿಯಾದ ಮಾದರಿ ಆಯಿತು ಅಂದರೆ ಅತಿಶಯೋಕ್ತಿ ಆಗಲಾರದು.

ಸಾಂಕ್ರಾಮಿಕ ಆರೋಗ್ಯ ಸಮಸ್ಯೆ ಕೋವಿಡ್ ವೇಳೆಯಲ್ಲೂ ವಿದ್ಯುನ್ಮಾನ ಮಾರ್ಗದಲ್ಲಿ ಸಮ್ಮೇಳನ ನಡೆಸಿ ನಿರಂತರತೆ ಕಾಯ್ದುಕೊಂಡ ಹೆಗ್ಗಳಿಕೆ ಅಕ್ಕ ಸಂಘಟಕರದು. ಅಕ್ಕ ಸಂಘಟನೆ ಭಾರತ ಅದರಲ್ಲೂ ಕರುನಾಡು ಮತ್ತು ಅಮೆರಿಕಾ ನಡುವೆ ಬಾಂಧವ್ಯದ ಕೊಂಡಿಯಾಗಿದೆ. ಅಮೆರಿಕಾದಲ್ಲಿದ್ದವರು ಕರ್ನಾಟಕದಲ್ಲಿ ಬಂಡವಾಳ ಹೂಡಿಕೆ ಮಾಡುವಂತೆ ಹುರಿದುಂಬಿಸಿ ಅಗತ್ಯ ಬೆಂಬಲ ನೀಡುವುದು ಒಂದು ಮಾರ್ಗದ ಕೆಲಸವಾದರೆ, ಮತ್ತೊಂದು ಕಡೆಯಿಂದ ರಾಜ್ಯದ ಕಲೆ, ಸಾಹಿತ್ಯ, ಕರಕುಶಲತೆ ಹಾಗೂ ವ್ಯಾಪಾರದ ಅವಕಾಶಗಳಿಗೆ ವೇದಿಕೆ ಕಲ್ಪಿಸಿ ಕೊಡುತ್ತಿದೆ. ಅಕ್ಕ, ರಾಜ್ಯದ ಬರ ಹಾಗೂ ನೆರೆಯ ಸಂದರ್ಭದಲ್ಲಿ ಸಹಾಯ ಹಸ್ತ ಚಾಚಿದೆ. ಉತ್ತರ ಕರ್ನಾಟಕ ಹಾಗೂ ಮಡಕೇರಿ ಭಾಗದಲ್ಲಿ ಭಾರೀ ಮಳೆಯಿಂದ ಅನಾಹುತಗಳು ಆದಾಗ ಸಂತ್ರಸ್ಥರಿಗೆ ಮನೆ ನಿರ್ಮಿಸಿಕೊಡುವ ಮೂಲಕ ಮಾನವೀಯತೆಯನ್ನು ಮೆರೆದಿದೆ. ಕೋವಿಡ್ ಸಂಕಷ್ಟ ಸಂದರ್ಭದಲ್ಲಿ ವೈದ್ಯಕೀಯ ಹಾಗೂ ಜೀವನಾವಶ್ಯಕ ಸಲಕರಣೆಗಳನ್ನು ಪೂರೈಸಿದೆ. ಮೈಸೂರು ಮೃಗಾಯಲಕ್ಕೆ ಪ್ರಾಣಿಗಳ ಆಹಾರಕ್ಕೂ ದೇಣಿಗೆ ನೀಡಿದೆ. ಅಮೆರಿಕನ್ನಡಿಗರಿಗೆ ಬೆನ್ನುಲುಬಾಗಿ ಸಂಕಷ್ಟದಲ್ಲಿ ಆತ್ಮವಿಶ್ವಾಸ ನೀಡುವ ಸಂಸ್ಥೆ ಅಕ್ಕ.. ನಮ್ಮೆಲ್ಲರ ಅಕ್ಕರೆಯ ಅಕ್ಕ !!

ಈವರೆಗೆ ನಡೆದಿರುವ ಅಕ್ಕ ಸಮ್ಮೇಳನದ ವಿವರ

- 1ನೇ ಸಮ್ಮೇಳನ - 2002 ಹೂಸ್ಟನ್, ಟೆಕ್ಸಾಸ್
- 2 ನೇ ಸಮ್ಮೇಳನ - 2002 - ಡೆಟ್ರಾಯಿಟ್, ಮಿಚಿಗನ್
- 3 ನೇ ಸಮ್ಮೇಳನ -2004 -ಒರ್ಲಾಂಡೊ, ಫ್ಲೋರಿಡಾ
- 4 ನೇ ಸಮ್ಮೇಳನ -2006 - ಬಾಲ್ಟಿಮೋರ್, ಮೇರಿಲ್ಯಾಂಡ್
- 5 ನೇ ಸಮ್ಮೇಳನ 2008 -ಚಿಕಾಗೋ, ಇಲಿನಾಯ್ಸ್
- 6 ನೇ ಸಮ್ಮೇಳನ 2010 ಎಡಿಸನ್, ನ್ಯೂಜೆರ್ಸಿ
- 7 ನೇ ಸಮ್ಮೇಳನ -2012 ಅಟ್ಲಾಂಟಾ, ಜಾರ್ಜಿಯಾ
- 8 ನೇ ಸಮ್ಮೇಳನ 2014 -ಸ್ಯಾನ್ ಹೊಸೆ, ಕ್ಯಾಲಿಫೋರ್ನಿಯಾ
- 9 ನೇ ಸಮ್ಮೇಳನ -2016 ಅಟ್ಲಾಂಟಿಕ್ ಸಿಟಿ, ನ್ಯೂಜೆರ್ಸಿ
- 10 ನೇ ಸಮ್ಮೇಳನ -2018 ಡಲ್ಲಾಸ್, ಟೆಕ್ಸಾಸ್
- 11 ನೇ ಸಮ್ಮೇಳನ -2020 -ಕೊರೊನಾ ಕಾರಣದಿಂದಾಗಿ ಆನ್‌ಲೈನ್ ಸಮ್ಮೇಳನ
- 12 ನೇ ಸಮ್ಮೇಳನ 2024 ರಿಚ್ಮಂಡ್, ವರ್ಜೀನಿಯಾ

ಕನ್ನಡದ ಒಂದಿಷ್ಟು ಸಾರ್ವಕಾಲಿಕ ಶ್ರೇಷ್ಠ ಕೃತಿಗಳು

'ಕನ್ನಡ ಕನ್ನಡ ಹಾ ಸವಿಗನ್ನಡ, ಕನ್ನಡದಲಿ ಹರಿ ಬರೆಯುವನು, ಕನ್ನಡದಲಿ ಹರ ತಿರಿಯುವನು' ಎಂದಿದ್ದಾರೆ ಕನ್ನಡದ ಕವಿಯೊಬ್ಬರು. ಕನ್ನಡ ಭಾಷೆಯ ಕುರಿತಾದ ಪ್ರೇಮ ತೀವ್ರವಾದಂತೆಲ್ಲಾ, ಅದರ ಸೊಬಗು ಮತ್ತು ಸೊಗಡು ಮನವನ್ನು ಗಾಢವಾಗಿ ಆವರಿಸಿದಂತೆಲ್ಲಾ 'ಹರಿ-ಹರರೂ ಕನ್ನಡದ ಕೈಂಕರ್ಯಕ್ಕೆ ಇಳಿದರು' ಎಂಬ ಭಾವ ಹೊಮ್ಮಿದರೆ ಅದೇನೂ ಅಚ್ಚರಿಯಲ್ಲ. ಈ ಹಿನ್ನೆಲೆಯಲ್ಲಿ, ಕನ್ನಡದ ಕೀರ್ತಿಪತಾಕೆಯನ್ನು ವಿಶ್ವ ಮಟ್ಟದಲ್ಲಿ ಹಾರಿಸಿದ ವಿವಿಧ ಸಾಹಿತ್ಯ ಪ್ರಕಾರಗಳ ಒಂದಿಷ್ಟು ಕೃತಿಗಳ ಹಾಗೂ ಕೃತಿಕಾರರ ಪಟ್ಟಿಯನ್ನು ಇಲ್ಲಿ ನೀಡಲಾಗಿದೆ. ಇದು ಇಷ್ಟಕ್ಕೇ ಸೀಮಿತವಲ್ಲ ಎಂಬುದು ನಿಮ್ಮ ಗಮನಕ್ಕೆ....

ಕಾದಂಬರಿಗಳು

- ಮಲೆಗಳಲ್ಲಿ ಮದುಮಗಳು, ಕಾನೂರು ಹೆಗ್ಗಡಿತಿ (ಕುವೆಂಪು)
- ಚಿದಂಬರ ರಹಸ್ಯ, ಕರ್ವಾಲೋ (ಕೆ.ಪಿ. ಪೂರ್ಣಚಂದ್ರ ತೇಜಸ್ವಿ)
- ಚಿಕವೀರ ರಾಜೇಂದ್ರ, ಸುಬ್ಬಣ್ಣ (ಮಾಸ್ತಿ ವೆಂಕಟೇಶ ಅಯ್ಯಂಗಾರ್)
- ಮಯೂರ, ಮಹಾಬ್ರಾಹ್ಮಣ, ಮಹಾಕ್ಷತ್ರಿಯ, (ದೇವುಡು ನರಸಿಂಹ ಶಾಸ್ತ್ರಿ)
- ಸಂಸ್ಕಾರ, ಅವಸ್ಥೆ (ಯು.ಆರ್. ಅನಂತಮೂರ್ತಿ)
- ದೀಪದ ಮನೆ (ದೇವನೂರ ಮಹಾದೇವ)
- ಗ್ರಾಮಾಯಣ (ರಾವ್ ಬಹದ್ದೂರ್)
- ದಾಸಕೂಟ, ದೇವನ ಹೆಂಡ, ಬೆಳ್ಳಿ ತಿಮ್ಮ ನೂರೆಂಟು ಹೇಳಿದ, ಮಾತನಾಡುವ ದೇವರುಗಳು, ಸತ್ತವನು ಎದ್ದುಬಂದಾಗ, ತಿಂಮ ರಸಾಯನ (ಬೀಚಿ)
- ಬೆಟ್ಟದ ಜೀವ, ಮರಳಿ ಮಣ್ಣಿಗೆ, ಅಳಿದ ಮೇಲೆ, ಸರಸಮ್ಮನ ಸಮಾಧಿ, ಮೂಕಜ್ಜಿಯ ಕನಸುಗಳು, ಚೋಮನ ದುಡಿ (ಶಿವರಾಮ ಕಾರಂತ)
- ಪರ್ವ, ಗೃಹಭಂಗ, ಭೀಮಕಾಯ, ತಬ್ಬಲಿಯು ನೀನಾದೆ ಮಗನೆ, ನಿರಾಕರಣ, ವಂಶವೃಕ್ಷ, ನಾಯಿನೆರಳು, ಮತದಾನ, ಮಂದ್ರ, ಸಾರ್ಥ, ಯಾನ (ಎಸ್.ಎಲ್. ಭೈರಪ್ಪ)
- ಮಹಾಕ್ಷತ್ರಿಯ (ಡಿ.ಜಿ. ಕುಲಕರ್ಣಿ)
- ಹೇಮಾವತಿ (ಗೊರೂರು ರಾಮಸ್ವಾಮಿ ಅಯ್ಯಂಗಾರ್)
- ಸಂಧ್ಯಾರಾಗ, ಈಚಲು ಮರದವ್ವ, ನಗ್ನಸತ್ಯ, ಶನಿಸಂತಾನ, ಗರುಡಮಚ್ಚೆ (ಅ.ನ.ಕೃಷ್ಣರಾವ್)
- ಚಂದವಳ್ಳಿಯ ತೋಟ, ಹಂಸಗೀತೆ, ನಾಗರಹಾವು, ಬೆಂಕಿಯ ಬಲೆ, ಗಾಳಿಮಾತು, ಚಂದನದ ಗೊಂಬೆ, ಚಕ್ರೇಶ್ವರಿ, ದುರ್ಗಾಸ್ತಮಾನ, ಕಂಬನಿಯ ಕುಯಿಲು, ರಕ್ತರಾತ್ರಿ, ತಿರುಗುಬಾಣ, ಮಸಣದ ಹೂ, ಬಿಡುಗಡೆಯ ಬೇಡಿ, ಬೆಳಕು ತಂದ ಬಾಲಕ (ತ.ರಾ.ಸುಬ್ಬರಾವ್)
- ಶಾಂತಲಾ, ರೂಪದರ್ಶಿ (ಕೆ.ವಿ. ಅಯ್ಯರ್)
- ಮುಸ್ಸಂಜೆಯ ಕಥಾಪ್ರಸಂಗ (ಪಿ.ಲಂಕೇಶ್)
- ಬಂಧನ, ಹೊಂಬಿಸಿಲು, ಪ್ರೀತಿಸಿ ನೋಡು, ನೀ ಮುಡಿದಾ ಮಲ್ಲಿಗೆ, ನಾಳೆಯು ಬರಲಿ, ನಾನೇ ವೀಣೆ ನೀನೇ ತಂತಿ, ಗುಪ್ತಗಾಮಿನಿ, ಕೃಷ್ಣಾ ನೀ ಬೇಗನೆ ಬಾರೋ, ಸಮರ್ಪಣೆ (ಉಷಾ ನವರತ್ನರಾಂ)
- ಕುಬ್ರ (ಬಾನು ಮುಷ್ತಾಕ್)
- ಚಂದ್ರಗಿರಿಯ ತೀರದಲ್ಲಿ (ಸಾರಾ ಅಬೂಬಕರ್)
- ಕರಿಮಾಯಿ, ಜಿ.ಕೆ.ಮಾಸ್ತರರ ಪ್ರಣಯ ಪ್ರಸಂಗ, ಸಿಂಗಾರೆವ್ವ ಮತ್ತು ಅರಮನೆ, ಶಿಖರ ಸೂರ್ಯ, ಶಿವನ ಡಂಗುರ (ಚಂದ್ರಶೇಖರ ಕಂಬಾರ)
- ಅಸ್ಪೃಶ್ಯರು (ವೈದೇಹಿ)
- ಬಂಗಾರದ ಮನುಷ್ಯ, ಮರಳು ಸರಪಣಿ, ದೂರ ಗಗನ, ಪಯಣದ ಕೊನೆ, ಬೆದರು ಬೊಂಬೆ, ಕೋವಿ ಕುಂಚ, ಸೀಳು ನಕ್ಷತ್ರ, ವರ್ಣಚಕ್ರ, ನಕ್ಷತ್ರಮೀನು (ಟಿ.ಕೆ.ರಾಮರಾವ್)
- ಕಾರ್ಮುಗಿಲು, ಪುನರಪಿ ಜನನಂ, ಶಬ್ದಗಳು, ಅಬ್ರಾಹ್ಮಣ, ಕಾಮರೂಪಿ (ಕೆ.ಟಿ.ಗಟ್ಟಿ)









ಸಣ್ಣಕತೆಗಳು/ಕಥಾಸಂಕಲನ

- ಸಣ್ಣ ಕತೆಗಳು, ರಂಗನ ಮದುವೆ (ಮಾಸ್ತಿ ವೆಂಕಟೇಶ ಅಯ್ಯಂಗಾರ್)
- ಅಬಚೂರಿನ ಪೋಸ್ಟ್ ಆಫೀಸು (ಕೆ.ಪಿ. ಪೂರ್ಣಚಂದ್ರ ತೇಜಸ್ವಿ)
- ಗಂಗಮ್ಮ (ದೇವನೂರ ಮಹಾದೇವ)
- ಶೂದ್ರ ತಪಸ್ವಿ (ಕುವೆಂಪು)
- ರಂಜಾನ್ ಮತ್ತು ದಸರಾ (ದೇವನೂರ ಮಹಾದೇವ)
- ಗರುಡಗಂಬದ ದಾಸಯ್ಯ, ಬೂತಯ್ಯನ ಮಗ ಅಯ್ಯು (ಗೊರೂರು ರಾಮಸ್ವಾಮಿ ಅಯ್ಯಂಗಾರ್)
- ಕೆರೆಯ ನೀರನು ಕೆರೆಗೆ ಚೆಲ್ಲಿ, ಕಲ್ಲು ಕರಗುವ ಸಮಯ (ಪಿ.ಲಂಕೇಶ್)
- ಎದೆಯ ಹಣತೆ, ಹೆಜ್ಜೆ ಮೂಡಿದ ಹಾದಿ (ಬಾನು ಮುಷ್ತಾಕ್)
- ಅಮ್ಮಚ್ಚಿ ಎಂಬ ನೆನಪು (ವೈದೇಹಿ)
- ತೊಟ್ಟಿಲು ತೂಗಿತು (ತ.ರಾ.ಸುಬ್ಬರಾವ್)
- ಸಮುದ್ಯತಾ (ಕೆ.ವಿ. ಅಯ್ಯರ್)

ಜೀವನ ಚರಿತ್ರೆ ಮತ್ತು ಆತ್ಮಕಥನ

- ಕೃಷ್ಣದೇವರಾಯ (ಕುವೆಂಪು)
- ಕಲಾವಿದ ಕೃಷ್ಣ ಹೆಬ್ಬಾರರು, ಹುಚ್ಚು ಮನಸ್ಸಿನ ಹತ್ತು ಮುಖಗಳು (ಶಿವರಾಮ ಕಾರಂತ)
- ಬದುಕು ಹಗರಣ (ಶಾಂತಾ ಇಮ್ರಾಪುರ)
- ಪೂರ್ವ ಮತ್ತು ಪಶ್ಚಿಮ (ಕೆ.ವಿ. ಸುಬ್ಬಣ್ಣ)
- ಹುಳಿಮಾವಿನ ಮರ (ಪಿ.ಲಂಕೇಶ್)
- ಸಂಜೆಗಣ್ಣಿನ ಹಿನ್ನೋಟ (ಎ.ಎನ್.ಮೂರ್ತಿರಾವ್)
- ನನ್ನ ಭಯಾಗ್ರಫಿ (ಬೀಚಿ)
- ರವೀಂದ್ರನಾಥ ಟ್ಯಾಗೋರ್ (ಮಾಸ್ತಿ ವೆಂಕಟೇಶ ಅಯ್ಯಂಗಾರ್)
- ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ, ಸೇಡಿಯಾಪು ನೆನಪುಗಳು (ವೈದೇಹಿ)
- ಬರಹಗಾರನ ಬದುಕು (ಅ.ನ.ಕೃಷ್ಣರಾವ್)
- ಹಿಂದಿರುಗಿ ನೋಡಿದಾಗ (ತ.ರಾ.ಸುಬ್ಬರಾವ್)
- ಭಿತ್ತಿ (ಎಸ್.ಎಲ್. ಭೈರಪ್ಪ)

ಅನುವಾದ ಮತ್ತು ಆಧ್ಯಾತ್ಮಿಕ ಕೃತಿಗಳು

- ಭಗವದ್ಗೀತಾ, ವೇದಾಂತ ದರ್ಶನ (ಡಿ.ವಿ. ಗುಂಡಪ್ಪ)
- ಮಂತ್ರಗಳು (ಬಸವಣ್ಣ)
- ವಚನಗಳು (ಅಲ್ಲಮಪ್ರಭು)
- ಮಲೆನಾಡಿನವರು (ಗೊರೂರು ರಾಮಸ್ವಾಮಿ ಅಯ್ಯಂಗಾರ್)
- ಸಾಕ್ರೆಟಿಸನ ಕೊನೆಯ ದಿನಗಳು (ಎ.ಎನ್. ಮೂರ್ತಿರಾವ್)







ನಾಟಕಗಳು

- ಕಾಕನಕೋಟೆ (ಮಾಸ್ತಿ ವೆಂಕಟೇಶ ಅಯ್ಯಂಗಾರ್)
- ಮಹಾಶ್ವೇತೆ, ಮೃತ್ಯು ಸಿಂಹಾಸನ (ತ.ರಾ.ಸುಬ್ಬರಾವ್)
- ಮದುವೆಯೋ ಮನೆಹಾಳೋ, ಜಗಜ್ಯೋತಿ ಬಸವೇಶ್ವರ (ಅ.ನ.ಕೃಷ್ಣರಾಯ)
- ತುಘಲಕ್, ತಲೆದಂಡ (ಗಿರೀಶ್ ಕಾರ್ನಾಡ್)
- ಸಂಕ್ರಾಂತಿ, ಜೋಕುಮಾರಸ್ವಾಮಿ (ಚಂದ್ರಶೇಖರ ಕಂಬಾರ)
- ಮಹಾಚೈತ್ರ (ಎಚ್.ಎಸ್. ಶಿವಪ್ರಕಾಶ್)
- ಸಂಕ್ರಾಂತಿ, ಟಿ.ಪ್ರಸನ್ನನ ಗೃಹಸ್ಥಾಶ್ರಮ, ತೆರೆಗಳು, ಗುಣಮುಖ (ಪಿ.ಲಂಕೇಶ್)
- ನಾರದ ಗರ್ವಭಂಗ, ಹಿರಿಯಕ್ಕನ ಚಾಳಿ (ಕೆ.ಶಿವರಾಮ ಕಾರಂತ)
- ಟೊಳ್ಳು-ಗಟ್ಟಿ, ಹೋಂರೂಲು, ಗಂಡಸ್ಕತ್ರಿ, ಬಂಡ್ವಾಳಿಲ್ಲದ ಬಡಾಯಿ, ಸೀಕರ್ಣೆ ಸಾವಿತ್ರಿ, ಅಮ್ಮಾವ್ರ ಗಂಡ (ಟಿ.ಪಿ. ಕೈಲಾಸಂ)
- ಹನ್ನೊಂದನೆಯ ಅವತಾರ, ದೇವರ ಆತ್ಮಹತ್ಯೆ (ಬೀಚಿ)
- ತೇಲಾಡುವ ಮೋಡಗಳು (ಸಾರಾ ಅಬೂಬಕರ್)
- ಋಷ್ಯಶೃಂಗ, ಜೋಕುಮಾರಸ್ವಾಮಿ, ನಾಗಮಂಡಲ, ಸಂಗ್ಯಾಬಾಳ್ಯಾ, ಕಾಡುಕುದುರೆ, ಹರಕೆಯ ಕುರಿ, ಸಿರಿಸಂಪಿಗೆ (ಚಂದ್ರಶೇಖರ ಕಂಬಾರ)
- ಕಾಡಿನ ಬೆಂಕಿ, ಕುಂಜಾಲು ಕಣಿವೆಯ ಕೆಂಪು ಹೂವು, ದುರ್ಗವೆಂಬ ವ್ಯೂಹ, ದ್ವೀಪ, ಪ್ರೀತಿಯೆಂಬ ಚುಂಬಕ, ಮುಳುಗಡೆ, ಭೂತದ ಎದುರು ಬೇತಾಳ (ನಾ.ಡಿಸೋಜ)
- ಕೆಂಪುಕಾಗೆ, ಬೊಂಬೆಯಾಟ (ಕೆ.ಟಿ. ಗಟ್ಟಿ)

ಪ್ರವಾಸ ಕಥನಗಳು

- ಅಮೆರಿಕದಲ್ಲಿ ಐದೂವರೆ ವರ್ಷ (ವಿ.ಕೃ. ಗೋಕಾಕ್)
- ಅಮೆರಿಕದಲ್ಲಿ ಗೊರೂರು (ಗೊರೂರು ರಾಮಸ್ವಾಮಿ ಅಯ್ಯಂಗಾರ್)
- ಅಪರವಯಸ್ಕನ ಅಮೆರಿಕಾ ಯಾತ್ರೆ (ಎ.ಎನ್. ಮೂರ್ತಿರಾವ್)
- ಅಪೂರ್ವ ಪಶ್ಚಿಮ (ಕೆ.ಶಿವರಾಮ ಕಾರಂತ)
- ದೇವರಿಲ್ಲದ ಗುಡಿ (ಬೀಚಿ)
- ಐಷಾರಾಮದ ಆಳದಲ್ಲಿ (ಸಾರಾ ಅಬೂಬಕರ್)
- ಗೋಳದ ಮೇಲೊಂದು ಸುತ್ತು (ಟಿ.ಕೆ. ರಾಮರಾವ್)

ಕಾವ್ಯ/ಮಹಾಕಾವ್ಯ/ಕವನ ಸಂಕಲನಗಳು

- ಶ್ರೀ ರಾಮಾಯಣ ದರ್ಶನಂ (ಕುವೆಂಪು)
- ಮಂಕುತಿಮ್ಮನ ಕಗ್ಗ (ಡಿ.ವಿ. ಗುಂಡಪ್ಪ)
- ನಾದಲೀಲೆ, ನಾಕುತಂತಿ (ದ.ರಾ. ಬೇಂದ್ರೆ)
- ಮೂಢನಂಬಿಕೆಗಳು, ಭೂಮಿಗೀತ, ಚಂಡೆಮದ್ದಳೆ (ಎಂ. ಗೋಪಾಲಕೃಷ್ಣ ಅಡಿಗ)
- ಹೊಸಬರ ಹಾಡು (ಜಿ.ಎಸ್. ಶಿವರುದ್ರಪ್ಪ)
- ಶ್ರೀರಾಮ ಪಟ್ಟಾಭಿಷೇಕ (ಮಾಸ್ತಿ ವೆಂಕಟೇಶ ಅಯ್ಯಂಗಾರ್)
- ಒದ್ದೆ ಕಣ್ಣಿನ ಬಾಗಿನ (ಬಾನು ಮುಷ್ತಾಕ್)
- ಬೆಳ್ಳಿ ಮೀನು, ಹೇಳತೇನ ಕೇಳ, ಚಕೋರಿ (ಚಂದ್ರಶೇಖರ ಕಂಬಾರ)

ನಮ್ಮ ಮಕ್ಕಳಿಗೇಕೆ ಕನ್ನಡ ಕಬ್ಬಿಣದ ಕಡಲೆ?



ಅಜಕ್ಕಳ ಗಿರೀಶ ಭಟ್

ಮೂವತ್ತು ನಲವತ್ತು ವರ್ಷಗಳ ಹಿಂದಿನ ಪದವೀಧರರಿಗೆ ಹೋಲಿಸಿದರೆ, ಈಗ ಪದವೀಧರರಾಗಿ ಹೊರಬರುತ್ತಿರುವ ತಲೆಮಾರಿನ ಬಹಳಷ್ಟು ಯುವಕ ಯುವತಿಯರು ಕನ್ನಡದಲ್ಲಿ ಸರಳವಾಗಿ ನಾಲ್ಕು ವಾಕ್ಯಗಳನ್ನು ಬರೆಯಲು ಸಮರ್ಥರಾಗಿಲ್ಲ ಎನ್ನುವ ಮಾತನ್ನು ನಾವು ಕೇಳುತ್ತೇವೆ. ಈ ಮಾತಿನಲ್ಲಿ ಸತ್ಯವಿದೆ ಎನ್ನಲು ಬಹಳ ದೊಡ್ಡ ಕ್ಷೇತ್ರ ಕಾರ್ಯಾಧಾರಿತ ಅಧ್ಯಯನದ ಅಗತ್ಯವೇನಿಲ್ಲ. ಕಾಲೇಜು, ವಿಶ್ವವಿದ್ಯಾನಿಲಯಗಳಲ್ಲಿ ಬೋಧಿಸುವವರಿಗೆ ಅಥವಾ ಉದ್ಯೋಗಾಕಾಂಕ್ಷಿಗಳನ್ನು ನೇಮಿಸಿಕೊಳ್ಳಲು ಸಂದರ್ಶನ ನಡೆಸುವ ಉದ್ಯೋಗದಾತರಿಗೆ ಸ್ಪಷ್ಟವಾಗಿಯೇ ಕಾಣುವ ಸತ್ಯ ಇದು.

ಇಂದು ಕನ್ನಡ ಭಾಷಾ ಸಾಮರ್ಥ್ಯ ಕುಂಠಿತವಾಗಲು ಇಂಗ್ಲಿಷ್ ಮಾಧ್ಯಮವೇ ಕಾರಣ ಎನ್ನುವ ಒಂದು ಸಾಮಾನ್ಯ ಮಾತು ಕೂಡ ಕೇಳಿಬರುತ್ತಿದೆ. ಇಂಗ್ಲಿಷಿನಲ್ಲಾದರೂ ಸರಾಗವಾಗಿ ತಪ್ಪಿಲ್ಲದೆ ಬರೆಯಬಲ್ಲರೇ ಎಂದರೆ ಅದೂ ಇಲ್ಲ. ಅಷ್ಟೇ ಅಲ್ಲ; ಕನ್ನಡ ಮಧ್ಯಮದಲ್ಲಿ ಕಲಿತವರ ಕನ್ನಡವಾದರೂ ಉತ್ತಮವಿದೆಯೇ ಎಂದರೆ ಅದೂ ಇಲ್ಲ. ವಸ್ತುಶಃ ಇಂದು ಪದವಿ ಪಡೆದು ಹೊರಬರುತ್ತಿರುವವರಲ್ಲಿ ದೊಡ್ಡ ಸಂಖ್ಯೆಯ ಪದವೀಧರರಿಗೆ ಭಾಷೆಯೇ ಇಲ್ಲ ಎನ್ನುವಂತಾಗಿದೆ! ಹೀಗಾಗಿ ಇದು ಕನ್ನಡ ಭಾಷೆಯದೊಂದೇ ಸಮಸ್ಯೆ ಅಲ್ಲ. ಒಟ್ಟಾರೆಯಾಗಿ ಭಾಷಾಬೋಧನೆಯ ಕುರಿತಾದ ದೃಷ್ಟಿ-ಧೋರಣೆಗಳು ಕನ್ನಡವನ್ನೂ ದುರ್ಬಲಗೊಳಿಸಿವೆಯೆಂಬುದನ್ನು ನಾವು ಮೊದಲು ಅರ್ಥಮಾಡಿಕೊಳ್ಳಬೇಕು.

ನಮ್ಮ ರಾಜ್ಯದಲ್ಲಿ ಪದವಿ ಹಂತದಲ್ಲಿ ಸಾಮಾನ್ಯವಾಗಿ ಎರಡು ವರ್ಷ ಭಾಷಾ ವಿಷಯಗಳಿರುತ್ತವೆ. ಈ ಹಂತದಲ್ಲಿ ಭಾಷೆಗಳಿಗೆ ಹೆಚ್ಚಿನ ಮಹತ್ವ ನೀಡಬೇಕು ಎನ್ನುವ ಬೇಡಿಕೆಯನ್ನು ಉನ್ನತ ಶಿಕ್ಷಣದ ಯೋಜನೆಯನ್ನು ರೂಪಿಸುವವರ ಅಥವಾ ಪಠ್ಯಕ್ರಮ ಸಿದ್ಧಪಡಿಸುವವರ ಎದುರು ಇಟ್ಟರೆ ಅವರು ಹೇಳುವುದು- ಭಾಷಾಕಲಿಕೆಯು ಹತ್ತು ಅಥವಾ ಹನ್ನೆರಡನೇ ತರಗತಿಯ ಒಳಗೆ ಮುಗಿಯಬೇಕು; ಉನ್ನತಶಿಕ್ಷಣದಲ್ಲಿ ಸಂವಹನವನ್ನಷ್ಟೇ ಕಲಿಯಬೇಕಾದುದು ಎಂಬುದಾಗಿ. ಪರಿಣಾಮವೇನೆಂದರೆ ಸರಿಯಾದ ಭಾಷಾ ಕಲಿಕೆ ಕೆಳಗಿನ ತರಗತಿಗಳಲ್ಲೂ ಇಲ್ಲ; ಉನ್ನತಶಿಕ್ಷಣದಲ್ಲೂ ಇಲ್ಲ ಎಂಬಂತಾಗಿದೆ.

ದೈನಂದಿನ ಅಗತ್ಯಗಳಿಗಾಗಿ ಭಾಷೆಯನ್ನು ಬಳಸುವುದು ಬೇರೆ, ನಿರ್ದಿಷ್ಟ ವಿಷಯದ ಬಗೆಗೆ ಬರೆಯುವುದು ಅಥವಾ ಮಾತನಾಡುವ ಭಾಷಾ ಕೌಶಲ ಬೇರೆ. ತೀರಾ ಸರಳ ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ, ಕನ್ನಡವನ್ನು ಮಾತೃಭಾಷೆಯಾಗಿ ಹೊಂದಿರುವ ವಿದ್ಯಾರ್ಥಿಯೊಬ್ಬನಿಗೆ ತೆಂಗಿನಮರದ ಬಗೆಗೆ ಕನ್ನಡದಲ್ಲಿ ಅರ್ಧ ಪುಟದಷ್ಟು ಬರೆಯಲು ಕಷ್ಟವಾಗಬಹುದು. ಅಂದರೆ ಕೇವಲ ದೈನಂದಿನ ವ್ಯಾವಹಾರಿಕ ಅಗತ್ಯಕ್ಕಷ್ಟೇ ಕನ್ನಡ ಗೊತ್ತಿದ್ದರೆ ಸಾಕಾಗದು; ಸುಶಿಕ್ಷಿತರೆನಿಸಿಕೊಂಡವರು ಯಾವುದೇ ಒಂದು ವಿಚಾರವನ್ನು ಇನ್ನೊಂದಷ್ಟು ಮಂದಿಗೆ ತಿಳಿಸಿ ಹೇಳಲು ಸಾಧ್ಯವಾಗುವ ಭಾಷಾ ಕೌಶಲವನ್ನು ಹೊಂದಿರಬೇಕಾಗುತ್ತದೆ. ಈಗಿನ ಯುವಜನತೆಯಲ್ಲಿ ಇದರ ಕೊರತೆ ಕಾಣುತ್ತದೆ.

ಹತ್ತನೇ ತರಗತಿಯಲ್ಲಿ ಸಾವಿರಾರು ವಿದ್ಯಾರ್ಥಿಗಳು ಕನ್ನಡ ವಿಷಯದಲ್ಲಿ ಅನುತ್ತೀರ್ಣರಾಗುತ್ತಾರೆ. ಅವರಲ್ಲಿ ಹೆಚ್ಚಿನವರೂ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು; ಅಷ್ಟೇ ಅಲ್ಲ, ಕನ್ನಡ ಮಾತೃಭಾಷೆಯವರು ಕೂಡ! ಅದಷ್ಟೇ ಅಲ್ಲ; ಅನುತ್ತೀರ್ಣರಾಗುವವರಲ್ಲಿ ದೊಡ್ಡ ಸಂಖ್ಯೆಯಲ್ಲಿ ಇರುವವರು ಸರಕಾರಿ ಪ್ರೌಢಶಾಲೆಗಳ ಮಕ್ಕಳು. ಅಂದರೆ, ರಾಜ್ಯಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆದು ಉದ್ಯೋಗ ಪಡೆದ ಪ್ರತಿಭಾವಂತ ಬೋಧಕರನ್ನು ಪಡೆದ ಮಕ್ಕಳು! ಮಾತೃಭಾಷೆಯಲ್ಲಿ ಕಲಿಕೆಯೇ ಉತ್ತಮ ಎನ್ನುವುದು ಶತಸ್ಸಿದ್ಧ. ಆದರೂ ಹತ್ತನೇ ತರಗತಿಯಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿಯುವ ಮಕ್ಕಳ ಫಲಿತಾಂಶ ಇಂಗ್ಲಿಷ್ ಮಾಧ್ಯಮಕ್ಕಿಂತ ಹಿಂದೆ ಇರುತ್ತದೆ. ಒಟ್ಟಿನಲ್ಲಿ ಸಮಸ್ಯೆಯಿರುವುದು ನಮ್ಮ ಬೋಧನೆ-ಕಲಿಕೆಯ ಪ್ರಕ್ರಿಯೆಯಲ್ಲಿಯೇ ಎನ್ನುವುದನ್ನು ಹೇಳಲು ಇದಕ್ಕಿಂತ ಬೇರೆ ಆಧಾರ ಬೇಕೆ?

ಒಂದು ವಿಚಿತ್ರ ವಾಸ್ತವವನ್ನು ಗಮನಿಸಿ: ಒಂದೆಡೆ ಕನ್ನಡನಾಡಿನ ಹೆತ್ತವರೆಲ್ಲ ತಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮಕ್ಕೆ ಕಳುಹಿಸುತ್ತಿದ್ದರೆ, ಮತ್ತೊಂದೆಡೆ ಇಂದು ಕರ್ನಾಟಕದಲ್ಲಿ ಬಿ.ಎ.ಯಂತಹ ತರಗತಿಗಳಲ್ಲಿ ಕಲಿಯುವ ಹೆಚ್ಚುಕಡಿಮೆ ಎಲ್ಲ ವಿದ್ಯಾರ್ಥಿಗಳೂ ಕನ್ನಡ ಮಾಧ್ಯಮದಲ್ಲಿಯೇ ವಿಶ್ವವಿದ್ಯಾನಿಲಯ ಪರೀಕ್ಷೆಯನ್ನು ಬರೆಯುವುದು. ಅಂದರೆ, ಈಗಿನ ಮಕ್ಕಳು ಹತ್ತು ಹದಿನೈದು ವರ್ಷಗಳ ಕಾಲ ಶಾಲಾಕಾಲೇಜುಗಳಲ್ಲಿ ಕನ್ನಡ ಮಾಧ್ಯಮದಲ್ಲೇ ವಿದ್ಯಾಭ್ಯಾಸ ಪಡೆದರೂ ಅಗತ್ಯವಿರುವಷ್ಟು ಮಟ್ಟಿಗೆ ಕನ್ನಡ ಭಾಷಾಸಾಮರ್ಥ್ಯವನ್ನು ಹೊಂದಿಲ್ಲ ಎಂಬುದನ್ನು ನಾವು ಒಪ್ಪಿಕೊಳ್ಳಲೇಬೇಕು. ಇದಕ್ಕೆ ಕಾರಣಗಳೇನು ಎನ್ನುವುದನ್ನು ಶಿಕ್ಷಣತಜ್ಞರು ಗಂಭೀರವಾಗಿ ಯೋಚಿಸಬೇಕಿದೆ. ಇಂಗ್ಲಿಷ್ ಮಾಧ್ಯಮ, ಶಿಕ್ಷಕರಿಗೆ ಬಿಸಿಯೂಟ ಇತ್ಯಾದಿ ಅನ್ಯಕಾರ್ಯಗಳಿರುತ್ತವೆ ಎಂಬುದೆಲ್ಲ ಸರಿಯೇ. ಆದರೆ ನಮ್ಮ ಭಾಷಾದುಸ್ಥಿತಿಗೆ ಮುಖ್ಯ ಕಾರಣ ಅವುಗಳಲ್ಲ. ಹೀಗಾಗಿ ಅಂತಹ ಕಾರಣಗಳನ್ನು ಬದಿಗಿಟ್ಟು, ಬೋಧನೆ-ಕಲಿಕಾವಿಧಾನದಲ್ಲಿ (ಪೆಡಗೊಜಿಯಲ್ಲಿ) ಇರುವ ಸಮಸ್ಯೆ ಏನು ಎನ್ನುವುದನ್ನು ವಿವೇಚಿಸಬೇಕು.

ಬೋಧನೆ-ಕಲಿಕಾವಿಧಾನದಲ್ಲಿ ಸಮಸ್ಯೆ

ಸದ್ಯಕ್ಕೆ ಉನ್ನತ ಶಿಕ್ಷಣ ಕ್ಷೇತ್ರವನ್ನು ಬಿಟ್ಟು, ಭಾಷೆಯು ಗಟ್ಟಿಗೊಳ್ಳಬೇಕಾದ ಕೆಳಗಿನ ಹಂತಗಳಲ್ಲಿ ಬೋಧನೆಯ ಹಿಂದಿನ ದೃಷ್ಟಿಕೋನದಲ್ಲಿ ಕಾಣುವ ಸಮಸ್ಯೆಗಳೇನು ಎನ್ನುವುದನ್ನು ಕನ್ನಡ ಭಾಷೆಯನ್ನೇ ದೃಷ್ಟಿಯಲ್ಲಿಟ್ಟುಕೊಂಡು ನೋಡೋಣ.

ಮೊದಲಿಗೆ, ಕನ್ನಡ ಕಲಿಸಲು ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಪಠ್ಯಪುಸ್ತಕಗಳು ಇರುತ್ತವೆ. ಕನ್ನಡವೇ ಮೊದಲಾಗಿ ಈ ಭಾಷೆಗಳನ್ನು ಶಿಕ್ಷಣದಲ್ಲಿ ಭಾಷಾವಿಷಯಗಳು ಎಂಬುದಾಗಿ ಪರಿಗಣಿಸುವುದರ ಹಿಂದಿನ ತರ್ಕವೇನು? ಹಾಗೆ ಅವುಗಳನ್ನು ಅಧ್ಯಯನ ವಿಷಯಗಳಾಗಿ ಅಳವಡಿಸಿದುದರ ಉದ್ದೇಶವೇನು? ಈ ಭಾಷಾವಿಷಯವಾದ ಕನ್ನಡ ಪಠ್ಯಪುಸ್ತಕಗಳ ಉದ್ದೇಶವೇನು? ಕಳೆದ ಸುಮಾರು ಮೂರು ದಶಕಗಳಿಂದ ಬರುತ್ತಿರುವ ಕನ್ನಡ ಭಾಷಾ ಪಠ್ಯಪುಸ್ತಕಗಳಿಗೂ ಅದಕ್ಕಿಂತ ಹಿಂದಿನ ಪಠ್ಯಪುಸ್ತಕಗಳಿಗೂ ಇರುವ ವ್ಯತ್ಯಾಸಗಳೇನು? ಮುಂತಾದ ಪ್ರಶ್ನೆಗಳು ನಮಗೆ ಮುಖ್ಯವಾಗಬೇಕು. ಹಾಗೆಯೇ, ಹಿಂದಿನ ಮತ್ತು ಈಚಿನ ಮೂರು ದಶಕಗಳ ಪಠ್ಯಪುಸ್ತಕಗಳ ಸ್ವರೂಪದಲ್ಲಿ ಗಣನೀಯ ವ್ಯತ್ಯಾಸವಿಲ್ಲದಿರಬಹುದು. ಆದರೆ ಬೋಧಿಸುವಾಗ ನೀಡುವ ಆದ್ಯತೆಯಲ್ಲಿ ಏನು ವ್ಯತ್ಯಾಸವಾಗಿದೆ? ಪಠ್ಯಪುಸ್ತಕದಲ್ಲಿ ಇರುವ ವಸ್ತುವನ್ನು ತಿಳಿಸಲು ಅದು ಬಳಕೆಯಾಗುತ್ತಿದೆಯೇ ಅಥವಾ ಭಾಷೆಯನ್ನು ಕಲಿಸಲು ಪಠ್ಯಪುಸ್ತಕ ಬಳಕೆಯಾಗುತ್ತಿದೆಯೇ? ಈ ನಡುವೆ ಪಠ್ಯಪುಸ್ತಕಗಳ ನಿಜವಾದ ಉದ್ದೇಶ ಈಗ ಈಡೇರುತ್ತಿದೆಯೇ? ಈ ಪ್ರಶ್ನೆಗಳನ್ನು ಕೂಡ ಕೇಳಿಕೊಳ್ಳಬೇಕು.

ಕನ್ನಡ ಭಾಷಾ ಪಠ್ಯಪುಸ್ತಕದ ಉದ್ದೇಶವೇನು ಎಂದು ಅರ್ಥ ಮಾಡಿಕೊಳ್ಳಲು ಕಷ್ಟವೇನಿಲ್ಲ. ಪಾಠಪುಸ್ತಕದ ಉದ್ದೇಶ ಕರ್ನಾಟಕದಲ್ಲಿ ಬಹಳಷ್ಟು ಮಕ್ಕಳ ಮಾತೃಭಾಷೆಯಾದ ಕನ್ನಡವನ್ನು ಭಾಷೆಯಾಗಿ ಕಲಿಸುವುದು ಒಂದೇ ಅಲ್ಲ. ಯಾಕೆಂದರೆ, ಮಕ್ಕಳಿಗೆ ಕನ್ನಡ ಅರ್ಥವಾಗುತ್ತದೆ; ಮಕ್ಕಳು ಕನ್ನಡ ಮಾತನಾಡುತ್ತಾರೆ; ಮೂರು ನಾಲ್ಕನೇ ತರಗತಿಗಾಗುವಾಗಲಾದರೂ ಕನ್ನಡ ಓದುವ ಸಾಮರ್ಥ್ಯ ಹೊಂದಿರುತ್ತಾರೆ; ಅಕ್ಷರಜ್ಞಾನವೂ ಇರುತ್ತದೆ ಅಂತಿಟ್ಟುಕೊಂಡರೆ ಮತ್ತೂ ಕಲಿಯಬೇಕಾದುದು ಇದೆ ಅಂತ ತಾನೇ ಭಾವಿಸುವುದು ಅಥವಾ ಭಾಷಾ ಪಠ್ಯಪುಸ್ತಕಗಳು ಇರುವುದು?

ಅಂದರೆ, ಭಾಷಾ ಪಠ್ಯಪುಸ್ತಕಗಳ ಮುಖ್ಯ ಉದ್ದೇಶ ದೈನಂದಿನ ವ್ಯವಹಾರ ಮಾಡಲು ಕಲಿಸುವುದಲ್ಲ; ಬದಲಾಗಿ ಭಾಷೆಯು ಯಾವೆಲ್ಲ ನಮೂನೆಗಳಲ್ಲಿ ಮೂರ್ತಗೊಳ್ಳುತ್ತದೆ ಎನ್ನುವುದನ್ನು ಗ್ರಹಿಸಲು ಮತ್ತು ಪರಿಣಾಮಕಾರಿ ಅಭಿವ್ಯಕ್ತಿಯನ್ನು ಕಲಿಸುವುದು. ಇತಿಹಾಸ, ಸಮಾಜಶಾಸ್ತ್ರ, ವಾಣಿಜ್ಯಶಾಸ್ತ್ರ, ವಿಜ್ಞಾನ ಇತ್ಯಾದಿ ವಿವಿಧ ವಿಷಯಗಳಲ್ಲಿ ವಿದ್ಯಾರ್ಥಿಗಳು ತಾವು ಪಡೆದುಕೊಂಡ ಜ್ಞಾನವನ್ನು ಇನ್ನೊಬ್ಬರಿಗೆ ಅರ್ಥವಾಗುವಂತೆ ಪರಿಣಾಮಕಾರಿಯಾಗಿ ಬರಹದಲ್ಲಿ ಮತ್ತು ಮಾತಿನಲ್ಲಿ ಅಭಿವ್ಯಕ್ತಿಸಲು ಸಮರ್ಥರಾಗಬೇಕು ಎನ್ನುವುದು ಭಾಷಾ ವಿಷಯಗಳನ್ನು ಅಳವಡಿಸಿದುದರ ಹಿಂದಿರುವ ಆಶಯ. ತರ್ಕಬದ್ಧವಾಗಿ ಯೋಚಿಸುವ ಕೌಶಲವಿದ್ದರೆ ಮಾತ್ರ ಯಾವುದೇ ಒಂದು ವಿಷಯವನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಲು ಸಾಧ್ಯ.

ಪ್ರಾಥಮಿಕ ಹಂತದಿಂದಲೇ ಭಾಷಾವಿಷಯಕ್ಕಾಗಿ ಇರುವ ಪಠ್ಯಪುಸ್ತಕದಲ್ಲಿ ಮುಖ್ಯವಾಗಿ ಇರುವುದು ಸಾಹಿತ್ಯದ ವಿವಿಧ ಪ್ರಕಾರಗಳು. ಇದೂ ಔಚಿತ್ಯಪೂರ್ಣವೇ ಹೌದು. ಯಾಕೆಂದರೆ ಸಾಹಿತ್ಯದ ವಿವಿಧ ಪ್ರಕಾರಗಳ ಮೂಲಕ ಬೇರೆಬೇರೆ ಭಾಷಾ ಶೈಲಿಗಳು ವಿದ್ಯಾರ್ಥಿಗಳಿಗೆ ಕರಗತವಾಗುತ್ತವೆ ಎನ್ನುವುದು ಇಲ್ಲಿರುವ ಗ್ರಹೀತ. ಅಂದರೆ ಒಂದು ಭಾಷೆಯಲ್ಲಿರುವ ವಿವಿಧ ಶೈಲಿಗಳಲ್ಲಿ ಇತರರು ಅಭಿವ್ಯಕ್ತಿ ಮಾಡಿದುದನ್ನು ಅರ್ಥಮಾಡಿಕೊಳ್ಳುವ ಕೌಶಲ, ಸಂದರ್ಭಕ್ಕೆ ತಕ್ಕಂತೆ ವಿವಿಧ ಶೈಲಿಗಳಲ್ಲಿ ಪರಿಣಾಮಕಾರಿಯಾಗಿ ಅಭಿವ್ಯಕ್ತಿ ಮಾಡುವ ಕೌಶಲ, ತರ್ಕಬದ್ಧವಾಗಿ ಮಾತಿನ ಅಥವಾ ಬರಹದ ಸರಪಣಿಯನ್ನು ಜೋಡಿಸುವುದು, ಸೃಜನಶೀಲ ಚಿಂತನೆ ಮತ್ತು ಅಭಿವ್ಯಕ್ತಿ ಇಂಥ ಕೌಶಲಗಳೆಲ್ಲ ಸಿದ್ಧಿಸಬೇಕಾದುದು ಭಾಷಾವಿಷಯಗಳ ಮತ್ತು ಭಾಷಾ ಪಠ್ಯಪುಸ್ತಕಗಳ ಉದ್ದೇಶ. ಈಗ ಭಾಷಾ ಪಠ್ಯಪುಸ್ತಕಗಳ ಉದ್ದೇಶ ಈಡೇರುತ್ತಿಲ್ಲ ಎನ್ನುವುದು ಸ್ಪಷ್ಟ.

ಕಲಿಕಾ ವಿಧಾನದ ಬಗ್ಗೆ ಮರೆಯಾದ ಚಿಂತನೆ

ಹಾಗಿದ್ದರೆ ಈಗ ಹೀಗಾಗಲು ಕಾರಣವೇನು? ಉತ್ತರ ಸರಳ. ಭಾಷಾ ಕೌಶಲ, ತರ್ಕಬದ್ಧತೆ ಇವಕ್ಕೆಲ್ಲ ನಮ್ಮ ಭಾಷಾ ತರಗತಿಗಳಲ್ಲಿ ಆದ್ಯತೆಯನ್ನು ನೀಡುತ್ತಿಲ್ಲ ನಾವು. ಭಾಷಾ ತರಗತಿಗಳಲ್ಲಿ ಅಥವಾ ಭಾಷಾ ಪಠ್ಯಪುಸ್ತಕಗಳ ಬೋಧನೆ- ಕಲಿಕೆಯಲ್ಲಿ, ಅದರಲ್ಲೂ ಕನ್ನಡ ಪಠ್ಯಪುಸ್ತಕಗಳಲ್ಲಿ ಪಠ್ಯದೊಳಗಿನ ವಸ್ತುವೇ ಮುಖ್ಯವಾಗಿದೆ. ಪಠ್ಯಪುಸ್ತಕಗಳ ಕುರಿತು ನಮ್ಮ ರಾಜ್ಯದಲ್ಲಿ ನಡೆಯುವ ವಾಗ್ವಾದಗಳು ಯಾವ ಅಂಶಗಳ ಬಗೆಗೆ ಇವೆ? ವಿವಾದವಿರುವುದು ಯಾವ ಪಠ್ಯವಸ್ತುವನ್ನು ಎಷ್ಟು ಕಲಿಸಬೇಕು/ಕಲಿಸಬಾರದು ಎಂಬ ಬಗ್ಗೆಯೇ ತಾನೆ? ಯಾರು ಬರೆದ ಪಠ್ಯ ಇರಬೇಕು; ಕನ್ನಡ ಪಠ್ಯದ ವಸ್ತು ಏನಿರಬೇಕು ಎಂಬುದೇ ಚರ್ಚೆಯ ವಿಷಯ ಹೊರತು ಪಠ್ಯಪುಸ್ತಕವು ಹೇಗೆ ಕನ್ನಡ ಕಲಿಸಬೇಕು ಎನ್ನುವುದು ಚರ್ಚೆಯ ವಿಷಯವೇ ಅಲ್ಲ! ಇದು ಹೀಗಾಗಲು ಭಾಷಾತಜ್ಞರಲ್ಲಿರುವ ಧೋರಣೆಗಳು ಮತ್ತು ವೈರುಧ್ಯಗಳು ಕೂಡ ಕಾರಣ ಎನ್ನಬೇಕಿದೆ.

ಒಂದು ಉದಾಹರಣೆಯನ್ನು ನೋಡಿ ಕೆಲವು ವರ್ಷಗಳ ಹಿಂದೆ ಬರಗೂರು ರಾಮಚಂದ್ರಪ್ಪನವರ ಸಮಿತಿಯು ಪಠ್ಯಪುಸ್ತಕಗಳ ಪರಿಷ್ಕರಣೆ ಮಾಡುವಾಗ ಅವರ ಮುಂದೆ ಸರಕಾರದ ನೀತಿಯಂತೆ ಕೆಲವು ಮಾನದಂಡಗಳು/ ಉದ್ದೇಶಗಳು ಇದ್ದುದರ ಬಗ್ಗೆ ಅವರೇ ಹೇಳಿದ್ದಾರೆ. ''ಸಾಮಾಜಿಕ ಸಾಮರಸ್ಯ, ನೈತಿಕ ಮೌಲ್ಯಗಳು, ವ್ಯಕ್ತಿತ್ವವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ..'' ಇತ್ಯಾದಿ. ಇವೆಲ್ಲ ಸರಿಯೇ. ಆದರೆ ಪಠ್ಯಪುಸ್ತಕಗಳು ಈಡೇರಿಸಬೇಕಾದ, ಮುಖ್ಯ ಉದ್ದೇಶವೊಂದು ಇಲ್ಲಿ ಬಿಟ್ಟೇಹೋಗಿದೆ. ಈಗಾಗಲೇ ಸೂಚಿಸಿದಂತೆ, ಭಾಷಾವಿಷಯಗಳ ಪಠ್ಯಪುಸ್ತಕಗಳು ಆಯಾ ಭಾಷೆಯ ಕೌಶಲವನ್ನು ಮಕ್ಕಳು ಪಡೆಯುವುದಕ್ಕೆ ಸಹಾಯ ಮಾಡಬೇಕು; ಅದೇ ರೀತಿ ಸಮಾಜವಿಜ್ಞಾನ, ವಿಜ್ಞಾನ, ಗಣಿತ ಇತ್ಯಾದಿ ಪಠ್ಯಪುಸ್ತಕಗಳು ಆಯಾ ವಿ?ಯಗಳ ಜ್ಞಾನವನ್ನು ಮಕ್ಕಳಿಗೆ ಕೊಡುವಂತಿರಬೇಕು. ಇದು ಸಾಮಾನ್ಯಜ್ಞಾನ; ಇದನ್ನು ಪ್ರತ್ಯೇಕವಾಗಿ ಹೇಳುವುದೇನಿದೆ ಅಂತ ನೀವು ಕೇಳಬಹುದು. ಆದರೆ ಈ ಸಾಮಾನ್ಯಜ್ಞಾನದ ಅಂಶಕ್ಕೂ ಬೆಲೆಯಿಲ್ಲ ಅಂತ ಆಗಿರುವುದು ವರ್ತಮಾನದ ವಾಸ್ತವ.

ಒಂದು ಪಾಠ/ ಪದ್ಯ/ ಲೇಖನ/ ಕಥೆಯ ವಸ್ತುವಿಷಯವನ್ನು ನೆನಪಿಟ್ಟುಕೊಂಡು ಒಂದು ಅಂಕದ ಪ್ರಶ್ನೆಗೆ ನಾಲ್ಕರಲ್ಲೊಂದು ಉತ್ತರವನ್ನು ಆಯ್ಕೆ ಮಾಡುವಂಥ ಪ್ರಶ್ನೆಗಳಿದ್ದಾಗ ಅಥವಾ ಬುಲೆಟ್ ಪಾಯಿಂಟ್‌ಗಳ ಉತ್ತರಕ್ಕೆ ಪೂರ್ತಿ ಅಂಕ ನೀಡುವಾಗ ಭಾಷಾ ಕೌಶಲ ಬೆಳೆಯುವುದು ಹೇಗೆ?

ಇಂದು, ಸಾಹಿತ್ಯದ ಮೂಲಕ ಭಾಷಾ ಕಲಿಕೆ ಎಂಬ ತತ್ವವನ್ನು ಇಟ್ಟುಕೊಂಡು ನಾವು ಅತ್ತ ಸಾಹಿತ್ಯವನ್ನೂ ಕಲಿಸುತ್ತಿಲ್ಲ; ಇತ್ತ ಭಾಷೆಯನ್ನೂ ಕಲಿಸುತ್ತಿಲ್ಲ ಎಂಬಂತಾಗಿದೆ. ಇದರಿಂದ ಒಟ್ಟು ಪರಿಣಾಮ ಏನಾಗುತ್ತಿದೆ? ತಾನು ಕಲಿತುದನ್ನು ಅಭಿವ್ಯಕ್ತಿಸುವ ಸಾಮರ್ಥ್ಯವುಳ್ಳ ತಲೆಮಾರನ್ನು ನಾವು ಸೃಷ್ಟಿಸುತ್ತಿಲ್ಲ. ಅಂದರೆ ಭಾಷಾ ಶಿಕ್ಷಣ ಪಡೆದು ಅಭಿವ್ಯಕ್ತಿ ಸಾಮರ್ಥ್ಯದ ಮೂಲಕ ಸಬಲಗೊಳ್ಳಬೇಕಾದವರನ್ನು ಭಾಷಾ ವಿಷಯದ/ಪಠ್ಯಪುಸ್ತಕಗಳ ಕುರಿತ ನಮ್ಮ ಕಾಲದ ಧೋರಣೆಯೇ ದುರ್ಬಲಗೊಳಿಸುತ್ತಿದೆ. ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಮತ್ತು ಅಭಿವ್ಯಕ್ತಿ ಸಾಮರ್ಥ್ಯವನ್ನು ಪಡೆಯದ ಮಕ್ಕಳು ಭಾಷೇತರ ವಿಷಯಗಳಲ್ಲೂ ಹಿಂದೆ ಬೀಳುತ್ತಾರೆ.

ಹೆಚ್ಚು ಭಾಷೆಗಳು ಇದ್ದರೆ ಮಕ್ಕಳಿಗೆ ಕಷ್ಟವಾಗುತ್ತದೆ ಎನ್ನುವ ಒಂದು ಅಪಕಲ್ಪನೆಯೂ ವಿದ್ವಾಂಸರಲ್ಲಿದೆ. ಉದಾಹರಣೆಗೆ, ಒಂದೆಡೆ ''ರಾಜ್ಯದಲ್ಲಿ ದ್ವಿಭಾಷಾಸೂತ್ರವನ್ನು ಜಾರಿಗೆ ತರಬೇಕು'' ಎಂದು ಒತ್ತಾಯಿಸುವ ಪುರುಷೋತ್ತಮ ಬಿಳಿಮಲೆಯವರು ಮತ್ತೊಂದೆಡೆ ''ಬಹುಭಾಷಾ ತಜ್ಞರ ಕೊರತೆಯಿಂದ ಕನ್ನಡ ಸಂಶೋಧನಾ ಕ್ಷೇತ್ರ ಕುಸಿಯುತ್ತಿದೆ'' ಎನ್ನುತ್ತಾರೆ! ಕನ್ನಡ ಮಾತೃಭಾಷೆಯ ಮಕ್ಕಳೇ ಹತ್ತನೆಯಲ್ಲಿ ಕನ್ನಡದಲ್ಲಿ ದೊಡ್ಡ ಸಂಖ್ಯೆಯಲ್ಲಿ ಅನುತ್ತೀರ್ಣರಾಗುತ್ತಾರೆ ಎಂಬುದನ್ನು ಗಣನೆಗೆ ತೆಗೆದುಕೊಂಡರೆ, ಈ ಹೆಚ್ಚು ಭಾಷೆಗಳಿಂದ ತೊಂದರೆಯಾಗುತ್ತಿದೆ ಎನ್ನುವುದೆಷ್ಟು ದೊಡ್ಡ ತಪ್ಪುಕಲ್ಪನೆಯೆಂದು ಗೊತ್ತಾದೀತು. ನಿಜವಾದ ಸಮಸ್ಯೆ ಹೆಚ್ಚು ಭಾಷೆಗಳಿರುವುದಲ್ಲ; ಬದಲಾಗಿ ಭಾಷಾ ಪಠ್ಯಪುಸ್ತಕಗಳ ಮೂಲಕ ಭಾಷೆಗಳನ್ನು ಕಲಿಸುವ ಬದಲು ನಾವು ಪಠ್ಯದೊಳಗಿನ ವಸ್ತುಗಳನ್ನು ಕಲಿಸಲು ಯತ್ನಿಸುತ್ತಿರುವುದೇ ಆಗಿದೆ.

ಹಾಗಿದ್ದರೆ ಭಾಷಾಕೌಶಲವನ್ನು ಉತ್ತಮಪಡಿಸಲು ಇರುವ ಉಪಾಯವೇನು? ಐದನೆಯ ತರಗತಿಯವರೆಗೆ ಕೇವಲ ಗಣಿತ ಮತ್ತು ಕನ್ನಡವೂ ಸೇರಿದಂತೆ ಮೂರು ಭಾಷೆಗಳನ್ನು ಕಲಿಸಬೇಕು. ಈ ಕಲಿಕೆ ಈಗಿನಂತೆಯೇ ಪಠ್ಯಪುಸ್ತಕಗಳ ಮೂಲಕ ಹಾಗೂ ಮೌಖಿಕವಾಗಿಯೂ ಜಾಣ್ಮೆಲೆಕ್ಕ (ಗಣಿತದಲ್ಲಿ) ಕತೆ ಹೇಳುವುದು (ಕನ್ನಡ/ಭಾಷಾತರಗತಿಯಲ್ಲಿ) ಇತ್ಯಾದಿ ಚಟುವಟಿಕೆಗಳ ಮೂಲಕ ಪ್ರಾಯೋಗಿಕವಾಗಿಯೂ ಮಾಡಬೇಕು. ಅದರಿಂದ ಭಾಷೆ ಮತ್ತು ತರ್ಕದ ಕೌಶಲ ಎರಡೂ ಸಿದ್ಧಿಸುತ್ತವೆ. ಆನಂತರ ಮೇಲಿನ ತರಗತಿಗಳಲ್ಲಿ ನೀವು ಇತಿಹಾಸ, ಸಂವಿಧಾನ, ಪರಿಸರ, ಮಹಾನ್ ವ್ಯಕ್ತಿಗಳ ಜೀವನ-ಸಾಧನೆ, ವಿಜ್ಞಾನ ಹೀಗೆ ಏನನ್ನೇ ಕಲಿಸಿದರೂ ತಮ್ಮಲ್ಲಿರುವ ಭಾಷಾಕೌಶಲ ಮತ್ತು ತರ್ಕಬುದ್ಧಿಯ ಕಾರಣದಿಂದ ಅದನ್ನು ಮಕ್ಕಳು ಸುಲಭವಾಗಿ ಗ್ರಹಿಸಬಲ್ಲರು; ಎಷ್ಟೋ ವಿಚಾರಗಳನ್ನು ಹೇಳಿಕೊಡದಿದ್ದರೂ ಕಲಿಯಬಲ್ಲರು.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಅಭಿಷೇಕ್ ಸಾಹಸ ವ್ಯರ್ಥ: ಟಿ20ಯಲ್ಲಿ ಭಾರತಕ್ಕೆ ಸೋಲು

ಆರಂಭಿಕ ಆಟಗಾರ ಅಭಿಷೇಕ್ ಶರ್ಮಾ 37 ಬಾಲ್‌ಗಳಲ್ಲಿ 68 ರನ್ ಸಿಡಿಸಿದ ಹೊರತಾಗಿಯೂ ಮೆಲ್ಬೋರ್ನ್‌ನಲ್ಲಿ ಶುಕ್ರವಾರ ನಡೆದ 2ನೇ ಟಿ20 ಪಂದ್ಯದಲ್ಲಿ ಭಾರತ ಆಸ್ಟ್ರೇಲಿಯಾ ತಂಡದ ಎದುರು 4 ವಿಕೆಟ್ ಅಂತರದ ಸೋಲು ಕಂಡಿದೆ.

ಅಫ್ಘಾನಿಸ್ತಾನದ ಕಮ್ಯುನಿಸ್ಟ್ ಆಡಳಿತ

ವೀಕೆಂಡ್ ವಿತ್ ಮೋಹನ್ – ಮೋಹನ್ ವಿಶ್ವ 6

ಹೇಮಂತದ ಧಾವಂತ : ಮುಗ ಮನಸು ಮತ್ತು ಸ್ನಿಗ್ಧ ತಿನಿಸು

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ – ಡಾ. ಸಾಧನಶ್ರೀ 6

ದಾರಿದೀಪೋಕ್ತಿ

ಯಾರು ನಿಮ್ಮನ್ನು ಗೌರವಿಸುತ್ತಾರೋ ಅವರಿಗೆ ಪ್ರಾಮುಖ್ಯತೆ ನೀಡಿ. ಪ್ರೀತಿಗಿಂತ ಗೌರವವೇ ಮುಖ್ಯ ಎಂಬುದನ್ನು ಅರ್ಥ ಮಾಡಿಕೊಳ್ಳಿ. ಪ್ರೀತಿ ಮತ್ತು ಗೌರವ ಎರಡೂ ನೀಡುವವರನ್ನು ಎಂದೂ ಮರೆಯಬೇಡಿ.

ವಕ್ರತುಂಡೋಕ್ತಿ

ನಗು ಅಂದ್ರೆ ವೈಪರ್ ಇದ್ದಂತೆ. ಅದು ಮಳೆಯನ್ನು ನಿಲ್ಲಿಸುವುದಿಲ್ಲ. ಆದರೆ ಮುಂದಕ್ಕೆ ಹೋಗಲು ಅನುವು ಮಾಡಿಕೊಡುತ್ತದೆ.

ಇನ್ನಷ್ಟು ವಿವಿಗಳ ಹೆಸರು ಬದಲು

ಬೆಂಗಳೂರು: ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಿಗೆ ಹಲವು ವ್ಯಕ್ತಿಗಳ ಹೆಸರು ನಾಮಕರಣ ಮಾಡುವ ಕುರಿತು ಮುಂದಿನ ಸಚಿವ ಸಂಪುಟದಲ್ಲಿ ನಿರ್ಣಯಿಸಲು ರಾಜ್ಯ ಸರಕಾರ ತೀರ್ಮಾನಿಸಿದೆ. ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಿಗೆ ಆದಿಕವಿ ಮಹರ್ಷಿ ವಾಲ್ಮೀಕಿ, ಅಕ್ಕಮಹಾದೇವಿ, ರಾಣಿ ಚನ್ನಮ್ಮ, ಶ್ರೀ ಕೃಷ್ಣದೇವರಾಯ ಹಾಗೂ ಮನಮೋಹನ್ ಸಿಂಗ್ ಅವರ ಹೆಸರುಗಳನ್ನು ಈಗಾಗಲೇ ನಾಮಕರಣ ಮಾಡಲಾಗಿದೆ. ಸಾಮಾಜಿಕ ನ್ಯಾಯದ ಹರಿಕಾರ ವಿಶ್ವಗುರು,ಸಾಂಸ್ಕೃತಿಕ ನಾಯಕ ಬಸವಣ್ಣ, ಶೂದ್ರ ಸಿದ್ಧಾಂತದ ಹರಿಕಾರ ಕನಕದಾಸರು. ಹಿಂದುಳಿದ ಸಮುದಾಯಗಳಿಗೆ ಚೈತನ್ಯ ನೀಡಿದ ರಾಜ್ಯದ ಅಭಿವೃದ್ಧಿಗೆ ಚಲನಶೀಲತೆ ತಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಭೂ ಒಡೆತನದ ಹರಿಕಾರ ದೇವರಾಜ ಅರಸು ಅವರ ಹೆಸರುಗಳನ್ನು ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಿಗೆ ನಾಮಕರಣ ಮಾಡುವ ಅಗತ್ಯವಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಟಿಪ್ಪಣಿಯಲ್ಲಿ ತಿಳಿಸಿದ್ದಾರೆ.

ಅಮೆರಿಕ: 2,790 ಮಂದಿ ಗಡಿಪಾರು

ದೆಹಲಿ: ವಲಸೆ ನೀತಿ ಬದಲಾದ ಬಳಿಕ ಅಮೆರಿಕದಲ್ಲಿ ಅಕ್ರಮವಾಗಿ ವಾಸಿಸುತ್ತಿದ್ದ 2,790 ಭಾರತೀಯ ಪ್ರಜೆಗಳು 2025ರ ಜನವರಿಯಿಂದ ಈವರೆಗೆ ಗಡಿಪಾರಾಗಿ ಬಂದಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ವಕ್ತಾರ ರಣಧೀರ್ ಜೈಸ್ವಾಲ್ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಕೈ ಪಾಳಯದಲ್ಲಿ ನವೆಂಬರ್ ಕ್ರಾಂತಿಯ ಕಿಚ್ಚು



ಕೈನಲ್ಲಿ ಮುಗಿಯದ ಆಂತರಿಕ ಬೇಗುದಿ
ಮುಂದುವರಿದ ಜಟಾಪಟಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಾಯಕತ್ವ ಬದಲಾವಣೆ ವಿಷಯದಲ್ಲಿ ದಿನಕ್ಕೊಂದು ತಿರುವು ಪಡೆಯುತ್ತಿದ್ದು, 'ಡಿಕೆ ಸಿಎಂ ಆಗಲು ಡೇಟ್ ಫಿಕ್ಸ್' ಆಗಿದೆ ಎನ್ನುವ ವಿಷಯ ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಮತ್ತಷ್ಟು ವ್ಯಗ್ರರಾಗುವಂತೆ ಮಾಡಿದೆ. ಬದಲಾವಣೆ ವಿಷಯಕ್ಕೆ ಸಂಬಂಧಿಸಿದಂತೆ ತೇಲಿಬಂದ ಪ್ರಶ್ನೆಗೆ ಸಿದ್ದರಾಮಯ್ಯ ಅವರು ತೀಕ್ಷ್ಣವಾಗಿ ಪ್ರತಿಕ್ರಿಯಿಸುವ ಮೂಲಕ ಎಲ್ಲವೂ ಸರಿಯಾಗಿಲ್ಲ ಎನ್ನುವ ಸಂದೇಶವನ್ನು ರವಾನಿಸಿದ್ದಾರೆ.

ಡಿ.ಕೆ.ಶಿವಕುಮಾರ್ ನ.21ಕ್ಕೆ ಅಧಿಕಾರ ಸ್ವೀಕರಿಸಲಿದ್ದಾರಂತೆ ಎನ್ನುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗರಂ ಆದ ಘಟನೆ ನಡೆದಿದೆ. ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಾಧ್ಯಮದವರು ಈ ಪ್ರಶ್ನೆ ಕೇಳುತ್ತಿದ್ದಂತೆ, 'ಯಾರ್ ಹೇಳಿದ್ದು? ನಿನಗೆ ಯಾರ್ ಹೇಳಿದರು? ನಿನಗೆ ಹೆಂಗೆ ಗೊತ್ತಾಯ್ತು? ಯಾವ ಪತ್ರಿಕೆ? ಯಾವ ಪತ್ರಿಕೆ ನೋಡಿದೆ ನೀನು? ನಾನು ಎಲ್ಲಾ ಪತ್ರಿಕೆ ಓದುತ್ತೇನೆ. ಯಾವುದರಲ್ಲೂ ಬಂದಿಲ್ಲ' ಎಂದು ಅಸಮಾಧಾನ ಹೊರಹಾಕಿದರು.

ಈ ಎಲ್ಲದ ಹೊರತಾಗಿಯೂ ನಾಯಕತ್ವ ಬದಲಾವಣೆ, ಸಂಪುಟ ಪುನಾರಚನೆ ಬಗ್ಗೆ ರಾಜ್ಯ ಕಾಂಗ್ರೆಸ್‌ನಲ್ಲಿ ಪ್ರಕ್ರಿಯೆ ದಿನದಿಂದ ದಿನಕ್ಕೆ ವೇಗ ಪಡೆದುಕೊಳ್ಳುತ್ತಿದೆ. ಯಾರಿಗೂ ಮುಂದೇನಾಗಲಿದೆ ಎನ್ನುವ ಸ್ಪಷ್ಟನೆ ಇಲ್ಲವಾದರೂ, ತಮ್ಮ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳುವತ್ತ ನಾಯಕರು ತಮ್ಮ ಪ್ರಯತ್ನವನ್ನು ಮುಂದುವರೆಸಿದ್ದಾರೆ. ಈ ನಡುವೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಿದ್ದರಾಮಯ್ಯ ಆಪ್ತರೊಂದಿಗೆ ಸಭೆ ನಡೆಸಿರುವುದು, ಸತೀಶ್ ಜಾರಕಿಹೊಳಿ 'ಆಫ್ ಡಿ ರೆಕಾರ್ಡ್' ಮಾತನಾಡಿರುವುದು ರಾಜ್ಯ ಕಾಂಗ್ರೆಸ್ ಪಾಲಿಗೆ ನವೆಂಬರ್ ತಿಂಗಳು ನಿರ್ಣಾಯಕವಾಗಲಿದೆ ಎನ್ನುವುದು ಸ್ಪಷ್ಟವಾಗಿದೆ.

ಪರಂ ನಿವಾಸದಲ್ಲಿ ಬಿರುಸುಗೊಂಡ ಚಟುವಟಿಕೆ

ಈ ನಡುವೆ ಉತ್ತರಾಧಿಕಾರ ಬದಲಾವಣೆಯ ಚರ್ಚೆಗೆ ಮುನ್ನಲೆಗೆ ಬಂದಾಗಿನಿಂದ ದಲಿತ ಸಿಎಂ ಕೂಗನ್ನು ದಲಿತ ಸಚಿವರು ಮುಂದಿಟ್ಟಿದ್ದಾರೆ. ಗೃಹ ಸಚಿವ ಡಾ.ಜಿ. ಪರಮೇಶ್ವರ ಅವರು ಎಲ್ಲವೂ 'ಹೈಕಮಾಂಡ್ ತೀರ್ಮಾನ' ಎನ್ನುತ್ತಿದ್ದರೂ ತಮ್ಮ ದೇ ಆದ ರಣತಂತ್ರವನ್ನು ರೂಪಿಸುತ್ತಿದ್ದಾರೆ. ಸಿದ್ದರಾಮಯ್ಯ ಅವರ ಪರವಾಗಿ ಬ್ಯಾಟ್ ಬೀಸುತ್ತಿದ್ದರೂ, ಅದು ಸಾಧ್ಯವಾಗದಿದ್ದರೆ 'ದಲಿತ' ಕೋಟದಲ್ಲಿ ತಮ್ಮನ್ನು ಪರಿಗಣಿಸಬೇಕು ಎನ್ನುವ ಲೆಕ್ಕಾಚಾರದಲ್ಲಿ ತಂತ್ರಗಾರಿಕೆ ರೂಪಿಸುತ್ತಿದ್ದಾರೆ ಎನ್ನುವುದು ಸ್ಪಷ್ಟ.

ಬಿಹಾರ ಚುನಾವಣೆ ಮುಗಿಯುವ ತನಕ ಯಾವುದೇ ಪ್ರತಿಕ್ರಿಯೆ ನೀಡಬೇಡಿ ಎನ್ನುವ ಹೈಕಮಾಂಡ್ ಎಚ್ಚರಿಕೆಯ ಹೊರತಾಗಿಯೂ ರಾಜ್ಯ ನಾಯಕರು ಅಧಿಕಾರ ಹಸ್ತಾಂತರ ಹಾಗೂ ಸಚಿವ ಸಂಪುಟ ಪುನಾರಚನೆಯ ವಿಷಯದಲ್ಲಿ ಚರ್ಚೆಗಳನ್ನು ಮುಂದುವರೆಸಿದ್ದಾರೆ. ಕೆಲ ಸಚಿವರು ಈಗಾಗಲೇ ದೆಹಲಿಗೆ ಪ್ರಯಾಣಿಸಲು ಸಿದ್ಧತೆ ನಡೆಸಿಕೊಂಡಿದ್ದು, ಬಿಹಾರ ಚುನಾವಣೆಯ ಬಹಿರಂಗ ಪ್ರಚಾರ ಮುಕ್ತಾಯವಾಗುತ್ತಿದ್ದಂತೆ ದೆಹಲಿಗೆ ತೆರಳುವುದು ಖಚಿತ ಎನ್ನಲಾಗಿದೆ.

ನವೆಂಬರ್ ಕ್ರಾಂತಿ ಏನು ಇಲ್ಲ ಎಲ್ಲವೂ ಬಿಜೆಪಿ ಊಹೆ. ಕರ್ನಾಟಕದಲ್ಲಿ ಮುಖ್ಯಮಂತ್ರಿ ಹುದ್ದೆ ಸದ್ಯ ಖಾಲಿಯಿಲ್ಲ. ಡಿ.ಕೆ.ಶಿವಕುಮಾರ್ ಅವರು ನಮ್ಮ ನಾಯಕರು. ಅವರೂ ಮುಖ್ಯಮಂತ್ರಿಗಳಾಗಲಿ. ಆದರೆ 2028ರ ನಂತರ ಪ್ರಯತ್ನಿಸಲಿ.

-ಜಮೀರ್ ಅಹ್ಮದ್, ಸಚಿವ

ಡಿ.ಕೆ.ಶಿವಕುಮಾರ್ ಡೆಡ್‌ಲೈನ್ ಕೊಟ್ಟಿರುವ ವಿಷಯ ನನಗೆ ಗೊತ್ತಿಲ್ಲ. ಅದು ದೊಡ್ಡವರ ವಿಷಯ. ಸಂಪುಟ ಪುನಾರಚನೆ, ಡೆಡ್‌ಲೈನ್ ವಿಷಯಗಳು ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷ ಹಾಗೂ ಹೈಕಮಾಂಡ್‌ಗೆ ಗೊತ್ತಿರುವ ವಿಷಯ. ಈ ಎಲ್ಲ ತೀರ್ಮಾನಗಳು ಹೈಕಮಾಂಡ್ ಹಂತದಲ್ಲಿ ತೀರ್ಮಾನವಾಗಲಿದೆ.

-ಎಚ್.ಸಿ. ಮಹದೇವಪ್ಪ, ಸಚಿವ

ಹಿಗ್ಗುತ್ತಲೇ ಇದೆ ಸಚಿವ ಆಕಾಂಕ್ಷಿಗಳ ಪಟ್ಟಿ

ಈ ಎಲ್ಲ ರಾಜಕೀಯ ಗೊಂದಲದ ಹೊರತಾಗಿಯೂ ಹಲವು ಸಚಿವಾಕಾಂಕ್ಷಿಗಳು ಪುನಾರಚನೆಯ ಗುಂಗಿನಲ್ಲಿದ್ದಾರೆ. ಒಂದಕ್ಕಿಂತ ಹೆಚ್ಚು ಬಾರಿ ಗೆದ್ದಿರುವ 40ಕ್ಕೂ ಹೆಚ್ಚು ಶಾಸಕರು ಈ ಬಾರಿ ಸಚಿವ ಸ್ಥಾನ ಸಿಗಲಿದೆ ಎನ್ನುವ ಆಸೆಯಲ್ಲಿದ್ದಾರೆ. ಅದರಲ್ಲೂ 35ಕ್ಕೂ ಹೆಚ್ಚು ಶಾಸಕರು ಜಾತಿ, ಹಿರಿತನ ಹಾಗೂ ಪ್ರಾದೇಶಿಕವಾಗಿ ಅವಕಾಶ ಸಿಗಬೇಕು ಎಂದು ಹೈಕಮಾಂಡ್ ಮೇಲೆ ಒತ್ತಡ ಹೇರುವ ಪ್ರಯತ್ನವನ್ನು ಮುಂದುವರೆಸಿದ್ದಾರೆ. ಇದರೊಂದಿಗೆ ಈಗಾಗಲೇ ನಿಗಮ ಮಂಡಳಿ ಅಧ್ಯಕ್ಷ ಸ್ಥಾನದಲ್ಲಿರುವ ಕೆಲವರು ಸಹ, ಸಚಿವ ಸ್ಥಾನದ ಮೇಲೆ ಕಣ್ಣಿಟ್ಟಿರುವುದರಿಂದ ಮುಂದಿನ ದಿನದಲ್ಲಿ ಸಚಿವಾಕಾಂಕ್ಷಿಗಳ ಪಟ್ಟಿ ಮತ್ತಷ್ಟು ಬೆಳೆದರೂ ಅಚ್ಚರಿಯಿಲ್ಲ ಎನ್ನುವುದು ಸ್ಪಷ್ಟ.

ಪರವಾನಗಿ ಉಲ್ಲಂಘಿಸಿದ ಕಟ್ಟಡಗಳಿಗೆ ದಂಡ ಪಾವತಿಸಿ ಪರಿಷ್ಕೃತ ನಕ್ಷೆ ವಿತರಣೆ
ನಕ್ಷೆ ಉಲ್ಲಂಘನೆಗೆ ದಂಡಸಹಿತ ಸಕ್ರಮ

ಬೆಂಗಳೂರು: ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ಮಾಡಲು ಕಟ್ಟಡ ಪರವಾನಗಿ ಪಡೆದು ಬಳಿಕ ಪರವಾನಗಿ ಉಲ್ಲಂಘಿಸಿ ನಿರ್ಮಾಣ ಮಾಡ ಲಾದ ಕಟ್ಟಡಗಳಿಗೆ ದಂಡ ಪಾವತಿಸಿಕೊಂಡು ಪರಿಷ್ಕೃತ ನಕ್ಷೆ ನೀಡುವ ಸಂಬಂಧ ರಾಜ್ಯ ಸರಕಾರ ಆದೇಶಿಸಿದೆ.

ಕೆಲವೇ ದಿನಗಳ ಹಿಂದೆ ಇ-ಖಾತೆ, ಎ ಖಾತೆ ಸೇರಿದಂತೆ ವಿವಿಧ ರೀತಿಯ ಕಟ್ಟಡ ಪರವಾನಗಿ ಪಡೆದು ಸೆಟ್‌ಬ್ಯಾಕ್‌ಗಳಲ್ಲಿ ಶೇ.15ರ ಮಿತಿಯೊಳಗೆ ಉಲ್ಲಂಘನೆ ಮಾಡಿದ್ದಲ್ಲಿ ಅಂತಹ ಕಟ್ಟಡಗಳಿಗೆ ನಗರ ಸ್ಥಳೀಯ ಸಂಸ್ಥೆವಾರು ನಿಗದಿತ ದಂಡ ಪಾವತಿಸಿಕೊಂಡು ಪರಿಷ್ಕೃತ ನಕ್ಷೆ ಮಂಜೂರು ಮಾಡಲು ಸೂಚಿಸಲಾಗಿದೆ. ಅದರಂತೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ವಸತಿ, ಕೈಗಾರಿಕೆ, ಇತರೆ ಉದ್ದೇಶದ ಕಟ್ಟಡಕ್ಕೆ ಪ್ರತಿ ಚದರ ಮೀಟರ್‌ಗೆ 1 ಸಾವಿರ ರು. ವಾಣಿಜ್ಯ ಕಟ್ಟಡಕ್ಕೆ 1,500 ರು., ಪುರಸಭೆ ವ್ಯಾಪ್ತಿಯಲ್ಲಿ ಕ್ರಮವಾಗಿ 1,200 ರು. ಮತ್ತು 1,800 ರು., ನಗರ ಸಭೆಗಳ ವ್ಯಾಪ್ತಿಯಲ್ಲಿ ಕ್ರಮವಾಗಿ 1,500 ರು. ಮತ್ತು 2,250 ರು., ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಕ್ರಮವಾಗಿ 2 ಸಾವಿರ ರು. ಮತ್ತು 3 ಸಾವಿರ ರು. ದಂಡ ನಿಗದಿಗೊಳಿಸಲಾಗಿದೆ. →10

ದಂಡದ ಪ್ರಮಾಣ ಹೇಗೆ..?

ಪಟ್ಟಣಪಂಚಾಯಿತಿ ವ್ಯಾಪ್ತಿ
- ವಸತಿ, ಕೈಗಾರಿಕಾ ಕಟ್ಟಡಕ್ಕೆ ಪ್ರತಿ ಚ.ಮೀಗೆ 1,000 ರು. ದಂಡ
- ವಾಣಿಜ್ಯ ಕಟ್ಟಡಕ್ಕೆ ಪ್ರತಿ ಚ.ಮೀಗೆ 1,500 ರು. ದಂಡ ನಿಗದಿ

ಪುರಸಭೆ ವ್ಯಾಪ್ತಿ
- ವಸತಿ, ಕೈಗಾರಿಕಾ ಕಟ್ಟಡಕ್ಕೆ ಪ್ರತಿ ಚ.ಮೀಗೆ 1,200 ರು. ದಂಡ
- ವಾಣಿಜ್ಯ ಕಟ್ಟಡಕ್ಕೆ ಪ್ರತಿ ಚ.ಮೀಗೆ 1,800 ರು. ದಂಡ

ನಗರಪಾಲಿಕೆ ವ್ಯಾಪ್ತಿ
- ವಸತಿ, ಕೈಗಾರಿಕಾ ಕಟ್ಟಡಕ್ಕೆ ಪ್ರತಿ ಚ.ಮೀಗೆ 1,500 ರು. ದಂಡ
- ವಾಣಿಜ್ಯ ಕಟ್ಟಡಕ್ಕೆ ಪ್ರತಿ ಚ.ಮೀಗೆ 2,250 ರು. ದಂಡ

ಮಹಾನಗರ ಪಾಲಿಕೆ ವ್ಯಾಪ್ತಿ
- ವಸತಿ, ಕೈಗಾರಿಕಾ ಕಟ್ಟಡಕ್ಕೆ ಪ್ರತಿ ಚ.ಮೀಗೆ 2,000 ರು. ದಂಡ ನಿಗದಿ
- ವಾಣಿಜ್ಯ ಕಟ್ಟಡಕ್ಕೆ ಪ್ರತಿ ಚ.ಮೀಗೆ 3,000 ರು. ದಂಡ

ಎಂಇಎಸ್‌ಗೆ ನಿರ್ಬಂಧ

ಬೆಳಗಾವಿ: ಗಡಿ ಜಿಲ್ಲೆ ಬೆಳಗಾವಿಯಲ್ಲಿ ನಡೆಯುವ ಕರ್ನಾಟಕ ರಾಜ್ಯೋತ್ಸವ ವೇಳೆ ಕರಾಳ ದಿನ ಆಚರಿಸಲು

ರಾಜ್ಯಕ್ಕೆ ಬರುವ ಎಂಇಎಸ್ ಪುಂಡರಿಗೆ ನಿರ್ಬಂಧ ವಿಧಿಸಿ ಜಿಲ್ಲಾಡಳಿತ ಆದೇಶ ಹೊರಡಿಸಿದೆ. ಮಹಾರಾಷ್ಟ್ರದ ಶಿವಸೇನೆ ಸಂಸದ ಧೈರ್ಯಶೀಲ ಮಾನೆ, ಶಿವಸೇನೆ ಕೊಲ್ಹಾಪುರ ಜಿಲ್ಲಾಧ್ಯಕ್ಷ ವಿಜಯ್ ದೇವಣೆ ಸೇರಿದಂತೆ ಎಂಇಎಸ್ ಪುಂಡರಿರಾಜ್ಯದ ಗಡಿ ಪ್ರವೇಶಕ್ಕೆ ನಿರ್ಬಂಧಿಸಿ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಆದೇಶ ಹೊರಡಿಸಿದ್ದಾರೆ. ನಗರದಲ್ಲಿ ಎಂಇಎಸ್ ನಡೆಸುವ ಕರಾಳ ದಿನಾಚರಣೆಗೂ ಜಿಲ್ಲಾಡಳಿತ ಅವಕಾಶ ನಿರಾಕರಿಸಿದೆ.

ಇಂಡಿಯಾ ಪ್ರಣಾಳಿಕೆ

ಪಟನಾ: ಬಿಜೆಪಿ-ಜೆಡಿಯು ನೇತೃತ್ವದ ಎನ್‌ಡಿಎ ಮೈತ್ರಿಕೂಟ ಶುಕ್ರವಾರ ಬಿಹಾರ ವಿಧಾನಸಭೆ ಚುನಾವಣೆಗೆ

ಪ್ರಣಾಳಿಕೆ ಬಿಡುಗಡೆ ಮಾಡಿದೆ. ರಾಜ್ಯದ ಒಂದು ಕೋಟಿ ಯುವಜನರಿಗೆ ಉದ್ಯೋಗ, ಒಂದು ಕೋಟಿ 'ಲಕ್ಷಪತಿ ದೀದಿ' ಸೃಷ್ಟಿ, ನಾಲ್ಕು ನಗರಗಳಲ್ಲಿ ಮೆಟ್ರೊ ರೈಲು ಸೇವೆ ಮತ್ತು ಏಳು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳ ನಿರ್ಮಾಣದ ಭರವಸೆಯನ್ನೂ ಪ್ರಣಾಳಿಕೆಯಲ್ಲಿ ಘೋಷಿಸಲಾಗಿದೆ. ಅಲ್ಲದೇ ರಾಜ್ಯದ ವಿವಿಧೆಡೆ 7 ಎಕ್ಸ್‌ಪ್ರೆಸ್ ವೇಗಳು, 10 ಕೈಗಾರಿಕಾ ಪಾರ್ಕ್‌ಗಳನ್ನು ನಿರ್ಮಿಸಲಾಗುವುದು ಎಂದೂ ಭರವಸೆ ನೀಡಲಾಗಿದೆ.

ಐವರಿಗೆ ಮರಣದಂಡನೆ

ಹೈದರಾಬಾದ್: 2015ರಲ್ಲಿ ಚಿತ್ತೂರ್‌ನ ಮಾಜಿ ಮೇಯರ್ ಕಟಾರಿ ಅನುರಾಧ ಮತ್ತು ಅವರ ಪತಿ ಕಟಾರಿ ಮೋಹನ್

ಅವರನ್ನು ಹತ್ಯೆಗೈದ ಐದು ಮಂದಿ ಆರೋಪಿಗಳಿಗೆ ಆಂಧ್ರಪ್ರದೇಶದ ನ್ಯಾಯಾಲಯ ಶುಕ್ರವಾರ ಮರಣ ದಂಡನೆ ಶಿಕ್ಷೆ ವಿಧಿಸಿದೆ. 2015ರ ನವೆಂಬರ್ 17ರಂದು ಚಿತ್ತೂರು ನಗರಸಭೆ ಕಚೇರಿಯೊಳಗೆ ದಂಪತಿಯನ್ನು ಕೊಲೆ ಮಾಡಲಾಗಿತ್ತು. ಪ್ರಧಾನ ಆರೋಪಿಯನ್ನು ಮೋಹನ್ ಅವರ ಸೋದರಳಿಯ ಶ್ರೀರಾಮ್ ಚಂದ್ರಶೇಖರ್ ಎಂದು ಗುರುತಿಸಲಾಗಿದೆ. ಈ ಕೃತ್ಯ ಚಿತ್ತೂರು ಜಿಲ್ಲೆಯಲ್ಲಿ ಬಾರೀ ಸಂಚಲನ ಮೂಡಿಸಿತ್ತು.

ಅಜರುದ್ದೀನ್ ಸಚಿವ

ಹೈದರಾಬಾದ್: ಮಾಜಿ ಭಾರತೀಯ ಕ್ರಿಕೆಟ್ ನಾಯಕ ಮತ್ತು ಹಿರಿಯ ಕಾಂಗ್ರೆಸ್ ನಾಯಕ ಮೊಹಮ್ಮದ್

ಅಜರುದ್ದೀನ್ ತೆಲಂಗಾಣ ಸಚಿವ ಸಂಪುಟದಲ್ಲಿ ಸಚಿವರಾಗಿ ಶುಕ್ರವಾರ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ರಾಜ್ಯಪಾಲ ಜಿಷ್ಣುದೇವ್ ವರ್ಮಾ ರಾಜಭವನದಲ್ಲಿ ಅವರಿಗೆ ಪ್ರಮಾಣ ವಚನ ಬೋಧಿಸಿದ್ದು, 16ನೇ ಸಚಿವರಾಗಿ ರೇವಂತ್ ರೆಡ್ಡಿಯವರ ಸಚಿವ ಸಂಪುಟಕ್ಕೆ ಸೇರ್ಪಡೆಗೊಂಡರು. ತೆಲಂಗಾಣ ಸಚಿವ ಸಂಪುಟದ ಬಹುತೇಕ ಎಲ್ಲಾ ಸಚಿವರು, ಅಜರುದ್ದೀನ್ ಅವರ ಪುತ್ರ ಮತ್ತು ಪುತ್ರಿ ಮತ್ತು ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ಹಿಂಸೆಗೆ 700 ಬಲಿ

ಆರುಷಾ: ಪೂರ್ವ ಆಫ್ರಿಕಾ ಖಂಡದ ದೇಶ ತಾಂಜಾನಿಯಾದಲ್ಲಿ ಚುನಾವಣೆಗೆ ಸಂಬಂಧಿಸಿದಂತೆ ಮೂರು

ದಿನಗಳಿಂದ ಹಿಂಸಾಚಾರ, ಪ್ರತಿಭಟನೆ ನಡೆಯುತ್ತಿದೆ. ಮೂರು ದಿನಗಳ ಹಿಂಸಾಚಾರದಲ್ಲಿ 700 ಜನರು ಹತರಾಗಿದ್ದಾರೆ ಎಂದು ದೇಶದ ಪ್ರಮುಖ ಪ್ರತಿಪಕ್ಷ 'ಛಡೆಮಾ' ಶುಕ್ರವಾರ ಹೇಳಿದೆ. ದಾರ್ ಎ ಸಲಾಮ್ ಭಾಗದಲ್ಲಿ 350 ಮಂದಿ ಹಾಗೂ ಮೋಂಝಾ ಭಾಗದಲ್ಲಿ 200ಕ್ಕೂ ಅಧಿಕ ಜನರು ಪ್ರತಿಭಟನೆ, ಹೋರಾಟಗಳಲ್ಲಿ ಸಾವಿಗೀಡಾಗಿದ್ದಾರೆ. ಕನಿಷ್ಠ 700ಕ್ಕೂ ಅಧಿಕ ಮಂದಿ ಸಾವಿಗೀಡಾಗಿದ್ದಾರೆ ಎಂದು 'ಛಡೆಮಾ' ಪಕ್ಷದ ವಕ್ತಾರ ಹೇಳಿಕೆ ನೀಡಿದ್ದಾರೆ.

ನವೆಂಬರ್‌ನಲ್ಲಿಯೇ ರಾಗಿ, ಭತ್ತ ನೋಂದಣಿ ಆರಂಭ
ಧಾನ್ಯ ಖರೀದಿಗೆ ಚಾಲನೆ

ಬೆಂಗಳೂರು: ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆಯಲ್ಲಿ ರೈತರಿಂದ ಧಾನ್ಯಗಳನ್ನು ಖರೀದಿಸಲು ಆಹಾರ ಇಲಾಖೆ, ಈ ಬಾರಿ ಮುಂಚಿತವಾಗಿ ರಾಗಿ, ಭತ್ತ ನೋಂದಣಿ ಕೇಂದ್ರ ಆರಂಭಿಸಿದೆ.

ರಾಜ್ಯಾದ್ಯಂತ ಈವರೆಗೆ 95 ನೋಂದಣಿ ಕೇಂದ್ರಗಳು ತೆರೆದಿವೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಕೇಂದ್ರಗಳು ತೆರೆಯಲಿವೆ. ಇಲಾಖೆ ಅಧೀನದ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ, ಪ್ರಸಕ್ತ ಸಾಲಿನಲ್ಲಿ 6 ಲಕ್ಷ ಮೆ.ಟನ್ ರಾಗಿ, 3 ಲಕ್ಷ ಮೆ.ಟನ್ ಭತ್ತ ಮತ್ತು ಮೂರು ಲಕ್ಷ ಮೆ.ಟನ್ ಬಿಳಿಜೋಳ ಸೇರಿ ಒಟ್ಟು 12 ಲಕ್ಷ ಮೆ.ಟನ್ ಖರೀದಿಗೆ ಗುರಿ ಹಾಕಿಕೊಂಡಿದೆ. ಬೆಳೆ ಸಮೀಕ್ಷೆಯಾಗಿರುವ ರೈತರು, ತಮ್ಮ ಆಧಾರ್ ಮಾಹಿತಿ ನೀಡಿ ನೋಂದಣಿ ಕೇಂದ್ರದಲ್ಲಿ ಹೆಸರು ನೋಂದಾಯಿಸಿಕೊಳ್ಳಬಹುದು. ಯೋಜನೆಯಡಿ ಓರ್ವ ರೈತ ಗರಿಷ್ಠ 50 ಕ್ವಿಂಟಾಲ್‌ವರೆಗೆ ರಾಗಿ ಮಾರಾಟಕ್ಕೆ ಅವಕಾಶ ಇರಲಿದೆ. →10

ಮುಖ್ಯಾಂಶಗಳು

- ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ನೇತೃತ್ವದ ಜಾಗೃತಿ ದಳ ಸಭೆಯಲ್ಲಿ ಖರೀದಿ ಕೇಂದ್ರ, ವೇಳಾಪಟ್ಟಿ ಪ್ರಕಟ
- ಪ್ರತಿ ಎಕರೆಗೆ 10 ಕ್ವಿಂಟಾಲ್‌ನಂತೆ 5 ಎಕರೆಗೆ 50 ಕ್ವಿಂಟಾಲ್‌ವರೆಗೆ ಖರೀದಿ
- ನವೆಂಬರ್ 2ನೇ ವಾರದಿಂದ ಭತ್ತ ಖರೀದಿ, 2026ರ ಜನವರಿಯಿಂದ ರಾಗಿ, ಜೋಳ ಖರೀದಿ ಪ್ರಕ್ರಿಯೆ ಶುರು
- ಸೂಕ್ತ ಸಂದರ್ಭದಲ್ಲಿ ಖರೀದಿ ಕೇಂದ್ರಗಳ ಆರಂಭದಿಂದ ರೈತರ ಆದಾಯ ಭದ್ರ
- ಬೆಲೆ ಕುಸಿತ ಸಂದರ್ಭದಲ್ಲಿ ಖರೀದಿ ಕೇಂದ್ರ ತೆರೆದರೆ ಇನ್ನಷ್ಟು ಅನುಕೂಲ

ಶೃಂಗೇರಿಯಲ್ಲಿ ಆನೆ, ಸರಗೂರಿನಲ್ಲಿ ಹುಲಿ ದಾಳಿ
ವನ್ಯಜೀವಿ ದಾಳಿಗೆ 3 ಬಲಿ

ಚಿಕ್ಕಮಗಳೂರು/ಮೈಸೂರು: ರಾಜ್ಯದಲ್ಲಿ ಶುಕ್ರವಾರ ಮೂವರು ಒಂದೇ ದಿನ ವನ್ಯಜೀವಿಗಳಿಗೆ

ಬಲಿಯಾಗಿದ್ದಾರೆ. ಸೊಪ್ಪು ತರಲು ಹೋಗಿದ್ದ ಇಬ್ಬರು ಆನೆ ದಾಳಿಗೆ ಬಲಿಯಾದ ಘಟನೆ ಶೃಂಗೇರಿ ತಾಲೂಕಿನಲ್ಲಿ ನಡೆದಿದೆ. ಇದೇ ವೇಳೆ ಮೈಸೂರಿನ ಸರಗೂರಿನಲ್ಲಿ ಮತ್ತೊಬ್ಬ ರೈತ ಹುಲಿಗೆ ಆಹಾರವಾಗಿದ್ದಾನೆ.

ಶೃಂಗೇರಿಯ ಕೆರೆಕಟ್ಟೆ ಸಮೀಪದ ಕೆರೆಮನೆ ಗ್ರಾಮದಲ್ಲಿ ಹರೀಶ್ ಹಾಗೂ ಉಮೇಶ್ ಎಂಬವರು ಆನೆ ತುಳಿತಕ್ಕೆ ಸಿಲುಕಿ ಪ್ರಾಣಕಳೆದುಕೊಂಡಿದ್ದಾರೆ. ಕೊಟ್ಟಿಗೆಗೆ ಸೊಪ್ಪು ತರಲು ಹೋಗಿದ್ದ ಸಂದರ್ಭದಲ್ಲಿ ಮೊದಲು ವ್ಯಕ್ತಿಯೊಬ್ಬನ ಮೇಲೆ ಆನೆ ದಾಳಿ ಮಾಡಿದೆ. ಮನೆಯಿಂದ ಸ್ವಲ್ಪ ದೂರದಲ್ಲಿ ನಾಯಿ ಏಕೆ ಬೊಗಳುತ್ತಿದೆ ಎಂದು ನೋಡಲು ಹೋಗಿದ್ದ ಮತ್ತೊಬ್ಬ ವ್ಯಕ್ತಿಯ ಮೇಲೂ ಆನೆ ದಾಳಿ ಮಾಡಿ ಕೊಂದು ಹಾಕಿದೆ. →10

ನಾಗರಹೊಳೆ ಸಫಾರಿಗೆ ನಿರ್ಬಂಧ

ಬೀದರ್: ನಾಗರಹೊಳೆ ಸಫಾರಿ ಮೇಲೆ ನಿರ್ಬಂಧ ಹೇರಲಾಗುವುದು ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಹೇಳಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಜೆ ಆರು ಗಂಟೆ ನಂತರವೂ ಸಫಾರಿ ಮಾಡುತ್ತಿದ್ದರಿಂದ ವನ್ಯ ಜೀವಿಗಳಿಗೆ ತೊಂದರೆಯಾಗಿ, ಪ್ರಾಣಿಗಳು ಹೊರಗಡೆ ಬರುತ್ತಿದ್ದವು. ಹೀಗಾಗಿ ನಾನು ದಿನದ ಕೊನೆಯ ಸಫಾರಿಯನ್ನು ಶಾಶ್ವತವಾಗಿ ನಿಲ್ಲಿಸುತ್ತಿದ್ದೇವೆ ಎಂದು ತಿಳಿಸಿದ್ದಾರೆ. 10 ವರ್ಷಗಳ ದಾಖಲೆಯ ಪ್ರಕಾರ 45ರಿಂದ 60 ಜನರು ವನ್ಯ ಜೀವಿ ಸಂಘರ್ಷದಲ್ಲಿ ಮೃತಪಟ್ಟಿದ್ದಾರೆ ಎಂದು ತಿಳಿಸಿದರು.

ಹೈಕೋರ್ಟ್ ಆದೇಶದ ವಿರುದ್ಧ ಅಪೀಲಿಗೆ ಚಿಂತನೆ
ಎಸ್‌ಐಟಿ ತನಿಖೆಗೆ ತಡೆ

ಬೆಂಗಳೂರು: ಧರ್ಮಸ್ಥಳ ಪ್ರಕರಣದಲ್ಲಿ ಎಸ್‌ಐಟಿ ತನಿಖೆಗೆ ಮಧ್ಯಂತರ ತಡೆ ನೀಡಿರುವ ಹೈಕೋರ್ಟ್



ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ರಾಜ್ಯ ಸರಕಾರ ನಿರ್ಧರಿಸಿದೆ.

ಮೇಲ್ಮನವಿಯನ್ನು ಹೈಕೋರ್ಟ್ ದ್ವಿಸದಸ್ಯ ಪೀಠಕ್ಕೆ ಸಲ್ಲಿಸಬೇಕೆ ಅಥವಾ ಸುಪ್ರೀಂಕೋರ್ಟ್‌ಗೆ ಸಲ್ಲಿಸಬೇಕೆ ಎಂಬುದರ ಕುರಿತು ಕಾನೂನು ತಂಡದೊಂದಿಗೆ ಸಮಾಲೋಚಿಸಿ ತೀರ್ಮಾನಿಸಲಾಗುವುದು ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿದ ಅವರು, ಹೈಕೋರ್ಟ್ ಮಧ್ಯಂತರ ತಡೆ ನೀಡಿರುವ ಆದೇಶದ ಪ್ರತಿಯನ್ನು ಪೊಲೀಸರು ಪಡೆದಿದ್ದಾರೆ. ಇದರ ವಿರುದ್ಧ ಮೇಲ್ಮನವಿ ಸಲ್ಲಿಸಲಾಗುವುದು. ಎಸ್‌ಐಟಿ ತನಿಖೆ ಸರಿಯಾದ ದಿಕ್ಕಿನಲ್ಲಿ ನಡೆಯುತ್ತಿದೆ. ಧರ್ಮಸ್ಥಳ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಹಾಗೂ ಬೆಳ್ತಂಗಡಿ ಜೆಎಂಎಫ್‌ಸಿ ಕೋರ್ಟ್‌ನಲ್ಲಿನ ನ್ಯಾಯಿಕ ವಿಚಾರಣೆ ಕೈ ಬಿಡುವಂತೆ ಕೋರಿ ಸೌಜನ್ಯಪರ ಹೋರಾಟಗಾರರಾದ ಗಿರೀಶ್ ಮಟ್ಟಣ್ಣವರ್, ಮಹೇಶ್ ಶೆಟ್ಟಿ ತಿಮರೋಡಿ, ಟಿ.ಜಯಂತ್ ಮತ್ತು ವಿಠಲ ಗೌಡ ಅವರು ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು. ಹೈಕೋರ್ಟ್ ಏಕಸದಸ್ಯ ಪೀಠ ವಿಚಾರಣೆಗೆ ಮಧ್ಯಂತರ ತಡೆ ನೀಡಿ ಆದೇಶ ಹೊರಡಿಸಿತ್ತು.

ಎಸ್‌ಐಟಿ ಮುಖ್ಯ ತನಿಖಾಧಿಕಾರಿ ಜಿತೇಂದ್ರ ಕುಮಾರ್ ದಯಾಮ ಅರ್ಜಿದಾರರಿಗೆ ನೋಟಿಸ್ ಜಾರಿಗೊಳಿಸಿದ್ದರು. ಆದರೆ ಹಲವು ನೋಟಿಸ್ ನೀಡಿದ ಹೊರತಾಗಿಯೂ ತಿಮರೋಡಿ ಮತ್ತು ಇತರರು ಹಾಜರಾಗಿರಲಿಲ್ಲ. ಈ ಸಂದರ್ಭದಲ್ಲಿ ನಾಲ್ವರಿಗೂ ಅಂತಿಮ ನೋಟಿಸ್ ನೀಡಿ, ಹಾಜರಾಗದಿದ್ದರೆ ಬಂಧನದ ಎಚ್ಚರಿಕೆ ನೀಡಲಾಗಿತ್ತು. ಇದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೊರೆ ಹೋಗಿದ್ದರು.

ರೇಣುಕಾಸ್ವಾಮಿ ಹತ್ಯೆ: ಕೊನೆಗೂ ವಿಚಾರಣೆಗೆ ದಿನ ನಿಗದಿ
ನ.3ರಂದು ದೋಷಾರೋಪ

ಬೆಂಗಳೂರು: ರೇಣುಕಾಸ್ವಾಮಿ ಹತ್ಯೆ ಪ್ರಕರಣದ ಆರೋಪಿಗಳ ವಿರುದ್ಧ ದೋಷಾರೋಪ ನಿಗದಿಯನ್ನು ನವೆಂಬರ್ 3ಕ್ಕೆ ಮುಂದೂಡಿ ಬೆಂಗಳೂರಿನ 57ನೇ ಸಿಸಿಹೆಚ್ ನ್ಯಾಯಾಲಯ ಆದೇಶಿಸಿದೆ.

ದರ್ಶನ್ ಪರ ವಕೀಲರ ಮನವಿ ಆಲಿಸಿದ ನ್ಯಾಯಾಲಯ ನವೆಂಬರ್ 3ರಂದು ವಿಚಾರಣೆ ಮುಂದೂಡಿದೆ. ಪ್ರಕರಣದಲ್ಲಿ ದೋಷಾರೋಪ ನಿಗದಿಪಡಿಸಲು ದರ್ಶನ್, ಪವಿತ್ರಾಗೌಡ ಸೇರಿದಂತೆ 6 ಆರೋಪಿಗಳನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ಶುಕ್ರವಾರ ಕೋರ್ಟ್‌ಗೆ ಹಾಜರುಪಡಿಸಲಾಗಿತ್ತು.

ವಿಚಾರಣೆ ಆರಂಭವಾಗುತ್ತಿದ್ದಂತೆ ವಾದ ಆರಂಭಿಸಿದ ದರ್ಶನ್ ಪರ ವಕೀಲರಾದ ಸುನೀಲ್, ತಮ್ಮ ಕಕ್ಷಿದಾರರಿಗೆ ಯಾವುದೇ ಸೂಚನೆಗಳನ್ನು ನೀಡಿಲ್ಲ. ಆದ್ದರಿಂದ ಖುದ್ದಾಗಿ ಹಾಜರುಪಡಿಸಲು ಅನುಮತಿ ಕೊಡಬೇಕು. ಟ್ರಯಲ್‌ಗೂ ಮುನ್ನ 2 ವಾರ ಕಾಲಾವಕಾಶ ನೀಡಬೇಕು ಎಂದು ಮನವಿ ಮಾಡಿದರು.

ವಕೀಲರ ಭೇಟಿಗೆ ಅವಕಾಶ ಕಲ್ಪಿಸಲು ಸೂಚನೆ: ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಲಯ, ಜೈಲಿಗೆ ತೆರಳಿ ಸೂಚನೆಗಳನ್ನು ನೀಡುವಂತೆ ದರ್ಶನ್ ಪರ ವಕೀಲರಿಗೆ ಸೂಚಿಸಿತು. ಅಲ್ಲದೇ, ವಕೀಲರ ಭೇಟಿಗೆ ಅವಕಾಶ ಕಲ್ಪಿಸುವಂತೆ ಜೈಲು ಅಧಿಕಾರಿಗಳಿಗೆ ನಿರ್ದೇಶನ ನೀಡಿತು. ದೋಷಾರೋಪ ದಿನಾಂಕ ನಿಗದಿಯನ್ನು ನವೆಂಬರ್ 3ಕ್ಕೆ ಮುಂದೂಡಿತು.

ಪ್ರಕರಣದ ಹಿನ್ನೆಲೆ: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಆರೋಪದ ಮೇರೆಗೆ 2024ರ ಜೂನ್ 11ರಂದು ನಟ ದರ್ಶನ್, ಪವಿತ್ರಾ ಗೌಡ ಸೇರಿ ಹಲವರು ಬಂಧನಕ್ಕೊಳಗಾಗಿ, ಹಲವು ತಿಂಗಳು ಜೈಲಿನಲ್ಲಿದ್ದರು. ಬಳಿಕ ನಟ ದರ್ಶನ್ ತೂಗುದೀಪ ಸೇರಿದಂತೆ 7 ಆರೋಪಿಗಳಿಗೆ ಡಿಸೆಂಬರ್ 13, 2024ರಂದು ಹೈಕೋರ್ಟ್ ಜಾಮೀನು ಮಂಜೂರು ಮಾಡಿತ್ತು. ಬಳಿಕ ಈ ಆದೇಶ ಪ್ರಶ್ನಿಸಿ, ರಾಜ್ಯ ಸರಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಈ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ನ್ಯಾಯಮೂರ್ತಿಗಳಾದ ನ್ಯಾ. ಜೆ.ಬಿ. ಪರ್ದಿವಾಲಾ, ನ್ಯಾ. ಆರ್. ಮಹಾದೇವನ್ ಅವರಿದ್ದ ದ್ವಿಸದಸ್ಯ ಪೀಠವು ಹೈಕೋರ್ಟ್ ಆದೇಶದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿತ್ತು. ಬಳಿಕ, 2025ರ ಆಗಸ್ಟ್ 14ರಂದು ತೀರ್ಪು ನೀಡಿದ ಸುಪ್ರೀಂಕೋರ್ಟ್, ಜನಪ್ರಿಯತೆ, ಅಧಿಕಾರ ಅಥವಾ ಸವಲತ್ತು ಏನೇ ಇರಲಿ, ಕಾನೂನಿನೆದುರು ಎಲ್ಲರೂ ಸಮಾನರು ಎಂದು ತಿಳಿಸಿ, ಜಾಮೀನು ರದ್ದು ಮಾಡಿತ್ತು. ಈ ಹಿನ್ನೆಲೆಯಲ್ಲಿ ಆರೋಪಿಗಳಾದ ದರ್ಶನ್, ಪವಿತ್ರಾಗೌಡ, ಜಗದೀಶ್, ಅನುಕುಮಾರ್, ನಾಗರಾಜ್, ಲಕ್ಷ್ಮಣ್ ಹಾಗೂ ಪ್ರದೋಶ್ ಮತ್ತೆ ಜೈಲು ಸೇರಿದ್ದಾರೆ.

ರಾಜ್ಯಕ್ಕೆ ಮಾದರಿ ಯೋಜನೆಯನ್ನು ರೂಪಿಸಿಕೊಂಡ ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್
ಕ್ಷೇತ್ರದ ಸಮಸ್ಯೆಗಳ ವಿಮೋಚನೆಗೆ ಪ್ರದೀಪ ಪಣ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಜನರಿಂದ ಆಯ್ಕೆಯಾದವರು ಜನಸೇವೆಯಲ್ಲಿ ತೊಡಗಿಸಬೇಕು ಎನ್ನುವುದು ಆಶಯ. ಆದರೆ ಬಹುತೇಕ ಶಾಸಕರು ಗೆದ್ದ ಬಳಿಕ ಜನರತ್ತ ಹೋಗುವುದೇ ಇಲ್ಲ ಎನ್ನುವುದು ವಾಸ್ತವ. ಆದರೆ ಇಡೀ ದೇಶಕ್ಕೆ ಮಾದರಿಯಾಗುವಂತೆ ಈ ನಿಟ್ಟಿನಲ್ಲಿ ನಿರಂತರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್.

ಶಾಸಕರಾಗಿ ಅಧಿಕಾರ ಸ್ವೀಕರಿಸುತ್ತಿದ್ದಂತೆ ನಮಸ್ತೆ ಚಿಕ್ಕಬಳ್ಳಾಪುರ ಮೂಲಕ ಚಿಕ್ಕಬಳ್ಳಾಪುರವನ್ನು ಸುತ್ತಾಡಿದ, ಜನರ ಸಮಸ್ಯೆ ಆಲಿಸಿದ ಪ್ರದೀಪ್ ಈಶ್ವರ್ ಬಳಿಕ 'ನಮ್ಮ ಊರಿಗೆ ನಮ್ಮ ಶಾಸಕರು' ಎನ್ನುವ ವಿನೂತನ ಪರಿಕಲ್ಪನೆಯ ಮೂಲಕ ಕ್ಷೇತ್ರದಲ್ಲಿರುವ ಗ್ರಾಮಗಳಿಗೆ ಭೇಟಿ ನೀಡುವ ಯೋಜನೆಯನ್ನು ಕೈಗೆತ್ತಿಕೊಂಡರು. ಇಡೀ ತಾಲೂಕು ಆಡಳಿತವನ್ನು ಮುಂಜಾನೆ ಏಳಕ್ಕೆ ಹಳ್ಳಿಗಳಿಗೆ ಕರೆದುಕೊಂಡು ಹೋಗಿ ಸ್ಥಳದಲ್ಲಿಯೇ ಜನರ ಸಮಸ್ಯೆಗಳನ್ನು ಆಲಿಸಿ ಪರಿಹರಿಸುವ ಅಪಾರ ಜನ ಮೆಚ್ಚುಗೆ ಪಡೆದ ಕಾರ್ಯಕ್ರಮ ಇದಾಗಿದೆ. ಈ ಕಾರ್ಯಕ್ರಮಕ್ಕೆ ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ಸ್ಥಳದಲ್ಲಿ ಜನಗಳ ಪಿಂಚಣಿ ಸಮಸ್ಯೆ, ರಸ್ತೆ ಸಮಸ್ಯೆ, ಸ್ಮಶಾನ ಒತ್ತುವರಿ ಸಮಸ್ಯೆ, ವೃದ್ಧಾಪ್ಯ ವೇತನ ಸಮಸ್ಯೆ, ರೇಷನ್ ಕಾರ್ಡ್ ಸಮಸ್ಯೆ ಚರಂಡಿ ಸಮಸ್ಯೆ, ಮುಂತಾದ ಸಮಸ್ಯೆಗಳನ್ನು ಆಲಿಸಿ ಪರಿಹರಿಸುವ ಕೆಲಸ ಸಾಗುತ್ತದೆ. ಈಗಾಗಲೇ 200 ಹಳ್ಳಿಗಳಲ್ಲಿ ಕಾರ್ಯಕ್ರಮ ಯಶಸ್ವಿಯಾಗಿ ನಡೆದಿದ್ದು, ಕೆಲವೇ ತಿಂಗಳಲ್ಲಿ ಇನ್ನುಳಿದ ಗ್ರಾಮಗಳಿಗೆ ಭೇಟಿ ನೀಡುವ ವಿಶ್ವಾಸದಲ್ಲಿ ಶಾಸಕರಿದ್ದಾರೆ.

ಒಮ್ಮೆ ಶಾಸಕರಾಗಿ ಆಯ್ಕೆಯಾದ ಬಳಿಕ ಮುಂದಿನ ಚುನಾವಣೆವರೆಗೆ ಜನರ ಬಳಿ ಹೋಗುವ 'ಅಭ್ಯಾಸ'ವನ್ನೇ ಮರೆತಿರುವ ಹತ್ತಾರು ಜನಪ್ರತಿನಿಧಿಗಳಿಗೆ ಮಾದರಿಯ ರೀತಿಯಲ್ಲಿ ಪ್ರದೀಪ್ ಈಶ್ವರ್ ಯೋಜನೆಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ. ಇನ್ನು ಕ್ಷೇತ್ರದ ಯಾವುದೇ ಕೆಲಸವಾಗಬೇಕಾದರೂ ಜನರು ನಮ್ಮ ಮನೆಮುಂದೆ ನಿಂತು ಕಾಯಬೇಕು ಎನ್ನುವ ಮನಸ್ಥಿತಿಯಲ್ಲಿ ಕೆಲವರಿರುತ್ತಾರೆ. ಆದರೆ ಈ ಎಲ್ಲವನ್ನು ಮೀರಿ, ಜನರು ಶಾಸಕರ ಮನೆ ಕಾಯುವುದಕ್ಕಿಂತ, ಶಾಸಕರೇ ಜನರಿರುವ ಕಡೆಗೆ ಹೋಗುವ ಜನಪ್ರತಿನಿಧಿಯಾಗಿ ಜನರ ಸಮಸ್ಯೆಗಳಿಗೆ ಧ್ವನಿಯಾಗುತ್ತೇನೆ ಎನ್ನುವ ಸಂದೇಶವನ್ನು ಪ್ರದೀಪ್ ಈಶ್ವರ್ ನೀಡಿದ್ದಾರೆ.

ಏನಿದು ನಮ್ಮೂರಿಗೆ ನಮ್ಮ ಶಾಸಕ?

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸುತ್ತಿದ್ದಂತೆ ನಮಸ್ತೆ ಚಿಕ್ಕಬಳ್ಳಾಪುರದ ಮೂಲಕ ಚಿಕ್ಕಬಳ್ಳಾಪುರ ನಗರ ಭಾಗದಲ್ಲಿ ನಿತ್ಯ ಬೆಳಗ್ಗೆ ಮನೆಮನೆಗೆ ತೆರಳಿ ಸಮಸ್ಯೆಯನ್ನು ಆಲಿಸುವ ಮೂಲಕ ಭಾರಿ ಸದ್ದು ಮಾಡಿದ್ದರು. ಇದೀಗ ಇದರ ಮುಂದುವರಿದ ಭಾಗವಾಗಿ 'ನಮ್ಮೂರಿಗೆ ನಮ್ಮ ಶಾಸಕ' ಎನ್ನುವ ವಿಶಿಷ್ಟ ಯೋಜನೆಯನ್ನು ಆರಂಭಿಸಿದ್ದಾರೆ. ಭೇಟಿಯ ವೇಳೆ ಶಾಸಕರೊಂದಿಗೆ ತಹಶೀಲ್ದಾರ್, ಇಒ ಸೇರಿದಂತೆ ತಾಲೂಕು ಮಟ್ಟದ ಎಲ್ಲ ಅಧಿಕಾರಿಗಳು ಗ್ರಾಮ ಪಂಚಾಯಿತಿಯ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ. →10

- ಡಿಜಿಟಲ್ ಚಿಕ್ಕಬಳ್ಳಾಪುರ ಮೂಲಕ ಸುಮಾರು 10,000 ಸಮಸ್ಯೆಗಳಿಗೆ ಸ್ಪಂದಿಸಿದ್ದು 9500 ಸಮಸ್ಯೆಗಳಿಗೆ ಪರಿಹಾರ
- ಅಮ್ಮ ಆಂಬುಲೆನ್ಸ್ ಮೂಲಕ ಇದುವರೆಗೂ 12,000 ಜೀವಗಳನ್ನು ತುರ್ತು ಸಂದರ್ಭದಲ್ಲಿ ಕಾಪಾಡಿದ ಕೀರ್ತಿ ಅಮ್ಮ ಆಂಬುಲೆನ್ಸ್‌ಗೆ ಸೇರುತ್ತದೆ.
- ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿಜ್ಞಾನ ವಿಭಾಗದಲ್ಲಿ ಓದುತ್ತಿರುವ ಮಕ್ಕಳಿಗೆ 40 ದಿನಗಳ ಕಾಲ ನುರಿತ ಉಪನ್ಯಾಸಕರಿಂದ ಉಚಿತ ಕ್ರ್ಯಾಶ್ ಕೋರ್ಸ್.
- ಸರಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 10ನೇ ತರಗತಿ ಓದುತ್ತಿರುವ ಮಕ್ಕಳಲ್ಲಿ 60 ಮಕ್ಕಳ ಜವಾಬ್ದಾರಿಯನ್ನು ಶಾಸಕರು ತೆಗೆದುಕೊಂಡು, ಅವರಿಗೆ ತರಬೇತಿ
- ವಿಧಾನಸಭಾ ವ್ಯಾಪ್ತಿಯಲ್ಲಿ ಓದುತ್ತಿರುವ ಸುಮಾರು 10,000 ಬಡ ಮಕ್ಕಳಿಗೆ ಜನಪ್ರಿಯ ಶಾಸಕರು ಸ್ವಂತ ಹಣದಲ್ಲಿ ಸುಮಾರು 25ಸಾವಿರ ಮಕ್ಕಳಿಗೆ ವಿದ್ಯಾರ್ಥಿವೇತನ.

ಅನಾಥನಾಗಿ ಬೆಳೆದ ನನಗೆ ಜನರ ಸಂಕಷ್ಟದ ಅರಿವಿದೆ. ಈಗಾಗಲೇ ನಮಸ್ತೆ ಚಿಕ್ಕಬಳ್ಳಾಪುರ ಕಾರ್ಯಕ್ರಮದ ಮೂಲಕ ನಗರ ಭಾಗವನ್ನು ಪೂರ್ಣಗೊಳಿಸಿದ್ದು, ನಮ್ಮೂರಿಗೆ ನಮ್ಮ ಶಾಸಕ ಅಭಿಯಾನದ ಮೂಲಕ ಗ್ರಾಮೀಣ ಭಾಗದ ಜನರ ಸಮಸ್ಯೆ ಬಗ್ಗೆ ಗಮನಹರಿಸುತ್ತೇನೆ. ಒಂದು ವೇಳೆ ಸರಕಾರದ ಮಟ್ಟದಲ್ಲಿಯೇ ಆಗಬೇಕಿರುವ ಕೆಲಸಗಳಿದ್ದರೆ, ಅದಕ್ಕೂ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

-ಪ್ರದೀಪ್ ಈಶ್ವರ್, ಶಾಸಕ

ಸಮಾಚಾರ ಸಣ್ಣದಲ್ಲ

ಆಕ್ಷೇಪಾರ್ಹ ಕಮೆಂಟ್ ಶೇರ್:ಶರಣ್ ವಿಚಾರಣೆ

ಮಂಗಳೂರು: ಸಾಮಾಜಿಕ ಜಾಲತಾಣದಲ್ಲಿ ಆಕ್ಷೇಪಾರ್ಹ ಕಮೆಂಟ್ ಶೇರ್‌ಮಾಡಿದ ಕಾರಣಕ್ಕೆ ವಿಎಚ್ಪಿ ಮುಖಂಡ ಶರಣ್ ಪಂಪ್ವೆಲ್ರನ್ನು ವಿಚಾರಣೆಗೆ ಕದ್ರಿ ಪೊಲೀಸ್ ಠಾಣೆ ಗೆ ಕರೆಸಲಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಪ್ರಚೋದನಕಾರಿ ಪೋಸ್ಟ್ ಶೇರ್ ಮಾಡಿರುವ ಆರೋಪದ ಮೇಲೆ ವಿಶ್ವ ಹಿಂದೂ ಪರಿಷತ್ನ ಶರಣ್ ಪಂಪ್ವೆಲ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸ್ ಕಮಿಷನರ್ ಸುಧೀರ್‌ಕುಮಾರ್‌ರೆಡ್ಡಿ ತಿಳಿಸಿದ್ದಾರೆ. ಶೇರ್ ಮಾಡಿರುವ ಪೋಸ್ಟ್ ಅನ್ನು ಅವರು ತೆಗೆದು ಹಾಕಿದ್ದಾರೆ. ಅವರಿಗೆ ನೋಟಿಸ್ ಜಾರಿಗೊಳಿಸಲಾಗಿದ್ದು, ಸೋಮವಾರ ವಿಚಾರಣೆಗೆ ಹಾಜರಾಗುವಂತೆ ತಿಳಿಸಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ವಿಎಚ್ ಪಿ ಮುಖಂಡ ಶರಣ್ ಪಂಪ್ ವೆಲ್ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಸಾಮಾಜಿಕ ಜಾಲತಾಣದಲ್ಲಿ ಸುದ್ದಿ ಹರಡಿತ್ತು, ಈ ಕುರಿತಂತೆ ಮಾಹಿತಿ ಪಡೆಯಲು ಶಾಸಕ ಕಾಮತ್ ಕದ್ರಿ ಠಾಣೆಗೆ ಆಗಮಿಸಿದ್ದರು, ಆದರೆ ಕದ್ರಿ ಪೊಲೀಸರು ಶರಣ್ ಪಂಪ್ವೆಲ್ ವಶಕ್ಕೆ ಪಡೆದ ಬಗ್ಗೆ ಸರಿಯಾದ ಮಾಹಿತಿ ನೀಡಿಲ್ಲ ಎಂದು ಕದ್ರಿ ಪೊಲೀಸ್ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ನಂತರ ಪೊಲೀಸ್ ಕಮಿಷನರ್ ಕಚೇರಿಗೆ ತೆರಳಿದರು. ಈ ಬಗ್ಗೆ ಮಾಹಿತಿ ನೀಡಿದ ಕಮಿಷನರ್‌ಸುಧೀರ್‌ಕುಮಾರ್‌ರೆಡ್ಡಿ, ಶರಣ್ ಪಂಪ್ ವೆಲ್ ಶೇರ್‌ಮಾಡಿದ್ದ ಕಮೆಂಟ್ ಈಗಾಗಲೇ ಡಿಲೀಟ್ ಆಗಿದೆ. ಈ ಬಗ್ಗೆ ಪರಿಶೀಲನೆ ನಡೆಯುತ್ತಿದೆ ಎಂದು ತಿಳಿಸಿದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಜಿಪಂ ಸಭಾಂಗಣದಲ್ಲಿ ಕೆ.ಡಿ.ಪಿ ಸಭೆ | ಸಚಿವೆ ಲಕ್ಷ್ಮೀ ಹೆಬ್ಬಾಳಕರ್‌ಸೂಚನೆ

ಅಧಿಕಾರಿಗಳು ಜನಸ್ನೇಹಿಯಾಗಿ ಕೆಲಸ ಮಾಡಿ



ಉಡುಪಿ ಜಿಪಂ ಸಭಾಂಗಣದಲ್ಲಿ ಶುಕ್ರವಾರ ನಡೆದ ಕೆ.ಡಿ.ಪಿ ಸಭೆಯಲ್ಲಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಾತನಾಡಿದರು.

ಉಡುಪಿ: ಎಲ್ಲಾ ಅನುಷ್ಠಾನಾಧಿಕಾರಿಗಳು ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸಿ ಜನಸ್ನೇಹಿಯಾಗಿ ತಮ್ಮ ಕಾರ್ಯಗಳನ್ನು ನಿರ್ವಹಿಸಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಆರ್. ಹೆಬ್ಬಾಳ್ಕರ್‌ಹೇಳಿದರು.

ಅವರು ಶುಕ್ರವಾರ ಮಣಿಪಾಲ ರಜತಾದ್ರಿಯ ಜಿಪಂ ಡಾ. ವಿ.ಎಸ್. ಆಚಾರ್ಯ ಸಭಾಂಗಣದಲ್ಲಿ ನಡೆದ ಕೆ.ಡಿ.ಪಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಜನಸಾಮಾನ್ಯರು ತಮ್ಮ ಕೆಲಸ ಕಾರ್ಯಗಳಿಗಾಗಿ ಕಚೇರಿಗಳಿಗೆ ಬಂದಾಗ ಅವರ ಕೆಲಸ ಕಾರ್ಯಗಳನ್ನು ಆದ್ಯತೆಯ ಮೇಲೆ ಮಾಡಿಕೊಡಬೇಕು. ಸರಕಾರ ಜಾರಿಗೆ ತಂದಿರುವ ಜನೋಪಯೋಗಿ ಯೋಜನೆ ಪೂರ್ಣಪ್ರಮಾಣದಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು. ಕಚೇರಿಯಲ್ಲೇ ಕೂರದೇ ಸ್ಥಳ ಪರಿಶೀಲನೆ ನಡೆಸಿ, ಜನರ ಸಮಸ್ಯೆಗಳಿಗೆ ಜವಾಬ್ದಾರಿಯಿಂದ ಸ್ಪಂದಿಸಬೇಕು. ಆಗ ಮಾತ್ರ ಸರಕಾರಕ್ಕೆ ಒಳ್ಳೆಯ ಹೆಸರು ಬರಲು ಸಾಧ್ಯ. ಜನಪ್ರತಿನಿಧಿಗಳಾದ ನಾವು ಜನರಿಗೆ ಉತ್ತರದಾಯಿಗಳಾಗಿರುತ್ತೇವೆ. ಐದು ವರ್ಷಗಳಿಗೊಮ್ಮೆ ಜನರು ನಮ್ಮನ್ನು ಪರೀಕ್ಷೆಗೊಳಪಡಿಸುತ್ತಾರೆ. ಆದರೆ ಅಧಿಕಾರಿಗಳು ಒಮ್ಮೆ ಆಯ್ಕೆಯಾದರೆ ಮುಗಿಯಿತು ಎಂಬ ತಮ್ಮ ದರ್ಪವನ್ನು ಬಿಟ್ಟು ಕೆಲಸ ಮಾಡಬೇಕು ಎಂದರು.

ಜಿಲ್ಲೆಯಲ್ಲಿ ಕಳೆದ ಸಾಲಿಗಿಂತ ಹೆಚ್ಚು ಮಳೆಯಾಗಿದೆ. ಬೆಳೆಹಾನಿಯನ್ನು ಸರಿಯಾಗಿ ಪರಿಶೀಲಿಸಬೇಕು. ಕಳೆದ ಸಭೆಯಲ್ಲಿ ಕಳಪೆ ಗುಣಮಟ್ಟದ ಭತ್ತದ ಬೀಜ ವಿತರಣೆಯಿಂದ ರೈತರಿಗೆ ನಷ್ಟ ಉಂಟಾಗಿದೆ. ಈ ಬಗ್ಗೆ ಪರಿಶೀಲಿಸಿ, ಪರಿಹಾರವನ್ನು ಒದಗಿಸಲು ಸೂಚಿಸಲಾಗಿತ್ತು. ಆದರೆ ಸರಕಾರಕ್ಕೆ ಪತ್ರ ಬರೆದಿದ್ದೇವೆ ಎಂದರೆ ಅಷ್ಟೇ ಸಾಲದು. ರೈತರಿಗೆ ನ್ಯಾಯ ಒದಗಿಸಿಕೊಡಬೇಕು ಎಂದರು.

ಸರಕಾರದ ಯಾವುದೇ ಕಾರ್ಯಕ್ರಮಗಳನ್ನು ನಡೆಸುವಾಗ ಶಿಷ್ಟಾಚಾರದಂತೆ ಜನಪ್ರತಿನಿಧಿಗಳನ್ನು ಆಹ್ವಾನಿಸಬೇಕು. ಸರಕಾರದ ಯೋಜನೆಗಳು, ಕಾರ್ಯಕ್ರಮಗಳ ಬಗ್ಗೆಯೂ ಜನಪ್ರತಿನಿಧಿಗಳ ಗಮನಕ್ಕೆ ತರಬೇಕು. ಸರಕಾರದ ಯೋಜನೆಗಳನ್ನು ಸ್ಥಳೀಯ ಶಾಸಕರ ವಿಶ್ವಾಸ ಪಡೆದು ಅನುಷ್ಠಾನಕ್ಕೆ ಮುಂದಾಗಬೇಕು ಎಂದರು.

ಜಿಲ್ಲೆಯಲ್ಲಿ ಕಡಲ ಕೊರೆತ ಉಂಟಾಗುತ್ತಿದ್ದು, ಇದನ್ನು ಗಂಭೀರವಾಗಿ ಪರಿಗಣಿಸಿ ವೈಜ್ಞಾನಿಕವಾಗಿ ಶಾಶ್ವತ ಪರಿಹಾರ ಕಂಡುಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ ಅವರು, ಪಡಿತರ ವ್ಯವಸ್ಥೆಯಲ್ಲಿ ನ್ಯೂನ್ಯತೆಗಳು ಆಗದಂತೆ ಎಚ್ಚರ ವಹಿಸಬೇಕೆಂದರು.

ಶಾಸಕರಾದ ಯಶ್ ಪಾಲ್ ಎ ಸುವರ್ಣ ಮಾತನಾಡಿ, ಜಲ್ಜೀವನ್ ಮಿಷನ್ ಯೋಜನೆಯಡಿ ಉಡುಪಿ ವಿಧಾನಸಭಾ ಕ್ಷೇತ್ರದ 13 ಗ್ರಾಪಂಗಳಲ್ಲಿ ಕೈಗೊಂಡಿರುವ ಕುಡಿಯುವ ನೀರಿನ ಕಾಮಗಾರಿಗಳು ಸಮರ್ಪಕವಾಗಿ ಆಗಿಲ್ಲ ಎಂದು ಸಭೆಯ ಗಮನಕ್ಕೆ ತಂದರು.

ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಮಾತನಾಡಿದರು. ಶಾಸಕರಾದ ಗುರುರಾಜ್ ಶೆಟ್ಟಿ ಗಂಟಿಹೊಳೆ ಮಾತನಾಡಿ, ಹಟ್ಟಿಯಂಗಡಿ ಬಳಿ ರಸ್ತೆ ಬದಿಯಲ್ಲಿ ಗಿಡ- ಗಂಟಿಗಳು ದಟ್ಟವಾಗಿ ಬೆಳೆದಿದ್ದು, ಇದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆ ಉಂಟಾಗುತ್ತಿದೆ. ಈವರೆಗೂ ತೆರವು ಕಾರ್ಯವಾಗಿರುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು. ಶಾಸಕರಾದ ಎ ಕಿರಣ್ ಕುಮಾರ್‌ಕೊಡ್ಗಿ, ವಿಧಾನಪರಿಷತ್ ಸದಸ್ಯರಾದ ಡಾ. ಧನಂಜಯ ಸರ್ಜಿ,ಮಂಜುನಾಥ್ ಭಂಡಾರಿ ಮಾತನಾಡಿದರು. ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಶಾಲಾ ಪೂರ್ವ ಶಿಕ್ಷಣ ಕಿಟ್ ವಿತರಿಸಲಾಯಿತು. ಸಂಜೀವಿನಿ ಮಹಿಳಾ ಗುತ್ತಿಗೆದಾರರಿಗೆ ಒಡಂಬಡಿಕೆ ಹಸ್ತಾಂತರಿಸಲಾಯಿತು. ಸಭೆಯಲ್ಲಿ ಜಿಲ್ಲಾಧಿಕಾರಿ ಸ್ವರೂಪ ಟಿ. ಕೆ, ಜಿಪಂ ಸಿಇಒ ಪ್ರತೀಕ್ ಬಾಯಲ್, ಜಿಲ್ಲಾ ಪೊಲೀಸ್ ಅಧೀಕ್ಷಕ ಹರಿರಾಮ್ ಶಂಕರ್ ,ಕೆ.ಡಿ.ಪಿ ಸಭೆಯ ಸದಸ್ಯರುಗಳಾದ ಪ್ರಸನ್ನ ಕುಮಾರ್ ,ವೀಣಾ ಶೆಟ್ಟಿ, ಐಡಾ ಗಿಬ್ಬ ಡಿ ಸೋಜಾ, ಅಧಿಕಾರಿಗಳು ಉಪಸ್ಥಿತರಿದ್ದರು.

ಆನೆ ದಾಳಿಗೆ ಇಬ್ಬರು ಬಲಿ: ಜನಾಕ್ರೋಶ

ಕೆರೆಮನೆ ಗ್ರಾಮದಲ್ಲಿ ಕಾಡಾನೆ ದಾಳಿಯಿಂದಾಗಿ ಪೊಲೀಸರು ಮೊಕ್ಕಂ ಹೂಡಿರುವುದು.

ಉಡುಪಿ: ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಕಾಡಾನೆ ದಾಳಿಗೆ ಇಬ್ಬರು ಮೃತಪಟ್ಟ ಪ್ರಕರಣ ಸಂಬಂಧಿಸಿದಂತೆ ಸಾರ್ವಜನಿಕರು ಎಸ್ಕೆ ಗಡಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ. ಕುದುರೆಮುಖ ಉದ್ಯಾನವನ ವ್ಯಾಪ್ತಿಯ ಶೃಂಗೇರಿ ತಾಲೂಕಿನ ಕೆರೆಮನೆ ಗ್ರಾಮದಲ್ಲಿ ಕಾಡಾನೆ ದಾಳಿಯಿಂದಾಗಿ ಹರೀಶ್ (44) ಮತ್ತು ಉಮೇಶ್ (40) ಎಂಬ ಇಬ್ಬರು ಮೃತ ಪಟ್ಟಿದ್ದಾರೆ. ಇಬ್ಬರು ಸೇರಿ ಕೊಟ್ಟಿಗೆಗೆ ಸೊಪ್ಪು ತರಲು ಹೋಗಿದ್ದರು. ಈ ವೇಳೆ ಆನೆ ದಾಳಿ ನಡೆಸಿದೆ. ಪರಿಣಾಮ ಇಬ್ಬರೂ ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ.

ಪ್ರಕರಣ ಸಂಬಂಧಿಸಿದಂತೆ ಸಾರ್ವಜನಿಕರು ರೊಚ್ಚಿಗೆದ್ದಿದ್ದು ಕಾರ್ಕಳ ಎಸ್ಕೆ ಬಾರ್ಡರ್‌ನಲ್ಲಿ ಪ್ರತಿಭಟನೆ ನಡೆಸಿದ್ದಾರೆ. ಕಾರ್ಕಳ ಮಂಗಳೂರು ಸಂಚಾರ ಅಸ್ತವ್ಯಸ್ತವಾಗಿದ್ದು ಯಾವುದೇ ವಾಹನ ಸಂಚಾರ ಇರಲಿಲ್ಲ. ಡಿಸಿ, ಎಸ್ಪಿ, ಸಿಸಿಎಫ್, ಶಾಸಕರು ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಸ್ಥಳದಲ್ಲಿ ಮಂಗಳೂರು ಸಿಸಿಎಫ್ ಕರಿಕಾಲನ್, ಡಿಎಫ್ಒ ಶಿವರಾಮ ಬಾಬು, ಚಿಕ್ಕಮಗಳೂರು ಜಿಲ್ಲಾಧಿಕಾರಿ ಮೊಕ್ಕಾಂ ಹೂಡಿದ್ದಾರೆ.

ಹಕ್ಕುಚ್ಯುತಿ, ಮಾನನಷ್ಟ ಮೊಕದ್ದಮೆ: ಐವನ್ ಡಿಸೋಜ

ಮಂಗಳೂರು: ಸ್ಪೀಕರ್‌ಯು.ಟಿ.ಖಾದರ್‌ಅವರ ವಿರುದ್ದದ ಭ್ರಷ್ಟಾಚಾರದ ಆರೋಪ ಮಾಡಿರುವ ವಿಧಾನಸಭೆಯ ಮಾಜಿ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹಾಗೂ ಶಾಸಕ ಡಾ. ವೈ. ಭರತ್ ಶೆಟ್ಟಿ ವಿರುದ್ಧ ಹಕ್ಕುಚ್ಯುತಿ ಮಂಡಿಸಿ, ಮಾನನಷ್ಟ ಮೊಕದ್ದಮೆ ದಾಖಲಿಸಲಾಗುವುದು ಎಂದು ವಿಧಾನಪರಿಷತ್ ಸದಸ್ಯ ಐವನ್ ಡಿಸೋಜ ಹೇಳಿದ್ದಾರೆ.

ಸದನದ ನಿಯಮಾವಳಿ ಪ್ರಕಾರ, ಸಭಾಧ್ಯಕ್ಷರ ವಿರುದ್ಧ ಆರೋಪ ಮಾಡುವ ಮೊದಲು ಆಂತರಿಕ ತನಿಖೆ ನಡೆಸಬೇಕು. ಕಾನೂನು ಪ್ರಕಾರ ಮಾಹಿತಿ ಸಂಗ್ರಹಿಸಬೇಕು. ಅದರ ಮಾಹಿತಿಯನ್ನು ಅವರ ಕಚೇರಿಗೆ ನೀಡಿ ಉತ್ತರ ಪಡೆಯಬೇಕು. ಸದನದ ಮುಂದಿಟ್ಟು ಚರ್ಚೆ ನಡೆಸಬೇಕು. ಕಾನೂನು ಪ್ರಕಾರ ಲಭ್ಯ ಪರಿಹಾರ ಪಡೆಯಲು ಸಾಧ್ಯವಾಗದಿದ್ದರೆ ಮಾತ್ರ ಸಾರ್ವಜನಿಕ ಆರೋಪ ಮಾಡಬಹುದು. ಆದರೆ ಕಾಗೇರಿಯವರು ಇದ್ಯಾವುದನ್ನೂ ಮಾಡದೆ ಆರೋಪ ಮಾಡಿರುವುದು ಸಂವಿಧಾನ ವಿರೋಧಿ ನಡೆ. ಇದು ಸದನಕ್ಕೆ ತೋರಿದ ಅಗೌರವ ಮತ್ತು ಎಲ್ಲ ಶಾಸಕರಿಗೆ ಮಾಡಿದ ಅವಮಾನ. ಆರೋಪದ ಬಗ್ಗೆ ಇದುವರೆಗೂ ಸ್ಪೀಕರ್‌ಕಚೇರಿಗೆ ಅವರು ಲಿಖಿತ ದೂರು ನೀಡಿಲ್ಲ. ವಿಧಾನಸಭೆಯ ಮಾಜಿ ಅಧ್ಯಕ್ಷರಾಗಿರುವ ಕಾಗೇರಿಯವರಿಗೆ ಇದೆಲ್ಲ ತಿಳಿದಿರಬೇಕಿತ್ತು. ಅವರು ದಡ್ಡರೆಂದು ಗೊತ್ತಿತ್ತು. ಆದರೆ ಇಷ್ಟು ದಡ್ಡತನವಿದೆ ಎಂಬುದಾಗಿ ಗೊತ್ತಿರಲಿಲ್ಲ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು. ಅಭಿವೃದ್ಧಿ ಕೆಲಸ, ನವೀಕರಣ ಮಾಡುವ ಮೊದಲು ಸ್ಪೀಕರ್‌ತನ್ನ ಕಚೇರಿಗೆ ಲಿಖಿತವಾಗಿ ಆದೇಶ ನೀಡಿದ ಅನಂತರ ಕಾನೂನು ಬದ್ದ ಪ್ರಕ್ರಿಯೆಯಂತೆಯೇ ನಡೆಯುತ್ತದೆ. ಖರ್ಚನ್ನು ಸರಕಾರದ ಏಜೆನ್ಸಿಯಿಂದಲೇ ಮಾಡಲಾಗಿದೆ. ಕಾಗೇರಿಯವರು ಸ್ಪೀಕರ್‌ಆಗಿದ್ದಾಗ ನವೀಕರಣವನ್ನು ಹೇಗೆ ಮಾಡಿಸಿದರೋ ಅದೇ ರೀತಿ ಖಾದರ್‌ಕೂಡ ಮಾಡಿಸಿದ್ದಾರೆ. ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಮಾಡಿದ್ದಾರೆ ಎಂದಾದರೆ ಸದನದಲ್ಲಿ ಚರ್ಚಿಸುವ ಅವಕಾಶವಿದೆ. ಅದನ್ನು ಮಾಡದೆ ಆರೋಪ ಮಾಡಿರುವುದು ಉದ್ದೇಶಪೂರ್ವಕ ಎಂದು ಹೇಳಿದರು.

ಸದನದ ಕೆಲಸ ನಡೆಯುವಾಗಲೇ ಭರತ್ ಶೆಟ್ಟಿಯವರು ಅಲ್ಲಿಯೇ ಇದ್ದರು. ಅವರಿಗೆ ಸದನದಲ್ಲಿಯೇ ಹೇಳಬಹುದಿತ್ತು. ಅವರಿಗೆ ಯಾವುದೇ ಅಗತ್ಯ ಸೌಕರ್ಯ ಬೇಡವಾಗಿದ್ದರೆ ನಿರಾಕರಿಸಬಹುದು. ಆದರೆ ಇತರ ಶಾಸಕರಿಗೆ ಬೇಡವೆನ್ನಲು ಆಗುತ್ತದೆಯೇ ಎಂದು ಐವನ್ ಡಿಸೋಜಾ ಪ್ರಶ್ನಿಸಿದರು.

ಕಾಂಗ್ರೆಸ್ ಮುಖಂಡ ವಿಕಾಸ್ ಶೆಟ್ಟಿ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಪಟನಾದಿಂದ ಸುಮಾರು 200 ಕಿ.ಮೀ ದೂರದಲ್ಲಿರುವ ಭೋರೆ ಮೀಸಲು ಕ್ಷೇತ್ರ | ಎರಡೂ ಒಕ್ಕೂಟದ ಮಧ್ಯೆ ಭಾರೀ ಪೈಪೋಟಿ

ಮಂಗಳಮುಖಿ ಮೇಲೆ 2 ಒಕ್ಕೂಟಕ್ಕೂ ಪ್ರೀತಿ

ಪಟನಾದಿಂದ ಸುಮಾರು 200 ಕಿ.ಮೀ ದೂರದಲ್ಲಿರುವ ಮೀಸಲು ಕ್ಷೇತ್ರ ಭೋರೆಗೆ ರಾಜ್ಯದ ಶಿಕ್ಷಣ ಮಂತ್ರಿ, ಜೆಡಿಯು (ಎನ್‌ಡಿಎ) ಸುನೀಲ್ ಕುಮಾರ್ ಶಾಸಕರು. ಈ ಸಲವೂ ಅವರು ಜೆಡಿಯುನಿಂದ ಕಣದಲ್ಲಿದ್ದಾರೆ. ಇಂಡಿ ಒಕ್ಕೂಟದಿಂದ (ಮಹಾಘಟಬಂಧನ) ಸಿಪಿಐ (ಎಂಎಲ್) ಪಕ್ಷದಿಂದ ದೆಹಲಿಯ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ಪಿಎಚ್.ಡಿ ವಿದ್ಯಾರ್ಥಿ ಧನಂಜಯ ಪಾಸ್ವಾನ್ ಅಭ್ಯರ್ಥಿಯಾಗಿದ್ದಾರೆ.

ರಾಘವ ಶರ್ಮ ನಿಡ್ಲೆ
ವಿಶ್ವವಾಣಿ ಸಾಕ್ಷಾತ್ ವರದಿ
ಬಿಹಾರ ಯಾತ್ರೆ

ಲಾಲೂ ಪ್ರಸಾದ್ ಯಾದವ್‌ರ ತವರು ಜಿಲ್ಲೆ ಗೋಪಾಲ್‌ಗಂಜ್‌ನ ಭೋರೆ ವಿಧಾನಸಭೆಯ ರಖ್ವಾ ಬಿರ್ತಿ ಟೋಲಾ ಎಂಬ ಕುಗ್ರಾಮದ ನಿವಾಸಿ ಬೇಬಿ ದೇವಿ ಎಂಬ ಮಹಿಳೆ ಸಣ್ಣ ದಿನಸಿ ಅಂಗಡಿಯೊಂದನ್ನು ನಡೆಸುತ್ತಾ ಜೀವನ ನಡೆಸುತ್ತಿದ್ದಾಳೆ. 'ನನ್ನಂತಹ ಅನೇಕ ಮಹಿಳೆಯರಿಗೆ ಸಮಾಜದಲ್ಲಿ ಗುರುತು ಸಿಗುವಂತೆ ಮಾಡಿದವರು ಸಿಎಂ ನಿತೀಶ್ ಕುಮಾರ್' ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ಬೇಬಿ ದೇವಿ, ಜೀವಿಕಾ ಸ್ಕೀಮ್ ಅಡಿಯಲ್ಲಿ ಸರಕಾರ ನೀಡಿರುವ ಮೊದಲ ಕಂತಿನ ರು. 10000 ನೆರವಿನ ಹಣ ಖಾತೆಗೆ ಬಂದಿಲ್ಲ ಎಂಬ ಚಿಂತೆಯಲ್ಲಿದ್ದಾರೆ. ಎಲ್ಲಾ ಅರ್ಜಿಗಳನ್ನು ಭರ್ತಿ ಮಾಡಿದರೂ, ಹಣ ಯಾಕೆ ಬಂದಿಲ್ಲ ಎನ್ನುವುದು ಅವರಿಗೆ ಗೊತ್ತಾಗುತ್ತಿಲ್ಲ. ಚುನಾವಣೆ ಮುಗಿದ ಮೇಲಾದರೂ ಹಣ ಸಿಗಬಹುದು ಎಂಬ ನಿರೀಕ್ಷೆಯಲ್ಲಿರುವ ಅವರು, ಈ ಹಣದಲ್ಲಿ ತಮ್ಮ ದಿನಸಿ ಅಂಗಡಿಗೆ ಫ್ರಿಡ್ಜ್ ಅಳವಡಿಸಬೇಕು ಎಂದುಕೊಂಡಿದ್ದಾರೆ. 'ದಿನಕ್ಕೆ ಸುಮಾರು ರು. 1000 ವ್ಯಾಪಾರ ನಡೆಸುವ ಬೇಬಿದೇವಿ, 200 ರು. ಲಾಭ ಬರುತ್ತದೆ. 2020ದಿಂದ ಈ ದಿನಸಿ ಅಂಗಡಿ ತೆರೆದಿದ್ದೇನೆ. ಪ್ರಧಾನಮಂತ್ರಿ ಆವಾಸ್ ಯೋಜನೆ ಅಡಿಯಲ್ಲಿ ಮನೆಗೆ ಅರ್ಜಿ ಹಾಕಿದ್ದೇನೆ. ಇನ್ನೂ ಸಿಕ್ಕಿಲ್ಲ' ಎಂದು ವಿಶ್ವವಾಣಿಗೆ ವಿವರಿಸಿದರು.

ನಿತೀಶರ ಮಹತ್ವಾಕಾಂಕ್ಷಿ ಮುಖ್ಯಮಂತ್ರಿ ಮಹಿಳಾ ಉದ್ಯೋಗ ಯೋಜನೆಗೆ ಜೀವಿಕಾ ಸ್ವಸಹಾಯ ಸಂಘದಲ್ಲಿ ಜೋಡಿಸಿಕೊಂಡಿರುವ ಮಹಿಳೆಯರು ಅರ್ಹರಾಗಿದ್ದಾರೆ. ಇಂಥ ಸುಮಾರು 75 ಲಕ್ಷ ಬಿಹಾರ ಮಹಿಳೆಯರ ಖಾತೆಗೆ ಚುನಾವಣೆ ದಿನಾಂಕ ಘೋಷಣೆಗೆ ಮುನ್ನ ರು. 10 ಸಾವಿರ ಹಣ ಬಂದು ಬಿದ್ದಿದೆ. ನಿತೀಶರ ಈ ಯೋಜನೆ ಮಹಿಳಾ ಮತದಾರರ ಮೇಲೆ ಪ್ರಭಾವ ಬೀರಿರುವುದು ಅಲ್ಲಲ್ಲಿ ಕಾಣುತ್ತಿದೆ.

ಆದರೆ ಬೇಬಿ ದೇವಿ ಅಂಗಡಿ ಪಕ್ಕದಲ್ಲೇ ಎಮ್ಮೆ, ಆಡು ಹಾಗೂ ಮೇವನ್ನು ಸಂಗ್ರಹಿಸಿಡಲು ಕಟ್ಟಿಕೊಂಡಿರುವ ಜೋಪಡಿಯಲ್ಲಿ ಕುಳಿತಿದ್ದ ಧೋಬಿ (ಬಿಹಾರದಲ್ಲಿ ಭೈಟಾ ಎನ್ನುತ್ತಾರೆ) ಸಮುದಾಯದ ಲಲ್ಲನ್ ಭೈಟಾ ಅವರ ಪತ್ನಿ ಚಿಂತಾದೇವಿ ಮಾತ್ರ 'ಜನರ ಜತೆಗಿರುವ ಹಾಗೂ ಅವರಿಗಾಗಿ ಕೆಲಸ ಮಾಡುವ ವ್ಯಕ್ತಿಗೆ ಮತ ಹಾಕುತ್ತೇವೆ. ಭೋರೆಯಲ್ಲಿ ನಮ್ಮ ಕುಟುಂಬದ ಮತ ಜನಸುರಾಜ್ ಪಕ್ಷದ ಪ್ರೀತಿ ಕಿನ್ನರ್‌ಗೆ' ಎಂದು ಸ್ಪಷ್ಟಪಡಿಸಿದರು.

ಪಟನಾದಿಂದ ಸುಮಾರು 200 ಕಿ.ಮೀ ದೂರದಲ್ಲಿರುವ ಮೀಸಲು ಕ್ಷೇತ್ರ ಭೋರೆಗೆ ರಾಜ್ಯದ ಶಿಕ್ಷಣ ಮಂತ್ರಿ, ಜೆಡಿಯು (ಎನ್‌ಡಿಎ) ಸುನೀಲ್ ಕುಮಾರ್ ಶಾಸಕರು. ಈ ಸಲವೂ ಅವರು ಜೆಡಿಯುನಿಂದ ಕಣದಲ್ಲಿದ್ದಾರೆ. ಇಂಡಿ ಒಕ್ಕೂಟದಿಂದ (ಮಹಾಘಟಬಂಧನ) ಸಿಪಿಐ (ಎಂಎಲ್) ಪಕ್ಷದಿಂದ ದೆಹಲಿಯ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ಪಿ.ಎಚ್‌ಡಿ ವಿದ್ಯಾರ್ಥಿ ಧನಂಜಯ ಪಾಸ್ವಾನ್ ಅಭ್ಯರ್ಥಿಯಾಗಿದ್ದಾರೆ. ಧನಂಜಯ ಪಾಸ್ವಾನ್ 2023-24ರಲ್ಲಿ ಜೆಎನ್‌ಯು ವಿದ್ಯಾರ್ಥಿ ಸಂಘಟನೆಯ ಅಧ್ಯಕ್ಷರೂ ಆಗಿದ್ದರು.

ಪ್ರೀತಿ ಕಿನ್ನರ್ ಸೀತಾಮರ್ಹಿ ಜಿಲ್ಲೆಯಿಂದ 22 ವರ್ಷಗಳ ಹಿಂದೆ ಭೋರೆಯ ಕಲ್ಯಾಣ್‌ಪುರಕ್ಕೆ ಬಂದು ನೆಲೆಸಿದರು. ಒಂದೂವರೆ ದಶಕಗಳಿಂದ ತಮ್ಮ ಸಾಮಾಜಿಕ ಚಟುವಟಿಕೆಗಳ ಮೂಲಕ ಜನಮನ ಸೆಳೆದಿದ್ದಾರೆ. ಮದುವೆ, ಶವಸಂಸ್ಕಾರ, ಬಡ ಮಕ್ಕಳ ವಿದ್ಯಾಭ್ಯಾಸ ಸೇರಿ ವಿವಿಧ ಸಾಮಾಜಿಕ ಕಾರ್ಯದ ಜತೆಗೆ ಅಗತ್ಯವಿದ್ದವರಿಗೆ ಆರ್ಥಿಕ ಸಹಾಯ ಮಾಡುತ್ತಿದ್ದಾರೆ. ರಾಜಕೀಯಕ್ಕೆ ಬರಬೇಕೆಂಬ ಇರಾದೆ ಇಲ್ಲದಿದ್ದರೂ, ಪ್ರಶಾಂತ್ ಕಿಶೋರ್ ಸಿದ್ಧಾಂತಗಳನ್ನು ಒಪ್ಪಿಕೊಂಡು ಜನ ಸುರಾಜ್ ಸೇರಿದ್ದಾರೆ. ಬಿಹಾರದಲ್ಲಿ ರಾಜಕೀಯ ಪಕ್ಷಗಳಾದ ಬಿಜೆಪಿ, ಆರ್‌ಜೆಡಿ, ಎಲ್‌ಜೆಪಿ, ಜೆಡಿಯುನಂತಹ ಪಕ್ಷಗಳು ಮಂಗಳಮುಖಿಯರಿಗೆ ಟಿಕೆಟ್ ನೀಡಿದ ಉದಾಹರಣೆ ಇಲ್ಲ. ಆದರೆ, ಪಕ್ಷವೊಂದರ ಚಿಹ್ನೆಯಡಿಯಲ್ಲಿ ಮಂಗಳಮುಖಿ ಸ್ಪರ್ಧೆ ಮಾಡುತ್ತಿರುವುದು ಈ ರಾಜ್ಯದಲ್ಲಿ ಇದೀಗ ಹೊಸತು. ಜಾತಿ ಅಂಕಗಣಿತದ ವಿಪರೀತ ಲೆಕ್ಕಾಚಾರಗಳನ್ನು ಪರಿಗಣಿಸಿ ಟಿಕೆಟ್ ನಿರ್ಧಾರವಾಗುವ ರಾಜ್ಯದಲ್ಲಿ, ತೃತೀಯ ಲಿಂಗಿ ಅಭ್ಯರ್ಥಿಯೊಬ್ಬರು ಎರಡೂ ಮೈತ್ರಿಕೂಟಗಳಿಗೆ ಪ್ರಬಲ ಸವಾಲೊಡ್ಡಿದ್ದು, ಭೋರೆ ಕ್ಷೇತ್ರ ತ್ರಿಕೋನ ಕದನ ಕಣವಾಗಿ ಮಾರ್ಪಟ್ಟಿದೆ.

ಜೆಡಿಯುನ ಸುನೀಲ್ ಕುಮಾರ್ ಕುಟುಂಬ ಸುಮಾರು 30 ವರ್ಷಗಳಿಂದ ಕ್ಷೇತ್ರದ ರಾಜಕಾರಣದಲ್ಲಿದ್ದು, 1985ರಲ್ಲಿ ಮೊದಲ ಬಾರಿಗೆ ಸುನೀಲ್ ಸೋದರ ಅನಿಲ್ ಕುಮಾರ್ ಕಾಂಗ್ರೆಸ್‌ನಿಂದ ಇಲ್ಲಿ ಶಾಸಕರಾಗಿದ್ದರು. 2005ರಲ್ಲಿ 2 ಬಾರಿ ಆರ್‌ಜೆಡಿಯಿಂದ (ಮಧ್ಯಂತರ ಚುನಾವಣೆಯೂ ನಡೆದಿತ್ತು), 2015ರಲ್ಲಿ ಮತ್ತೆ ಕಾಂಗ್ರೆಸ್‌ನಿಂದ ಅನಿಲ್ ಕುಮಾರ್ ಗೆದ್ದು ಬಂದರು. 2020ರಲ್ಲಿ ತಮ್ಮ ಸುನೀಲ್ ಕುಮಾರ್ ಸ್ಪರ್ಧಿಸಿ, ಸಿಪಿಐ(ಎಂಎಲ್)ನ ಜಿತೇಂದ್ರ ಪಾಸ್ವಾನ್ ವಿರುದ್ಧ ಕೇವಲ 462 ಮತಗಳಿಂದ ಗೆದ್ದು ನಿತೀಶ್ ಸರಕಾರದಲ್ಲಿ ಮಂತ್ರಿಯಾದರು.

ಇಂಡಿ ಒಕ್ಕೂಟದಿಂದ ಸಿಪಿಐ(ಎಂಎಲ್)ನ ಜಿತೇಂದ್ರ ಪಾಸ್ವಾನ್ ಈ ಸಲವೂ ನಾಮಪತ್ರ ಸಲ್ಲಿಸಿದ್ದರು. ಆದರೆ ನಾಮಪತ್ರ ಸಲ್ಲಿಕೆಯ ಕೆಲವೇ ಹೊತ್ತಿನಲ್ಲಿ ಅವರನ್ನು ಕೊಲೆ ಪ್ರಕರಣವೊಂದರಲ್ಲಿ ಬಿಹಾರ ಪೊಲೀಸರು ಬಂಧಿಸಿದ್ದಾರೆ. ಹೀಗಾಗಿ ಅಭ್ಯರ್ಥಿ ಬದಲಿಸಿರುವ ಇಂಡಿ ಒಕ್ಕೂಟವು ಧನಂಜಯ ಪಾಸ್ವಾನ್‌ರನ್ನು ದೆಹಲಿಯಿಂದ ಕರೆದುಕೊಂಡು ಬಂದಿದೆ. ದಲಿತ ಸಮುದಾಯದ ಧನಂಜಯ ಮೂಲತಃ ಬೋಧಗಯಾದವರು. ಲೇಖಕ, ಕವಿ ಹಾಗೂ ಕಲಾವಿದನಾಗಿ ಎಡಪಂಥೀಯ ವರ್ಗದಲ್ಲಿ ಸಾಕಷ್ಟು ಗುರುತಿಸಿಕೊಂಡಿರುವ ಧನಂಜಯ್‌ಗೆ ಜಿತೇಂದ್ರ ಪಾಸ್ವಾನ್ ಮೇಲಿನ ಅನುಕಂಪದ ಲಾಭ ಸಿಗುವ ಲಕ್ಷಣಗಳಿವೆ. ಜಿತೇಂದ್ರ ಪಾಸ್ವಾನ್ ನಾಮಪತ್ರ ಸಲ್ಲಿಸುವುದನ್ನೇ ಕಾಯುತ್ತಿದ್ದ ಸರಕಾರ, ನಂತರ ಬಂಧಿಸಿದೆ. ಅವರಿಗೆ ಸೋಲಿನ ಹೆದರಿಕೆ ಇರುವುದರಿಂದಲೇ ಹೀಗೆ ಮಾಡಿದ್ದಾರೆ. ಕಳೆದ ಸಲವೂ ಜಿತೇಂದ್ರ ಪಾಸ್ವಾನ್ ಗೆದ್ದಿದ್ದರು. ಆದರೆ ಚುನಾವಣೆ ಅಧಿಕಾರಿಗಳೇ ಅಕ್ರಮ ಮಾಡಿ 462 ಮತಗಳಿಂದ ಸೋತಿದ್ದಾರೆ ಎಂದು ಫಲಿತಾಂಶ ಘೋಷಿಸಿದರು ಎಂದು ಧನಂಜಯ ಪಾಸ್ವಾನ್ ಪ್ರಚಾರ ಮಾಡುತ್ತಿರುವ ಯುವ ವರ್ಗ ಆರೋಪ ಮಾಡುತ್ತಿರುವುದನ್ನು ಇಲ್ಲಿ ಕೇಳಬಹುದು.

ಬಿಹಾರದ ಭೋರೆ ನಗರ

ಮೋದಿ-ನಿತೀಶ್ ಬೆಸ್ಟ್, ಆದರೆ..

ಬಿಹಾರಿಗರ ರಕ್ತದಲ್ಲೇ ರಾಜಕೀಯ ಜಾಗೃತಿ ಇದೆ. ಚುನಾವಣೆ ಸಂದರ್ಭದಲ್ಲಿ ರಾಜಕೀಯ ಒಲವು ಹಾಗೂ ಯಾರಿಗೆ ಮತ ಹಾಕುತ್ತೀರಿ ಎಂದು ಕೇಳಿದರೆ ಸುಲಭದಲ್ಲಿ ಉತ್ತರಿಸುವುದಿಲ್ಲ, ಏನೇನೋ ಹೇಳಿ ತೇಲಿಸಿಬಿಡುತ್ತಾರೆ. 'ನೋಡೋಣ, ಹವಾ ಇಬ್ಬರದ್ದೂ ಇದೆ, 14ಕ್ಕೆ ಹೇಗೂ ಗೊತ್ತಾಗುತ್ತದಲ್ಲ' ಎಂದೇ ಗ್ರಾಮೀಣ ಭಾಗದ ಅನೇಕರು ಹೇಳುತ್ತಾರೆ. ಕೆದಕಿ, ಕೆದಕಿ, ವಿಶ್ವಾಸ ಮೂಡಿಸಿದ ಮೇಲೆ ಮನಬಿಚ್ಚಿ ಮಾತಾಡಲು ಶುರುಮಾಡುತ್ತಾರೆ. ಭೋರೆಯ ರಖ್ವಾ ಬಿರ್ತಿ ಟೋಲಾದ ಲಲ್ಲನ್ ಭೈಟಾ ಕೂಡ ಆರಂಭದಲ್ಲಿ ನಮ್ಮೊಂದಿಗೆ ಗಾಳಿಪಟವನ್ನೇ ಹಾರಿಸಿದ. ನಂತರ ನನ್ನ ಹೆಂಡತಿಗೆ ಜೀವಿಕಾ ದೀದಿ ಸ್ಕೀಮ್ ಅಡಿಯಲ್ಲಿ ರು.10 ಸಾವಿರ ಬಂದಿದೆ. ನಿತೀಶ್-ಮೋದಿ ಜೋಡಿ ಈ ರಾಜ್ಯವನ್ನು ಸುಧಾರಣೆಯ ಪಥದಲ್ಲಿ ಕೊಂಡೊಯ್ಯುತ್ತಿದೆ. ಮೋದಿ ದೇಶದ, ನಮ್ಮೆಲ್ಲರ ರಾಜ. ಅವರಂತಹ ಪ್ರಧಾನಿಯನ್ನು ನಾನಂತೂ ಕಂಡಿಲ್ಲ. 'ರಾಜ್ಯದಲ್ಲಿ ಮದ್ಯ ನಿಷೇಧ ಮಾಡಿದ್ದು ನಿತೀಶ್‌ರ ಒಳ್ಳೆಯ ಕೆಲಸಗಳಲ್ಲಿ ಒಂದು' ಎನ್ನುತ್ತಾ ಹಾಡಿಹೊಗಳಿದ. 'ಅದಿರಲಿ, ನೀನು ಮತ ಹಾಕುವುದು ಯಾರಿಗೆ, ಅದನ್ನು ಹೇಳು?' ಎಂದು ಕೇಳಿದ್ದಕ್ಕೆ, 'ಅದಿನ್ನೂ ತೀರ್ಮಾನ ಮಾಡಿಲ್ಲ. ಇನ್ನೂ ನಾಲ್ಕೈದು ದಿನ ಇದೆ. ಆಮೇಲೆ ನಿರ್ಧಾರ ಮಾಡುತ್ತೇನೆ' ಎಂದು ತಿಳಿಸಿದ. 'ಆಯ್ತು, ಜನ ಸುರಾಜ್ ಬಗ್ಗೆ ಏನು ಹೇಳುತ್ತೀರಿ?' ಎಂದು ಕೇಳಿದ್ದಕ್ಕೆ, 'ಪ್ರೀತಿ ಕಿನ್ನರ್ ಬಗ್ಗೆ ಗೊತ್ತಿದೆ. ಸಾಕಷ್ಟು ಒಳ್ಳೆ ಕೆಲಸ ಮಾಡುತ್ತಿದ್ದಾರೆ. ಜನರೇ ಅವರಿಗೆ ಕುಟುಂಬ. ಸರಕಾರ ಎನ್‌ಡಿಎ ಬಂದರೂ ಇಲ್ಲಿ ಪ್ರೀತಿ ಕಿನ್ನರ್‌ಗೆ ಅವಕಾಶ ನೀಡಬೇಕು ಎಂಬ ಚಿಂತನೆ ಇದೆ' ಎಂದು ಕೊನೆಗೂ ಒಪ್ಪಿಕೊಂಡ.

ಶೋಚನೀಯ ಸ್ಥಿತಿ

ಭೋರೆ ಸುತ್ತಮುತ್ತಲಿನ ಕೆಲ ಹಳ್ಳಿಗಳ ಪರಿಸ್ಥಿತಿ ಹೇಳತೀರದಾಗಿದ್ದು, ಹಿಂದುಳಿದ ಕ್ಷೇತ್ರ ಎನ್ನುವುದು ಒಳ ಪ್ರವೇಶಿಸುತ್ತಲೇ ಗೊತ್ತಾಗುತ್ತದೆ. ಸ್ವಚ್ಛತೆ ಬಗ್ಗೆ ಸ್ಥಳೀಯಾಡಳಿತಕ್ಕೇ ಜಾಗೃತಿ ಇಲ್ಲ, ಹಾಗಾಗಿ ಜನರ ಬಗ್ಗೆ ದೂರಿ ಪ್ರಯೋಜನವಿಲ್ಲ. ಪಟ್ಟಣ, ಹಳ್ಳಿಗಳಲ್ಲಿ ಜನರು ಕೊಚ್ಚೆ, ಚರಂಡಿ ಮಧ್ಯೆಯೇ ಅಂಗಡಿ, ಹೊಟೇಲ್‌ಗಳನ್ನು ಕಟ್ಟಿಕೊಂಡು ಜೀವನೋಪಾಯದ ಹಾದಿ ಕಂಡುಕೊಂಡಿದ್ದಾರೆ. ಗುಣಮಟ್ಟದ ಶಿಕ್ಷಣ ಕೇಂದ್ರ, ಆಸ್ಪತ್ರೆಗಳಂತೂ ಇಲ್ಲವೇ ಇಲ್ಲ. ಉತ್ತಮ ಚಿಕಿತ್ಸೆಗೆ ಗೋಪಾಲ್ ಗಂಜ್ ಜಿಲ್ಲೆಗೆ ಹೋಗುವುದು ಅನಿವಾರ್ಯ. ಕೆಲವೆಡೆ ರಸ್ತೆಗಳು ಹದಗೆಟ್ಟಿದ್ದರೆ, ಮತ್ತೆ ಕೆಲ ಹಳ್ಳಿಗಳಿಗೆ ಒಳ್ಳೆಯ ರಸ್ತೆಗಳಿವೆ. ನಿಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸ ಆಗಿದ್ದು ಯಾವಾಗ ಎಂದು ಕೇಳಿದರೆ, 'ನಿತೀಶ್ ಜೀ ಸಿಎಂ ಹೋನೇ ಕೇ ಬಾದ್' ಎಂದು ಬಹುತೇಕರು ಮುಕ್ತವಾಗಿ ಹೇಳುತ್ತಾರೆ.

ಲಾಕ್‌ಡೌನ್‌ನಿಂದ ಆರಂಭಗೊಂಡು ಈಗಲೂ ಪ್ರಧಾನಿ ಮೋದಿಯವರು ಗರೀಬ್ ಕಲ್ಯಾಣ್ ಯೋಜನೆಯಲ್ಲಿ ಉಚಿತ ದವಸ ಧಾನ್ಯಗಳನ್ನು ನೀಡುತ್ತಿದ್ದಾರೆ. ಅನಾರೋಗ್ಯದಿಂದ ಸಾಕಷ್ಟು ಹಣ ಖರ್ಚಾಗಿದೆ. ಆದರೆ ಉಚಿತ ಆಹಾರ ಪದಾರ್ಥ ಸಿಗುತ್ತಿದೆ. ನಮಗೆ ಮೋದಿಯೇ ಬೇಕು

– ಮಂಜುದೇವಿ, ಕಿರಾಣಿ ಅಂಗಡಿ ವ್ಯಾಪಾರಿ, ಭೋರೆ ನಿವಾಸಿ.

ಮಂಗಳಮುಖಿ ಎಂದು ಜನ ನನ್ನನ್ನೇನೂ ದೂರ ಮಾಡುತ್ತಿಲ್ಲ. ಅವರ ಮಗ-ಮಗಳಂತೆಯೇ ನೋಡುತ್ತಾರೆ. ನಾನು ಹಾಲಿ ಶಾಸಕ ಸುನೀಲ್ ಕುಮಾರ್ ವಿರುದ್ಧ ಸ್ಪರ್ಧೆ ಮಾಡುತ್ತಿಲ್ಲ. ಅವರನ್ನು ಬದಲಾಯಿಸಲು ಜನ ನಿರ್ಧಾರ ಮಾಡಿದ್ದಾರೆ. ಇಲ್ಲಿ ಶಾಲೆ-ಕಾಲೇಜುಗಳನ್ನು ನಿರ್ಮಾಣ ಮಾಡಿ ಮಕ್ಕಳ ಭವಿಷ್ಯ ರೂಪಿಸುವುದೇ ನನ್ನ ಗುರಿ

– ಪ್ರೀತಿ ಕಿನ್ನರ್, ಜನ ಸುರಾಜ್ ಅಭ್ಯರ್ಥಿ

ನಮ್ಮ ಸಮೀಕ್ಷೆ ಪ್ರಕಾರ ಪ್ರೀತಿ ಕಿನ್ನರ್ ಸದ್ಯಕ್ಕೆ ಮುನ್ನಡೆಯಲ್ಲಿದ್ದಾರೆ. ಇಂಡಿ ಒಕ್ಕೂಟದ ಧನಂಜಯ ಪಾಸ್ವಾನ್ ಮತ್ತು ಪ್ರೀತಿ ಕಿನ್ನರ್ ಮಧ್ಯೆ ಹಣಾಹಣಿ ಏರ್ಪಟ್ಟಿದೆ. ಸುನೀಲ್ ಕುಮಾರ್ ಅವರ ಬಗ್ಗೆ ಅಸಮಾಧಾನಗಳಿದ್ದು, ಅವರು ಮೂರನೇ ಸ್ಥಾನಕ್ಕೆ ಇಳಿಯಲಿದ್ದಾರೆ

– ಶರತ್ ದೇವ್, ಬೆಂಗಳೂರು ಕನ್ನಡಿಗ

ಸಮಾಚಾರ ಸಣ್ಣದಲ್ಲ

ಸಂಸ್ಕರಣ ಸಂಘಕ್ಕೆ ಅಧ್ಯಕ್ಷರ ಆಯ್ಕೆ

ಶಿವಮೊಗ್ಗ: ಶಿವಮೊಗ್ಗ ಜಿಲ್ಲಾ ತೋಟಗಾರಿಕಾ ಬೆಳೆಗಾರರ ಉತ್ಪನ್ನ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘ (ಹಾಪ್ಕಾಮ್ಸ್) ಕ್ಕೆ ಅಧ್ಯಕ್ಷರಾಗಿ ವಿಜಯ್ಕುಮಾರ್, ಉಪಾಧ್ಯಕ್ಷರಾಗಿ ಚಂದ್ರೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಒಟ್ಟು ಚುನಾಯಿತ 15 ನಿರ್ದೇಶಕರಿದ್ದು ಒಬ್ಬರು ಸರಕಾರದ ಪ್ರತಿನಿಧಿ ಹಾಗೂ ಜಂಟಿ ನಿರ್ದೇಶಕರಿಗೆ 1, ಒಟ್ಟು 17 ಮತಗಳಿದ್ದು, ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಎರಡು ನಾಮಪತ್ರಗಳು ಮಾತ್ರ ಸಲ್ಲಿಕೆಯಾಗಿರುವುದರಿಂದ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಆರ್.ಎಂ. ಮಂಜುನಾಥಗೌಡರ ಮಾರ್ಗದರ್ಶನದಲ್ಲಿ ಈ ಚುನಾವಣೆ ನಡೆದಿದ್ದು, ಅಧ್ಯಕ್ಷ-ಉಪಾಧ್ಯಕ್ಷರ ಅವಧಿ 1ವರೆ ವರ್ಷಕ್ಕೆ ಒಡಂಬಡಿಕೆಯಾಗಿದ್ದು, ಅವಿರೋಧ ಆಯ್ಕೆಗೆ ಸಹಕರಿಸಿದ ಎಲ್ಲ ನಿರ್ದೇಶಕರುಗಳಿಗೆ ಮತ್ತು ನಾಯಕರುಗಳಿಗೆ ಅಧ್ಯಕ್ಷ ವಿಜಯ್ಕುಮಾರ್‌ಮತ್ತು ಉಪಾಧ್ಯಕ್ಷ ಚಂದ್ರೇಗೌಡ ಧನ್ಯವಾದ ಸಲ್ಲಿಸಿದ್ದಾರೆ. ಈ ಸಂದರ್ಭದಲ್ಲಿ ಚುನಾವಣಾಧಿಕಾರಿಯಾಗಿ ಸಹಕಾರಿ ಇಲಾಖೆಯ ಅಧಿಕಾರಿ ಸತೀಶ್ ಕಾರ್ಯನಿರ್ವಹಿಸಿದ್ದರು. ಸಂಸ್ಥೆಯ ಎಲ್ಲ ಚುನಾಯಿತ ನಿರ್ದೇಶಕರು ಮತ್ತು ಅಧಿಕಾರಿಗಳು ಉಪಸ್ಥಿತರಿದ್ದರು.

ಶಿಕ್ಷಕರ ಸಂಘಕ್ಕೆ ಸತೀಶ್ ಅಧ್ಯಕ್ಷ

ಹೊಸನಗರ: ಹೊಸನಗರ ತಾಲೂಕು ಬಡ್ತಿ ಮುಖ್ಯ ಶಿಕ್ಷಕರ ಸಂಘದಅಧ್ಯಕ್ಷರಾಗಿ ಮುಂಬಾರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಟಿ.ಸತೀಶ್‌ರವರನ್ನು ಆಯ್ಕೆ ಮಾಡಲಾಯಿತು. ಈ ಸಂದರ್ಭದಲ್ಲಿ ನಿಕಟ ಪೂರ್ವ ಅಧ್ಯಕ್ಷೆ ಲಿಲ್ಲಿ ಡಿಸೋಜ, ನಿವೃತ್ತ ಮುಖ್ಯ ಶಿಕ್ಷಕರಾದ ಕುಬೇಂದ್ರಪ್ಪ, ಸುಶೀಲಮ್ಮ, ಶಾರದಮ್ಮ, ಕಾರ್ಯದರ್ಶಿ ದುಗ್ಗಪ್ಪ ಉಪಸ್ಥಿತರಿದ್ದರು.

ನಿಜಲಿಂಗಪ್ಪ ಸಂಸ್ಥೆಯಿಂದ ನಾಡಗೀತೆ ಗಾಯನ

ಹೊಸದುರ್ಗ: ಕನ್ನಡ ರಾಜ್ಯೋತ್ಸವ ಮತ್ತು ಕನ್ನಡ ನಾಡಗೀತೆಯ ಶತಮಾನೋತ್ಸವದ ನಿಮಿತ್ತ ಪಟ್ಟಣದ ಎಸ್.ನಿಜಲಿಂಗಪ್ಪ ಶಿಕ್ಷಣ ಸಂಸ್ಥೆಯ ವತಿಯಿಂದ ಶುಕ್ರವಾರ ನಗರದ ಮುಖ್ಯರಸ್ತೆ ಮಾರ್ಗದಲ್ಲಿ ಸಂಸ್ಥೆಯ 2000ಕ್ಕೂ ಅಧಿಕ ವಿದ್ಯಾರ್ಥಿಗಳಿಂದ ಹಮ್ಮಿಕೊಂಡಿದ್ದ ಸಾಮೂಹಿಕ ನಾಡಗೀತೆ ಗಾಯನದ ರಾಜ್ಯೋತ್ಸವ ಸಂಭ್ರಮಾಚರಣೆಯು ನಾಗರಿಕರ ಕಣ್ಮನ ಸೆಳೆಯಿತು. ಈ ಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಎಂ.ಪಿ.ಪ್ರಕಾಶ್ ಶಾಲೆ, ನಿಜಲಿಂಗಪ್ಪ ಇಂಟರ್‌ನ್ಯಾಷನಲ್ ಸ್ಕೂಲ್, ನಿಜಲಿಂಗಪ್ಪ ವಿಜ್ಞಾನ ಹಾಗೂ ವಾಣಿಜ್ಯ ಪಿಯು ಕಾಲೇಜು, ಇಂದಿರಾಗಾಂಧಿ ಶಿಕ್ಷಣ ಮಹಾವಿದ್ಯಾಲಯದ 2000ಕ್ಕೂ ಅಧಿಕ ವಿದ್ಯರ್ಥಿಗಳು ಮೆರವಣಿಗೆಯಲ್ಲಿ ಭಾಗವಹಿಸುವ ಮೂಲಕ ರಾಜ್ಯೋತ್ಸವ ಆಚರಣೆಗೆ ಮೆರುಗು ತಂದರು. ಸಂಸ್ಥೆಯ ಕಾರ್ಯದರ್ಶಿ ಕೆ.ಎಸ್.ಕಲ್ಮಠ್, ಅಕಾಡಮಿಕ್ ಡೈರಕ್ಟರ್‌ಎಂ.ಬಿ.ತಿಪೇಸ್ವಾಮಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಹೈಕರ್ಟ್ ನಿವೃತ್ತ ನ್ಯಾಯಾಧೀಶ ಎಚ್.ಬಿಲ್ಲಪ್ಪ, ತಾಪಂ ಇಒ ಸುನೀಲ್ಕುಮಾರ್, ಸಿಪಿಐ ರಮೇಶ್, ಸಂಸ್ಥೆಯ ಅಧ್ಯಕ್ಷ ಎಂ.ಶಿವಲಿಂಗಪ್ಪ, ಉಪಾಧ್ಯಕ್ಷ ಕೆ.ಎಸ್.ಪುಟ್ಟರಾಜು, ಖಜಾಂಚಿ ಕೆ.ಸಿ.ಮಲ್ಲಿಕಾರ್ಜುನಪ್ಪ, ಟ್ರಸ್ಟಿಗಳಾದ ವಿಜಯಶಿವಲಿಂಗಪ್ಪ, ವೀಣಾನಟರಾಜ್, ವೇದಮೂರ್ತಿ, ವ್ಯವಸ್ಥಾಪಕ ವೀರೇಶ್, ಸಾಹಿತಿ ನಿಸ್ಸಾರ್‌ಅಹಮದ್, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಆರ್.ಶಾಂತಪ್ಪ, ನಾಗತಿಹಳ್ಳಿ ಮಂಜುನಾಥ್, ಬಿ.ಪಿ.ಓಂಕಾರಪ್ಪ, ನವೀನ್ಕುಮಾರ್, ಪ್ರಾಂಶುಪಾಲರಾದ ಡಾ.ಟಿ.ಬಸಪ್ಪ, ಡಾ. ಉಮರ್ಫಾರುಕ್, ಜ್ವಾಲಾರೋಕಡೆ, ಪುಷ್ಪ ಸಂಸ್ಥೆಯ ಸಿಬ್ಬಂದಿ ಪಾಲ್ಗೊಂಡಿದ್ದರು.

ಈಶ್ವರಸ್ವಾಮಿ ಪ್ರಾಣ ಪ್ರತಿಷ್ಠಾಪನೆ

ಹೊಳಲ್ಕೆರೆ: ಗ್ರಾಮಸ್ಥರೆಲ್ಲ ಸೇರಿ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದರಿಂದ ಅದ್ಬುತವಾದ ದೇವಸ್ಥಾನ ನಿರ್ಮಾಣವಾಗಿದೆ ಎಂದು ಶಾಸಕ ಡಾ.ಎಂ.ಚಂದ್ರಪ್ಪ ಮೆಚ್ಚುಗೆ ವ್ಯಕ್ತಪಡಿಸಿದರು. ತಾಲ್ಲೂಕಿನ ಸಾಸಲು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಈಶ್ವರಸ್ವಾಮಿ ದೇವಸ್ಥಾನ ಪ್ರಾಣ ಪ್ರತಿಷ್ಠಾಪನೆ, ಕಳಸಾರೋಹಣ ಹಾಗೂ ಮಹಾ ಗಣಪತಿ ದೇವಸ್ಥಾನ ಉದ್ಘಾಟಿಸಿದರು. 25 ಲಕ್ಷ ರು.ಗಳನ್ನು ದೇವಸ್ಥಾನಕ್ಕೆ ಕೊಟ್ಟಿದ್ದೇನೆ. ಪುಷ್ಕರಣಿಗೆ ಒಂದು ಕೋಟಿ ರೂ.ಗಳನ್ನು ನೀಡಿದ್ದೇನೆ. ಆದರೆ ಧರ್ಮಸ್ಥಳದವರು ದೇವಸ್ಥಾನಕ್ಕೆ ಹಣ ನೀಡಿದ್ದರಿಂದ 25 ಲಕ್ಷ ರು.ಗಳನ್ನು ಬೇರೆ ಕಾಮಗಾರಿಗೆ ಬಳಸಿಕೊಳ್ಳಲಾಗಿದೆ ಎಂದರು.

{ಶೋಭಾ ಕರಂದ್ಲಾಜೆ} ಕೇಂದ್ರ ಸಚಿವೆ

ರಾಜ್ಯಲ್ಲಿ ಜನರ ಪಾಲಿಗೆ ಸರಕಾರ ಬದುಕಿಲ್ಲ. ಅವರವರ ರಾಜಕೀಯ ಮೇಲಾಟಕ್ಕೆ ಮಾತ್ರ ಸೀಮಿತವಾಗಿದೆ. ರಾಜ್ಯದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಸೇರಿದಂತೆ ನಿರಂತರವಾದ ಅಪರಾಧ ಪ್ರಕರಣಗಳನ್ನು ನಿಗ್ರಹಿಸಲು ರಾಜ್ಯ ಸರ್ಕಾರ ವಿಫಲವಾಗಿದೆ.

ರೈತ ಸಂಘಟನೆಯಿಂದ ಪ್ರತಿಭಟನೆ| ರಾಜ್ಯ ರೈತ ಸಂಘ ಮನವಿ ಸಲ್ಲಿಕೆ

ಬೆಂಬಲ ಬೆಲೆಗಿಂತ ಕಡಿಮೆ ಖರೀದಿಗೆ ಶಿಕ್ಷೆ ವಿಧಿಸಿ

ದಾವಣಗೆರೆ: ರೈತರು ಬೆಳೆದ ಬೆಳೆಗಳಿಗೆ ಬೆಂಬಲ ಬೆಲೆ ಘೋಷಿಸಿ, ಕಾನೂನು ಜಾರಿಗೊಳಿಸುವ ಮೂಲಕ ಬೆಂಬಲ ಬೆಲೆಗಿಂತ ಕಡಿಮೆ ಬೆಲೆಗೆ ಖರೀದಿಸುವ ಖರೀದಿದಾರರಿಗೆ ಜೈಲು ಶಿಕ್ಷೆ ವಿಧಿಸುವ, ಲೈಸೆನ್ಸ್ ರದ್ದುಪಡಿಸುವುದೂ ಸೇರಿದಂತೆ ಕಠಿಣ ಕಾನೂನು ಜಾರಿಗಾಗಿ ತಾಲೂಕಿನ ಆನಗೋಡು ಗ್ರಾಮದ ನಾಡ ಕಚೇರಿ ಎದುರು ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಪ್ರತಿಭಟನೆ ನಡೆಸಿತು.

ತಾಲೂಕಿನ ಆನಗೋಡು ಗ್ರಾಮದ ನಾಡ ಕಚೇರಿ ಎದುರು ಸಂಘದ ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ ನೇತೃತ್ವದಲ್ಲಿ ಕೇಂದ್ರ - ರಾಜ್ಯ ಸರಕಾರಗಳು ರೈತ ರಹಿತ ಕಾಯುವ ಕೆಲಸ ಮಾಡಲಿ, ಬೆಂಬಲ ಬೆಲೆಗಿಂತ ಕಡಿಮೆ ಬೆಲೆಗೆ ಖರೀದಿಸುವ ಖರೀದಿದಾರರ ಪರವಾನಿಗೆ ರದ್ದುಪಡಿಸುವ, 50 ರು. ಕಡಿಮೆ ದರಕ್ಕೆ ಖರೀದಿಸಿದರೆ ಶೇ.5ರಷ್ಟು ದಂಡ, ದಂಡದ ಹಣ ನೇರವಾಗಿ ರೈತರ ಖಾತೆಗೆ ಜಮಾ ಮಾಡುವುದೂ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ನಾಡ ಕಚೇರಿಯ ಉಪ ತಹಸೀಲ್ದಾರ್‌ಮೂಲಕ ಕೇಂದ್ರ, ರಾಜ್ಯ ಸರಕಾರಕ್ಕೆ ರೈತರು ಮನವಿ ಅರ್ಪಿಸಿದರು.

ಇದೇ ವೇಳೆ ಮಾತನಾಡಿದ ಸಂಘದ ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ, ಕಡಿಮೆ ಬೆಲೆಗೆ ಖರೀದಿಸುವ ಮೂಲಕ ರೈತರಿಗೆ ವಂಚಿಸುವ ಖರೀದಿದಾರರನ್ನು ಜೈಲಿಗೆ ತಳ್ಳುವ ಕಾನೂನನ್ನು

ರೈತರು ಪ್ರತಿಭಟಿಸಿ, ನಾಡ ಕಚೇರಿ ಉಪ ತಹಸೀಲ್ದಾರ್‌ಮೂಲಕ ಸರಕಾರಕ್ಕೆ ಮನವಿ ಮಾಡಿದರು.

ದೇಶದಲ್ಲಿ ಮೊದಲು ಜಾರಿಗೊಳಿಸಬೇಕು. ಬೆಂಬಲ ಬೆಲೆಗೆ ಖರೀದಿಸದ ಖರೀದಿದಾರರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಂಡರೆ, ಬೆಂಬಲ ಬೆಲೆ ಘೋಷಣೆ ಮಾಡಿದ್ದಕ್ಕೂ, ಬೆಂಬಲ ಬೆಲೆಗೂ ನ್ಯಾಯ ಸಿಗುತ್ತದೆ. ಕೇಂದ್ರ ಸರಕಾರ ಮೆಕ್ಕೆಜೋಳಕ್ಕೆ ಪ್ರತಿ ಕ್ವಿಂಟಾಲ್ ಗೆ 2400 ರು. ಬೆಲೆ ಹೇಳಿದರೆ, ಖರೀದಿದಾರರು 1300 ರು.ನಿಂದ 1700 ರು. ಖರೀದಿಸುತ್ತಾರೆ ಎಂದು ದೂರಿದರು.

ಕೇಂದ್ರ, ರಾಜ್ಯ ಸರಕಾರ, ಜಿಲ್ಲಾಡಳಿತ ಮಧ್ಯ ಪ್ರವೇಶಿಸಿ, ರೈತರಿಗೆ ಬೆಲೆ ಖಾತರಿಗೊಳಿಸಬೇಕು. ಇಲ್ಲದಿದ್ದರೆ ರಾಜ್ಯಾದ್ಯಂತ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು. ಸಾಕಷ್ಟು ಸಲ ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಈ ಹಿನ್ನೆಲೆಯಲ್ಲಿ ಹೋಬಳಿ, ತಾಲೂಕು, ಜಿಲ್ಲಾ ಮಟ್ಟದಲ್ಲಿ ಹೋರಾಟ ಶುರು ಮಾಡಿದ್ದೇವೆ. ಜಿಲ್ಲಾ ಕೇಂದ್ರದಲ್ಲಿ 2014ರಿಂದ ಈವರೆಗೂ ಮೆಕ್ಕೆಜೋಳ ಖರೀದಿ ಕೇಂದ್ರ ಸ್ಥಾಪಿಸಿಲ್ಲ. ಆದರೆ, ಕೇಂದ್ರ ಸರಕಾರ ಬೆಂಬಲ ಘೋಷಿಸಿದ ಮಾತ್ರಕ್ಕೆ ರೈತರಿಗೆ ಪ್ರಯೋಜನ ಆಗುವುದಿಲ್ಲ. ರಾಜ್ಯವೂ ಖರೀದಿ ಕೇಂದ್ರ ಸ್ಥಾಪಿಸಿ, ಆವರ್ತ ನಿಧಿಯಡಿ ಮೆಕ್ಕೆಜೋಳ ಖರೀದಿಸಲಿ ಎಂದು ಒತ್ತಾಯಿಸಿದರು.

ಮೆಕ್ಕೆಜೋಳ ಖರೀದಿಸಿದ ನಂತರ ಅದನ್ನು ಮಾರಲು ತೊಂದರೆಯೆಂಬ ಕಾರಣಕ್ಕೆ ಹಿಂದೇಟು

> **ಕನಿಷ್ಟ ಬೆಂಬಲ ಕಾಯಿದೆ ಜಾರಿಗೊಂಡರೆ ದೇಶದಲ್ಲಿ ಖರೀದಿ ಕೇಂದ್ರಗಳ ಅವಶ್ಯಕತೆಯೇ ಇರುವುದಿಲ್ಲ. ಮೆಕ್ಕೆಜೋಳದ ಬೆಲೆ ಕುಸಿದಾಗ ಉಭಯ ಸರಕಾರ, ಜಿಲ್ಲಾಡಳಿತ ಮಧ್ಯ ಪ್ರವೇಶಿಸಿ, ರೈತರ ಬೆಳೆಗೆ ಬೆಲೆ ಸಿಗುವಂತೆ ಮಾರುಕಟ್ಟೆ ವ್ಯವಸ್ಥೆ ರೂಪಿಸಬೇಕು. ಜಿಲ್ಲಾಧಿಕಾರಿಗಳು ಖರೀದಿದಾರು, ರೈತರ ಸಭೆ ಮಾಡಿ, ಮೆಕ್ಕೆಜೋಳವನ್ನು 2 ಸಾವಿರ ರು.ಗಿಂತ ಕಡಿಮೆ ದರಕ್ಕೆ ಖರೀದಿಸಬಾರದೆಂದು ಹೇಳಿರುವುದನ್ನು ರೈತ ಸಂಘ ಒಪ್ಪುವುದಿಲ್ಲ. ಕನಿಷ್ಟ 2400 ರು.ಗಿಂತ ಹೆಚ್ಚಿನ ಬೆಲೆಗೆ ಖರೀದಿಸಲು ಕ್ರಮ ಕೈಗೊಳ್ಳಲಿ.**
>
> **-ಹುಚ್ಚವ್ವನಹಳ್ಳಿ ಮಂಜುನಾಥ,** ರಾಜ್ಯಾಧ್ಯಕ್ಷ

ಹಾಕುತ್ತಿರುವುದು ಸರಿಯಲ್ಲ. ಎಲ್ಲಾ ಖರೀದಿದಾರರು ಅಕ್ರಮವಾಗಿ ಕೂಟ ರಚಿಸಿಕೊಂಡು, ಕಡಿಮೆ ಬೆಲೆಗೆ ಖರೀದಿಗೆ ತರ್ಮಾನಿಸಿದ್ದರಿಂದ ಬೆಲೆ ಕುಸಿತವಾಗುತ್ತಿದೆ. ರೈತರು ಬೆಳೆದ ಯಾವುದೇ ಬೆಳೆಗಳ ಬೆಲೆ ಕಡಿಮೆಯಾಗಬೇಕೆಂದರೆ ರೈತರಿಗೆ ತಿಳಿದಂತೆ ಎಲ್ಲ ಜಿಲ್ಲೆಗಳಲ್ಲೂ ಹೆಚ್ಚುವರಿ ಇಳುವರಿ ಬಂದಿರಬೇಕು. ಹೆಚ್ಚು ಹೆಚ್ಚು ಬೆಳೆ ಏಕಕಾಲಕ್ಕೆ ಮಾರಾಟಕ್ಕೆಬಂದಾಗ ಬೆಲೆ ಕುಸಿತವಾಗುತ್ತದೆ. ಆದರೆ, ಅಡಿಕೆ ಬೆಳೆ ಹೆಚ್ಚುತ್ತಿದ್ದು, ಮೆಕ್ಕೆಜೋಳದ ಬೆಳೆ ಕಡಿಮೆಯಾಗುತ್ತಿದ್ದರೂ ಯಾಕೆ ಬೆಲೆ ಕುಸಿಯುತ್ತಿದೆ ಎಂದು ಪ್ರಶ್ನಿಸಿದರು.

ರೈತರು ಮೆಕ್ಕೆಜೋಳ ಬಿತ್ತನೆ ಮಾಡಿದ ಒಂದು ತಿಂಗಳಿಗೂ ಹೆಚ್ಚು ಕಾಲ ನಿರಂತರ ಮಳೆಯಾಗಿದ್ದರಿಂದ ಮೆಕ್ಕೆಜೋಳದ ಬೆಳೆ ಹಾನಿಯಾಗಿದೆ. ಮೆಕ್ಕೆಜೋಳದ ಬೆಳೆಯಲ್ಲಿ ಮುಳ್ಳು ಸಜ್ಜೆ ಎಂಬ ಕಳೆ ಬೆಳೆದು, ಮೆಕ್ಕೆಜೋಳದ ಬೆಳೆಯಲ್ಲಿ ಇಳುವರಿ ಕುಂಠಿತವಾಗಿದೆ. ಜು.29ರಿಂದ ಅ.5ರವರೆಗೆ ಮಳೆ ಬಂದಿಲ್ಲ. ಇದರಿಂದಾಗಿ ಮೆಕ್ಕೆಜೋಳದ ಇಳುವರಿಯೂ ಕುಂಠಿತವಾಗಿದೆ. ದೀಪಾವಳಿ ನಂತರ ಮೆಕ್ಕೆಜೋಳ ಮುರಿಯಲು ಮುಂದಾಗಿದ್ದ ರೈತರು ಇದೀಗ ಚಂಡ ಮಾರುತದಿಂದ ಮಳೆಯಾಗುತ್ತಿರುವುದರಿಂದ ಮೆಕ್ಕೆಜೋಳ ಮುರಿಯಲಾಗುತ್ತಿಲ್ಲ. ಎಲ್ಲಾ ಸಮಸ್ಯೆ ಕಾರಣಕ್ಕೆ ಮೆಕ್ಕೆಜೋಳದ ರೈತರ ಹೊಲದಲ್ಲೇ ಇದೆ. ಮಾರುಕಟ್ಟೆಯಲ್ಲೂ ಬೆಲೆ ಇಲ್ಲ. ಹೀಗಾದರೆ ರೈತರ ಪಾಡೇನು ಎಂದು ಪ್ರಶ್ನಿಸಿದರು.

ಸಂಘದ ಹೂವಿನಮಡು ಸಿ.ನಾಗರಾಜ, ಕಾರಿಗನೂರು ಕ್ರಾಸ್ ಶಿವಕುಮಾರ, ಗುಮ್ಮನೂರು ರುದ್ರೇಶ, ಪಾಮೇನಹಳ್ಳಿ ಗೌಡ್ರ ಶೇಖರಪ್ಪ, ಕರ್ಕಿ ಹನುಮಂತಪ್ಪ, ಹೊಸಹಳ್ಳಿ ಮೋಹನ ನಾಯ್ಕ, ಹೊಸಹಳ್ಳಿ ಎನ್. ಭೀಮಾನಾಯ್ಕ, ಭೀಮೇಶ ಗುಮ್ಮನೂರು, ಆಲೂರು ಪರಶುರಾಮ, ಹೊನ್ನೂರು ಮಂಜಣ್ಣ, ಹೊನ್ನೂರು ಸಿದ್ದವೀರಪ್ಪ ಇದ್ದರು.

ತಾಂತ್ರಿಕ ದೋಷ ನಿವಾರಣೆಗೆ ಒತ್ತಾಯ

ದಾವಣಗೆರೆ: ಪ್ರಾದೇಶಿಕ ಸಾರಿಗೆ ಇಲಾಖೆಯಲ್ಲಿ ಆನ್ ಲೈನ್ ಸೇವೆಗಳ ತಾಂತ್ರಿಕ ದೋಷಗಳು ಮತ್ತು ಕಲಿಕಾ ಪರವಾನಿಗೆ ಪರೀಕ್ಷೆ ಸರಿಪಡಿಸುವಂತೆ ಒತ್ತಾಯಿಸಿ ಇಲ್ಲಿನ ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿಗಳ ಕಚೇರಿ ಆವರಣದಲ್ಲಿ ಶುಕ್ರವಾರ ವಾಹನ ಚಾಲನಾ ತರಬೇತಿ ಶಾಲೆ ಮತ್ತು ಮಾಲೀಕರ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಆರ್‌ಟಿಒ ಕಚೇರಿ ಎದುರು ಸಂಘದ ಅಧ್ಯಕ್ಷ ಫಯಾಜ್ ಅಹಮ್ಮದ್, ಉಪಾಧ್ಯಕ್ಷ ಈಶ್ವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ, ಸಾರಿಗೆ ಇಲಾಖೆಯಲ್ಲಿ ಆನ್ ಲೈನ್ ಸೇವೆಗಳ ತಾಂತ್ರಿಕ ದೋಷ ಹಾಗೂ ಕಲಿಕಾ ಪರವಾನಿಗೆ ಪರೀಕ್ಷೆಯಲ್ಲಿ ಆಗುತ್ತಿರುವ ಸಮಸ್ಯೆ ಸರಿಪಡಿಸಲು ಒತ್ತಾಯಿಸಿ ಘೋಷಣೆ ಕೂಗಲಾಯಿತು.

ಇದೇ ವೇಳೆ ಮಾತನಾಡಿದ ಸಂಘದ ಉಪಾಧ್ಯಕ್ಷ ಈಶ್ವರ, ಸಾರಿಗೆ ಇಲಾಖೆ ಆನ್ ಲೈನ್ ಸೇವೆಗಳ ತಾಂತ್ರಿಕ ದೋಷ ಸರಿಪಡಿಸಬೇಕು. ಕಲಿಕಾ ಪರವಾನಗಿ ಪರೀಕ್ಷೆ ಸರಿಪಡಿಸುವಂತೆ ಸಾಕಷ್ಟು ಸಲ ಇಲಾಖೆ ಅಧಿಕಾರಿಗಳಿಗೆ ಒತ್ತಾಯಿಸಿದ್ದರೂ ಕಿವಿಗೊಟ್ಟಿಲ್ಲ. ಸೆ.10ರಿಂದ ಕಲಿಕಾ ಪರವಾನಗಿ (ಎಲ್‌ಎಲ್) ಪರೀಕ್ಷೆ ನಿಂತಿದೆ ಎಂದು ದೂರಿದರು. ಅಂತರ್ಜಾಲದಲ್ಲಿ ಸಾರಿಗೆ ಇಲಾಖೆ ಆನ್ ಲೈನ್ ಸೇವೆ ಸಕ್ರಿಯಗೊಳಿಸಿದ್ದರೂ ಇದುವರೆಗೂ ಕಲಿಕಾ ಪರವಾನಗಿ ಪರೀಕ್ಷೆ ಅಂತರ್ಜಾಲದಲ್ಲಿ ಸರಿಯಾಗಿ, ಕ್ರಮಬದ್ಧವಾಗಿ ಪರೀಕ್ಷೆ ನಡೆಸಲು ಸಾರ್ವಜನಿಕರಿಗೆ, ವಾಹನ ಚಾಲನಾ ತರಬೇತಿ ಶಾಲೆಗಳಿಗೆ ಸರಿಯಾದ ಮಾಹಿತಿಯನ್ನೂ ಇಲಾಖೆಯು ನೀಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಇದೇ ಪರಿಸ್ಥಿತಿ ಮುಂದುವರಿಸದೆ ತ್ವರಿತವಾಗಿ ಸಮಸ್ಯೆ, ತಾಂತ್ರಿಕ ದೋಷ ಸರಿಪಡಿಸುವಂತೆ ಒತ್ತಾಯಿಸಿ ಮತ್ತೆ ಮನವಿ ಅರ್ಪಿಸಿದ್ದೇವೆ. ನಮ್ಮ ಹೋರಾಟಕ್ಕೆ ಜಿಲ್ಲಾ ಲಾರಿ ಮಾಲೀಕರ ಸಂಘ, ಸಾರಿಗೆ ಇಲಾಖೆ ಸಲಹೆಗಾರರ ಸಂಘ, ಸಾರಿಗೆ ಇಲಾಖೆ ಕಚೇರಿ ಸಮೀಪದ ಅಂತರ್ಜಾಲ ಅಂಗಡಿಗಳ ವ್ಯವಸ್ಥಾಪಕರು ಸಹ ಬೆಂಬಲ ಸೂಚಿಸಿದ್ದಾರೆ.

ಆದಷ್ಟು ಬೇಗನೆ ಸಮಸ್ಯೆ ಇಲಾಖೆ ಸರಿಪಡಿಸಲಿ ಎಂದು ಮನವಿ ಮಾಡಿದರು.

ಸಂಘದ ತಬ್ರೇಜ್, ಸ್ಪಂದನ ಸ್ನೇಹ ಬಳಗದ ಅಧ್ಯಕ್ಷ ಬಸವರಾಜ, ಚಂದ್ರಶೇಖರ, ಮಹಾಂತೇಶ, ರಜನಿ, ಅಶು, ಮುಜೀಬ್, ಪ್ರಕಾಶ, ತಿಪ್ಪೇಶ, ಶಿವಣ್ಣ, ಬಸವರಾಜ, ಸೈಯದ್ ಗೌಸ್, ರಾಜು, ಜಾಕೀರ್‌ಹುಸೇನ್ ಇದ್ದರು.ವಾಹನ ಚಾಲನಾ ತರಬೇತಿ ಶಾಲೆ ಮತ್ತು ಮಾಲೀಕರ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ವಾಹನ ಚಾಲನಾ ತರಬೇತಿ ಶಾಲೆ ಮತ್ತು ಮಾಲೀಕರ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

> **ಚಾಲನಾ ಪರವಾನಗಿ ಪರೀಕ್ಷೆ ಡಿಎಲ್ ಟೆಸ್ಟ್ ಸ್ಲ್ಯಾಟ್ ಮುಂಗಡ ಬುಕ್ಕಿಂಗ್ ಸೇವೆಯು 1 ತಿಂಗಳ ನಂತರ ಸಿಗುವುದರಿಂದ ಸಾರ್ವಜನಿಕರಿಗೂ ತೊಂದರೆಯಾಗುತ್ತಿದೆ. ಅಂತರ್ಜಾಲದಲ್ಲಿ ಸಾರಿಗೆ ಇಲಾಖೆ ಸೇವೆಗಳು ರಾಜ್ಯದಲ್ಲಿ ಮಾತ್ರ ಸಮರ್ಪಕವಾಗಿ ಸಿಗುತ್ತಿಲ್ಲ. ಕರ್ನಾಟಕದ ಸಾರಿಗೆ ಇಲಾಖೆಯ ಬಳಿ ಉತ್ತಮ ಗುಣಮಟ್ಟದ ತಂತ್ರಜ್ಞಾನ ಮತ್ತು ಪರಿಣಿತರ ಕೊರತೆಯಿಂದಾಗಿ ದಿನಕ್ಕೂ ಸಮಸ್ಯೆ ಉಲ್ಬಣಿಸುತ್ತಿದೆ.**
>
> **- ಈಶ್ವರ,** ಸಂಘದ ಉಪಾಧ್ಯಕ್ಷ

ಮಹಿಳಾ ನಿಲಯದಲ್ಲಿ ವಿವಾಹ ಮಹೋತ್ಸವ

ಮಹಿಳಾ ನಿಲಯದಲ್ಲಿ ವಿವಾಹ ಮಹೋತ್ಸವ ನಡೆಯಿತು.

ದಾವಣಗೆರೆ: ರಾಜ್ಯ ಮಹಿಳಾ ನಿಲಯದಲ್ಲಿ ಶುಕ್ರವಾರ ಮೂವರು ಮಹಿಳಾ ನಿವಾಸಿಗಳಾದ ಶಾಲಿನಿ (28), ರಕ್ಷಿತಾ.ಟಿ (21), ಮತ್ತು 24 ವರ್ಷದ ರುಚಿತ.ಎ ಸೇರಿದಂತೆ ಮೂವರು ಯುವತಿಯರಿಗೆ ಬದುಕು ಕಟ್ಟಿಕೊಡಲು ಮೂವರು ಯುವಕರು ಮುಂದಾಗಿದ್ದು, ಮೂವರು ನೂತನ ವಧು, ವರರ ವಿವಾಹ ಮಹೋತ್ಸವ ಸಮಾರಂಭಕ್ಕೆ ಮಹಿಳಾ ನಿಲಯ ಸಾಕ್ಷಿಯಾಯಿತು.

ವಿವಾಹಕ್ಕಾಗಿ ಶ್ರೀ ರಾಮನಗರದ ಮಹಿಳಾ ನಿಲಯವು ತಳಿರು ತೋರಣದಿಂದ ರಂಗೋಲಿಯಿಂದ ಕಂಗೊಳಿಸುತ್ತಿತ್ತು. ನಿಲಯದ ತುಂಬೆಲ್ಲ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ, ಮಹಿಳಾ ನಿಲಯದ ನಿವಾಸಿಗಳು, ಅವರ ಬಂಧುಗಳು ರೇಷ್ಮೆ ಸೀರೆಯುಟ್ಟು ಮದುವೆಯ ಮನೆ ತುಂಬ ತರಾತುರಿಯಲ್ಲಿ ಓಡಾಡುತ್ತಾ ಸಂಭ್ರಮದಿಂದ ಮದುವೆಯಾಚರಣೆಯ ಸಿದ್ಧತೆಯಲ್ಲಿ ತೊಡಗಿದ್ದ ದೃಶ್ಯ ಕಂಡು ಬಂದಿತು.

ಮದುವೆ ಚಪ್ಪರ, ಸ್ವಾಗತ ದ್ವಾರ ನಿರ್ಮಿಸಲಾಗಿತ್ತು. ಅಮಂತ್ರಿತರಿಗೆ ಗುಲಾಬಿ ಹೂ ನೀಡುವುದರೊಂದಿಗೆ ಸ್ವಾಗತಿಸಲಾಯಿತು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ರಾಜಾನಾಯ್ಕ ಅವರ ಸಂಪೂರ್ಣ ಮೇಲುಸ್ತುವಾರಿಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿವಿಧ ಘಟಕಗಳು, ಮಹಿಳಾ ನಿಲಯದ ಅಧಿಕಾರಿ, ಸಿಬ್ಬಂದಿ ತಮ್ಮ ಸ್ವಂತ ಮಕ್ಕಳ ಮದುವೆ ಸಮಾರಂಭವೆಂಬಂತೆ ಅಚ್ಚುಕಟ್ಟಾಗಿ ಮತ್ತು ಸಂಭ್ರಮದಿಂದ ಈ ಕಾರ್ಯಕ್ರಮ ಯಶಸ್ವಿಗೊಳಿಸಿದರು.

ಶ್ರೀ ರಾಮನಗರದ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ರಾಜ್ಯ ಮಹಿಳಾ ನಿಲಯದ ನಿವಾಸಿಗಳಾದ ಶಾಲಿನಿ ಇವರೊಂದಿಗೆ ನಾಗರಾಜ, ಇಬ್ಬರಿಬ್ಬರೂ ಶ್ರವಣ ಹಾಗೂ ವಾಕ್ ದೋಷವುಳ್ಳವರಾಗಿರುತ್ತಾರೆ. ರಕ್ಷಿತಾ.ಟಿ ಇವರೊಂದಿಗೆ ಬಸವರಾಜ್, ರುಚಿತ ಇವರೊಂದಿಗೆ ಪ್ರವೀಣ ಇವರ ವಿವಾಹ ಮಹೋತ್ಸವವು ಅ.31 ರಂದು ಬೆಳಗ್ಗೆ 7.30 ರಿಂದ 10.30 ರವರೆಗೆ ದಾವಣಗೆರೆಯ ರಾಜ್ಯ ಮಹಿಳಾ ನಿಲಯದಲ್ಲಿ ಸಂಭ್ರಮಾಚರಣೆಯಿಂದ ನೆರವೇರಿತು.

ರಾಜ್ಯ ಮಹಿಳಾ ನಿಲಯ ಸಂಸ್ಥೆಯಲ್ಲಿ ಈಗ ಹಾಲಿ 45 ನಿವಾಸಿಗಳು ಇದ್ದು, ಇಲ್ಲಿವರೆಗೆ ಸಂಸ್ಥೆಯಲ್ಲಿ 46 ವಿವಾಹ ಇಲಾಖೆಯ ನಿಯಮಾನುಸಾರ ವರದಿ ಪಡೆದುಕೊಂಡಿರುತ್ತಾರೆ. ಈ ಹಿಂದೆ ನಡೆದ ವಿವಾಹ ಮಹಿಳೆಯರು ತಮ್ಮ ಸಂಸಾರದೊಂದಿಗೆ ಸುಖ ಜೀವನ ನಡೆಸುತ್ತಿದ್ದಾರೆ. ಈ ಶುಭ ಸಂದರ್ಭದಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ವೇಲಾ ಡಿ.ಕೆ, ನ್ಯಾಯಾಧೀಶರು ಹಾಗೂ ಕಾನೂನು ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣವರ, ಜಿಪಂ ಸಿಇಒ ಗಿತ್ತೆ ಮಾಧವ್ ವಿಠ್ಠಲರಾವ್, ಎಸ್ಪಿ ಉಮಾಪ್ರಶಾಂತ್, ಅಪರ ಜಿಲ್ಲಾಧಿಕಾರಿ ಶೀಲವಂತ ಶಿವಕುಮಾರ್,ಡಿಹೆಚ್‌ಒ ಡಾ ಷಣ್ಮುಖಪ್ಪ, ಮಹಿಳಾ ನಿಲಯದ ಅಧೀಕ್ಷಕಿ ಜಿಲ್ಲಾ ಮಟ್ಟದ ಅಧಿಕಾರಿಗಳು ಸೇರಿದಂತೆ ನೂರಾರು ಮಂದಿ ಆಶೀರ್ವದಿಸಿದರು.

> **ಜೀವನದಲ್ಲಿ ಶಾಶ್ವತ ನೆನಪು**
>
> **ಜಿಲ್ಲಾಡಳಿತ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಮಾರ್ಗದರ್ಶನದಲ್ಲಿ ಶುಕ್ರವಾರ ಮಹಿಳಾ ನಿಲಯದ ಶಾಲಿನಿ, ರಕ್ಷಿತಾ.ಟಿ, ಮತ್ತು ರುಚಿತ.ಎ ಎಂಬ ನಮ್ಮ ಮೂವರು ಹೆಣ್ಣು ಮಕ್ಕಳಿಗೆ ಧಾರೆ ಎರೆದು ಕೊಟ್ಟಿರುವುದು ಬಹಳಷ್ಟು ಅರ್ಥ ಪೂರ್ಣವಾದ ಕಾರ್ಯ. ಶಾಶ್ವತವಾಗಿ ನೆನಪಿಟ್ಟುಕೊಳ್ಳುವ ಸಂಭ್ರಮವಾಗಿದೆ ಎಂದರು.**

ಪತ್ರಕರ್ತರ ಸಂಘ: 25 ಸ್ಥಾನಕ್ಕೆ 55 ಮಂದಿ ಕಣಕ್ಕೆ

ದಾವಣಗೆರೆ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಜಿಲ್ಲಾ ಪದಾಧಿಕಾರಿಗಳ ಚುನಾವಣೆಗೆ ಅಧ್ಯಕ್ಷ, ಉಪಾಧ್ಯಕ್ಷ, ಪ್ರಧಾನ ಕಾರ್ಯ ದರ್ಶಿ,ಸದಸ್ಯ ಸೇರಿದಂತೆ ಒಟ್ಟು 25 ಸ್ಥಾನಗಳಿದ್ದು, 55 ಅಭ್ಯರ್ಥಿಗಳು ಕಣ ದಲ್ಲಿ ಉಳಿದಿದ್ದಾರೆ. ಚುನಾವಣೆ ಪ್ರಕ್ರಿಯೆ ನ.13ರಿಂದ ಪ್ರಾರಂಭವಾಗಿದ್ದು, ನ.30 ನಾಮಪತ್ರ ಹಿಂಪಡೆದಯಲು ಕೊನೆ ದಿನವಾಗಿತ್ತು. ಒಟ್ಟು 67 ನಾಮಪತ್ರ ಸಲ್ಲಿಕೆಯಾಗಿದ್ದು, 11 ಅಭ್ಯರ್ಥಿಗಳು ನಾಮಪತ್ರ ಹಿಂಪಡೆ ದಿದ್ದಾರೆ. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಮಂಜುನಾಥ ಇ.ಎಂ. ಅವರು 2 ನಾಮ ಪತ್ರ ಸಲ್ಲಿಸಿದ್ದು, ಒಂದನ್ನು ವಾಪಸು ಪಡೆದು ಕಣದಲ್ಲಿ ಮುಂದುವರೆದಿದ್ದಾರೆ. ಅಧ್ಯಕ್ಷ ಒಂದು ಸ್ಥಾನಕ್ಕೆ ಜನತಾವಾಣಿಯ ಮಂಜು ನಾಥ ಇ.ಎಂ., ದಾವಣಗೆರೆ ಕನ್ನಡಿಗ ಪತ್ರಿಕೆಯ ಸಂಪಾದಕ ರವಿ ಆರ್. ಹಾಗೂ ಭುವನೇಶ್ವರಿ ಪತ್ರಿಕೆ ಸಂಪಾದಕ ರವಿ ಎನ್.ಆರ್. ಕಣದಲ್ಲಿ ಉಳಿದು ಅದೃಷ್ಟ ಪರೀಕ್ಷೆಗೆ ಮುಂದಾಗಿದ್ದಾರೆ ಎಂದು ಚುನಾವಣಾಧಿಕಾರಿ ಮಲ್ಲಿಕಾರ್ಜುನ್ ಕಬ್ಬೂರು ತಿಳಿಸಿದ್ದಾರೆ. ಉಪಾಧ್ಯಕ್ಷ ಸ್ಥಾನ ಆಕಾಂಕ್ಷಿಗಳಾಗಿ ಕುಮಾರ್‌ಎಚ್.ಎಂ.ಪಿ., ನಿಂಗರಾಜ ಎಚ್., ಪ್ರಕಾಶ್ ಎಚ್.ಎನ್., ಷಣ್ಮುಖ ಸ್ವಾಮಿ ಪಿ., ಶ್ರೀನಿವಾಸ್ ಟಿ., ಸುಭಾನ್ ಸಾಬ್ ಟಿ. ಹಾಗೂ ತಿಪ್ಪೇಸ್ವಾಮಿ ಆರ್.ಎಸ್. ಸ್ಪರ್ಧಿಸಿದ್ದಾರೆ. ಪ್ರಧಾನ ಕಾರ್ಯದರ್ಶಿ ಒಂದು ಸ್ಥಾನಕ್ಕೆ ಬದರಿನಾಥ ಎನ್.ವಿ., ಫಕ್ರುದ್ದೀನ್ ಎ., ಮಾಗನೂರು ಮಂಜಪ್ಪ, ಕಾರ್ಯದರ್ಶಿ 3 ಸ್ಥಾನಕ್ಕೆ ಅನಿಲ್ ಕುಮಾರ್‌ವಿ.ಬಿ., ಆಂಜನೇಯ ಎನ್.ಕೆ., ಚಂದ್ರಶೇಖರ್‌ಎಚ್., ಕೃಷ್ಣೋಜಿರಾವ್ ಶಿಂಧೆ ಎನ್., ಮುದ್ದಯ್ಯ ಬಿ.ಎಸ್., ನಿಂಗೋಜಿರಾವ್ ಜಿ.ಆರ್., ವೇದಮೂರ್ತಿ ಸಿ., ಹಾಗೂ ಖಜಾಂಚಿ ಸ್ಥಾನಕ್ಕೆ ಚನ್ನವೀರಯ್ಯ ಬಿ., ವೀರೇಶ್ ಜೆ.ಎಸ್., ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಒಂದು ಸ್ಥಾನಕ್ಕೆ ಚಂದ್ರಣ್ಣ ಕೆ., ಉಮೇಶ ಕೆ., ಸ್ಪರ್ಧಿಸಿದ್ದಾರೆ. ಜಿಲ್ಲಾ ಕಾರ್ಯಕಾರಿ ಸಮಿತಿಯ ಒಟ್ಟು 15 ಸ್ಥಾನಗಳಿಗೆ ಅಣ್ಣಪ್ಪ ಬಿ., ಭಾರತಿ, ಚನ್ನಬಸಪ್ಪ ಕೆ.ಎಸ್., ಶಿಲವಂತ್, ಚಿದನಂದ ಜಿ.ಎಸ್., ಏಕಾಂತಪ್ಪ ಕೆ., ಗೋವಿಂದರಾಜ್ ಸ್ಪರ್ಧಿಸಿದ್ದಾರೆ.

ಶಾಲೆಯಲ್ಲಿ ಕನ್ನಡ ಧ್ವಜ ಹಾರಿಸಿ

ಹರಿಹರ: ನ.1ರಂದು ಕನ್ನಡ ರಾಜ್ಯೋತ್ಸವ ಆಚರಣೆ ಪ್ರಯುಕ್ತ ಶಾಲಾ, ಕಾಲೇಜುಗಳಲ್ಲಿ ಕನ್ನಡ ಧ್ವಜವನ್ನು ಹಾರಿಸಲು, ಸರಕಾರ ಈ ಕೂಡಲೇ ಕ್ರಮಕ್ಕೈಗೊಳ್ಳುವಂತೆ ಆಗ್ರಹಿಸಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ನಗರದ ವಿವಿಧ ಕನ್ನಡ ಪರ ಸಂಘಟನೆ ವತಿಯಿಂದ ಶಿರಸ್ತೆದಾರ ಸಿ ಸೌಮ್ಯ ಅವರಿಗೆ ಮನವಿ ಸಲ್ಲಿಸಿದರು. ಈ ವೇಳೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ, ಕಾರ್ಯದರ್ಶಿ ಎಂ. ಚಿದಾನಂದ ಕಂಚಿಕೇರಿ ಹಾಗೂ ಕನ್ನಡ ರಕ್ಷಣಾ ವೇದಿಕೆಗಳ ಅಧ್ಯಕ್ಷರಾದ ಎಚ್.ರಾಜೇಶ್, ರಮೇಶ್ ಮಾನೆ, ಪ್ರೀತಂ ಬಾಬು, ಶಶಿನಾಯ್ಕ್ ಮಾತನಾ ಡಿದರು. ಮಲ್ಲಿಕಾರ್ಜುನ ಸಾಲಕಟ್ಟಿ, ರೈತ ಸಂಘದ ಮುಖಂಡ ಶಂಭುಲಿಂಗಪ್ಪ ನಂದಿತಾವರೆ, ರಕ್ಷಣಾ ವೇದಿಕೆಯ ಶಂಕರ್‌ದುರಗೋಜಿ, ಕೆ. ಅಮಾನುಲ್ಲಾ, ಮಸ್ಸೂರ್‌ಹಾಲಿ, ಮೃತ್ಯುಂಜಯ ಇದ್ದರು.

ಹಿಂದೂಸ್ಥಾನಿ ಸಂಗೀತ ಕಾರ್ಯಕ್ರಮ ನಾಳೆ

ಶಿವಮೊಗ್ಗ: ಸಪ್ತಸ್ವರ ಸಂಗೀತ ಸಭಾ ಶಿವಮೊಗ್ಗ, ಸಪ್ತಕ ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ನ.2ರಂದು ಸಂಜೆ 6 ಗಂಟೆಗೆ ಕುವೆಂಪು ರಂಗಮಂದಿರದಲ್ಲಿ ಸಂಗೀತ ಶ್ರದ್ಧಾಂಜಲಿ ಹಿಂದೂಸ್ಥಾನಿ ಹಾಗೂ ಭಕ್ತ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಸಪ್ತಸ್ವರದ ಗೌರವಾಧ್ಯಕ್ಷ ಭಾಸ್ಕರ್‌ಜಿ. ಕಾಮತ್ ಹೇಳಿದರು. ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಸಂಗೀತ ಸಭಾದ ಸಂಸ್ಥಾಪಕರಾದ ದಿ. ಅರುಣ್ ಹಂಪಿಹೊಳಿ ಅವರ ಮೂರನೇ ವರ್ಷದ ಪುಣ್ಯತಿಥಿಯ ಅಂಗವಾಗಿ ಈ ಸಂಗೀತ ಶ್ರದ್ಧಾಂಜಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ಇದೇ ಸಂದರ್ಭದಲ್ಲಿ ಸಪ್ತಕ ಸಂಚಾಲಕರಾದ ಜಿ.ಎಸ್.ಹೆಗಡೆ ಅವರನ್ನು ಸನ್ಮಾನಿಸಲಾಗುವುದು ಎಂದರು. ಹಿಂದೂಸ್ಥಾನಿ ಮತ್ತು ಭಕ್ತಿ ಸಂಗೀತ ಕಾರ್ಯಕ್ರಮದಲ್ಲಿ ಪಂಡಿತ್ ಕುಮಾರ ಗಂಧರ್ವರ ಶಿಷ್ಯ ಹಾಗೂ ಮೊಮ್ಮಗ ಭುವನೇಶ್ ಕೊಮ್ಕಾಲಿ ಗಾಯನ ನಡೆಸಿಕೊಡುವರು. ಇವರ ಜೊತೆಗೆ ಧಾರವಾಡದ ಶ್ರೀಧರ ಮಾಂಡ್ರೆ, ತಬಲಾದಲ್ಲಿ ಹೆಬ್ಬಲಸಿನ ಭರತ್ ಹೆಗಡೆಯವರು ಹರ್ಮೋನಿಯಂನಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎಂದರು. ಭುವನೇಶ್ ಅವರು ಅಸಾಧಾರಣ ಶಾಸ್ತ್ರೀಯ ಗಾಯಕರಾಗಿದ್ದಾರೆ. ಹಲವು ಕಛೇರಿಯನ್ನು ನಡೆಸಿಕೊಟ್ಟಿದ್ದಾರೆ. ಭಾರತೀಯ ಸಂಗೀತ ಕಲೆ ಮತ್ತು ಸಾಂಸ್ಕೃತಿಕ ಪ್ರತಿನಿಧಿಯಾಗಿದ್ದಾರೆ. ಹಲವು ದೇಶಗಳಲ್ಲಿ ಪ್ರದರ್ಶನ ನೀಡಿದ್ದಾರೆ. ಕರ್ನಾಟಕ ಸರಕಾರ ಇವರಿಗೆ ಮಲ್ಲಿಕಾರ್ಜುನ ಮನ್ಸೂರ್ ಯುವ ಪ್ರಶಸ್ತಿ ನೀಡಿದೆ. ಪತ್ರಿಕಾಗೋಷ್ಠಿಯಲ್ಲಿ ಸಪ್ತಸ್ವರದ ಕಾರ್ಯದರ್ಶಿ ಕುಮಾರಶಾಸ್ತ್ರೀ, ಪ್ರಮುಖರಾದ ವಿವೇಕಾನಂದ, ವಿನೋದ್ ಪೈ, ದೇವಿಕುಮಾರ್ ಇದ್ದರು.

ರೈತರು ಆಧುನಿಕ ತಂತ್ರಜ್ಞಾನದ ಲಾಭ ಪಡೆಯಲಿ

ಶಿವಮೊಗ್ಗ: ಚಿನ್ನಿಕಟ್ಟೆ ಗ್ರಾಮೀಣ ಪ್ರದೇಶದ ರೈತರು ಆಧುನಿಕ ತಂತ್ರಜ್ಞಾನವನ್ನು ಹಾಗೂ ವಿಜ್ಞಾನಿಗಳ ಸಲಹೆಯನ್ನು ಬಳಸಿಕೊಂಡು ಲಾಭದಾಯಕವಾಗಿ ಮಾಡಿಕೊಳ್ಳಿ ಎಂದು ಶಾಸಕ ಡಿ.ಜಿ.ಶಾಂತನಗೌಡ ಸಲಹೆ ನೀಡಿದರು. ತಾಲೂಕಿನ ಚಿನ್ನಿಕಟ್ಟೆ ಗ್ರಾಮದಲ್ಲಿ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಿಗಳ ಇರುವೆಕ್ಕಿ,ಶಿವಮೊಗ್ಗ ಕೃಷಿ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಗ್ರಾಮದಲ್ಲಿ ಇತ್ತೀಚೆಗೆ ಬೆಳಗ್ಗೆ ಕೃಷಿ ಮಾಹಿತಿ ಕೇಂದ್ರ 'ಸಂಭ್ರಮ'ವನ್ನು ಉದ್ಘಾಟಿಸಿದರು.

ಕೃಷಿ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳನ್ನು ಉತ್ತಮ ತರಬೇತಿ ಮತ್ತು ಅಭ್ಯಾಸ ಮಾಡಿ ಗ್ರಾಮದಲ್ಲಿ ಕೃಷಿ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸುವುದರ ಮೂಲಕ ದೇಶದ ಅಭಿವೃದ್ಧಿಗೆ ಶ್ರಮಿಸುವಂತೆ ತಿಳಿಸಿದರು.

ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಆರ್.ಸಿ.ಜಗದೀಶ್‌ರವರು ಕೈತೋಟ ಮತ್ತು ಬೆಳೆ ಸಂಗ್ರಹಾಲಯ (ಮಧುವನ) ಉದ್ಘಾಟಿಸಿ ವಿದ್ಯಾರ್ಥಿಗಳು ಹಳ್ಳಿ ಜೀವನದ ಸೊಬಗು ಅಷ್ಟೇ ಅಲ್ಲದೆ ಅವರ ಕಷ್ಟ ಸುಖದಲ್ಲೂ ಭಾಗಿಯಾಗಲು ತಿಳಿಸಿದರು.

ಕೃಷಿ ಮಹಾವಿದ್ಯಾಲಯದ ಶಿಕ್ಷಣ ನಿರ್ದೇಶಕ ಡಾ. ಹೇಮ್ಲಾನಾಯ್ಕ ಡೀನ್ ಡಾ.ತಿಪ್ಪೇಶ್ ಸಂಯೋಜಕರಾದ ಡಾ.ಟಿ.ಎಚ್.ಗಜೇಂದ್ರ ಸಹ ಸಂಯೋಜಕ ಡಾ.ಗಣಪತಿ.ಯಂ ಸಹಾಯಕ ಸಂಯೋಜಕ ಡಾ.ರವಿಶಂಕರ್‌ಹಾಗೂ ಡಾ.ಬ್ರಿಜೇಶ್ ಮತ್ತು ಕೀಠ ಶಾಸ್ತ್ರ ವಿಭಾಗದ ಡಾ.ಶರಣಬಸ್ಸಪ್ಪರವರು ರೈತರಿಗೆ ಉಪಯುಕ್ತ ಮಾಹಿತಿ ನೀಡಿದರು. ಡಾ.ಸುದೀಪರವರು ಅಡಿಕೆಯಲ್ಲಿ ಬೇಸಾಯ ಪದ್ಧತಿ ಅಂತರಬೆಳೆ ಮತ್ತು ತೋಟಗಾರಿಕೆ ಬೆಳೆಗಳನ್ನು ಬೆಳೆಯುವುದರ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದರು.

ಡಾ.ಪ್ರವೀಣ್ರವರು ಅಡಿಕೆಯಲ್ಲಿ ಬರುವ ಕೀಟ ಪೀಡೆಗಳು ಹಾಗೂ ರೋಗಗಳು ಅವುಗಳ ಗುಣಲಕ್ಷಣವನ್ನು ಹಾಗೂ ಅದರ ಹತೋಟಿ ಕ್ರಮಗಳನ್ನು ಆಲಿಸಿದರು.ಮತ್ತು ಡಾ.ಉಲ್ಲಾಸ್ ಅವರು ಭತ್ತದ ಆಧುನಿಕ ಬೇಸಾಯ ಪದ್ಧತಿಯ ಮೇಲೆ ವಿಚಾರ ಸಂಕಿರಣ ಮಾಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಕೃಷಿಕ ಸಮಾಜದ ಅಧ್ಯಕ್ಷರು ಎಂ.ಎಚ್.ಕುಮಾರ್,ಟಿ.ಎ.ಪಿ.ಎಮ್.ಎಸ್. ಉಪಾಧ್ಯಕ್ಷರು ಹಾಗೂ ಪಿ.ಎ.ಸಿ.ಎಸ್ ಸದಸ್ಯ ಚೇತನ್, ಗ್ರಾ.ಪಂ. ಸದಸ್ಯರಾದ ಬಿ.ಕೆ.ಮೂರ್ತಿ,ಪರಶುರಾಮ, ಪ್ರತಿಮಾರವರು ಹಾಗೂ ಗ್ರಾಮದ ಮುಖಂಡರು ಮುರುಗೇಶಯ್ಯ, ಶ್ರೀ ಸಿದ್ದಪ್ಪ, ನಂಜುಂಡಪ್ಪ, ನಂಜಪ್ಪ ಹಾಗೂ ಗ್ರಾಪಂ ಪಿಡಿಒ ಜ್ಯೋತಿಶೆಟ್ಟಿ ಉಪಸ್ಥಿತರಿದ್ದರು.

> **ರೈತರ ಜತೆ ಜೋಳ ಕೊಯ್ಯುವುದು ಹಾಲು ಕರೆಯುವುದು ನೀವು ಕೊಯ್ಯುವುದು ಹಾಗೂ ರೊಟ್ಟಿ ತಟ್ಟುವುದನ್ನು ಮುಂತಾದವುಗಳಲ್ಲಿ ಭಾಗಿಯಾಗಲು ತಿಳಿಸಿದರು ರೈತರು ತಮ್ಮ ಹೊಲ ಅಥವಾ ತೋಟಗಳಿಗೆ ತಾವೇ ಸರಿಯಾದ ಕೀಟನಾಶಕ ಔಷಧಿಗಳನ್ನು ಗುರುತಿಸಿ ಕೇಳಿ ಖರೀದಿಸುವಷ್ಟು ನಿಪುಣರಾಗಬೇಕು.**
>
> **- ಡಿ.ಜಿ.ಶಾಂತನಗೌಡ,** ಶಾಸಕ

ಸಹ್ಯಾದ್ರಿ ಆಸ್ಪತ್ರೆಯಲ್ಲಿ ಹೃದಯ ಶಸ್ತ್ರಚಿಕಿತ್ಸೆ

ಶಿವಮೊಗ್ಗ: ಸಹ್ಯಾದ್ರಿ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯರು ಅಪರೂಪದ ಹೃದಯ ಶಸ್ತ್ರ ಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿ, ಸಾಧನೆ ಮಾಡಿದ್ದಾರೆ ಎಂದು ಆಸ್ಪತ್ರೆಯ ಹೃದಯ ಶಸ್ತ್ರಚಿಕಿತ್ಸಾ ತಜ್ಞ ಡಾ.ಬಾಲಸುಬ್ರಹ್ಮಣಿ ಆರ್. ಹೇಳಿದರು. ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಈ ಶಸ್ತ್ರಚಿಕಿತ್ಸೆಯು ತುಂಬಾ ಅಪರೂಪವಾಗಿದ್ದು, ದೇಶದಲ್ಲಿಯೇ ಎರಡನೇಯ ಅಥವಾ ಮೂರನೇಯದ್ದು ಇರಬಹುದು. ಇದೊಂದು ಸವಾಲಿನ ಶಸ್ತ್ರಚಿಕಿತ್ಸೆ ಯಾಗಿದ್ದು, ಅಪರೂಪದಲ್ಲಿ ಅಪರೂಪವಾಗಿತು. ಆಸ್ಪತ್ರೆಯ ವೈದ್ಯರು 66 ವರ್ಷದ ಪುರುಷ ರೋಗಿಗೆ ಅತ್ಯಂತ ಸಂಕೀರ್ಣ ಕೊರೋನರಿ ಆರ್ಟರಿ ಬೈಪಾಸ್ ಗ್ರಾಫ್ಟ್ (ಸಿಎಬಿಜಿ) ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿದ್ದಾರೆ. ಇದೊಂದು ಬೆನ್ನುಮೂಳೆ ಮುಂದಕ್ಕೆ ಬಾಗಿರುವ ಸಂಕೀರ್ಣ ಸಮಸ್ಯೆಯನ್ನು ಎದುರಿಸಲಾಗುತ್ತಿತ್ತು. ರೋಗಿಯ ವಿಶಿಷ್ಟ ದೇಹರಚನೆಗೆ ತಕ್ಕಂತೆ ಶಸ್ತ್ರಚಿಕಿತ್ಸೆಯನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ಆದರೆ ತಮ್ಮ ಆಸ್ಪತ್ರೆಯ ವೈದ್ಯರ ತಂಡ ಇದನ್ನು ಯಶಸ್ವಿಯಾಗಿ ಪೂರೈಸಿದೆ. ಆಪರೇಷನ್ ಆದ 4 ದಿನಗಳಲ್ಲಿಯೇ ರೋಗಿ ಎದ್ದು ಓಡಾಡುವಂತ್ತಾಗಿದ್ದಾರೆ ಎಂದರು. ರೋಗಿಗಳಿಗೆ ಶಸ್ತ್ರಚಿಕಿತ್ಸೆ ಆದರೆ ಮಾತ್ರ ಸಾಲದು, ಸೂಕ್ತವಾದ ಹೃದಯ ಆರೈಕೆ ಕೂಡ ಅಗತ್ಯವಾಗಿರುತ್ತದೆ. ಇದನ್ನು ಕೂಡ ರೋಗಿಗೆ ತಿಳಿಸಲಾಗಿದೆ. ಒಟ್ಟಾರೆ ಇದೊಂದು ಅಪರೂಪದ, ಸವಾಲಿನ ಹೃದಯ ಶಸ್ತ್ರಚಿಕಿತ್ಸೆಯಾಗಿದ್ದು, ನಾರಾಯಣ ಆಸ್ಪತ್ರೆಯ ವೈದ್ಯರ ತಂಡ ಇದನ್ನು ಯಶಸ್ವಿಯಾಗಿ ಪೂರೈಸಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಡಾ.ಶರತ್, ಬಸಯ್ಯ, ಶೈಲೇಶ್, ಶ್ರೀಷ್ಮ ಇದ್ದರು.

ಪಥಸಂಚಲನ ವಿಚಾರ ಆರ್‌ಎಸ್‌ಎಸ್‌ಗೆ ಪ್ರತಿಷ್ಠೆ | ನಮಗೆ ವಿದ್ಯಾರ್ಥಿಗಳ ಭವಿಷ್ಯ ಮುಖ್ಯ: ಪ್ರಿಯಾಂಕ್ ಖರ್ಗೆ

ಶಾಂತಿಯುತ ಸಮಾಜ ನಿರ್ಮಾಣ ಸರಕಾರದ ಕರ್ತವ್ಯ

ಕಲಬುರಗಿ: ಚಿತ್ತಾಪುರ ಪಥಸಂಚಲನ ವಿವಾದವನ್ನು ಆರ್‌ಎಸ್‌ಎಸ್ ಪ್ರತಿಷ್ಠೆಯ ವಿಚಾರವನ್ನಾಗಿ ಮಾಡಿಕೊಂಡಿದೆ. ವಿದ್ಯಾರ್ಥಿಗಳ ಭವಿಷ್ಯ ಹಾಳು ಮಾಡುವ ಪ್ರಯತ್ನ ನಡೆಯುತ್ತಿದ್ದು, ಸಮಾಜದ ಶಾಂತಿ ಕಾಪಾಡುವುದು ಸರಕಾರದ ಕರ್ತವ್ಯ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಆರ್‌ಎಸ್‌ಎಸ್ ವಿಚಾರವಾಗಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಥಸಂಚಲನದಲ್ಲಿ ಭಾಗವಹಿಸಲು ಕೆಲವರಿಗೆ ಕರೆ ನೀಡಲಾಗಿದೆ. ಅದರಲ್ಲೂ ವಿದ್ಯಾರ್ಥಿಗಳಿಗೆ ಕಾಲ್ ಮಾಡಿದ್ದಾರೆ. ಆ ಬಗ್ಗೆ ವಿಚಾರಿಸಲಾಗಿ, ಅವರಿಗೆ ದೇಶಭಕ್ತಿ ಇತ್ಯಾದಿ ಕುರಿತು ಹೇಳಲಾಗುತ್ತಿದೆ ಎನ್ನುವುದನ್ನು ಹೊರತುಪಡಿಸಿ ಬೇರೆ ಹೇಳಿರಲಿಲ್ಲ ಎನ್ನುವ ಮಾಹಿತಿ ಬಂದಿದೆ. ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಹಾಗೂ ಸಮಾಜದ ಶಾಂತಿ ಕಾಪಾಡುವ ನಿಟ್ಟಿನಲ್ಲಿ ಸರಕಾರಕ್ಕೆ ಪತ್ರ ಬರೆದಿದ್ದೇನೆ ಅದರಲ್ಲೇನು ತಪ್ಪಿದೆ ಎಂದರು.

ನಾನು ಸರಕಾರಿ ಜಾಗದಲ್ಲಿ ಕೇವಲ ಆರ್‌ಎಸ್‌ಎಸ್ ಅಲ್ಲ, ಯಾವುದೇ ಸಂಘಟನೆಯನ್ನು ಕಾರ್ಯಕ್ರಮ ನಡೆಸದಂತೆ ಪತ್ರ ಬರೆದಿದ್ದೇನೆ. ಅದರಲ್ಲಿ ತಪ್ಪೇನೂ ಇಲ್ಲ. ವಿದ್ಯಾರ್ಥಿಗಳ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ನಿರ್ಧಾರ ಕೈಗೊಂಡಿದ್ದೇನೆ. ಆದರೆ, ಬಿಜೆಪಿ ಮತ್ತು ಆರ್‌ಎಸ್‌ಎಸ್ ನನ್ನ ವಿರುದ್ಧ ಪ್ರಚಾರ ಆರಂಭಿಸಿದೆ. ನನ್ನ ಮೇಲೆ ಜೀವ ಬೆದರಿಕೆ ಹಾಕಿದ ಆರೋಪಿಯನ್ನೂ ಪೊಲೀಸರು ಬಂಧಿಸಿದ್ದಾರೆ. ಆದರೆ, ಅವನನ್ನು ಪ್ರಚೋದಿಸಿದವರ ಮೇಲೂ ಕ್ರಮ ಅಗತ್ಯ ಎಂದರು.

> ಆರ್‌ಎಸ್‌ಎಸ್‌ನ ಪಥಸಂಚಲನ ವಿಚಾರ ಹೈಕೋರ್ಟ್ ತೀರ್ಪಿನ ನಂತರ ಮಾತ್ರ ಸ್ಪಷ್ಟವಾಗುತ್ತದೆ. ಎಲ್ಲರೂ ಕಾನೂನಿನ ವ್ಯಾಪ್ತಿಯಲ್ಲೇ ನಡೆದುಕೊಳ್ಳಬೇಕು. ಸೇಡಂ ಸೇರಿದಂತೆ ಹಲವೆಡೆ ಪಥಸಂಚಲನದ ವೇಳೆ ಕಾನೂನು ಉಲ್ಲಂಘನೆ ನಡೆದಿದೆ. ಅದನ್ನು ಕೋರ್ಟ್ ಗಮನಕ್ಕೆ ತರಲಾಗುವುದು.
> **ಪ್ರಿಯಾಂಕ್ ಖರ್ಗೆ**, ಸಚಿವ

ಆರ್‌ಎಸ್‌ಎಸ್ ಪಥಸಂಚಲನಕ್ಕೆ ಅನುಮತಿ ಕೇಳದೆ ಕೇವಲ ಮಾಹಿತಿ ನೀಡಿದೆ. ಸಾರ್ವಜನಿಕ ಸ್ಥಳದಲ್ಲಿ ಕಾರ್ಯಕ್ರಮಕ್ಕೆ ಹೈಕೋರ್ಟ್ ನಿಷೇಧ ಇದ್ದು, ಅನುಮತಿಯಿಲ್ಲದೆ ಸಾವಿರಾರು ಜನರನ್ನು ಸೇರಿಸುವುದು ಕಾನೂನು ಉಲ್ಲಂಘನೆಯಾಗಲಿದೆ. ಚಿತ್ತಾಪುರದಲ್ಲಿ ಕಾನೂನು ಪ್ರಕಾರ ಕ್ರಮ ಜರುಗಿಸಲಾಗಿದೆ. ಹೈಕೋರ್ಟ್ ತೀರ್ಪು ಬರುವವರೆಗೆ ಎಲ್ಲರೂ ಕಾಯಬೇಕು. ಲಾಠಿ ಹಿಡಿದು ಪಥಸಂಚಲನ ನಡೆಸುವುದಕ್ಕೆ ಅನುಮತಿ ಸಿಕ್ಕರೆ ಸರಕಾರಕ್ಕೆ ಯಾವುದೇ ಅಭ್ಯಂತರವಿಲ್ಲ ಎಂದು ಸ್ಪಷ್ಟಪಡಿಸಿದರು.

ಚಿತ್ತಾಪುರದಲ್ಲಿ ಮಾತ್ರ ವಿವಾದ ಏಕೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಚಿತ್ತಾಪುರದಲ್ಲಿ ಯುವಕರ ಭವಿಷ್ಯ ಮುಖ್ಯವಾದ್ದರಿಂದ ಕ್ರಮ ಕೈಗೊಳ್ಳಲಾಗಿದೆ ಎಂದರು. ಆರ್‌ಎಸ್‌ಎಸ್ ನಲ್ಲಿ ಬಿಜೆಪಿಯ ಪಾತ್ರವೇನು.? ಚಿತ್ತಾಪುರ ಶಾಂತಿ ಸಭೆಗೆ ಆರ್‌ಎಸ್‌ಎಸ್ ಬದಲಿಗೆ ಬಿಜೆಪಿ ಮುಖಂಡರು ಬಂದಿದ್ದರು. ಅವರು ಶಾಂತಿ ಕಾಪಾಡಲು ಬಂದರೋ ಅಥವಾ ಭಂಗ ಉಂಟುಮಾಡಲು ಬಂದರೋ? ಗೊತ್ತಿಲ್ಲ. ಆದರೆ, ರಾಜಕೀಯದಲ್ಲಿ ಇಲ್ಲ ಅಂತ ಆರೆಸ್ಸೆಸ್ ನವರೇ ಹೇಳುತ್ತಾರೆ. ಸರಕಾರದ ಆದೇಶ ಬಂದ ನಂತರ ಆರೆಸ್ಸೆಸ್ ಗಿಂತ ಹೆಚ್ಚು ಬಿಜೆಪಿಯವರೇ ಮುಗಿದುಬಿದ್ದು ಮಾತಾಡುತ್ತಿದ್ದಾರೆ. ಬಿಜೆಪಿಗೂ ಆರೆಸ್ಸೆಸ್ ಗೂ ಏನು ಸಂಬಂಧ? ಆರ್‌ಎಸ್‌ಎಸ್ ನಲ್ಲಿ ಬಿಜೆಪಿಯ ಪಾತ್ರವೇನು ಎಂದು ಪ್ರಶ್ನೆ ಮಾಡಿದರು.

ಹೈಕೋರ್ಟ್ ನಲ್ಲಿ ಪ್ರಶ್ನಿಸುತ್ತೇವೆ: ಆರೆಸ್ಸೆಸ್ ಚಟುವಟಿಕೆಗಳನ್ನು ನಿಷೇಧಿಸುವ ಕುರಿತಾಗಿ ಪತ್ರ ಬರೆದಿದ್ದ, ಆದರೆ ಎಲ್ಲರೂ ಆರೆಸ್ಸೆಸ್ ಅನ್ನು ಹೇಗೆ ಬ್ಯಾನ್ ಮಾಡುತ್ತೀರಿ ನೋಡ್ತೇವೆ ಎನ್ನುತ್ತಿದ್ದಾರೆ. ನೋಂದಣಿಯೇ ಇಲ್ಲದ ಆರೆಸ್ಸೆಸ್ ಸಂಸ್ಥೆಯನ್ನು ನಿಷೇಧಿಸುವ ಪ್ರಶ್ನೆ ಹೇಗೆ ಉದ್ಭವಿಸುತ್ತದೆ. ಆರೆಸ್ಸೆಸ್ ನೋಂದಣಿ ಪತ್ರದ ವಿಚಾರ ಕುರಿತಂತೆ ಹೈಕೋರ್ಟ್‌ನಲ್ಲಿ ಸರಿಯಾದ ಸಮಯದಲ್ಲಿ ಪ್ರಶ್ನೆ ಮಾಡಲಾಗುವುದು ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಕ್ಷೇತ್ರದ ಸಮಸ್ಯೆಗಳ ವಿಮೋಚನೆಗೆ ಪ್ರದೀಪ ಪಣ

← ಮೊದಲಪುಟದಿಂದ

ಈ ವೇಳೆ ಆಯಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜನರ ಕುಂದು ಕೊರತೆಗಳನ್ನು ಆಲಿಸಿ, ಸೂಕ್ತ ಪರಿಹಾರವನ್ನು ಅಧಿಕಾರಿಗಳ ವ್ಯಾಪ್ತಿಯಲ್ಲಿ ಒಂದು ತಿಂಗಳಲ್ಲಿ ನೀಡಬೇಕು. ಒಂದು ವೇಳೆ ಸರಕಾರ ಮಟ್ಟದಲ್ಲಿದ್ದರೆ, ಸರಕಾರದೊಂದಿಗೆ ಸಂವಹನ ನಡೆಸಲಾಗುತ್ತಿದೆ. ಕಳೆದ ತಿಂಗಳು ಆರಂಭಿಸಿದ ಈ ಯೋಜನೆಯಲ್ಲಿ ಈಗಾಗಲೇ ಎರಡು ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿ ಜನರ ಕುಂದುಕೊರತೆ ಆಲಿಸಲಾಗಿದೆ. ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ನೂರಕ್ಕೂ ಹೆಚ್ಚು ಅರ್ಜಿಗಳು ಕೇಳಿಬಂದಿದ್ದವು. ಈ ವೇಳೆ ಗ್ರಾಮಸ್ಥರು ರಸ್ತೆ, ಚರಂಡಿ, ಕಲ್ಯಾಣಿ ಸ್ವಚ್ಛತೆ, ಸ್ಮಶಾನಕ್ಕೆ ಜಾಗ, ಸ್ಮಶಾನಕ್ಕೆ ರಸ್ತೆ ಒತ್ತುವರಿ, ವಿದ್ಯುತ್, ಜಮೀನು ಖಾತೆ, ಪಿಂಚಣಿ ಸೇರಿದಂತೆ ಹಲವು ಸಮಸ್ಯೆಗಳನ್ನು ಶಾಸಕರ ಗಮನಕ್ಕೆ ಸಾರ್ವಜನಿಕರು ತರುತ್ತಿದ್ದಾರೆ. ಈ ಎಲ್ಲ ಸಮಸ್ಯೆಗಳಿಗೆ ಒಂದು ತಿಂಗಳಲಿನಲ್ಲಿ ಪರಿಹಾರ ಕಂಡುಕೊಳ್ಳುವಂತೆ ಅಧಿಕಾರಿಗಳಿಗೆ ಪ್ರದೀಪ್ ಸೂಚನೆ ನೀಡಿದ್ದಾರೆ.

ಅಮ್ಮ ಉಚಿತ ಆಂಬ್ಯುಲೆನ್ಸ್ ಸೇವೆ

ಪ್ರದೀಪ್ ಈಶ್ವರ್ ಜೀವನದಲ್ಲಿ ಸಂಕಷ್ಟಗಳು ಶುರುವಾಗಿದ್ದೇ ಪೋಷಕರನ್ನು ಕಳೆದುಕೊಂಡ ಬಳಿಕ. ಮರ್ಯಾದೆಗೆ ಅಂಜಿ ಬಾಳುತ್ತಿದ್ದ ಪ್ರದೀಪ್ ಪೋಷಕರು, ನಂಬಿಕೆ ದ್ರೋಹ ಮಾಡಿದ ಸ್ನೇಹಿತರು-ಬಂಧುಗಳಿಂದ ಆದ ಸಾಲದ ಹೊರೆಯ ನೊಗ ಹೊರಲಾಗದೇ ವಿಷ ಸೇವಿಸಿದ್ದರು. ಆತ್ಮಹತ್ಯೆ ಪ್ರಯತ್ನಿಸಿದ ತಪ್ಪನ್ನು ಸರಿಪಡಿಸಿಕೊಳ್ಳಲು ಸರಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆಗೆ ಗೋಗರಿದರೂ, ಸರಕಾರಿ ವೈದ್ಯರ ಆಲಸಿತನದಿಂದ ಪ್ರಾಣ ಬಿಟ್ಟಿದ್ದರು. ಸರಿಯಾದ ಆಂಬ್ಯುಲೆನ್ಸ್ ಸೇವೆಯಿದ್ದರೂ ಪ್ರದೀಪ್ ಪೋಷಕರು ಬದುಕುಳಿಯುತ್ತಿದ್ದರು. ಇದನ್ನೇ ಮನಸ್ಸಿನಲ್ಲಿಟ್ಟುಕೊಂಡು ತಮ್ಮ ತಾಯಿಯ ನೆನಪಲ್ಲಿ ಪ್ರದೀಪ್ ಈಶ್ವರ್ ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ 'ಅವಲ್ಮ್' ಹೆಸರಲ್ಲಿ ಉಚಿತ ಆಂಬ್ಯುಲೆನ್ಸ್ ಸೇವೆಯನ್ನು ಆರಂಭಿಸಿದ್ದಾರೆ. ಈ ಸೇವೆ ಆರಂಭಗೊಂಡು ವರ್ಷ ಕಳೆಯುತ್ತಾ ಬಂದಿದ್ದು, ಈವರೆಗೆ ಸಾವಿರಾರು ಮಂದಿ ಪ್ರಯೋಜನ ಪಡೆದಿದ್ದಾರೆ.

ಅನಾಥ ಮಕ್ಕಳಿಗೆ ಲಕ್ಷ ರು. ಆರ್ಥಿಕ ನೆರವು

ಇನ್ನು ಸಣ್ಣ ವಯಸ್ಸಿನಲ್ಲಿಯೇ ಪೋಷಕರನ್ನು ಕಳೆದುಕೊಂಡರೆ ಏನೆಲ್ಲ ಸಂಕಷ್ಟಗಳನ್ನು ಎದುರಿಸಬೇಕಾಗುತ್ತದೆ? ಎನ್ನುವುದನ್ನು ಅರಿತಿದ್ದ ಪ್ರದೀಪ್ ಈಶ್ವರ್ ತಾವು ಶಾಸಕರಾದ ಬಳಿಕ ಕ್ಷೇತ್ರದಲ್ಲಿರುವ ಅನಾಥ ಮಕ್ಕಳಿಗೆ ಒಂದು ಲಕ್ಷ ರು. ಆರ್ಥಿಕ ನೆರವನ್ನು ನೀಡುವ ಹಾಗೂ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ನೆರವಾಗುವ ನಿಟ್ಟಿನಲ್ಲಿ ವೈಯಕ್ತಿಕ ಯೋಜನೆಗಳನ್ನು ಆರಂಭಿಸಿದ್ದಾರೆ. ಸರಕಾರದಿಂದ ಸಿಗುವ ಯೋಜನೆಗಳೊಂದಿಗೆ ವೈಯಕ್ತಿಕ ನೆಲೆಗಟ್ಟಿನಲ್ಲಿ ಈ ಯೋಜನೆಗಳನ್ನು ಆರಂಭಿಸಿದ್ದಾರೆ.

ಧಾನ್ಯ ಖರೀದಿ ಕೇಂದ್ರಕ್ಕೆ ಚಾಲನೆ

← ಮೊದಲಪುಟದಿಂದ

ರಾಜ್ಯದ 6.72 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ರಾಗಿ ಬೆಳೆಯಲಾಗುತ್ತಿದೆ. ಬೆಂ.ಗ್ರಾಮಾಂತರ,, ಬೆ.ದಕ್ಷಿಣ, ಮಂಡ್ಯ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಹಾಸನ, ಮೈಸೂರು, ಚಿತ್ರದುರ್ಗ ಹಾಗೂ ಚಿಕ್ಕಮಗಳೂರು ವ್ಯಾಪ್ತಿಯ ರೈತರು ಹಿಂಗಾರಿನಲ್ಲಿ ಅಧಿಕವಾಗಿ ರಾಗಿ ಬೆಳೆ ಬೆಳೆಯುತ್ತಾರೆ. ದಕ್ಷಿಣ ಕರ್ನಾಟಕದ ಭಾಗದ ರೈತರು, ಮುಂಗಾರು ಮತ್ತು ಹಿಂಗಾರು ಅವಧಿಯಲ್ಲಿ ಭತ್ತ ಬೆಳೆದರೆ, ಉತ್ತರ ಕರ್ನಾಟಕದ ಕೃಷಿಕರು, ಬಿಳಿ ಜೋಳ ಸೇರಿ ಇತರ ವಾಣಿಜ್ಯ ಮತ್ತು ಎಣ್ಣೆ ಕಾಳುಗಳನ್ನು ಬೆಳೆಯುತ್ತಾರೆ.

ಪ್ರತಿ ವರ್ಷ ಈ ಯೋಜನೆಯಡಿ ಆಹಾರ ಧಾನ್ಯಗಳನ್ನು ಖರೀದಿಸಲಾಗುತ್ತಿದೆ. ಆದರೆ, ಮುಂಚಿತವಾಗಿ ಖರೀದಿ ಕೇಂದ್ರಗಳನ್ನು ತೆರೆಯಲು ವಿಳಂಬವಾಗುವುದು, ಅಗತ್ಯ ಸಿದ್ಧತೆ ಮಾಡಿಕೊಳ್ಳದಿರುವುದು, ತಡವಾಗಿ ವೇಳಾಪಟ್ಟಿ ಪ್ರಕಟವಾಗುವುದು ಮತ್ತು ಧಾನ್ಯ ದಾಸ್ತಾನುಗಳಿಗೆ ಸೂಕ್ತ ಜಾಗ ಇಲ್ಲದಿರುವುದೂ ಸೇರಿ ಇತರ ಸಮಸ್ಯೆಗಳಿಂದ ರೈತರಿಗೆ ತೊಂದರೆಯಾಗುತ್ತಿತ್ತು. ಈ ಸಮಸ್ಯೆಗಳಿಂದ ಕಳೆದ ವರ್ಷ ನಿಗದಿಪಡಿಸಿದ್ದ ಆಹಾರ ಧಾನ್ಯ ಖರೀದಿಸಲು ಸಾಧ್ಯವಾಗಲಿಲ್ಲ. ಇದರಿಂದಾಗಿ ಖರೀದಿಯಲ್ಲಿ ಅಷ್ಟೇನೂ ಪ್ರಗತಿ ಕಂಡಿರಲಿಲ್ಲ. ಇದನ್ನು ಮನಗಂಡಿರುವ ನಿಗಮ, ಸಮರ್ಪಕವಾಗಿ ಯೋಜನೆ ಸದ್ಬಳಕೆ ಆಗುವಂತೆ ಮುಂಚಿತವಾಗಿ ರಾಗಿ, ಭತ್ತ ನೋಂದಣಿ ಕೇಂದ್ರ ತೆರೆಯುತ್ತಿದೆ. ಯೋಜನೆಯಡಿ ನಿಗಮದಿಂದ ರಾಗಿ, ಭತ್ತ, ಬಿಳಿ ಜೋಳ ಮಾತ್ರ ಖರೀದಿಸಲಿದೆ. ರಾಜ್ಯ ಕೃಷಿ ಮಾರಾಟ ಮಂಡಳಿ ಮತ್ತು ಮಂಡಳಿ ಅಧೀನದ ಮಾರುಕಟ್ಟೆ ಒಕ್ಕೂಟಗಳು, ಮೆಕ್ಕಜೋಳ, ತೊಗರಿ, ಹೆಸರು, ಸಜ್ಜೆ, ಉದ್ದು, ಶೇಂಗಾ, ಸೂರ್ಯಕಾಂತಿ, ಸೋಯಾಬೀನ್, ಎಳ್ಳು, ಹುಚ್ಚೆಳ್ಳು, ಹತ್ತಿಯನ್ನು ಖರೀದಿಸಲಿವೆ.

> **ತೂಕದ ವಂಚನೆ ತಡೆಯಿರಿ**
> ಸಾಲ ಪಡೆದು ಬೆಳೆದ ಬೆಳೆಗಳಿಗೆ ಸೂಕ್ತ ಬೆಲೆ ರೈತರಿಗೆ ಸಿಗುತ್ತಿಲ್ಲ. ಸಾಕಷ್ಟು ರೈತರಿಗೆ ಎಂಎಸ್‌ಪಿ ಬಗ್ಗೆ ಮಾಹಿತಿಯೇ ಇಲ್ಲ. ಶೇ.70 ಅನ್ನದಾತರು, ಮಾರುಕಟ್ಟೆಯಲ್ಲಿ ಅಥವಾ ಖರೀದಿ ಏಜೆನ್ಸಿದಾರರಿಗೆ ಆಹಾರ ಧಾನ್ಯ ಮಾರಾಟ ಮಾಡುವ ಸಂದರ್ಭದಲ್ಲಿ ಪ್ರತಿ ಕ್ವಿಂಟಾಲ್‌ಗೆ 2ರಿಂದ 5 ಕೆಜಿಯನ್ನು ವರ್ತಕರು ಲಪಟಾಯಿಸುತ್ತಿದ್ದಾರೆ. ಎಲೆಕ್ಟ್ರಾನಿಕ್ ತೂಕದ ಯಂತ್ರ ಸೇರಿ ಇತರ ತೂಕದ ಯಂತ್ರಗಳಲ್ಲಿ ರೈತರಿಗೆ ಯಾಮಾರಿಸಲಾಗುತ್ತಿದೆ. ಆಹಾರ ಧಾನ್ಯಗಳ ಖರೀದಿ ಪ್ರಕ್ರಿಯೆಯಲ್ಲೂ ಸಾಕಷ್ಟು ಅಕ್ರಮಗಳು ನಡೆಯುತ್ತಿವೆ. ಇದಕ್ಕೆ ಕಡಿವಾಣ ಬೀಳಬೇಕಿದೆ.

ದರಗಳ ವಿವರ

ಧಾನ್ಯ ವಿಧ	ದರ/ಕ್ವಿಂಟಾಲ್‌ಗೆ(ರು.ಗಳಲ್ಲಿ)
ಎಳ್ಳು	9,846
ಹುಚ್ಚೆಳ್ಳು	9,537
ಹೆಸರು	8,768
ಹತ್ತಿ	8,110
ತೊಗರಿ	8,000
ಉದ್ದು	7,800
ಸೂರ್ಯಕಾಂತಿ	7,721
ಶೇಂಗಾ(ಸಿಪ್ಪೆ ಸಹಿತ)	7,263
ಸೋಯಾಬಿನ್ (ಹಳದಿ)	5,328
ರಾಗಿ	4,886
ಬಿಳಿಜೋಳ	3.799
ಭತ್ತ	2,389
ಸಜ್ಜೆ	2,775
ಮೆಕ್ಕೆಜೋಳ	2,400

ಚಿಂಚೋಳಿಯಲ್ಲಿ ಭೂಕಂಪ ಅನುಭವ

ಕಲಬುರಗಿ: ಜಿಲ್ಲೆಯ ಚಿಂಚೋಳಿ ತಾಲೂಕಿನ ಹಲವು ಗ್ರಾಮಗಳಲ್ಲಿ ಶುಕ್ರವಾರ ಒಂದೇ ದಿನ ನಾಲ್ಕು ಬಾರಿ ಭೂಮಿ ಕಂಪಿಸಿದ ಅನುಭವವಾಗಿದ್ದು, ಜನರಲ್ಲಿ ತೀವ್ರ ಆತಂಕ ಸೃಷ್ಟಿಸಿದೆ. ಚಿಂಚೋಳಿ ತಾಲೂಕಿನ ಐನಾಪುರ, ಗಡಿನಿಂಗದಹಳ್ಳಿ, ಸೊಂತ ಹಾಗೂ ಪಟವಾದ ಗ್ರಾಮಗಳಲ್ಲಿ ಸರಣಿ ಕಂಪನಗಳು ಸಂಭವಿಸಿವೆ. ನಸುಕಿನ ಜಾವ 5:30 ರ ಸುಮಾರಿಗೆ ಎರಡು ಬಾರಿ ಕಂಪಿಸಿದ ಭೂಮಿ, ಮಧ್ಯಾಹ್ನ 3:00 ಗಂಟೆಗೆ ಮತ್ತೊಮ್ಮೆ ಕಂಪಿಸಿದೆ. ನಂತರ ಸಂಜೆ 7:17 ಮತ್ತು 7:20 ರ ಸುಮಾರಿಗೆ ಐನಾಪುರ ಮತ್ತು ಗಡಿನಿಂಗದಹಳ್ಳಿಯಲ್ಲೂ ಭೂಮಿ ಕಂಪಿಸಿದೆ.

ಪದೇ ಪದೇ ಭೂಮಿ ಕಂಪಿಸುತ್ತಿರುವ ಹಿನ್ನೆಲೆಯಲ್ಲಿ ಭಯಭೀತರಾದ ಗ್ರಾಮಸ್ಥರು ತಮ್ಮ ಮನೆಗಳಿಂದ ಹೊರಬಂದು ಬಯಲು ಪ್ರದೇಶಗಳಲ್ಲಿ ನಿಂತಿದ್ದರು. ಯಾವುದೇ ರೀತಿಯ ಹಾನಿಯ ವರದಿಯಾಗಿಲ್ಲವಾದರೂ, ಜಿಲ್ಲಾಡಳಿತ ತುರ್ತು ಕ್ರಮಗಳನ್ನು ಕೈಗೊಂಡು ಜನರ ಆತಂಕವನ್ನು ನಿವಾರಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ವನ್ಯಜೀವಿ ದಾಳಿಗೆ ಮೂವರ ಬಲಿ

← ಮೊದಲಪುಟದಿಂದ

ಘಟನಾ ಸ್ಥಳಕ್ಕೆ ಶೃಂಗೇರಿ ಪೊಲೀಸರು ಹಾಗೂ ಅರಣ್ಯ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಸುದ್ದಿ ತಿಳಿದು ಘಟನಾ ಸ್ಥಳಕ್ಕೆ ತೆರಳುತ್ತಿದ್ದ ತಹಸೀಲ್ದಾರ್ ಅವರಿದ್ದ ಜೀಪನ್ನು ತಡೆದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

ಅದೇ ರೀತಿ ಕಳೆದ ಐದು ದಿನಗಳಿಂದ ಮೈಸೂರು ಜಿಲ್ಲೆಯ ಸರಗೂರು ತಾಲೂಕಿನಲ್ಲಿ ಹುಲಿ ಉಪಟಳ ಮುಂದುವರೆದಿದ್ದು, ಶುಕ್ರವಾರ ಮತ್ತೊಬ್ಬ ರೈತ ಬಲಿಯಾಗಿದ್ದಾರೆ. ಮೈಸೂರು ಜಿಲ್ಲೆಯ ಸರಗೂರು ತಾಲೂಕಿನ ಕುರ್ಣೇಗಾಲದಲ್ಲಿ ಹುಲಿ ದಾಳಿ ಮಾಡಿ ಕೂಡಗಿ ಗ್ರಾಮದ ನಿಂಗಯ್ಯ(65) ಬಲಿಯಾಗಿದ್ದಾರೆ. ಕಾಡಂಚಿನ ಗ್ರಾಮ ಕುರ್ಣೇಗಾಲದಲ್ಲಿ ನಿಂಗಯ್ಯ ಅವರು ಹಸು ಮೇಯಿಸುತ್ತಿದ್ದ ವೇಳೆ ಹುಲಿ ದಾಳಿ ಮಾಡಿ ಕೊಂದು ಹಾಕಿದೆ.ಘಟನೆಯ ಮಾಹಿತಿ ತಿಳಿದ ಅರಣ್ಯ ಇಲಾಖೆ ಸಿಬ್ಬಂದಿಗಳು ದೌಡಾಯಿಸಿ ಸ್ಥಳ ಪರಿಶೀಲನೆ ನಡೆಸಿದ್ದಾರೆ.

ನಕ್ಷೆ ಉಲ್ಲಂಘನೆಗೆ ದಂಡಸಹಿತ ಸಕ್ರಮ

← ಮೊದಲಪುಟದಿಂದ

ಕಟ್ಟಡ ಪರವಾನಗಿ ಪಡೆದು ಫ್ಲೋರ್ ಏರಿಯಾ ರೇಶಿಯೋ (ಎಫ್‌ಎಆರ್) ಮತ್ತು ಕಾರ್ ಪಾರ್ಕಿಂಗ್ ಪ್ರದೇಶಗಳ ಉಲ್ಲಂಘನೆ ಪ್ರಕರಣಗಳಲ್ಲಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾರು ಪಾರ್ಕಿಂಗ್ ಉಲ್ಲಂಘನೆಗೆ 5 ಸಾವಿರ ರು. ಮತ್ತು ಎಫ್‌ಎಆರ್ ಉಲ್ಲಂಘನೆ (ಚದರ ಮೀಟರ್) ವಸತಿ, ಕೈಗಾರಿಕೆ, ಇತರೆ ಉದ್ದೇಶದ ಕಟ್ಟಡಗಳಿಗೆ 1 ಸಾವಿರ ರು. ಮತ್ತು ವಾಣಿಜ್ಯ ಕಟ್ಟಡಗಳಿಗೆ 1,500 ರು., ಪುರಸಭೆ ವ್ಯಾಪ್ತಿಯಲ್ಲಿ ಕಾರ್ ಪಾರ್ಕಿಂಗ್ ಉಲ್ಲಂಘನೆಗೆ 5 ಸಾವಿರ ರು., ವಸತಿ, ಕೈಗಾರಿಕೆ, ಇತರೆ ಉದ್ದೇಶದ ಕಟ್ಟಡಗಳಿಗೆ 1,200 ರು. ಮತ್ತು ವಾಣಿಜ್ಯ ಕಟ್ಟಡಗಳಿಗೆ 1,800 ರು., ನಗರ ಸಭೆಗಳ ವ್ಯಾಪ್ತಿಯಲ್ಲಿ ಎಫ್ ಎಆರ್ ಉಲ್ಲಂಘನೆಗೆ 1,500 ರು. ಮತ್ತು ವಾಣಿಜ್ಯ ಕಟ್ಟಡಗಳಿಗೆ 2,250 ರು. ಹಾಗೂ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಎಫ್‌ಎಆರ್ ಉಲ್ಲಂಘನೆಗೆ 2 ಸಾವಿರ ರು. ಮತ್ತು ವಾಣಿಜ್ಯ ಕಟ್ಟಡಗಳಿಗೆ 3 ಸಾವಿರ ರು. ದಂಡ ವಿಧಿಸಿ ಸರಕಾರ ಆದೇಶ ಹೊರಡಿಸಿದೆ.

- ಶೇ. 15ರ ಮಿತಿಯೊಳಗೆ ನಿಯಮ ಉಲ್ಲಂಘನೆ ಮಾಡಿದ ಕಟ್ಟಡಗಳಿಗೆ ಅನ್ವಯ
- ಸೆಟ್‌ಬ್ಯಾಕ್, ಕಾರ್ ಪಾರ್ಕಿಂಗ್ ಉಲ್ಲಂ ಘನೆ ಮಾಡಿದವರಿಗೆ ದಂಡಕ್ಕೆ ಅವಕಾಶ

ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜನಿಯರಿಂಗ್ ಘಟಕ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಆ&ಕು.ಕ.ಇ.ಇಂ ವಿಭಾಗ, ಫೋರ್ಟ್ ರೋಡ್, ಧಾರವಾಡ-580008
ದೂರವಾಣಿ ಸಂ : 0836 – 2955800
(E-Mail : eehfwedvndwd1@gmail.com)
ಸಂಖ್ಯೆ: ಕಾನಿಅ/ಆಕುಕಇಇಂ/ವಿಭಾಗ-ಧಾ/ರಿಪೇರಿ/968/25-26
ದಿನಾಂಕ : 31.10.2025

ಅಲ್ಪಾವಧಿ ಟೆಂಡರ ಪ್ರಕಟಣೆ (Through KPP Portal only)

ಕಾರ್ಯನಿರ್ವಾಹಕ ಅಭಿಯಂತರರು, ಆ&ಕು.ಕ.ಇ.ಇಂ., ವಿಭಾಗ, ಧಾರವಾಡ ಇವರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆ ವರ್ಗದ ಗುತ್ತಿಗೆದಾರರಿಂದ ಕಾಮಗಾರಿವಾರು ಹಾಗೂ ಜಿಲ್ಲಾವಾರು ಸಂಬಂಧಿಸಿದ ಈ ವಿಭಾಗದಡಿಯಲ್ಲಿಯ 1} 2210-01-110-1-21-422 (ಎಸ್‌ಸಿಎಸ್‌ಪಿ) ಯೋಜನೆ ಲೆಕ್ಕಶೀರ್ಷಿಕೆಯಡಿ ಧಾರವಾಡ- 03 ಸಂಖ್ಯೆ, ಗದಗ- 01 ಸಂಖ್ಯೆ, ಬಾಗಲಕೋಟ – 01 ಸಂಖ್ಯೆ, ರಿಪೇರಿ ಕಾಮಗಾರಿಗಳು ಮತ್ತು 2} ಪಿ.ಎಮ್- ಅಭಿಮ್ ಲೆಕ್ಕ ಶೀರ್ಷಿಕೆಯಡಿ ಬೆಳಗಾವಿ – 02 ಸಂಖ್ಯೆ, ಕಾಮಗಾರಿಗಳಿಗೆ [ಕನಿಷ್ಟ ಮೊತ್ತ ರೂ. **20.00** ಲಕ್ಷದಿಂದ ಗರಿಷ್ಠ ಮೊತ್ತ ರೂ. **90.00** ಲಕ್ಷಗಳು] ಕೆ.ಪಿ.ಪಿ. ಪೋರ್ಟಲ್‌ನಲ್ಲಿರುವಂತೆ ಕಾಮಗಾರಿವಾರು Double cover system, ಐಟಂವಾರು ದರದ ಟೆಂಡರ್‌ಗಳನ್ನು ಕೆ.ಪಿ.ಪಿ.ಪೋರ್ಟಲ್ ಮೂಲಕ ಕರೆಯಲಾಗಿದೆ. ಸದರಿ ಟೆಂಡರ್‌ಗಳನ್ನು ದಿ : **29.10.2025** ರಿಂದ **05.11.2025** ರ ಸಾಯಂಕಾಲ 4.00 ಘಂಟೆಯವರೆಗೆ www.kppp.karnataka.gov.in ನಲ್ಲಿ ವೀಕ್ಷಿಸಿ ಟೆಂಡರ್ ಡಾಕುಮೆಂಟಗಳನ್ನು ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ, ಹಾಗೂ ಸದರಿ ಕಾಮಗಾರಿಯ ಬಿಡ್‌ಗಳನ್ನು ದಿ : **07.11.2025** ರಂದು ತೆರೆಯಲಾಗುವುದು.

ಆಸಕ್ತ ಗುತ್ತಿಗೆದಾರರು ಒಂದು ವೇಳೆ ಮಾಹಿತಿ ಹಾಗೂ ದಿನಾಂಕಗಳಲ್ಲಿ ಬದಲಾವಣೆಯಾದಲ್ಲಿ, ನಿಖರವಾದ ಮಾಹಿತಿ ಹಾಗೂ ದಿನಾಂಕಗಳನ್ನು ಕೆ.ಪಿ.ಪಿ.ಪೋರ್ಟಲ್ ವೆಬ್‌ಸೈಟ್ www.kppp.karnataka.gov.in ನಲ್ಲಿ ಬಿಡ್‌ಗಳನ್ನು ಪಡೆದು, ಭರ್ತಿ ಮಾಡಿ ಸಲ್ಲಿಸಬಹುದಾಗಿದೆ. ಇನ್ನೂ ಹೆಚ್ಚಿನ ಮಾಹಿತಿಯನ್ನು www.kppp.karnataka.gov.in ನಲ್ಲಿ ವೀಕ್ಷಿಸಿ ಪಡೆಯಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಆ&ಕು.ಕ.ಇ. ಇಂಜಿನೀಯರಿಂಗ್ ವಿಭಾಗ,
ಧಾರವಾಡ.
ವಾಸಾಸಂಇ/ಧಾ/ಕೆಎಸ್‌ಎಂಸಿಎ/815/2025-26

ಪುರಸಭೆ ಕಾರ್ಯಾಲಯ, ಚಿಕ್ಕಬಾಣಾವರ
ಸಂತೆ ಬೀದಿ ವೃತ್ತ, ಚಿಕ್ಕಬಾಣಾವರ, ಚಿಕ್ಕಬಾಣಾವರ ಅಂಚೆ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು-560090, ದೂರವಾಣಿ ಸಂಖ್ಯೆ: 080-28395098
Website : www.chikkabanavaratown.mrc.gov.in, Email: ka.chikkabanavara.tmc@gmail.com
ಸಂಖ್ಯೆ : ಪು.ಕಾ.ಚಿ/ಟೆಂಡರ್/ಸಿಆರ್/08/2025-26 ದಿನಾಂಕ: 31.10.2025

ಟೆಂಡರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮುಖ್ಯಾಧಿಕಾರಿ ಪುರಸಭೆ ಚಿಕ್ಕಬಾಣಾವರ, ಬೆಂಗಳೂರು ನಗರ ಜಿಲ್ಲೆ, ಇವರಿಂದ 2025-26ನೇ ಸಾಲಿನ ಪುರಸಭಾ ಅನುದಾನದಲ್ಲಿ ಈ ಕೆಳಕಂಡ ಟೆಂಡರ್‌ಗೆ ಸಂಬಂಧಿಸಿದಂತೆ ಕರ್ನಾಟಕ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಪ್ರಕಾರ ಟೆಂಡರನ್ನು ದ್ವಿ-ಲಕೋಟೆ ಪದ್ಧತಿಯಡಿ ಅರ್ಹ ದರ್ಜೆಯ ನೋಂದಾಯಿತ ಗುತ್ತಿಗೆದಾರರಿಂದ ಹಾಗೂ ಇ-ಹರಾಜು ಪ್ರಕ್ರಿಯೆಯನ್ನು ಕೆ.ಪಿ.ಪಿ.-ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ಕರೆಯಲಾಗಿರುತ್ತದೆ.

ಕ್ರ.ಸಂ	ಇಂಡೆಂಡ್ ನಂ
01	DMA/2025-26/RD/WORK_INDENT51080
02	DMA/2025-26/AUNCTION4204

1. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆ.ಪಿ.ಪಿ-ಪ್ರೋಕ್ಯೂರ್ ಮೆಂಟ್ ಪೋರ್ಟಲ್ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. **2.**ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: **14.11.2025** ರಂದು, **3.**ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **15.11.2025** ರಂದು ನಿಗದಿಪಡಿಸಲಾಗಿರುತ್ತದೆ. **4.**ಇ-ಹರಾಜು ಪ್ರಕ್ರಿಯೆನಲ್ಲಿ ಭಾಗವಹಿಸಲು ಕೊನೆ ದಿನಾಂಕ: **14.11.2025**. **5.**ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ ಹಾಗೂ ಯಾವುದೇ ತಿದ್ದುಪಡಿ ಮತ್ತು ಬದಲಾವಣೆಯಿದ್ದಲ್ಲಿ ಕೆ.ಪಿ.ಪಿ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ ತಿಳಿಯುವುದು.

ಸಹಿ/- **ಮಾನ್ಯ ಆಡಳಿತಾಧಿಕಾರಿಗಳು** **ಪುರಸಭೆ, ಚಿಕ್ಕಬಾಣಾವರ**
ಸಹಿ/- **ಮುಖ್ಯಾಧಿಕಾರಿ** **ಪುರಸಭೆ, ಚಿಕ್ಕಬಾಣಾವರ**
ವಾಸಾಸಂಇ/ವಾ.ಪ್ರ/3524/ಎಸ್‌ಎಸ್‌ಸಿ/2025-26

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ.
Ph: 08182-2268512 E-mail: ka.shivamogga.cc@gmail.com
ಸಂಖ್ಯೆ: ಶಿಮನಪಾ/ಆ.ವಿ/ಸಿಆರ್/14/2025-26 ದಿನಾಂಕ: 31/10/2025

ಟೆಂಡರ್ ಪ್ರಕಟಣೆ

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 35 ವಾರ್ಡ್ ಗಳಲ್ಲಿ ಬೀದಿ ನಾಯಿಗಳ ಸಂತಾನಹರಣ ಶಸ್ತ್ರ ಚಿಕಿತ್ಸೆ ಮತ್ತು ರೇಬಿಸ್ ಲಸಿಕಾ ಕಾರ್ಯಕ್ರಮ ಮಾಡುವುದು ನಿರಂತರವಾಗಿರುವುದು ಅವಶ್ಯವಾಗಿರುತ್ತದೆ. (ಪ್ರತಿ 6 ತಿಂಗಳಿಗೊಮ್ಮೆ ಸಂತಾನೋತ್ಪತ್ತಿ ಆಗುವುದರಿಂದ) ಅದರಂತೆ 2025-26 ನೇ ಸಾಲಿನಲ್ಲಿ ಬೀದಿ ನಾಯಿಗಳನ್ನು ಹಿಡಿದು ತಂದು ಶಸ್ತ್ರಚಿಕಿತ್ಸೆ ಕಾರ್ಯ ನಿರ್ವಹಿಸಲು ಮಾನ್ಯ ಆಯುಕ್ತರು ಮಹಾನಗರ ಪಾಲಿಕೆ ಶಿವಮೊಗ್ಗ ಇವರಿಂದ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ (https://kppp.karnataka.gov.in) ಟೆಂಡರ್ ಸಲ್ಲಿಸುವುದು.

ಕ್ರ.ಸಂ. 1. ಕಾಮಗಾರಿಗಳ ವಿವರ: Catching Stray Dogs And Implementation of Animal Birth Control/Anti Rabies Vaccination Programme in Shivamogga City Corporation (Indent No- DMA/2025-26/SE6548) **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 48.00 **ಇ.ಎಂ.ಡಿ. ಮೊತ್ತ ರೂ.:** 96,000.00 **ಲೆಕ್ಕ ಶೀರ್ಷಿಕೆ:** 2025-26 ನೇ ಸಾಲಿನ ಪಾಲಿಕೆಯ ಸಾಮಾನ್ಯ ನಿಧಿ.

1. ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭಿಕ ದಿನಾಂಕ: 03.11.2025 **2.** ಪೂರ್ವಭಾವಿ ಸಭೆ (PRE -BID MEETING): 04.11.2025 ರ ಪೂರ್ವಾಹ್ನ 11:00 ಗಂಟೆಗೆ ಮಹಾನಗರಪಾಲಿಕೆ ಶಿವಮೊಗ್ಗ **3.** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:10.11.2025 ರ ಸಂಜೆ 5.00 ಗಂಟೆಗೆ ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಈ ಕಛೇರಿಯ ಆರೋಗ್ಯ ವಿಭಾಗದಲ್ಲಿ ಪರಿಸರ ಅಭಿಯಂತರರು ರವರಿಂದ ಪಡೆಯಬಹುದಾಗಿದೆ. ಇವರ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ KPP-ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು, ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/- ಕಾರ್ಯಪಾಲಕ ಅಭಿಯಂತರರು
ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25-26/01/11/1175

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಕೃಭಾಜನಿನಿ,
ಆಣೆಕಟ್ಟು ವಿಭಾಗ, ಆಲಮಟ್ಟಿ. ದೂರವಾಣಿ: 08426-281027.
ಇ-ಮೇಲ್: **dam_division@rediffmail.com**
ಸಂ:ಕೃಭಾಜನಿನಿ/ಆಆವಿ/ಡಿಬಿ/ಟೆಂಡರ್/2025-26/2059
ದಿನಾಂಕ:29.10.2025

ಅಲ್ಪಾವಧಿ ಸಂಕ್ಷಿಪ್ತ ಟೆಂಡರ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ವಿಭಾಗ ಆಲಮಟ್ಟಿ. ತಾ: ಬ.ಬಾಗೇವಾಡಿ ಇವರು ಅರ್ಹ ಗುತ್ತಿಗೆದಾರರಿಗೆ ಇಂಡೆಂಟ್ ಸಂಖ್ಯೆಗಳು Item Rate & Percentage basis & Service tenders from the eligible contractors for the work indents of **Two Cover** – (1) I .No. SE0181/CALL-2 (Others) – 20.00 Lakhs (2) I .No. SE0212 (Others) – Non-ECV (3) I .No. SE0228 (Others) – 34.11 Lakhs (4) I .No. SE0226 (Others) – 100.53 Lakhs (5) I .No. 2400/Call-3 (Others) – 63.41 Lakhs **Single Cover -** work indents of (1) I .No. 2523/Call-2 (Others)- 19.81 Lakhs. (1) I .No. SE0234 (Others) – 11.39 Lakhs (2) 2460/Call-2 (Others)- 20.23Lakhs ಕೆ.ಟಿ.ಪಿ.ಟಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ KW & KC ಟೆಂಡರ್ ಅಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ-cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ಭರ್ತಿಗೊಳಿಸಿದ ಟೆಂಡರನ್ನು ಸಲ್ಲಿಸುವದು.

1. ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ್ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವಿಕರಿಸುವ ಕೊನೆಯ ದಿನಾಂಕ: **31.10.2025 ರಿಂದ 13.11.2025** ಸಾಯಂಕಾಲ 5.00 ಘಂಟೆಯವರೆಗೆ

2. ಪೂರ್ವಭಾವಿ ಸಭೆ ಇ.ಸಂ. SE0226 : 06.11.2025 ಮುಂಜಾನೆ 11.00 ಘಂಟೆಗೆ

3. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ (Two Cover):** ಆರ್ಥಿಕ ಬಿಡ್ ತೆರೆಯುವ **ದಿನಾಂಕ (Single Cover): 14.11.2025 ಮುಂಜಾನೆ 11.00 ಘಂಟೆಗೆ.**

4. ಆರ್ಥಿಕ ಬಿಡ್ ತೆರೆಯುವ **ದಿನಾಂಕ (Two Cover): 18.11.2025 ಮುಂಜಾನೆ 11.00 ಘಂಟೆಗೆ.**

ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. https://kppp.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426-281027.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಆಣೆಕಟ್ಟು ವಿಭಾಗ,
ಆಲಮಟ್ಟಿ.
ವಾಸಾಸಂಇ/ವಿಜಯಪುರ/426/ಕೆಎಸ್‌ಎಂಸಿಎ/2025-26

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ವಿಜಯನಗರ.
ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ. ಮಾರುತಿ ನಿಲಯ, 35ನೇ ವಾರ್ಡ್, ಪುಣ್ಯಾನಂದಪುರಿ ನಗರ ಆಕಾಶವಾಣಿ ಹತ್ತಿರ, ಹೊಸಪೇಟೆ. ವಿಜಯನಗರ ಜಿಲ್ಲೆ-583201.
ದೂ.08394-796292ಇ-ಮೇಲ್: bcwdvijayanagara@gmail.com.
ಸಂ/ಜಿ.ಹಿಂ.ವ.ಕ.ಇ.ವಿ/ಹೊ.ಗು.ಟೆಂ/ಸಿಆರ್- 01/2025-26 ದಿನಾಂಕ: 31.10.2025

ಇ-ಟೆಂಡರ್ ಪ್ರಕಟಣೆ

ವಿಜಯನಗರ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ನಿರ್ವಹಿಸಲಾಗುತ್ತಿರುವ ಜಿಲ್ಲಾ ಮತ್ತು ತಾಲ್ಲೂಕು ಕಛೇರಿಗಳಲ್ಲಿ ಡಾಟಾ ಎಂಟ್ರಿ ಆಪರೇಟರ್ಸ್, ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಹಾಗೂ ಆಶ್ರಮ ಶಾಲೆಗಳಲ್ಲಿ ಖಾಲಿ ಇರುವ ಅಡುಗೆಯವರು, ಅಡುಗೆ ಸಹಾಯಕರು, ರಾತ್ರಿಕಾವಲುಗಾರರು ಹಾಗೂ ಗ್ರೂಪ್ 'ಡಿ' ಸಿಬ್ಬಂದಿಗಳನ್ನು 2025-26ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಅಥವಾ ಕಾರ್ಯಾದೇಶ ನೀಡಿದ ದಿನಾಂಕ ದಿಂದ 12 ತಿಂಗಳಿಗೆ ತಾತ್ಕಾಲಿಕವಾಗಿ ಹೊರಸಂಪನ್ಮೂಲದಿಂದ ಪಡೆಯಲು ಅರ್ಹ ಏಜೆನ್ಸಿ/ಸಂಸ್ಥೆಗಳಿಂದ ಪಡೆಯಲು ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಹೆಚ್ಚಿನ ವಿವರಗಳನ್ನು ಹಾಗೂ ಟೆಂಡರ್ ದಸ್ತಾವೇಜುಗಳನ್ನು ದಿನಾಂಕ:31.10.2025 ರಿಂದ Website:https://KPPP.karnataka.gov.inನಲ್ಲಿ ಪಡೆಯಬಹುದಾಗಿದೆ. e-portalನಲ್ಲಿ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ:10.12.2025 ರ ಸಂಜೆ:5.00 ಗಂಟೆಗೆ ನಿಗದಿಪಡಿಸಿದೆ.

ಸಹಿ/- ಜಿಲ್ಲಾ ಅಧಿಕಾರಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವಿಜಯನಗರ ಜಿಲ್ಲೆ
ವಾ.ಸಾ.ಸಂ.ಇ/ವಿಜಯನಗರ/2025-26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/323

ಕರ್ನಾಟಕ ಸರ್ಕಾರ
ರಾಯಚೂರು ಮಹಾನಗರ ಪಾಲಿಕೆ
E-mail:itstaff_ulb_raichura@yahoo.com Website:-www.raichurcity.gov.in
Phone No:08532-226768 Fax No:08532-226316
ಸಂ:ರಾಮಪಾ/ ಸಿಬ್ಬಂದಿ/ಸಿಆರ್/01/ CLTC/2025-26 ದಿನಾಂಕ:28.10.2025

ಟೆಂಡರ್ ಪ್ರಕಟಣೆ

ಕ್ರ. ಸಂ	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ ಮತ್ತು ಅನುಭವ
1	Municipal Civil Engineer	1	i) Post graduate or graduate degree in Engineering with specialization in public health engineering or diploma in Engineering. ii)Having 5-7years of experience in procurement, design, and supervision of infrastructure works. iii) Ability to assist ULBs to set standards and procedures for ensuring quality and monitoring compliances. iv) Prior experience as municipal engineer will be an added advantage. v)Experience in implementing new technologies in the hosing sector
2	Housing Finance Specialist	1	i.) Post graduate or graduate degree in finance or equivalent qualification from recognized university. ii) 3-5 years of experience in housing finance or banking or housing polic? iii) Experience in helping State/UT governments and ULBs to examine and use a range of options for financing housing projects. iv) Experience in training ULB staff on municipal finance, project finance and resource mobilization
3	MIS Specialist	1	i) Post Graduate degree in Computer Science or Electronics or MCA/PGDCA. ii) 5-7 years of experience in government/semi govt./ autonomous organizations/private company of repute. iii) Exposure to software development & project management, database management, MIS etc. iv) Ability to work in a team and train staff to use the systems

ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ ದಿನಾಂಕ:16/11/2025 ಸಂಜೆ:5:30 ರವರೆಗೆ
ಸಂಪರ್ಕಿಸಿ: ಮೇಲಿನ ವಿಳಾಸಕ್ಕೆ, ಕೆಲಸದ ದಿನಗಳಲ್ಲಿ ಕಛೇರಿಯ ಸಮಯದಲ್ಲಿ ಮಾತ್ರ.
ಆಯ್ಕೆ ವಿಧಾನ: ಆಯಾ ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ ಮತ್ತು ಪೂರ್ವ ಅನುಭವದಲ್ಲಿ ಆಯಾ ವರ್ಗದಲ್ಲಿ ಅರ್ಹತೆ ಹೊಂದಿದ ಅಭ್ಯರ್ಥಿಗಳಲ್ಲಿ ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಅತೀ ಹೆಚ್ಚು ಅಂಕ ಪಡೆದ (ಶೇಕಡದಲ್ಲಿ) ಅಭ್ಯರ್ಥಿಗಳನ್ನು ಸರ್ಕಾರದಿಂದ ನಿಗದಿಪಡಿಸಿದ ಮೀಸಲಾತಿಯಂತೆ ಆಯ್ಕೆ ಮಾಡಿ ಹೊರಗುತ್ತಿಗೆ ಸಂಸ್ಥೆಯ ಮೂಲಕ ಪಡೆಯಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ರಾಯಚೂರು.
DIP/RCR/497/KSMCA/498/2025-26

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : **VISHWESHWAR BHAT,** On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : **Vishweshwar Bhat.** ಪ್ರಧಾನ ಸಂಪಾದಕ: **ವಿಶ್ವೇಶ್ವರ ಭಟ್**
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10,Issue:290

ಸಮಾಚಾರ ಸಣ್ಣದಲ್ಲ

ಆಂಬುಲೆನ್ಸ್‌ಗೆ ದಾರಿ ಬಿಡದ ಪುಂಡನ ಸೆರೆ

ಮಂಗಳೂರು: ಆಂಬುಲೆನ್ಸ್‌ಗೆ ದಾರಿ ಬಿಡದೇ ಪುಂಡಾಟ ಮಾಡಿದ್ದ ಬೈಕ್ ಸವಾರನನ್ನು ಪೊಲೀಸರು ಅರೆಸ್ಟ್ ಮಾಡಿದ ಘಟನೆ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಬಿ.ಸಿ ರೋಡ್‌ನಲ್ಲಿ ನಡೆದಿದೆ. ಬಂಧಿತ ಬೈಕ್ ಸವಾರನನ್ನು ಪುತ್ತೂರಿನ ಬೆಟ್ಟಂಪಾಡಿ ಗ್ರಾಮದ ಮಹಮ್ಮದ್ ಮನ್ಸೂರು (38) ಎಂದು ಗುರುತಿಸಲಾಗಿದೆ. ಗುರುವಾರ (ಅ.30) ಬಿಸ್ಲೆ ಘಾಟ್ ಬಳಿ ನಡೆದ ಅಪಘಾತದಲ್ಲಿ ಗಾಯಾಗೊಂಡಿದ್ದವರನ್ನು ಆಂಬುಲೆನ್ಸ್‌ನಲ್ಲಿ ಕರೆದೊಯ್ಯುತ್ತಿದ್ದರು. ಈ ವೇಳೆ ಬಿ.ಸಿ.ರೋಡ್ ಬಳಿ ಬೈಕ್ ಸವಾರನೊಬ್ಬ ಮೂರ್ನಾಲ್ಕು ಕಿ.ಮೀವರೆಗೆ ಆಂಬುಲೆನ್ಸ್‌ಗೆ ದಾರಿ ಬಿಡದೇ ಪುಂಡಾಟ ಮಾಡಿದ್ದ. ಈ ವಿಡಿಯೊವನ್ನು ಆಂಬುಲೆನ್ಸ್ ಸಿಬ್ಬಂದಿ ವೈರಲ್ ಮಾಡಿದ್ದ. ವಿಡಿಯೊ ವೈರಲ್ ಆಗುತ್ತಿದ್ದಂತೆ ಬಂಟ್ವಾಳ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸದ್ಯ ಪೊಲೀಸರು ಸವಾರನನ್ನು ಬಂಧಿಸಿ, ಬೈಕ್ ವಶಕ್ಕೆ ಪಡೆದುಕೊಂಡಿದ್ದಾರೆ.

ಬಿಜೆಪಿ ಪಕ್ಷ ಸುಳ್ಳು ಸೃಷ್ಟಿಸುವ ಫ್ಯಾಕ್ಟರಿ

ವಿಜಯಪುರ: ಬಿಜೆಪಿಗರು ಹುಟ್ಟು ಸುಳ್ಳುಗಾರರು. ಬಿಜೆಪಿಯವರು ದೇಶದಲ್ಲಿ ಸುಳ್ಳು ಸೃಷ್ಟಿ ಮಾಡುವ ಫ್ಯಾಕ್ಟರಿ ಇಟ್ಟುಕೊಂಡಿದ್ದಾರೆ. ಇದಕ್ಕೆ ಪ್ರಧಾನಿ ನರೇಂದ್ರ ಮೋದಿ ಪ್ರಿನ್ಸಿಪಾಲ್ ಎಂದು ಬಿಜೆಪಿ ವಿರುದ್ಧ ಸಚಿವ ರಾಮಲಿಂಗಾರೆಡ್ಡಿ ವಾಗ್ದಾಳಿ ನಡೆಸಿದರು. ಉತ್ತರ ಕರ್ನಾಟಕಕ್ಕೆ ಪ್ರವಾಹ ಪರಿಹಾರದಲ್ಲಿ ಕಾಂಗ್ರೆಸ್ ಸರಕಾರ ವಿಳಂಬ ಎಂಬ ಬಿಜೆಪಿ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ವಯನಾಡಿನಲ್ಲಿ ಸಂಸದೆ ಪ್ರಿಯಾಂಕಾ ಗಾಂಧಿ ಇರುವುದರಿಂದ ಬಿಜೆಪಿಗೆ ಹೊಟ್ಟೆ ಉರಿ. ಬಿಜೆಪಿ ಎಂದರೆ ಬುರುಡೆ ಜನರ ಪಕ್ಷ. ಸಾರಿಗೆ ಇಲಾಖೆಯಿಂದ, ರೈಲ್ವೆಯಿಂದ ಕಡಿಮೆ ಖರ್ಚಿನಲ್ಲಿ ಪ್ರವಾಸ ಕೈಗೊಳ್ಳಲಾಗಿದೆ. ಆದರೆ ಇದು ಬಿಜೆಪಿಗೆ ಕಾಣುವುದಿಲ್ಲ ಎಂದು ಲೇವಡಿ ಮಾಡಿದರು. ಬೆಂಗಳೂರಿನಲ್ಲಿ ಗುಂಡಿ ಬಿದ್ದ ವಿಚಾರವಾಗಿ ಡಿಕೆಶಿ ಅವರಿಗೆ ಕೇಳಿ ಎಂಬ ಸಿಎಂ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿ, ಸಹಜವಾಗಿ ಹಳೆಯ ರಸ್ತೆಯಲ್ಲಿ ಗುಂಡಿ ಬಿದ್ದಿರುತ್ತೆ. ಆ ಗುಂಡಿ ಮುಚ್ಚುವ ಕಾರ್ಯ ಮಾಡಬೇಕಿರುವದು ಸ್ಥಳೀಯ ಸಂಸ್ಥೆ ಹಾಗೂ ರಾಜ್ಯ ಸರಕಾರದವರು ಮಾಡಬೇಕು. ಡಿಕೆಶಿ ಅವರ ಹೆಸರು ಹೇಳಲು ಕಾರಣ ಅವರು ಸಂಬಂಧ ಪಟ್ಟ ಮಂತ್ರಿಗಳು ಎಂಬ ಕಾರಣಕ್ಕೆ ಹೇಳಿದ್ದಾರೆ ಎಂದು ಸಿಎಂ ಹೇಳಿಕೆಯನ್ನು ಸಮರ್ಥಿಸಿಕೊಂಡರು.

ನೇಣು ಬಿಗಿದುಕೊಂಡು ವಿದ್ಯಾರ್ಥಿ ಆತ್ಮಹತ್ಯೆ



ಬಾಗಲಕೋಟೆ: ಜಿಲ್ಲೆಯ ಜಮಖಂಡಿ ತಾಲೂಕಿನ ಆಲಗೂರು ಪುನರ್ವಸತಿ ಕೇಂದ್ರದಲ್ಲಿ ವಿದ್ಯಾರ್ಥಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಶುಕ್ರವಾರ ನಡೆದಿದೆ. ಆಲಗೂರ ಗ್ರಾಮದ ಆಕಾಶ ಹೆದ್ದಾರಿ (15) ನೇಣು ಹಾಕಿಕೊಂಡ ದುರ್ದೈವಿ. ಜಮಖಂಡಿಯ ಖಾಸಗಿ ಶಾಲಯಲ್ಲಿ ಒಂಬತ್ತನೇ ತರಗತಿ ಓದುತ್ತಿದ್ದ ಆಕಾಶ ಯಾವ ಕಾರಣಕ್ಕೆ ನೇಣು ಹಾಕಿಕೊಂಡದ್ದಾನೆ ಎಂದು ತಿಳಿದು ಬಂದಿಲ್ಲ. ಜಮಖಂಡಿ ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲ ಘಟನೆ ಜರುಗಿದೆ.

ಶಾಲಾ ಸಂಪ್‌ನಲ್ಲಿ ಬಿದ್ದು ವಿದ್ಯಾರ್ಥಿ ಸಾವು

ಕೋಲಾರ: ಮಧ್ಯಾಹ್ನ ಬಿಸಿಯೂಟ ಮುಗಿಸಿ, ಕೈತೊಳೆಯುವ ಸಂದರ್ಭದಲ್ಲಿ ಸರಕಾರಿ ಶಾಲಾ ವಿದ್ಯಾರ್ಥಿಯೊಬ್ಬ ತೆರೆದ ಸಂಪ್‌ನಲ್ಲಿ ಬಿದ್ದು ಅಸುನೀಗಿದ ಘಟನೆ ಜಿಲ್ಲೆಯ ಮಾಲೂರು ತಾಲೂಕಿನ ಕಡದನಹಳ್ಳಿ ಗ್ರಾಮದಲ್ಲಿ ಗುರುವಾರ ನಡೆದಿದೆ. ಕಡದನಹಳ್ಳಿ ಗ್ರಾಮದ 4ನೇ ತರಗತಿ ವಿದ್ಯಾರ್ಥಿ ಸುರೇಂದ್ರ (9 ವರ್ಷ) ಸಾವನ್ನಪ್ಪಿರುವ ಬಾಲಕನಾಗಿದ್ದಾನೆ. ಶಾಲಾ ಶಿಕ್ಷಕರು ಹಾಗೂ ಸಿಬ್ಬಂದಿಯ ನಿರ್ಲಕ್ಷ್ಯವೇ ವಿದ್ಯಾರ್ಥಿ ಸಾವಿಗೆ ಕಾರಣ ಎಂಬ ಆರೋಪ ಕೇಳಿ ಬಂದಿದೆ. ಬಾಲಕನ ತಾಯಿ ಗೀತಾ ಅವರು ನೀಡಿದ ದೂರಿನ ಮೇರೆಗೆ ಶಾಲಾ ಮುಖ್ಯೋಪಾಧ್ಯಾಯ ಶೇಖರ್ ಬಾಬು ಮತ್ತು ಅಡುಗೆ ಸಹಾಯಕಿ ವಸಂತಮ್ಮ ವಿರುದ್ಧ ಮಾಲೂರು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಸ್ಥಳದಲ್ಲಿ ಮೃತ ಸುರೇಂದ್ರನ ತಾಯಿ ಗೀತಾರ ಆಕ್ರಂದನ ಮುಗಿಲುಮುಟ್ಟಿತ್ತು. ಘಟನಾ ಸ್ಥಳಕ್ಕೆ ಶಾಸಕ ಕೆ.ವೈ.ನಂಜೇಗೌಡ , ತಹಸೀಲ್ದಾರ್ ಎಂ.ವಿ.ರೂಪಾ, ತಾಪಂ ಇಒ ವಿ.ಕೃಷ್ಣಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಪಿ.ಕೆಂಪಯ್ಯ, ಸಮನ್ವಯಾಧಿಕಾರಿ ವೆಂಕಟಸ್ವಾಮಿ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಆನಂದ್ ಮೂರ್ತಿ, ವೈದ್ಯಾಧಿಕಾರಿ ಡಾ.ಶ್ರೀನಿವಾಸ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಮೃತ ವಿದ್ಯಾರ್ಥಿಯ ಕುಟುಂಬಕ್ಕೆ ಸ್ವಾಂತನ ಹೇಳಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಒಳ ಮೀಸಲಾತಿಯಲ್ಲಿ ಶೇ.1ರಷ್ಟು ಮೀಸಲಾತಿಗೆ ಅಲೆಮಾರಿ ಸಮುದಾಯ ಪಟ್ಟು | ತಜ್ಞರ ಜತೆ ಚರ್ಚಿಸುವೆ: ಸಿಎಂ

ಅಲೆಮಾರಿ ಸಮುದಾಯಕ್ಕೆ ನ್ಯಾಯ ಒದಗಿಸಲು ಬದ್ಧ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನ್ಯಾ.ನಾಗಮೋಹನದಾಸ್ ಸಮಿತಿ ನಿಗದಿ ಮಾಡಿದಂತೆ ತಮ್ಮ ಸಮುದಾಯಕ್ಕೆ ಒಳ ಮೀಸಲಾತಿಯಲ್ಲಿ ಶೇ.1ರಷ್ಟು ಮೀಸಲಿಗೆ ಪಟ್ಟು ಹಿಡಿದಿರುವ ಅಲೆಮಾರಿ ಸಮುದಾಯ, ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಮತ್ತೊಮ್ಮೆ ಆಗ್ರಹಿಸಿದ್ದಾರೆ. ಅದಕ್ಕೆ ಸಿಎಂ, ಶೇ. 1 ಒಳಮೀಸಲಾತಿ ಮರುಸ್ಥಾಪಿಸಲು ಕಾನೂನು ತಜ್ಞರೊಂದಿಗೆ ಚರ್ಚಿಸಲಾಗುವುದು ಎಂದು ಭರವಸೆ ನೀಡಿದ್ದಾರೆ.

ವಿಧಾನಸೌಧದಲ್ಲಿ ಶುಕ್ರವಾರ ಅಲೆಮಾರಿಗಳ ಮಹಾ ಒಕ್ಕೂಟದ ಪದಾಧಿಕಾರಿಗಳು ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ತಮ್ಮ ಮನವಿ ಸಲ್ಲಿಸಿದ್ದಾರೆ. ಈ ವೇಳೆ ಅಲೆಮಾರಿ ಸಮುದಾಯಗಳ ಬೇಡಿಕೆಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಶೇ. 1 ಒಳಮೀಸಲಾತಿ ನೀಡುವ ಸಂಬಂಧ ಕಾನೂನು ತಜ್ಞರೊಂದಿಗೆ ಚರ್ಚಿಸುತ್ತೇವೆ. ಅದರ ಜತೆಗೆ ಅಲೆಮಾರಿಗಳ ಬೇಡಿಕೆ ಈಡೇರಿಕೆಗೆ ಸ್ವಲ್ಪ ಕಾಲಾವಕಾಶ ನೀಡುವಂತೆ ತಿಳಿಸಿದರು. ಇದೇ ವೇಳೆ ಒಳ ಮೀಸಲಾತಿ ಹಂಚಿಕೆಗೆ ಸಂಬಂಧಿಸಿದಂತೆ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಧಾರದ ವಿರುದ್ಧ ಹೈಕೋರ್ಟ್‌ನಲ್ಲಿ ಸಲ್ಲಿಸಿರುವ ಅರ್ಜಿ ಹಿಂಪಡೆಯುವಂತೆ ತಿಳಿಸಿದರು. ಅದಕ್ಕೆ ಮಹಾ ಒಕ್ಕೂಟದ ಪ್ರಮುಖರು, ಪದಾಧಿಕಾರಿಗಳೊಂದಿಗೆ ಚರ್ಚಿಸಿ ನಿರ್ಧಾರ ತಿಳಿಸುವುದಾಗಿ ಹೇಳಿದರು.

ಸಭೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಿದ್ದರಾಮಯ್ಯ, ಅಲೆಮಾರಿ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಕಲ್ಪಿಸಲು ಸರಕಾರ ಬದ್ಧವಾಗಿದೆ. ನ್ಯಾ. ನಾಗಮೋಹನದಾಸ್ ಸಮಿತಿ ನಿಗದಿ ಮಾಡಿದಂತೆ ಶೇ. 1ರಷ್ಟು ಒಳ ಮೀಸಲಾತಿ ಮರುಸ್ಥಾಪಿಸುವಂತೆ ಅಲೆಮಾರಿಗಳ ಮಹಾ ಒಕ್ಕೂಟದ ಪದಾಧಿಕಾರಿಗಳ ನಿಯೋಗ ಕೋರಿದೆ. ಅವರ ಬೇಡಿಕೆ ಯಾವ ರೀತಿ ನೀಡಬಹುದು ಎಂಬ ಬಗ್ಗೆ ಪರಿಶೀಲಿಸಲಾಗುವುದು. ಅದಕ್ಕಾಗಿ ಕಾನೂನು ತಜ್ಞರ ಅಭಿಪ್ರಾಯ ಪಡೆಯಲಾಗುವುದು ಎಂದರು.

ಒಳಮೀಸಲಾತಿ ವಿಚಾರದಲ್ಲಿ ಸರಕಾರ ಪ್ರಮಾಣಿಕ ಪ್ರಯತ್ನ ಮಾಡುತ್ತಿದೆ. ಉಂಟಾಗಿರುವ ಗೊಂದಲ ಗಳಿಗೂ ಆದ್ಯತೆ ಮೇರೆಗೆ ಪರಿಹಾರ ಕಂಡುಕೊಳ್ಳಲು ಬದ್ಧವಾಗಿದ್ದೇವೆ. ಅದಕ್ಕೆ ಪರಿಹಾರ ಹುಡುಕಿ, ಅಲೆಮಾರಿ ಸಮುದಾಯಗಳಿಗೆ ನ್ಯಾಯ ಒದಗಿಸಲಾಗುವುದು. ಸಾಮಾಜಿಕ ನ್ಯಾಯದ ಪರವಾಗಿ ಕೆಲಸ ಮಾಡುತ್ತಿದ್ದೇವೆ. ಅಲೆಮಾರಿ ಸಮುದಾ ಯಕ್ಕಾಗಿಯೇ ಪ್ರತ್ಯೇಕ ಅಭಿವೃದ್ಧಿ ನಿಗಮ ಮತ್ತು ವಿಶೇಷ ಅನುದಾನ ನೀಡುವಂತೆಯೂ ಮನವಿ ಸಲ್ಲಿಸಲಾಗಿದೆ. ಅಭಿವೃದ್ಧಿ ನಿಗಮ ಸ್ಥಾಪನೆಗೆ ಯಾವುದೇ ಸಮಸ್ಯೆಯಿಲ್ಲ. ಆದರೂ, ನಿಗಮ ಸ್ಥಾಪನೆ ಮತ್ತು ವಿಶೇಷ ಅನುದಾನ ನೀಡಲು ಸಮಯಾವಕಾಶ ನೀಡುವಂತೆ ಹೇಳಿದ್ದೇನೆ. ಅದರ ಜತೆಗೆ ಒಳ ಮೀಸಲಾತಿ ಸಂಬಂಧ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರದ ವಿರುದ್ಧ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಕೆಯಾಗಿದ್ದು, ಅದನ್ನು ಹಿಂಪಡೆಯುವಂತೆ ಅಲೆಮಾರಿ ಸಮುದಾಯದವರಿಗೆ ತಿಳಿಸಿದ್ದೇನೆ ಎಂದರು. ಸಭೆಯಲ್ಲಿ ಸಚಿವ ಡಾ. ಎಚ್.ಸಿ. ಮಹದೇವಪ್ಪ, ಮಾಜಿ ಸಚಿವ ಎಚ್. ಆಂಜನೇಯ, ಸರಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಇತರರಿದ್ದರು.

ಅಲೆಮಾರಿ ಸಮುದಾಯಗಳ ಒಕ್ಕೂಟ ವಿಧಾನಸೌಧದಲ್ಲಿ ಸಿಎಂ ಸಿದ್ದರಾಮಯ್ಯ ಅವರನ್ನು ಶುಕ್ರವಾರ ಭೇಟಿ ಮಾಡಿದರು.

ಸರಕಾರದ ವಿರುದ್ಧ ಅಲೆಮಾರಿಗಳ ಧಿಕ್ಕಾರ

ಒಂದೆಡೆ ಅಲೆಮಾರಿ ಸಮುದಾಯದ ನಾಯಕರು ಮುಖ್ಯಮಂತ್ರಿ ಅವರೊಂದಿಗೆ ಸಭೆ ನಡೆಸುತ್ತಿದ್ದರೆ, ಮತ್ತೊಂದೆಡೆ ಅಲೆಮಾರಿ ಸಮುದಾಯದ ಕೆಲವರು ವಿಧಾನಸೌಧದ ಪಶ್ಚಿಮ ದ್ವಾರದ ಬಳಿ ಸರಕಾರದ ವಿರುದ್ಧ ಪ್ರತಿಭಟಿಸಿ ಧಿಕ್ಕಾರ ಕೂಗಿದರು. ಒಳಮೀಸಲಾತಿಯಲ್ಲಿ ಅಲೆಮಾರಿ ಸಮುದಾಯಕ್ಕೆ ಅನ್ಯಾಯ ಮಾಡಲಾಗಿದೆ ಎಂದು ಆರೋಪಿಸಿ ಘೋಷಣೆ ಕೂಗಿದರು. ಇದನ್ನು ಗಮನಿಸಿದ ಪೊಲೀಸರು, ಘೋಷಣೆ ಕೂಗಿದವರನ್ನು ವಶಕ್ಕೆ ಪಡೆದು ವಿಧಾನಸೌಧದಿಂದ ಕರೆದುಕೊಂಡು ಹೋದರು.

ಬ್ಯಾಕ್‌ಲಾಗ್ ಭರ್ತಿ ನಿಲ್ಲಿಸಿ

ಅಲೆಮಾರಿಗಳ ಮಹಾ ಒಕ್ಕೂಟದ ಅಧ್ಯಕ್ಷ ಶೇಷಣ್ಣ ಮಾತನಾಡಿ, ನ್ಯಾ. ನಾಗಮೋಹನದಾಸ್ ಸಮಿತಿಯ ಶಿಫಾರಸಿನಂತೆ ಶೇ. 1ರಷ್ಟು ಒಳ ಮೀಸಲಾತಿ ನೀಡುವ ಸಂಬಂಧ ಖಚಿತ ತೀರ್ಮಾನ ತೆಗೆದುಕೊಳ್ಳುವವರೆಗೆ ಯಾವುದೇ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡದಂತೆ ಹೇಳಿದ್ದೇವೆ. ಒಳಮೀಸಲಾತಿಯ ಎಲ್ಲ ಗೊಂದಲಗಳನ್ನೂ ನಿವಾರಿಸಿಕೊಂಡ ನಂತರ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಬೇಕು. ಇಲ್ಲದಿದ್ದರೆ ಗೊಂದಲಗಳು ಮತ್ತಷ್ಟು ಜಟಿಲವಾಗಲಿವೆ. ಈ ಬಗ್ಗೆ ಮುಖ್ಯಮಂತ್ರಿಗಳಿಗೆ ಸ್ಪಷ್ಟವಾಗಿ ತಿಳಿಸಲಾಗಿದೆ. ಇನ್ನು, ಪ್ರತ್ಯೇಕ ಅಭಿವೃದ್ಧಿ ನಿಗಮ ಮತ್ತು ವಿಶೇಷ ಅನುದಾನಕ್ಕೂ ಮನವಿ ಮಾಡಲಾಗಿದೆ. ಸಿಎಂ ಸಕಾರಾತ್ಮಕವಾಗಿ ಮಾತನಾಡಿದ್ದಾರೆ. ಇನ್ನು, ಸರ್ಕಾರದ ವಿರುದ್ಧ ಹೈಕೋರ್ಟ್‌ನಲ್ಲಿ ದಾಖಲಾಗಿರುವ ಅರ್ಜಿಯ ಹಿಂಪಡೆಯುವ ಕುರಿತು ಒಕ್ಕೂಟದಲ್ಲಿ ಚರ್ಚಿಸಿ ತಿಳಿಸುತ್ತೇವೆ ಎಂದು ಹೇಳಿದ್ದೇನೆ. ಅಲೆಮಾರಿಗಳಾಗುವ ಅನ್ಯಾಯ ಸರಿಪಡಿಸುವಂತೆ ಹೇಳಲಾಗಿದೆ ಎಂದರು.

ಒಳಮೀಸಲು ವಿಷಯದಲ್ಲಿ ಬಿಜೆಪಿಯವರಿಗೆ ನಾವು ಏನು ಮಾಡುತ್ತಿದ್ದೇವೆ ಎನ್ನುವುದು ಅರ್ಥವಾಗುತ್ತಿಲ್ಲ. ಒಳ ಮೀಸಲಾತಿ ವಿಚಾರ ಅವರು ಸರಿಯಾಗಿ ಅರ್ಥೈಸಿಕೊಂಡಿಲ್ಲ. ಅವರ ಕಾಲದಲ್ಲಿ ಏನೋ ಮಾಡೋಕೆ ಹೋಗಿ ಏನೇನೋ ಗೊಂದಲ ಮಾಡಿದ್ದರು. ಅದನ್ನು ನಾವು ಬಗೆಹರಿಸಿದಿದ್ದೇವೆ. ಈಗ ಅದಕ್ಕೆ ಕಾನೂನಿನ ಶಕ್ತಿ ಕೊಡಬೇಕು ಎಂದು ತೀರ್ಮಾನಿಸಿದ್ದೇವೆ. ಸಚಿವ ಸಂಪುಟ ಸಭೆಯಲ್ಲಿ ಸುಗ್ರೀವಾಜ್ಞೆ ಬದಲಿಗೆ ಬೆಳಗಾವಿ ಅಧಿವೇಶನದಲ್ಲಿ ಕಾಯಿದೆಯನ್ನೇ ಜಾರಿಗೊಳಿಸಲು ತೀರ್ಮಾನಿಸಿದ್ದೇವೆ.

– ಡಾ.ಜಿ.ಪರಮೇಶ್ವರ, ಗೃಹ ಸಚಿವ

ಬೇಡಿಕೆಗಳು

- ನ್ಯಾ.ನಾಗಮೋಹನ್ದಾಸ್ ಶಿಫಾರಸಿನಂತೆ ಒಳ ಮಿಸಲಾತಿ ಜಾರಿಗೊಳಿಸಬೇಕು
- ಅಲೆಮಾರಿಗಳಿಗೆ ನಿಗದಿಯಾಗಿದ್ದ ಒಳ ಮೀಸಲಾತಿ ಪ್ರಮಾಣ ಬೇರೆ ಜಾತಿಗಳೊಂದಿಗೆ ಸೇರಿಸಿದ ನಿರ್ಧಾರ ಹಿಂಪಡೆಯಬೇಕು
- ಅಲೆಮಾರಿಗಳಿಗೆ ಶೇ. 1ರಷ್ಟು ಒಳಮೀಸಲಾತಿ ಕಲ್ಪಿಸಲು ಆದ್ಯತೆ ನೀಡಬೇಕು
- ಅಲೆಮಾರಿ ಸಮುದಾಯಗಳ ಅಭಿವೃದ್ಧಿಗೆ ಪ್ರತ್ಯೇಕ ನಿಗಮ ರಚನೆ
- ಅಲೆಮಾರಿ ಸಮುದಾಯದ ಏಳಿಗೆಗಾಗಿ ವಿಶೇಷ ಅನುದಾನ, ಯೋಜನೆ ಘೋಷಿಸಬೇಕು

ಗಣವೇಷಧಾರಿಗಳಿಂದ ಶಿಸ್ತುಬದ್ಧ ಹೆಜ್ಜೆ | ಹೂವು ಸುರಿದು ಸಾರ್ವಜನಿಕರು ಸ್ವಾಗತ

ಗುರುಮಠಕಲ್ ಆರ್‌ಎಸ್‌ಎಸ್ ಪಥಸಂಚಲನ ಯಶಸ್ವಿ

ಯಾದಗಿರಿ: ಹಲವು ಅಡೆ ತಡೆಗಳು ಎದುರಾದರೂ ಸಹಿತ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಶತಮಾನೋತ್ಸವದ ನಿಮಿತ್ತ ಗುರುಮಠಕಲ್ ಪಟ್ಟಣದಲ್ಲಿ ಶುಕ್ರವಾರದಂದು ಭವ್ಯ ಪಥಸಂಚಲನ ಕಾರ್ಯಕ್ರಮ ಯಶಸ್ಸು ಕಂಡಿತು.

ಗುರುಮಠಕಲ್ ಪಟ್ಟಣದ ಯಾದಗಿರಿ ಮುಖ್ಯ ರಸ್ತೆಗೆ ಹೊಂದಿಕೊಂಡ ಲಕ್ಷ್ಮೀಭಾಯಿ ನರೇಂದ್ರ ರಾಠೋಡ್ ಲೇಔಟ್‌ನಿಂದ ಸಂಜೆ 4.30ಕ್ಕೆ ಪಥಸಂಚಲನವು ರಾಜ್ಯ ಹೆದ್ದಾರಿಯ ಮುಖ್ಯರಸ್ತೆಯಿಂದ ಆರಂಭವಾಗಿ ಪಟ್ಟಣದ ವಿವಿಧ ಮುಖ್ಯರಸ್ತೆಗಳು, ಬಡಾವಣೆ, ಓಣಿಗಳ ಮೂಲಕ ಭಗವಾಧ್ವಜದೊಂದಿಗೆ ಶಿಸ್ತಿನ ಗಣವೇಶಧಾರಿಗಳು ಪಥ ಸಂಚಲನ ನಡೆಯಿತು.ಗಣವೇಷ ಧರಿಸಿದ ನೂರಾರು ಸ್ವಯಂಸೇವಕರು ಶಿಸ್ತುಬದ್ಧವಾಗಿ ಹೆಜ್ಜೆ ಹಾಕಿ ಜನರ ಗಮನ ಸೆಳೆದರು. ಪಥಸಂಚಲನ ಸಾಗುವ ವೇಳೆ ಜನರು ಹೂಮಳೆ ಸುರಿಸಿ, ಬೀದಿಗಳಲ್ಲಿ ರಂಗೋಲಿ ಬಿಡಿಸಿ ಸ್ವಯಂಸೇವಕರಿಗೆ ಭವ್ಯ ಸ್ವಾಗತ ಕೋರಿದರು. ಪಟ್ಟಣದ ಪ್ರಮುಖ ರಸ್ತೆ, ಬೀದಿಗಳು ಕೇಸರಿ ಧ್ವಜಗಳಿಂದ ಅಲಂಕರಿಸಲ್ಪಟ್ಟಿದ್ದು, ಶಿಸ್ತಿನಿಂದ ನಡೆದ ಈ ಪಥಸಂಚಲನಕ್ಕೆ ಸ್ಥಳೀಯರ ಪ್ರಶಂಸೆಗೆ ಪಾತ್ರವಾಗಿ ಪಥ ಸಂಚಲನ ಕಾರ್ಯಕ್ರಮವು ರಾಮನಗರ ಬಡಾವಣೆಯಲ್ಲಿ ಸಂಪನ್ನಗೊಂಡಿತು. ಯಾದಗಿರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ ನೇತೃತ್ವದಲ್ಲಿ ಪಥ ಸಂಚಲನ ಹಿನ್ನೆಲೆ ಪಟ್ಟಣದಲ್ಲಿ ಪೊಲೀಸ್ ಬಿಗಿ ಭದ್ರತೆ ಮಾಡಲಾಗಿತ್ತು. ಗಿರೀಶ್ ಹೆಬ್ಬಾರ್, ಪ್ರವೀಣ್ ಕುಲಕರ್ಣಿ, ಕೃಷ್ಣಪ್ರಭು ಮುತ್ತಿಗಿ, ಬಸಪ್ಪ ಸಂಜನೊಳ,

ಯಾದಗಿರಿ ನಗರಸಭೆ ಅಧ್ಯಕ್ಷೆ ಕು. ಲಲಿತಾ ಅನಪೂರ,ಮುಖಂಡರಾದ ಮಹೇಶಗೌಡ ಮುದ್ನಾಳ,ಕೆ, ದೇವದಾಸ್, ನರಸಿಂಹ ಲು ನೀರೇಟಿ, ಚಂದುಲಾಲ್, ವೆಂಕಟಪ್ಪ, ಆವಂಗಪುರ್, ಜ್ಞಾನೇಶ್ವರ್ ರೆಡ್ಡಿ, ಸೇರಿದಂತೆ ಪಟ್ಟಣದ ವಿವಿಧ ರಂಗಗಳ ಗಣ್ಯರು ಹಾಜರಿದ್ದರು.

ಯಾದಗಿರಿ ಜಿಲ್ಲೆ ಗುರುಮಿಠಕಲ್ ಪಟ್ಟಣದಲ್ಲಿ ಶುಕ್ರವಾರ ಆರ್‌ಎಸ್‌ಎಸ್ ಪಥಸಂಚಲನ ಯಶಸ್ವಿಯಾಗಿ ನಡೆಯಿತು.

ಧರ್ಮಸ್ಥಳ ಕೇಸ್ ಸರಕಾರಿ ಪ್ರಾಯೋಜಿತ ನಾಟಕ

ತೀರ್ಥಹಳ್ಳಿ: ಧರ್ಮಸ್ಥಳ ಪ್ರಕರಣ ಸಿದ್ದರಾಮಯ್ಯ ಅವರ ಸರಕಾರಿ ಪ್ರಾಯೋಜಿತ ನಾಟಕ. ಇದರಲ್ಲಿ ಬುರುಡೆ ಗ್ಯಾಂಗ್, ಸಿದ್ದರಾಮಯ್ಯ, ಎಡಪಂಥೀಯವರು ಎಲ್ಲರೂ ಸೇರಿ ಈ ನಾಟಕವನ್ನು ಮಾಡಿದ್ದಾರೆ ಎಂದು ಶಾಸಕ ಆರಗ ಜ್ಞಾನೇಂದ್ರ ಹೇಳಿದರು.

ಎಸ್‌ಐಟಿ ರಚನೆ ಮಾಡುತ್ತೇವೆ ಎಂದು ಸರಕಾರ ಹೇಳಿದರೆ ಯಾವ ಅಧಿಕಾರಿಯನ್ನು ಹಾಕಬೇಕು ಎಂದು ಬುರುಡೆ ಗ್ಯಾಂಗ್ ಹೇಳಿತು. ಈ ಪ್ರಕರಣದಲ್ಲಿ ಒಬ್ಬರನ್ನು ಕೂಡ ಜೈಲಿಗೆ ಹಾಕಲು ಇವರ ಕೈಯಲ್ಲಿ ಆಗಲಿಲ್ಲ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿ, ರಮ್ಯಾ ಅವರ ಪ್ರಕರಣದಲ್ಲಿ ಸೋಶಿಯಲ್ ಮೀಡಿಯಾದಲ್ಲಿ ಯಾರೋ ಏನೋ ಹೇಳಿದರೂ ಎಂಬ ಕಾರಣದಿಂದ ಸು ಮೋಟೋ ಕೇಸ್ ದಾಖಲಿಸಿ ಇವತ್ತಿಗೂ ಅವರನ್ನು ಜೈಲಿನಲ್ಲಿ ಇಟ್ಟಿದ್ದಾರೆ. ಪ್ರಿಯಾಂಕ್ ಖರ್ಗೆಗೆ ಕರೆ ಮಾಡಿ ಬೆದರಿಕೆ ಹಾಕಿದ್ದಕ್ಕೆ ಅವರನ್ನು ತಕ್ಷಣ ಕರೆದುಕೊಂಡು ಬಂದು ಜೈಲಿಗೆ ಹಾಕಿದ್ದಾರೆ. ಕಳೆದ 4–5 ತಿಂಗಳಿಂದ ಹೆಗಡೆಯವರ ಬಗ್ಗೆ ಧರ್ಮಸ್ಥಳ ದೇವಸ್ಥಾನದ ಬಗ್ಗೆ ಯೂಟ್ಯೂಬ್‌ಗಳಲ್ಲಿ ಕಥೆ ಕಟ್ಟಿ, ದೇಶ ವಿದೇಶಗಳಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾತನಾಡಿ ದವರನ್ನು ಇವರ ಕೈಯಲ್ಲಿ ಏನು ಮಾಡಲಾ ಗಲಿಲ್ಲ ಎಂದರು.

ಅಲ್ಪಸಂಖ್ಯಾತರನ್ನು ಓಲೈಸುವುದಕ್ಕಾಗಿ ಅವರ ಓಟ್ ಬ್ಯಾಂಕ್ ಗಟ್ಟಿಮಾಡಿಕೊಳ್ಳಲು ಇಂತಹ ಒಂದು ದುರಾವಸ್ಥೆ ನಮ್ಮ ಹಿಂದೂ ಸಮಾಜಕ್ಕೆ ಬಂದಿದೆ. ಇದರ ಒಂದು ಪ್ರತಿಫಲವನ್ನು ಸಿದ್ದರಾಮಯ್ಯನ ಸರಕಾರ ನೋಡಬೇಕಾಗುತ್ತದೆ.

ಆರಗ ಜ್ಞಾನೇಂದ್ರ, ಶಾಸಕ

ನವೆಂಬರ್‌ನಲ್ಲಿ ಯಾವ ಕ್ರಾಂತಿಯೂ ಇಲ್ಲ: ಜಮೀರ್

2028ರವರೆಗೆ ಸಿದ್ದರಾಮಯ್ಯ ಸಿಎಂ

ಚಿತ್ರದುರ್ಗ: ನವೆಂಬರ್ ಕ್ರಾಂತಿ ಎನ್ನುವುದು ಬಿಜೆಪಿ ಭ್ರಾಂತಿ. ಬಿಜೆಪಿಯಲ್ಲಿ ಐದು ಗುಂಪುಗಳಾಗಿವೆ ಅದನ್ನು ನೋಡಿಕೊಳ್ಳಲಿ ಎಂದು ಸಚಿವ ಜಮೀರ್ ಅಹಮ್ಮದ ಖಾನ್ ಹೇಳಿದರು. ಮುಖ್ಯಮಂತ್ರಿ ಬದಲಾವಣೆ ವಿಚಾರವಾಗಿ ಚಿತ್ರದುರ್ಗದಲ್ಲಿ ಮಾತ ನಾಡಿದ ಅವರು, 2028ರವರೆಗೆ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿರುತ್ತಾರೆ. ರಾಜ್ಯದಲ್ಲಿ ಈಗ ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ. ಸಂಪುಟ ಪುನರಚನೆ ಚಿಂತನೆ ಇದೆ. ಇದರ ಬಗ್ಗೆ ಹೈಕಮಾಂಡ್ ತೀರ್ಮಾ ನಿಸುತ್ತದೆ ಎಂದರು. ಡಿ.ಕೆ ಶಿವಕುಮಾರ್ ಸಿಎಂ ಆಗಬೇಕು ಎಂದು ನಮಗೂ ಆಸೆ ಇದೆ. 2028ರಲ್ಲಿ ನಂತರ ಡಿ.ಕೆ ಶಿವಕುಮಾರ್ ಸಿಎಂ ಆಗಬೇಕು ಅಂತಾ ನಾವೂ ಬಯಸುತ್ತೇವೆ. ಸಿದ್ದರಾಮಯ್ಯ, ಡಿ.ಕೆ ಶಿವಕುಮಾರ್ ಅಣ್ಣ ತಮ್ಮಂದಿರಂತೆ ಜತೆಗೆ ಹೋಗುತ್ತಾರೆ. ಡಿ.ಕೆ.ಶಿವಕುಮಾರ್ ಸಿಎಂ ಆಗದಿದ್ದರೆ ಬಿಜೆಪಿಗೆ ಹೋಗುತ್ತಾರೆ ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿ, ನಾನೂ ಬೇರೆ ಪಕ್ಷದಿಂದ ಬಂದಿರಬಹುದು. ನಾನು ಜನತಾದಳದಿಂದ ಕಾಂಗ್ರೆಸ್ ಪಕ್ಷಕ್ಕೆ ಬಂದಿರೋದು ಆದರೆ ಡಿ.ಕೆ ಶಿವಕುಮಾರ್ ಬ್ಲಡ್ಡೇ ಕಾಂಗ್ರೆಸ್. ಅದನ್ನು ಬದಲಾವಣೆ ಮಾಡಲು ಆಗುವುದಿಲ್ಲ ಎಂದು ಹೇಳಿದರು.

2 ಸಾವಿರ ಮೆಗಾ ವಾಟ್ ವಿದ್ಯುತ್ ಉತ್ಪಾದನೆ ಗುರಿ: ಜಾರ್ಜ್

ರಾಜ್ಯದ ನೂರು ಕಡೆ ಸೋಲಾರ್ ಘಟಕ

ಹೊಸಕೋಟೆ: ವಿದ್ಯುತ್ ಕೊರತೆ ತಗ್ಗಿಸಲು ಹಾಗೂ ರೈತರಿಗೆ ಹಗಲಿನ ವೇಳೆ ವಿದ್ಯುತ್ ಪೂರೈಕೆ ಮಾಡಲು ರಾಜ್ಯದ ನೂರು ಕಡೆ ಸೋಲಾರ್ ಘಟಕ ಸ್ಥಾಪಿಸಿ ಎರಡು ಸಾವಿರ ಮೆಗಾ ವಾಟ್ ವಿದ್ಯುತ್ ಉತ್ಪಾದನೆಗೆ ಯೋಜನೆ ರೂಪಿಸಲಾಗುತ್ತಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದ್ದಾರೆ.

ಯಲಚಹಳ್ಳಿ ಕೆರೆ ಅಂಗಳದಲ್ಲಿ ಸೌರ ಘಟಕ ಉದ್ಘಾಟಿಸಿ ಮಾತನಾಡಿದ ಅವರು, ಖಾಸಗಿ ವಲಯಗಳಿಂದ ಸುಮಾರು 10,000 ಕೋಟಿ ಹೂಡಿಕೆಗೆ ಅವಕಾಶ ಕಲ್ಪಿಸಲಾಗುವುದು ಎಂದರು.

ಪಾವಗಡದಲ್ಲಿ ರೈತರ ಭೂಮಿ ಒತ್ತುವರಿ ಮಾಡದೆ ಬಾಡಿಗೆ ಪಡೆದು ಸುಮಾರು ಸೋಲಾರ್ ಘಟಕ ಸ್ಥಾಪಿಸಿ 2,000 ಮೆಗಾ ವಾಟ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಇಷ್ಟಾದರೂ ವಿದ್ಯುತ್ ಕೊರತೆ ಕಾಡುತ್ತಿದೆ ಎಂದರು.

ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ 8–9 ಸಾವಿರ ಮೆಗಾ ವಾಟ್‌ನಷ್ಟಿದ್ದ ವಿದ್ಯುತ್ ಬೇಡಿಕೆ ಏಕಾಏಕಿ 18 ಸಾವಿರ ಮೆಗಾ ವಾಟ್‌ಗೆ ಏರಿಕೆಯಾಯಿತು. ಇದನ್ನು ಸರಿದೂಗಿಸಲು 120 ಹೊಸ ಸಬ್ ಸ್ಟೇಷನ್ ನಿರ್ಮಿಸಲಾಗುವುದು. ಪರಿಸರಕ್ಕೆ ಹಾನಿಯಾಗದಂತೆ ಶರಾವತಿ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಕಾಮಗಾರಿ ಕೈಗೊಳ್ಳಲಾಗುವುದು. ಇದರಿಂದ ರಾಜ್ಯಕ್ಕೆ ಹೆಚ್ಚುವರಿಯಾಗಿ 3,000 ಮೆಗಾ ವಾಟ್ ವಿದ್ಯುತ್ ಸಿಗಲಿದೆ ಎಂದರು.

ಅಸ್ವಸ್ಥಗೊಂಡಿದ್ದ ತಾಯಿ–ಮಗ ಆಸ್ಪತ್ರೆಗೆ ದಾಖಲು

ವಿಷ ಸೇವಿಸಿ ತಂದೆ–ಮಗ ಸಾವು

ದೇವನಹಳ್ಳಿ: ಒಂದೇ ಕುಟುಂಬದ ನಾಲ್ವರು ಆತ್ಮಹತ್ಯೆಗೆ ಯತ್ನಿಸಿದ್ದು, ಮನೆಯಲ್ಲೇ ತಂದೆ ಹಾಗೂ ಒಬ್ಬ ಮಗ ಸಾವನ್ನಪ್ಪಿದರೆ, ಅಸ್ವಸ್ಥಗೊಂಡಿದ್ದ ತಾಯಿ ಮತ್ತು ಇನ್ನೊಬ್ಬ ಮಗನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲೂಕಿನ ಹೆಗ್ಗನಹಳ್ಳಿ ಗ್ರಾಮದಲ್ಲಿ ಗುರುವಾರ ರಾತ್ರಿ ಘಟನೆ ನಡೆದಿದೆ. ತಂದೆ ಕುಮಾರಪ್ಪ ನೇಣಿಗೆ ಶರಣಾಗಿದ್ದಾರೆ. ಅನಂತರ ತಾಯಿ ಮತ್ತು ಇಬ್ಬರು ಮಕ್ಕಳು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿದ್ದಾರೆ. ಕುಮಾರಪ್ಪ (60) ಮತ್ತು ಆತನ ಮಗ ಅರುಣ್(30) ಮನೆಯಲ್ಲೇ ಸಾವನ್ನಪ್ಪಿದ್ದಾರೆ. ಅಸ್ವಸ್ಥಗೊಂಡಿದ್ದ ಕುಮಾರಪ್ಪನ ಹೆಂಡತಿ ರಮಾ ಮತ್ತು ಮಗ ಅಕ್ಷಯ್ ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಇಬ್ಬರು ಸಾವು ಬದುಕಿನ ನಡುವೆ ಹೋರಾಡುತ್ತಿದ್ದಾರೆ.

ಸ್ಥಳಕ್ಕೆ ಸೋಕೋ ಟೀಂ ಭೇಟಿ: ಚಿಕ್ಕಜಾಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಘಟನಾ ಸ್ಥಳಕ್ಕೆ ಸೋಕೋ ಟೀಂ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತ ದುರ್ದೈವಿಗಳ ಬಳಿ ಮದ್ಯದ ಬಾಟಲಿ ಮತ್ತು ವಿಷದ ಬಾಟಲಿ ಪತ್ತೆಯಾಗಿದ್ದು, ಇವುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಊರಿನವರ ಜತೆ ಉತ್ತಮ ಬಾಂಧವ್ಯ ಇಟ್ಟುಕೊಂಡಿದ್ದರು.

ಅವರ ಸಾವಿಗೆ ನಿಖರ ಕಾರಣ ನಮಗೂ ತಿಳಿದಿಲ್ಲ. ಐದು ದಿನಗಳ ಹಿಂದೆಯಷ್ಟೇ ಮನೆಯಲ್ಲಿದ್ದ ಹಸುಗಳನ್ನು ಮಾರಿದ್ದರು ಎನ್ನಲಾಗಿದೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ನಡೆಸುತ್ತಿದ್ದಾರೆ.

ಕೃಷ್ಣಾ, ಭೀಮಾ, ಘಟಪ್ರಭೆ, ಮಲಪ್ರಭೆ ದೋಣಿ ನದಿಗಳೂ ಮಲೀನ: ನರೇಂದ್ರಸ್ವಾಮಿ | ಸುವರ್ಣ ಮಹೋತ್ಸವಕ್ಕೆ ರಾಹುಲ್ ಗಾಂಧಿಗೆ ಆಹ್ವಾನ

ನದಿಗಳ ಒಡಲು ಸೇರುತ್ತಿರುವ ಕೈಗಾರಿಕಾ ತ್ಯಾಜ್ಯ

ಬಾಗಲಕೋಟೆ: ಕಾವೇರಿ ರೀತಿ ಕೃಷ್ಣಾ, ಭೀಮಾ, ಘಟಪ್ರಭ, ಮಲಪ್ರಭ ಮತ್ತು ದೋಣಿ ನದಿಗಳು ಕೂಡ ಕೈಗಾರಿಕೆಗಳಿಂದ ಬರುತ್ತಿರುವ ತ್ಯಾಜ್ಯ ಮತ್ತು ಗೃಹ ಬಳಕೆ ತ್ಯಾಜ್ಯಗಳಿಂದ ಮಲೀನವಾಗುತ್ತಿವೆ ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿಎಂ ನರೇಂದ್ರಸ್ವಾಮಿ ಕಳವಳ ವ್ಯಕ್ತಪಡಿಸಿದರು.

ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳ ಸಂಯುಕ್ತಾಶ್ರಯದಲ್ಲಿ ಬಾಗಲಕೋಟೆಯಲ್ಲಿ ನಡೆದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸುವರ್ಣ ಮಹೋತ್ಸವದ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಪಿಎಂ ನರೇಂದ್ರಸ್ವಾಮಿ ಅವರು, ಸರಕಾರ, ಸ್ಥಳೀಯ ಆಡಳಿತ ಮತ್ತು ಸಾರ್ವಜನಿಕರು ತ್ಯಾಜ್ಯ ಸಂಸ್ಕರಿಸಲು ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಕಾವೇರಿ ಸೇರಿದಂತೆ ರಾಜ್ಯದ ಕೃಷ್ಣಾ, ಭೀಮಾ, ಘಟಪ್ರಭೆ, ಮಲಪ್ರಭೆ ಮತ್ತು ದೋಣಿ ನದಿಗಳಿಗೆ ಈ ಭಾಗದ ಸಕ್ಕರೆ, ಸಿಮೆಂಟ್, ಎಥನಾಲ್, ಕ್ರಷರ್ ಮತ್ತಿತರ ಕೈಗಾರಿಕೆಗಳಿಂದ ತಾಜ್ಯವನ್ನು ಬಿಡಲಾಗುತ್ತಿದೆ. ತ್ಯಾಜ್ಯ ಸಂಸ್ಕರಿಸದೆ ನದಿಗಳಿಗೆ ಬಿಡುತ್ತಿರುವ ಪ್ರಕರಣಗಳು ಗೊತ್ತಾದರೆ ಸಾರ್ವಜನಿಕರು ಮಾಲಿನ್ಯ ನಿಯಂತ್ರಣ ಮಂಡಳಿಗೆ ಮಾಹಿತಿ ನೀಡಬೇಕು ಎಂದು ಹೇಳಿದರು. ಬಾಗಲಕೋಟೆ ಮತ್ತು ವಿಜಾಪುರ ಜಿಲ್ಲೆಯಲ್ಲಿ ಕಬ್ಬು ಪ್ರಮುಖ ಬೆಳೆಯಾಗಿರುವುದರಿಂದ ಸಕ್ಕರೆ ಮತ್ತು ಡಿಸ್ಟಿಲರಿ ಕೈಗಾರಿಕೆಗಳು ಹೆಚ್ಚಾಗಿವೆ. ಸಕ್ಕರೆ ಉತ್ಪಾದನೆಯ ಪ್ರಮುಖ ತ್ಯಾಜ್ಯವಾದ ಕಬ್ಬಿಣ ಸಿಪ್ಪೆ (ಬಗ್ಯಾಸ್) ಪರ್ಯಾಯ ಇಂಧನವಾಗಿದ್ದು, ಇದರಿಂದ ಕಲ್ಲಿದ್ದಿಲಿನ ಬಳಕೆಯನ್ನು ಕಮ್ಮಿ ಮಾಡಬಹುದಾಗಿದೆ. ಸಕ್ಕರೆ ಉದ್ಯಮದ ಮತ್ತೊಂದು ತ್ಯಾಜ್ಯವಾದ ಕಾಕಂಬಿ (ಮೊಲ್ಯಾಸಿಸ್) ಈಗ ಸಂಪೂರ್ಣವಾಗಿ ಇಥೆನಾಲ್ ತಯಾರಿಕೆಯಲ್ಲಿ ಬಳಕೆಯಾಗುತ್ತಿದೆ. ಈ ಭಾಗದ ಹೆಚ್ಚಿನ ಕೈಗಾರಿಕೆಗಳು ಮಲ್ಯಾಸಸ್ ಮತ್ತು ಕಾಳು ಆಧಾರಿತ ಡಿಸ್ಟಿಲರಿ ಘಟಕಗಳನ್ನು ಹೊಂದಿದ್ದು ಅವುಗಳಲ್ಲಿ ಹಲವಾರು ಪರಿಸರಕ್ಕೆ ಹಾನಿಕಾರಕ ಬೆಳವಣಿಗೆಗಳು ಆಗುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸುವರ್ಣ ಮಹೋತ್ಸವದ ಕಾರ್ಯಕ್ರಮವನ್ನು ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿಎಂ ನರೇಂದ್ರಸ್ವಾಮಿ ಉದ್ಘಾಟಿಸಿದರು.

ನವೆಂಬರ್‌ನಲ್ಲಿ ಕ್ರಾಂತಿ ಇಲ್ಲ, ಓನ್ಲಿ ಶಾಂತಿ

ದೆಹಲಿಯಲ್ಲಿ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸುವರ್ಣ ಮಹೋತ್ಸವ ಕಾರ್ಯಕ್ರಮಕ್ಕೆ ಆಹ್ವಾನ ನೀಡಿದ್ದೇನೆ. ರಾಜಕೀಯ ಚರ್ಚಿಸಿಲ್ಲ. ನವೆಂಬರ್‌ನಲ್ಲಿ ಯಾವ ಕ್ರಾಂತಿ ಇಲ್ಲ, ಓನ್ಲಿ ಶಾಂತಿ ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷ ಪಿ.ಎಂ.ನರೇಂದ್ರಸ್ವಾಮಿ ಹೇಳಿದರು. ಬಾಗಲಕೋಟೆ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಪಕ್ಷಕ್ಕೆ ಹಾಗೂ ಸರಕಾರಕ್ಕೆ ಒಳ್ಳೆಯದನ್ನು ಬಯಸಿ, ಇನ್ನೂ ಮಾಡಬೇಕಿರುವ ಕೆಲಸ ಬಹಳಷ್ಟಿದೆ. ಪಕ್ಷದ ಆಂತರಿಕ ವಿಚಾರಗಳ ಬಗ್ಗೆ ಉತ್ತರ ಕೊಡುವುದು ಸಮಂಜಸವಲ್ಲ ಎಂದರು. ಮುಂದಿನ ಸಿಎಂ ಮಲ್ಲಿಕಾರ್ಜುನ ಖರ್ಗೆ ಎಂಬ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿಕೆಗೆ ಉತ್ತರಿಸಿದ ಅವರು, ಯತ್ನಾಳ ಅವರಿಗೂ ನಮ್ಮ ಪಕ್ಷಕ್ಕೂ ಸಂಬಂಧವಿಲ್ಲ. ಯತ್ನಾಳ ಅವರು ನನಗೆ ಆತ್ಮೀಯರು. ಅವರಿಗೆ ಈ ಮೊದಲೂ ಹೇಳಿದ್ದೇನೆ, ವಿಧಾನಸಭೆಯಲ್ಲೂ ಹೇಳಿದ್ದೇನೆ ಯತ್ನಾಳ, ಯತ್ನಾಳ ಆಗಿಯೇ ಇರಬೇಕು. ಕಿತ್ನಾಳ ಆಗಬಾರದು ಎಂದರು.

ಕೃಷ್ಣಾ ನದಿ ನೀರನ್ನು ವಿಜಯಪುರ ಜಿಲ್ಲೆಯಲ್ಲಿ ಎರಡು ಕಡೆ ಮತ್ತು ಭೀಮಾ ನದಿ ನೀರನ್ನು ಒಂದು ಕಡೆ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಬಾಗಲಕೋಟೆಯಲ್ಲಿ ಎರಡು ಕಡೆ ಘಟಪ್ರಭಾ, ಎರಡು ಕಡೆ ಮಲಪ್ರಭಾ ಮತ್ತೊಂದು ಕಡೆ ಕೃಷ್ಣಾ ನದಿ ನೀರನ್ನು ಪರೀಕ್ಷೆ ಮಾಡಲಾಗುತ್ತಿದೆ.

ಪಿಎಂ ನರೇಂದ್ರಸ್ವಾಮಿ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ

ವಿಶ್ವವಾಣಿ

ಸಂಪಾದಕೀಯ

ಹಸಿರಾಗಲಿ ಉಸಿರಾಗಲಿ ಕನ್ನಡ

ಇಂದು 70ನೇ ಕರ್ನಾಟಕ ರಾಜ್ಯೋತ್ಸವದ ಸಂಭ್ರಮ. ದಕ್ಷಿಣ ಭಾರತದ ಎಲ್ಲಾ ಕನ್ನಡ ಭಾಷಿಕ ಪ್ರದೇಶಗಳನ್ನು ವಿಲೀನಗೊಳಿಸಿ ಒಂದು ರಾಜ್ಯವಾಗಿ ಘೋಷಣೆ ಮಾಡಿದ ದಿನವಿದು. ಇದು ಜರುಗಿದ್ದು 1956 ನವೆಂಬರ್ 1ರಂದು. ಆಗ ನಮ್ಮ ನಾಡು ಕರೆಸಿಕೊಂಡಿದ್ದು 'ಮೈಸೂರು ರಾಜ್ಯ' ಎಂಬ ಹೆಸರಿನಿಂದ. ತರುವಾಯದಲ್ಲಿ, ರಾಜ್ಯದ ಎಲ್ಲ ಭಾಗಗಳ ಜನರ ಭಾವನಾತ್ಮಕ ತೊಡಗಿಸಿಕೊಳ್ಳುವಿಕೆಗೆ ಅನುವು ಮಾಡಿ ಕೊಡಲು ಮತ್ತು ಅವರ ತರ್ಕದ ಮಾನ್ಯತೆಯ ದ್ಯೋತಕವಾಗಿ 1973ರ ನವೆಂಬರ್ 1ರಂದು 'ಮೈಸೂರು' ರಾಜ್ಯಕ್ಕೆ 'ಕರ್ನಾಟಕ' ಎಂದು ಮರುನಾಮಕರಣ ಮಾಡಲಾಯಿತು ಎಂಬುದೆಲ್ಲ ಬಹುಜನರಿಗೆ ಗೊತ್ತಿರುವ ಸಂಗತಿಯೇ. ಒಟ್ಟಿನಲ್ಲಿ, ಕನ್ನಡನಾಡಿನ ಏಕೀಕರಣಕ್ಕಾಗಿ ದುಡಿದ ಮಹನೀಯರ ತ್ಯಾಗ ಮತ್ತು ಪರಿಶ್ರಮಗಳನ್ನು ಸ್ಮರಿಸಿ, ಕನ್ನಡ ನುಡಿ, ಸಂಸ್ಕೃತಿ, ಪರಂಪರೆಯ ವಿಷಯದಲ್ಲಿ ಹೊಮ್ಮಿರುವ ಭವ್ಯತೆಯನ್ನು ಮೆಲುಕುಹಾಕಿ ಸಂಭ್ರಮಿಸುವ ದಿನವಿದು. ಹಾಗಂತ ಇದು ಮೈಮರೆಯುವ ಕಾಲಘಟ್ಟವೂ ಅಲ್ಲ. ಕನ್ನಡದ ನೆಲ-ಜಲದ ಸಂರಕ್ಷಣೆ, ಕನ್ನಡಿಗರಿಗೆ ಉದ್ಯೋಗಾವಕಾಶಗಳ ಲಭ್ಯತೆ, ಆಡಳಿತ ಭಾಷೆ ಮತ್ತು ಅನ್ನದ ಭಾಷೆಯಾಗಿ ಕನ್ನಡ ಮುಂತಾದ ಚರ್ಚಾವಿಷಯಗಳಲ್ಲಿನ ನಾಡಿನ ಜನರ ನಿರೀಕ್ಷೆಗಳಿನ್ನೂ ಅಂದುಕೊಂಡಷ್ಟು ಈಡೇರಿಲ್ಲ ಎಂಬ ಕಹಿಸತ್ಯವನ್ನು ನಾವ್ಯಾರೂ ಮರೆಯುವಂತಿಲ್ಲ. ಹೀಗಾಗಿ, ಮನೆ, ಮಾರುಕಟ್ಟೆ, ಕಾರ್ಯಕ್ಷೇತ್ರ ಹೀಗೆ ವಿವಿಧ ನೆಲೆಗಳಲ್ಲಿ ಕನ್ನಡತನವನ್ನು ಉಳಿಸಿ ಬೆಳೆಸುವುದಕ್ಕೆ ಸಂಕಲ್ಪಿಸೋಣ. ಆಗ ಮಾತ್ರವೇ, 'ಕನ್ನಡತನವೊಂದಿದ್ದರೆ ನೀನಮ್ಮಗೆ ಕಲ್ಪತರು' ಎಂಬ ಕವಿವಾಣಿ ಸಾರ್ಥಕ್ಯವನ್ನು ಕಂಡೀತು. ಎಲ್ಲರಿಗೂ ಕನ್ನಡ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು...

ಸೊಂಪಾದಕೀಯ

ಮಹಿಳಾ ಜಯವರ್ಧನೆ

ಶುಕ್ರವಾರದ ಆಸ್ಟ್ರೇಲಿಯಾ ಮತ್ತು ಭಾರತದ ನಡುವಿನ ಕ್ರಿಕೆಟ್ ಪಂದ್ಯ ನೋಡಲು ಕ್ರಿಕೆಟ್ ಪ್ರೇಮಿಗಳಿಗೆ ಆಸಕ್ತಿ ಕಡಿಮೆ ಆಗಲು ಅವರ ಕಳಪೆ ಆಟ ಅಷ್ಟೇ ಅಲ್ಲ, ಅದರ ಹಿಂದಿನ ದಿನ ಮಹಿಳಾ ಕ್ರಿಕೆಟ್ ತಂಡದವರು ಆಡಿದ ಆಟ ಕೂಡಾ ಕಾರಣ ಅಂದ್ರೆ ತಪ್ಪೇನಿಲ್ಲ. ಚಾಂಪಿಯನ್ ಆಸ್ಟ್ರೇಲಿಯಾವನ್ನು ಬಗ್ಗು ಬಡಿದು ಫೈನಲ್ ಪ್ರವೇಶಿಸಿದ ಭಾರತ ತಂಡದ ಆಟಗಾರ್ತಿಯರ ಹವಾ ಹೇಗಿತ್ತು ಅಂದ್ರೆ, ಪುರುಷರ ಪಂದ್ಯದಲ್ಲಿ ಅತಿ ಬೇಗನೆ 4 ವಿಕೆಟ್ ಪತನ ಆದಾಗ ಕ್ರಿಕೆಟ್ ಪ್ರೇಮಿಗಳು 'ನೆಕ್ಸ್ಟ್ ಜೆಮಿಮಾ ರೋಡ್ರಿಗಸ್ ಕಳಿಸ್ರೋ ಬ್ಯಾಟಿಂಗಿಗೆ' ಅಂತ ಹೇಳುವಷ್ಟು. ತಂಡದಲ್ಲಿ ಬರೀ ತಮ್ಮ ತಲೆಹರಟೆಗಳಿಂದ ಹೆಸರುವಾಸಿ ಆಗಿರುವ ಕೋಚ್ ಗೌತಮ್ ಗಂಭೀರ್ ನಿನ್ನೆಯ ಪಂದ್ಯದಲ್ಲೂ ಅದನ್ನು ಮುಂದುವರಿಸಿದರು. ಭಾರತ ತಂಡ ವಿಕೆಟ್‌ಗಳನ್ನು ಕಳೆದುಕೊಳ್ಳುತ್ತಾ ಸಾಗಿದಾಗ ಡಗ್ ಔಟ್‌ನಲ್ಲಿ ಶಿವಂ ದುಬೆಯಂಥ ಪ್ಲೇಯರ್ ಇರುವಾಗ ತಮ್ಮ ಚೇಲಾ ಹರ್ಷಿತ್ ರಾಣಾನನ್ನು ಕಳುಹಿಸಿದರು ಗಂಭೀರ್. ಇಲ್ಲಿ, ಇತ್ತೀಚೆಗೆ ಬ್ಯಾಟಿಂಗ್‌ನಲ್ಲಿ ಮಂಕಾಗಿ ತಮ್ಮ ಟಚ್ ಕಳೆದುಕೊಂಡಿರುವ ಸೂರ್ಯಕುಮಾರ್ ಯಾದವ್, ಗಂಭೀರ್ ಹೇಳಿದ್ದಕ್ಕೆಲ್ಲಾ ತಲೆ ಆಡಿಸುವ ಕೆಲಸ ಮಾಡುವುದಷ್ಟೇ ಆಗಿರೋದ್ರಿಂದ ಈ ನಿರ್ಧಾರದ ಹಿಂದೆ ಇರೋದು ಗಂಭೀರ್ ಅಷ್ಟೇ ಅನ್ನೋದು ಎಲ್ಲರಿಗೂ ಗೊತ್ತಿರೋ ಸೀಕ್ರೆಟ್. ಇನ್ನು ಸೂರ್ಯ ಈ ಪಂದ್ಯದಲ್ಲೂ ತಮ್ಮ ಕಳಪೆ ಫಾರ್ಮ್ ಮುಂದುವರಿಸಿದ್ದಾರೆ. ಆದರೆ ಹರ್ಷಿತ್ ರಾಣಾ ಅನ್ನೋ ಪ್ಯೂರ್ ಬ್ಯಾಟ್ಸ್‌ಮನ್ 5 ವಿಕೆಟ್ ಪತನದ ನಂತರ ಬಂದು ಅತ್ತ ಶಿವಂ ದುಬೆ ಆಡಬೇಕಿದ್ದ ಬಾಲುಗಳಿಗೆ ಕಲ್ಲು ಹಾಕಿದ್ದಲ್ಲದೆ, ತಾವು ಕ್ರೀಸ್‌ನಲ್ಲಿ ಇರೋವರೆಗೂ ಆ ಕಡೆ ಬಿಡುಬೀಸಾಗಿ ಬ್ಯಾಟ್ ಬೀಸುತ್ತಿದ್ದ ಅಭಿಷೇಕ್ ಶರ್ಮಾ ಅವರಿಗೆ ಸ್ಟ್ರೈಕ್ ಅನ್ನೇ ಕೊಡಲಿಲ್ಲ. ಹಾಗಾಗಿ ರಾಣಾ ಅವರಿಂದಾಗಿ ಭಾರತ ಎರಡು ಕಡೆಯಿಂದ ಪೆಟ್ಟು ತಿನ್ನುವಂತಾಯಿತು. ಇನ್ನು 33 ಬಾಲಿಗೆ 35 ರನ್ ಗಳಿಸಿದ ರಾಣಾ ಸ್ಟ್ರೈಕ್ ರೇಟ್ 100ರ ಆಸುಪಾಸಿನಲ್ಲಿ ಅಷ್ಟೇ ಇದ್ದಿದ್ದು. ಬೋಲಿಂಗ್‌ನಲ್ಲಿ 2 ಓವರ್‌ಗೆ 27 ರನ್. ಇದಕ್ಕೆ ಅವರನ್ನು ಶಿವಂ ದುಬೆಗಿಂತ ದೊಡ್ಡ ಆಲ್‌ರೌಂಡರ್ ಅಂತ ಟ್ರೀಟ್ ಮಾಡ್ಬೇಕಾ ಅನ್ನೋದು ಎಲ್ಲರೂ ಕೇಳ್ತಾ ಇರೋ ಪ್ರಶ್ನೆ.

ಸಂಪಾದಕರ ಸದ್ಯಶೋಧನೆ

ಕಡಿಮೆ ಅಂತರ ಯಾವುದು?

ವಿಮಾನ ಪ್ರಯಾಣದಲ್ಲಿ ಕಡಿಮೆ ಅಂತರದ ದಾರಿ (Shortest Path) ಯಾವಾಗಲೂ ಏಕೆ 'ನೇರ'ವಾಗಿರುವುದಿಲ್ಲ? ನೀವು ಎಂದಾದರೂ ಅಂತಾರಾಷ್ಟ್ರೀಯ ವಿಮಾನಗಳಲ್ಲಿ ಪ್ರಯಾಣಿಸುವಾಗ, ಪರದೆಯ ಮೇಲೆ ನಿಮ್ಮ ವಿಮಾನದ ಹಾದಿಯನ್ನು ಗಮನಿಸಿದ್ದೀರಾ? ನ್ಯೂಯಾರ್ಕ್‌ನಿಂದ ಟೋಕಿಯೋಗೆ ಹೋಗುವ ವಿಮಾನವು ನೇರವಾಗಿ ಪಶ್ಚಿಮಕ್ಕೆ ಹಾರುವ ಬದಲು, ಉತ್ತರಕ್ಕೆ ಬಾಗಿ, ಅಲಾಸ್ಕಾದ ಮೇಲಿಂದ ಏಕೆ ಹೋಗುತ್ತದೆ? ಅಥವಾ ಲಂಡನ್‌ನಿಂದ ಲಾಸ್ ಏಂಜಲೀಸ್‌ಗೆ ಹೊರಟ ವಿಮಾನವು ಗ್ರೀನ್‌ಲ್ಯಾಂಡ್ ಬಳಿ ಏಕೆ ಹಾದುಹೋಗುತ್ತದೆ? ಇದಕ್ಕೆ ಕಾರಣ ತುಂಬಾ ಸರಳ. ಆದರೆ ಇದು ನಮ್ಮ ಸಾಮಾನ್ಯ ಕಲ್ಪನೆಗೆ ವಿರುದ್ಧವಾಗಿದೆ. ಭೂಮಿಯ ಮೇಲೆ ಎರಡು ಸ್ಥಳಗಳ ನಡುವಿನ ಕಡಿಮೆ ದೂರವನ್ನು ಕಂಡುಹಿಡಿಯುವ ಈ ವೈಜ್ಞಾನಿಕ ತತ್ವವನ್ನು 'ಗ್ರೇಟ್ ಸರ್ಕಲ್' (Great Circle) ಎಂದು ಕರೆಯಲಾಗುತ್ತದೆ. ಈ ಪರಿಕಲ್ಪನೆಯು ವಿಮಾನಯಾನ ಮತ್ತು ಸಮುದ್ರ ಸಂಚಾರದಲ್ಲಿ ಸಮಯ, ಇಂಧನ ಮತ್ತು ಹಣವನ್ನು ಉಳಿಸಲು ನಿರ್ಣಾಯಕವಾಗಿದೆ. ಗ್ರೇಟ್ ಸರ್ಕಲ್ ಎಂದರೇನು? ಒಂದು ಗೋಳದ (sphere) ಮೇಲ್ಮೈಯಲ್ಲಿರುವ ಎರಡು ಬಿಂದುಗಳ ನಡುವಿನ ಅತಿ ಕಡಿಮೆ ಅಂತರವನ್ನು 'ಗ್ರೇಟ್ ಸರ್ಕಲ್' ಅಂತಾರೆ. ಒಂದು ಗೋಳದ (ಭೂಮಿ) ಕೇಂದ್ರದ ಮೂಲಕ ಹಾದುಹೋಗುವ ಯಾವುದೇ ವೃತ್ತವು ಗ್ರೇಟ್ ಸರ್ಕಲ್ ಆಗಿರುತ್ತದೆ. ಈ ವೃತ್ತವು ಭೂಮಿಯನ್ನು ನಿಖರವಾಗಿ 2 ಸಮಾನ ಅರ್ಧಗೋಳಗಳಾಗಿ ವಿಭಜಿಸುತ್ತದೆ. ಉದಾಹರಣೆಗೆ, ಭೂಮಿಯ ಮೇಲಿನ ಅತಿ ಪ್ರಸಿದ್ಧ ಗ್ರೇಟ್ ಸರ್ಕಲ್‌ಗಳು ಸಮಭಾಜಕ ರೇಖೆ (Equator) ಮತ್ತು ಯಾವುದೇ ಒಂದು ರೇಖಾಂಶದ ರೇಖೆ (Longitude line) ಉತ್ತರ ಧ್ರುವದಿಂದ ದಕ್ಷಿಣ ಧ್ರುವದ ಮೂಲಕ ಸಾಗುವುದು. ನಕ್ಷೆಗಳಲ್ಲಿ ಸರಳ ರೇಖೆಯಂತೆ ಕಾಣುವ ದಾರಿ, ವಾಸ್ತವವಾಗಿ ಭೂಗೋಳದ ಮೇಲೆ ಒಂದು ವಕ್ರವಾದ, ಉದ್ದವಾದ ಪಥವಾಗಿರುತ್ತದೆ. ಭೂಮಿಯು ಸಮತಲವಲ್ಲ, ಗೋಲಾಕಾರವಾಗಿದೆ. ಆದ್ದರಿಂದ, ನೇರ ರಸ್ತೆಯು ಕಡಿಮೆ ದೂರವನ್ನು ಸೂಚಿಸುವಂತೆ, ಗೋಳದ ಮೇಲಿನ ಅತಿ ಕಡಿಮೆ ದೂರವನ್ನು ಕಂಡುಹಿಡಿಯಲು ವಕ್ರವಾದ ಗ್ರೇಟ್ ಸರ್ಕಲ್ ಅನ್ನು ಬಳಸಲಾಗುತ್ತದೆ. ಈ ವಕ್ರತೆಯು ವಿಮಾನದ ಹಾದಿಯನ್ನು ಉತ್ತರ ಧ್ರುವದ ಕಡೆಗೆ ಬಾಗಿದಂತೆ ಕಾಣುವಂತೆ ಮಾಡುತ್ತದೆ. ಹಾಗಾದರೆ ವಿಮಾನಯಾನದ ಮೇಲೆ ಇದರ ಪರಿಣಾಮವೇನು? ವಿಮಾನಯಾನದಲ್ಲಿ ಗ್ರೇಟ್ ಸರ್ಕಲ್ ತತ್ವದ ಬಳಕೆ ಕೇವಲ ಸೈದ್ಧಾಂತಿಕವಲ್ಲ, ಇದು ಕಾರ್ಯಾಚರಣೆಗೆ ಅತ್ಯಗತ್ಯವಾಗಿದೆ. ವಿಮಾನಗಳು 'ಗ್ರೇಟ್ ಸರ್ಕಲ್' ಮಾರ್ಗಗಳನ್ನು ಅನುಸರಿಸುವುದರಿಂದ ವಿಮಾನಯಾನದ ಒಟ್ಟು ದೂರ ಕಡಿಮೆಯಾಗುತ್ತದೆ. ಕಡಿಮೆ ದೂರ ಎಂದರೆ ಕಡಿಮೆ ಹಾರಾಟದ ಸಮಯ, ಕಡಿಮೆ ಇಂಧನ ಬಳಕೆ ಮತ್ತು ಕಡಿಮೆ ನಿರ್ವಹಣಾ ವೆಚ್ಚ. ನ್ಯೂಯಾರ್ಕ್‌ನಿಂದ ಟೋಕಿಯೋಗೆ ಪಶ್ಚಿಮಕ್ಕೆ ನೇರವಾಗಿ ಹಾರುವ ಬದಲು, ಗ್ರೇಟ್ ಸರ್ಕಲ್ ಮಾರ್ಗವು ವಿಮಾನವನ್ನು ಅಲಾಸ್ಕಾದ ಬೃಹತ್ ಆರ್ಕ್‌ಗಳ (Great Arc) ಕಡೆಗೆ ಕೊಂಡೊಯ್ಯುತ್ತದೆ. ಇದು ಪೆಸಿಫಿಕ್ ಸಾಗರದಾದ್ಯಂತ ನೇರವಾಗಿ ಹಾರುವ ಹಾದಿಗಿಂತ ಗಣನೀಯವಾಗಿ ಹತ್ತಿರ. ಇನ್ನೂ ಸರಳವಾಗಿ ಹೇಳುವುದಾದರೆ, ಗೋಳದ ಮೇಲೆ ಎರಡು ಬಿಂದುಗಳ ನಡುವಿನ ಕಡಿಮೆ ದಾರಿಯೇ ಗ್ರೇಟ್ ಸರ್ಕಲ್. ಸಮತಲ ನಕ್ಷೆಗಳು ದೂರವನ್ನು ವಿರೂಪಗೊಳಿಸುವುದರಿಂದ, ನೇರ ರೇಖೆಗಳು ಮೋಸಗೊಳಿಸಬಹುದು. ಜಿಪಿಎಸ್ ಮತ್ತು ಆಧುನಿಕ ಸಂಚರಣೆ ವ್ಯವಸ್ಥೆಗಳು ಯಾವಾಗಲೂ ಗೋಳಾಕಾರದ ರೇಖಾಗಣಿತದ (Spherical geometry) ಆಧಾರದ ಮೇಲೆ ಮಾರ್ಗಗಳನ್ನು ಲೆಕ್ಕ ಹಾಕುತ್ತವೆ. ಅಂತಾರಾಷ್ಟ್ರೀಯ ಮಾರ್ಗ ಯೋಜನೆಗೆ ಪೈಲಟ್‌ಗಳು ಮತ್ತು ವಿಮಾನ ನಿಯಂತ್ರಣ ಕೇಂದ್ರ ಗ್ರೇಟ್ ಸರ್ಕಲ್‌ಗಳನ್ನು ಅವಲಂಬಿಸಿವೆ. ಗ್ರೇಟ್ ಸರ್ಕಲ್ ಮಾರ್ಗಗಳು ನಮ್ಮ ನಿರೀಕ್ಷೆಗಿಂತ ಭಿನ್ನವಾಗಿ ಕಾಣುತ್ತವೆ. ಲಂಡನ್‌ನಿಂದ ಲಾಸ್ ಏಂಜಲೀಸ್‌ಗೆ ವಿಮಾನ ಹಾರುವಾಗ, ಅದು ದಕ್ಷಿಣದ ಬದಲು ಉತ್ತರಕ್ಕೆ, ಗ್ರೀನ್‌ಲ್ಯಾಂಡ್‌ನ ಸಮೀಪಕ್ಕೆ ಹಾದುಹೋಗುತ್ತದೆ. ಇದು ಭೂಮಿಯ ಗೋಳಾಕಾರದ ಗುಣದಿಂದಾಗಿ ಸಂಭವಿಸುತ್ತದೆ.

ಅಫ್ಘಾನಿಸ್ತಾನದ ಕಮ್ಯುನಿಸ್ಟ್ ಆಡಳಿತ

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
camohanbn@gmail.com

ಆಫ್ಘನ್ನರು ಎರಡು ಬಾರಿ ಬ್ರಿಟಿಷರಿಗೆ ಮಣ್ಣು ಮುಕ್ಕಿಸಿದ ನಂತರ, ಅವರ ತಂಟೆಗೆ ಹೋದರೆ ಉಳಿಗಾಲವಿಲ್ಲವೆಂಬ ವಿಷಯ ಬ್ರಿಟಿಷರಿಗೆ ತಿಳಿಯಿತು. ಮೊದಲನೇ ಮಹಾಯುದ್ಧದಲ್ಲಿ ಅಫ್ಘಾನಿಸ್ತಾನವು ಯಾರ ಪರವಾಗಿಯೂ ನಿಲ್ಲಲಿಲ್ಲ, ಯಾರ ವಿರುದ್ಧವೂ ಯುದ್ಧ ಮಾಡಲಿಲ್ಲ. ಬ್ರಿಟಿಷರಿಗೆ ಅವರು ಕೊಟ್ಟಿದ್ದ ಹೊಡೆತದ ಪರಿಣಾಮ ಇತರ ದೇಶಗಳು ಅವರ ತಂಟೆಗೆ ಹೋಗಿರಲಿಲ್ಲ. ಮೊದಲನೇ ಮಹಾಯುದ್ಧ ಮುಗಿದ ನಂತರ, ಭೌಗೋಳಿಕವಾಗಿ ಜಗತ್ತಿನಲ್ಲಿ ಹಲವು ಬದಲಾವಣೆಗಳಾದವು. ಹೊಸ ದೇಶಗಳು ಹುಟ್ಟಿಕೊಂಡವು, ಹಲವು ದೇಶಗಳು ಇತರ ದೇಶಗಳೊಂದಿಗೆ ಸೇರಿಕೊಂಡವು, ನೂತನ ಒಪ್ಪಂದಗಳಾದವು. ಇದ್ಯಾವುದರ ಬಗ್ಗೆಯೂ ಅಫ್ಘಾನಿಸ್ತಾನ ತಲೆಕೆಡಿಸಿಕೊಳ್ಳಲಿಲ್ಲ. ಆದರೆ ಮೊದಲನೇ ಮಹಾಯುದ್ಧದಲ್ಲಿ ದಣಿದಿದ್ದ ಬ್ರಿಟಿಷರಿಗೆ ಮೊದಲ ಬಾರಿಗೆ ಅಫ್ಘಾನಿಸ್ತಾನ ಕಾಲು ಕೆರೆದುಕೊಂಡು ಯುದ್ಧಕ್ಕೆ ಬಂದಿತು. ರಷ್ಯಾ ಪರವಾಗಿದ್ದ ರಾಜನೊಬ್ಬ ಅಂದಿನ ಬ್ರಿಟಿಷ್ ಆಕ್ರಮಿತ ಭಾರತದ ಮೇಲೆ, ಹೈದರ್ ಪಾಸ್ ಮೂಲಕ ದಾಳಿ ಮಾಡಿದ್ದ. ಇದ್ದಕ್ಕಿದ್ದಂತೆ ತಮ್ಮ ಮೇಲೆ ಎರಗಿದ ಆಫ್ಘನ್ನರನ್ನು ಕಂಡ ಬ್ರಿಟಿಷರು ತಬ್ಬಿಬ್ಬಾಗಿದ್ದರು. ಈ ದಾಳಿಯಲ್ಲಿ ಸಾವಿರಾರು ಬ್ರಿಟಿಷ್ ಸೈನಿಕರು ಸಾವನ್ನಪ್ಪಿದ್ದರು. ಮತ್ತೊಂದೆಡೆ ಅಫ್ಘಾನಿಸ್ತಾನದ ಸಾವಿರಾರು ಸೈನಿಕರು ಸಾವನ್ನಪ್ಪಿದ್ದರು. ಈ ಘಟನೆ ನಡೆದ ಕೆಲವು ವರ್ಷಗಳ ಕಾಲ ಇಬ್ಬರೂ ಸುಮ್ಮನಿದ್ದರು. ನಂತರ ಅಫ್ಘಾನಿಸ್ತಾನದ ಸಿಂಹಾಸನವನ್ನು ಅಮಾನುಲ್ಲಾ ಎಂಬ ರಾಜ ಅಲಂಕರಿಸಿದ, ಈತ ಕಟ್ಟರ್ ಮುಸ್ಲಿಂ ಸಂಪ್ರದಾಯಗಳ ವಿರೋಧಿಯಾಗಿದ್ದ. ಪಾಶ್ಚಿಮಾತ್ಯರ ಸಂಸ್ಕೃತಿಗೆ ಮಾರು ಹೋಗಿದ್ದ ಈತನಿಗೆ, ಅವರ ರೀತಿಯ ಜೀವನ ನಡೆಸಬೇಕೆಂಬ ಆಸೆಯಿತ್ತು. ಆಫ್ಘನ್ನರನ್ನು ನಿಧಾನವಾಗಿ ಪಾಶ್ಚಿಮಾತ್ಯ ಸಂಸ್ಕೃತಿಯೆಡೆಗೆ ಕರೆದುಕೊಂಡು ಹೋಗಬೇಕೆಂಬ ಹಂಬಲವಿತ್ತು. ಬ್ರಿಟಿಷರು ತಮ್ಮ ಸಂಸ್ಕೃತಿಯನ್ನು ಬಲವಂತವಾಗಿ ಆಫ್ಘನ್ನರ ಮೇಲೆ ಹೇರಲು ಪ್ರಯತ್ನಿಸಿ ಎರಡು ಬಾರಿ ಸೋತು ಸುಣ್ಣವಾಗಿದ್ದರು. ಆದರೆ ಈ ಬಾರಿ ಕುರಿಯೊಂದು ತೋಳದ ಬಳಿ ಬಂದಂತೆ ಅಲ್ಲಿನ ರಾಜ ಬ್ರಿಟಿಷರ ಸಂಸ್ಕೃತಿಯನ್ನು ಒಪ್ಪಿಕೊಳ್ಳಲು ಸಿದ್ಧನಾಗಿದ್ದರಿಂದ ಬ್ರಿಟಿಷರಿಗೆ ಹಳಸಿಹೋಗಿದ್ದ ಹಳೆಯ ಆಸೆ ಚಿಗುರಿತು. 1927ರಲ್ಲಿ ಆತನನ್ನು ಯುರೋಪಿಗೆ ಕರೆಸಿಕೊಳ್ಳಲಾಯಿತು. ಬ್ರಿಟನಿನ್ನಲ್ಲಿ ಆತನಿಗೆ ರಾಜಾತಿಥ್ಯವನ್ನು ನೀಡಲಾಯಿತು. ಬೀದಿ ಬೀದಿಗಳಲ್ಲಿ ದೊಡ್ಡ ಕಾರುಗಳಲ್ಲಿ ಮೆರವಣಿಗೆ ಮಾಡಲಾಯಿತು. ಆತನನ್ನು ಬ್ರಿಟನ್ನಿನ ವಿವಿಧ ಮಾರುಕಟ್ಟೆಗಳಿಗೆ ಕರೆದುಕೊಂಡು ಹೋಗಲಾಯಿತು, ಆಧುನಿಕ ಬಂದೂಕುಗಳು, ಕಾರುಗಳು, ಪಾಶ್ಚಿಮಾತ್ಯ ಶೈಲಿಯ ಬಟ್ಟೆಗಳು, ದುಬಾರಿ ವೆಚ್ಚದ ಗಡಿಯಾರಗಳನ್ನು ಉಡುಗೊರೆಯಾಗಿ ನೀಡಿ ಅದ್ಭುತವಾದ ಉಪಚಾರದೊಂದಿಗೆ ನೋಡಿಕೊಳ್ಳಲಾಯಿತು. ಹತ್ತಾರು ರೋಲ್ಸ್ ರಾಯ್ಸ್ ಕಾರುಗಳನ್ನು ಉಡುಗೊರೆಯಾಗಿ ಆತನಿಗೆ ನೀಡಲಾಯಿತು. ಬೆಂಗಾಡಿನಂತಿದ್ದ ಅಫ್ಘಾನಿಸ್ತಾನದಿಂದ ಹೊರಬಂದು ಯುರೋಪಿನ ಸೌಂದರ್ಯವನ್ನು ನೋಡಿದ ಆತನಿಗೆ ಅಲ್ಲಿನ ಸಂಸ್ಕೃತಿಯನ್ನು ಅಫ್ಘಾನಿಸ್ತಾನಕ್ಕೆ ಪರಿಚಯಿಸಬೇಕೆಂಬ ಮಹಾದಾಸೆಯಿತ್ತು.

ಸರಿಯಾಗಿ ಸೈಕಲ್ಲುಗಳನ್ನೇ ಕಾಣದ ಬಡದೇಶಕ್ಕೆ, ರೋಲ್ಸ್ ರಾಯ್ಸ್ ಕಾರುಗಳು ಬಂದದ್ದು ಆಫ್ಘನ್ನರಿಗೆ ಇಷ್ಟವಾಗಲಿಲ್ಲ. ಆತ ಬ್ರಿಟಿಷರೊಂದಿಗೆ ಸೇರಿ ಕುಡಿಯಲು ಕಲಿತಿದ್ದ ವಿಚಾರ ಆಫ್ಘನ್ ಸೈನಿಕರಿಗೆ ತಿಳಿಯಿತು. ಬ್ರಿಟನ್‌ನಿಂದ ಬಂದವನಿಗೆ ಅಫ್ಘಾನಿಸ್ತಾನದಲ್ಲಿ ನೂತನ ತಂತ್ರಜ್ಞಾನವನ್ನು ಪರಿಚಯಿಸಬೇಕು, ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ನೀಡಬೇಕೆಂಬ ಒಳ್ಳೆಯ ಆಶಯವಿತ್ತು. ಪ್ರಜಾಪ್ರಭುತ್ವದಡಿಯಲ್ಲಿ ಚುನಾವಣೆ ನಡೆಸಬೇಕೆಂಬ, ಒಳ್ಳೆಯ ಸಂವಿಧಾನವನ್ನು ರಚಿಸಬೇಕೆಂಬ ಬಯಕೆಯಿತ್ತು. ಆದರೆ ಅಲ್ಲಿನ ಜನರಿಗೆ ಆತನ ಆಶಯಗಳು ಅವರ ಅನಾದಿ ಕಾಲದ ಇಸ್ಲಾಂ ಆಚರಣೆಯನ್ನು ಮುರಿಯುವಂತೆ ಗೋಚರಿಸಿತ್ತು. ಕೆಲದಿನಗಳ ನಂತರ ಸಂಪೂರ್ಣ ಮುಖ ಕಾಣುವ ರಾಜನ ಹೆಂಡತಿಯ ಚಿತ್ರಪಟವೊಂದು ಕಾಬುಲ್ ನಗರದ ಬೀದಿಗಳಲ್ಲಿ ಹರಿದಾಡತೊಡಗಿತು. ಇದನ್ನು ಕಂಡ ಆಫ್ಘನ್ನರಿಗೆ, ಆತನನ್ನು ಮುಂದುವರಿಯಲು ಬಿಟ್ಟರೆ ತಮ್ಮ ಮನೆಯ ಹೆಂಗಸರ ಸಂಪ್ರದಾಯಗಳನ್ನು ಮುರಿಸಿಬಿಡುತ್ತಾನೆಂಬ ಭಯ ಕಾಡತೊಡಗಿತು. ಪರಿಣಾಮ, ಎಲ್ಲರೂ ಸೇರಿ ಆತನ ಕುಟುಂಬವನ್ನೇ ಅಫ್ಘಾನಿಸ್ತಾನದಿಂದ ಓಡಿಸಿಬಿಟ್ಟರು.

19ನೇ ಶತಮಾನದಲ್ಲಿ ಬ್ರಿಟಿಷರು ಅಫ್ಘಾನಿಸ್ತಾನದ ಮೇಲೆ ದಾಳಿಗಳನ್ನು ನಡೆಸಿ ಕೈ ಸುಟ್ಟುಕೊಂಡಿದ್ದರು. 1929ರಿಂದ 1979ರವರೆಗೂ ಅಫ್ಘಾನಿಸ್ತಾನದಲ್ಲಿ ಶಾಂತಿ ನೆಲೆಸಿತ್ತು. ಬ್ರಿಟಿಷರು ಅವರ ತಂಟೆಗೆ ಮತ್ತೆ ಹೋಗಲಿಲ್ಲ. 1975ರ ಆಸುಪಾಸಿನಲ್ಲಿ ಜಗತ್ತಿನ ಅರ್ಧಭಾಗವನ್ನು ಕಮ್ಯುನಿಸ್ಟರು ಆಳುತ್ತಿದ್ದರು. ಒಂದೆಡೆ ಕಮ್ಯುನಿಸ್ಟ್ ದೇಶ ರಷ್ಯಾ, ಮತ್ತೊಂದೆಡೆ ಅಮೆರಿಕ, ಮಧ್ಯಪ್ರಾಚ್ಯದಲ್ಲಿ ತಮ್ಮ ಶಕ್ತಿ ಪ್ರದರ್ಶನ ಮಾಡಬೇಕಿತ್ತು. ಆಫ್ಘನ್ನರಿಗೆ ಬಿಲಿಯನ್‌ಗಟ್ಟಲೆ ರಷ್ಯನ್ ರೂಬೆಲ್‌ಗಳು ಸಹಾಯದ ರೂಪದಲ್ಲಿ ಬರಲಾರಂಭಿಸಿದವು. ದೊಡ್ಡ ದೊಡ್ಡ ಕಟ್ಟಡಗಳನ್ನು ನಿರ್ಮಿಸಲು ರಷ್ಯನ್ನರು ಆಫ್ಘನ್ನರಿಗೆ ಸಹಾಯ ಮಾಡಿದರು. ಅಲ್ಲಿನ ರೈತರಿಗೆ ಅನುಕೂಲವಾಗುವಂತೆ ಅಣೆಕಟ್ಟುಗಳನ್ನು ಕಟ್ಟಿಸಿಕೊಟ್ಟರು. ಕಾರ್ಖಾನೆಗಳನ್ನು ತೆರೆಯಲು ಅನುಕೂಲ ಮಾಡಿಕೊಟ್ಟರು. ವರ್ಷಕ್ಕೆ ಕೇವಲ ಶೇ.2ರ ದರದಲ್ಲಿ ಬಿಲಿಯನ್‌ಗಟ್ಟಲೆ ಹಣವನ್ನು ಸಾಲವನ್ನಾಗಿ ನೀಡಲಾಯಿತು. ಅತ್ತ ಅಮೆರಿಕ ಕೂಡ ಬಿಲಿಯನ್‌ಗಟ್ಟಲೆ ಹಣವನ್ನು ಆಫ್ಘನ್ನರಿಗೆ ನೀಡಿತು. ಅವರೂ ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟಿಸಿಕೊಟ್ಟರು, ವಿದ್ಯಾಭ್ಯಾಸಕ್ಕಾಗಿ ವಿಶ್ವವಿದ್ಯಾಲಯಗಳನ್ನು ಕಟ್ಟಿಸಿದರು.

ಅಫ್ಘಾನಿಸ್ತಾನದ ಜನರಿಗೆ ಒಂದೆಡೆ ಅಮೆರಿಕದ ನೀತಿಗಳು, ಮತ್ತೊಂದೆಡೆ ರಷ್ಯಾದ ಕಮ್ಯುನಿಸ್ಟ್ ನೀತಿಗಳಲ್ಲಿ ಯಾವುದನ್ನು ಒಪ್ಪಿಕೊಳ್ಳಬೇಕೆಂಬ ಗೊಂದಲವಿತ್ತು. ಹೆಚ್ಚಿನ ಜನರು ಕಮ್ಯುನಿಸ್ಟ್ ದೇಶ ರಷ್ಯಾದ ನೀತಿಯ ಪರವಾಗಿದ್ದರು. ಆದರೆ ಕೆಲವು ಆಫ್ಘನ್ನರಿಗೆ ತಮ್ಮ ಅನಾದಿಕಾಲದ ಮುಸಲ್ಮಾನ್ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕಿತ್ತು. ಕಮ್ಯುನಿಸ್ಟ್ ನೀತಿ ಹಾಗು ಕಟ್ಟರ್ ಇಸ್ಲಾಂ ಪಾಲಿಸುವವರ ನಡುವೆ ನೇರ ಹಣಾಹಣಿ ಪ್ರಾರಂಭವಾಗಿತ್ತು. ಆಫ್ಘನ್ನಿನ ಜನರ ಮಧ್ಯೆ ಕಂದಕಗಳು ಸೃಷ್ಟಿಯಾದವು. ದೇವರನ್ನೇ ನಂಬದ ನಾಸ್ತಿಕ ಕಮ್ಯುನಿಸ್ಟ್ ನೀತಿಯನ್ನು ಕಟ್ಟರ್ ಇಸ್ಲಾಂ ಸಂಪ್ರದಾಯಸ್ಥರು ಒಪ್ಪಲು ತಯಾರಿರಲಿಲ್ಲ. ಏಪ್ರಿಲ್ 1978ರಲ್ಲಿ ನಡೆದ ಚುನಾವಣೆಯಲ್ಲಿ ಮೊಟ್ಟ ಮೊದಲ ಬಾರಿಗೆ ಕಟ್ಟರ್ ಇಸ್ಲಾಂ ಸಂಪ್ರದಾಯವಾದಿಗಳ ಅಫ್ಘಾನಿಸ್ತಾನದಲ್ಲಿ ಕಮ್ಯುನಿಸ್ಟ್ ಆಡಳಿತ ಜಾರಿಗೆ ಬಂದಿತು. ನೂರ್ ಮೊಹಮ್ಮದ್ ತಾರಕಿ ಕಮ್ಯುನಿಸ್ಟ್ ಪಕ್ಷದಿಂದ ಚುನಾಯಿತನಾಗಿ ಅಫ್ಘಾನಿಸ್ತಾನದ ಅಧ್ಯಕ್ಷನಾದ. ತನ್ನ ಪ್ರಣಾಳಿಕೆಯಲ್ಲಿ, ಜಾತ್ಯತೀತತೆ, ಲಿಂಗ ಸಮಾನತೆ, ವಿದ್ಯಾಭ್ಯಾಸ ಎಲ್ಲವನ್ನು ಜಾರಿಗೆ ತರುವುದಾಗಿ ಹೇಳಿದ್ದ. ಅಧಿಕಾರಕ್ಕೆ ಬಂದ ಕೇವಲ ಒಂದು ವರ್ಷದಲ್ಲಿ ಅಫ್ಘಾನಿಸ್ತಾನದ ಮಸೀದಿಗಳಲ್ಲಿ ಜನರೇ ಇಲ್ಲದಂತೆ ಮಾಡುತ್ತೇನೆಂದು ಹೇಳಿದ್ದ. ಇವನ ಪ್ರಣಾಳಿಕೆಯನ್ನು ನೋಡಿ ಜನರು ಇವನನ್ನು ಚುನಾಯಿಸಿದ್ದರೆಂದರೆ, ಅವರಿಗೆ ಬದಲಾವಣೆ ಬೇಕಿತ್ತೆಂದರ್ಥ.

ಈತ ಪ್ರಣಾಳಿಕೆಯಲ್ಲಿ ಹೇಳಿದ್ದ ವಿಚಾರಗಳನ್ನು ತನ್ನ ಆಡಳಿತದಲ್ಲಿ ಸಂಪೂರ್ಣವಾಗಿ ಜಾರಿಗೆ ತಂದಿದ್ದ. ನಿಧಾನವಾಗಿ ಅಫ್ಘಾನಿಸ್ತಾನದಲ್ಲಿ ಬದಲಾವಣೆ ಕಾಣತೊಡಗಿತು. ಪಾಶ್ಚಿಮಾತ್ಯ ಸಂಸ್ಕೃತಿ ಇಡೀ ದೇಶವನ್ನು ಆವರಿಸಿಕೊಳ್ಳಲು ಪ್ರಾರಂಭಿಸಿತು. ಆದರೆ ಒಳಗೊಳಗೇ ಕಟ್ಟರ್ ಸಂಪ್ರದಾಯವಾದಿಗಳಿಗೆ ಇವನ ಆಡಳಿತ ಇಷ್ಟವಿರಲಿಲ್ಲ. ಬಲವಂತವಾಗಿ ಇವನು ಆಫ್ಘನ್ ಜನರ ಮೇಲೆ ಕಮ್ಯುನಿಸ್ಟ್ ನೀತಿಯನ್ನು ಹೇರುವ ಮೂಲಕ ಸಾವಿರಾರು ವರ್ಷಗಳ ಕಟ್ಟರ್ ಸಂಪ್ರದಾಯಗಳನ್ನು ಹಾಳುಗೆಡವುತ್ತಿದ್ದಾನೆಂಬ ಕೋಪವಿತ್ತು. ಆತನ ಆಡಳಿತದ ವಿರುದ್ಧ ಪ್ರತಿನಿತ್ಯ ಪ್ರತಿಭಟನೆಗಳು ಪ್ರಾರಂಭವಾದವು. ಕಟ್ಟರ್ ಕಮ್ಯುನಿಸ್ಟ್ ಪ್ರತಿಪಾದಕನಾಗಿದ್ದ ಈತ ತನ್ನ ಸರಕಾರದ ವಿರುದ್ಧ ತಿರುಗಿಬಿದ್ದಿದ್ದ ಸುಮಾರು 12000 ಜನರನ್ನು ನೇಣಿಗೇರಿಸಿದ್ದ. ತನ್ನ ಮಾತು ಕೇಳದವರನ್ನು ಮುಲಾಜಿಲ್ಲದೆ ಜೈಲಿಗೆ ತಳ್ಳುತ್ತಿದ್ದ. 1979ರ ಹೊತ್ತಿಗೆ ಅಂದರೆ ಅಧಿಕಾರಕ್ಕೆ ಬಂದ ಕೇವಲ ಒಂದು ವರ್ಷದಲ್ಲಿ, ಈತನ ವಿರುದ್ಧ ಇತರ ಕಮ್ಯುನಿಸ್ಟ್ ಬೆಂಬಲಿಗರೂ ತಿರುಗಿಬಿದ್ದರು. ಅಫ್ಘಾನಿಸ್ತಾನದಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿತ್ತು. ನಂತರ ನೂರ್ ಮೊಹಮ್ಮದ್ ತಾರಕಿ ರಷ್ಯನ್ನರ ಸಹಾಯ ಕೇಳಿದ್ದ. ಆತನಿಗೆ ಸಹಾಯ ಮಾಡಲು ರಷ್ಯಾ ಒಪ್ಪಿಕೊಂಡಿತ್ತು. ಇದರ ಮಧ್ಯೆ ದೊಡ್ಡದೊಂದು ಅನಾಹುತ ನಡೆದುಹೋಯಿತು. ನೂರ್ ಮೊಹಮ್ಮದ್ ತಾರಕಿಯನ್ನು ಕೊಲ್ಲಲಾಯಿತು. ಸಹಾಯ ಕೇಳಿಕೊಂಡು ಬಂದಿದ್ದ ನೂರ್ ಮೊಹಮ್ಮದ್ ತಾರಕಿಯ ಸಾವನ್ನು ರಷ್ಯನ್ನರು ಸಹಿಸಲಿಲ್ಲ. ಅಫ್ಘಾನಿಸ್ತಾನ ತಮ್ಮ ತೆಕ್ಕೆಯಿಂದ ಕಸಿದು ಹೋಗುತ್ತದೆಯೆಂಬ ಭಯದಿಂದ ಅಫ್ಘಾನಿಸ್ತಾನದ ಮೇಲೆ ರಷ್ಯನ್ನರು ಮಿಲಿಟರಿ ಕಾರ್ಯಾಚರಣೆ ನಡೆಸಲು ಮುಂದಾದರು, 1979ರಲ್ಲಿ ಸುಮಾರು 80000 ರಷ್ಯನ್ ಸೈನಿಕರು ಕಾಬುಲ್ ನಗರಕ್ಕೆ ಬಂದಿಳಿದರು. ರಷ್ಯಾ, ತನ್ನ ಅತ್ಯಾಧುನಿಕ ಅಸ್ತ್ರಗಳೊಂದಿಗೆ ಅಫ್ಘಾನಿಸ್ತಾನದ ಮೇಲೆ ಮುಗಿಬಿದ್ದಿತ್ತು. 12 ತಿಂಗಳಲ್ಲಿ ಅಫ್ಘಾನಿಸ್ತಾನದಲ್ಲಿದ್ದ ಸಮಸ್ಯೆಯನ್ನು ಬಗೆಹರಿಸಬೇಕೆಂದಿದ್ದ ರಷ್ಯನ್ನರಿಗೆ ಹೊರಬರಲು 9 ವರ್ಷಗಳು ಬೇಕಾದವು.

9 ವರ್ಷದಲ್ಲಿ ಸಾವಿರಾರು ರಷ್ಯನ್ ಸೈನಿಕರು, ಲಕ್ಷಾಂತರ ಆಫ್ಘನ್ನರು ಸತ್ತರು. ಪ್ರತಿಯೊಂದು ಸಾವು ಸಹ ಸೇಡಿನ ಜ್ವಾಲೆಯಾಗಿ ಎರಡೂ ಕಡೆಯಿಂದ ಆಕ್ರಮಣ ಮಾಡುವಂತಾಯಿತು. ಯಾರೊಬ್ಬರೂ ಸೋಲಲು ತಯಾರಿರಲಿಲ್ಲ. ಹೊರ ಜಗತ್ತಿಗೆ ರಷ್ಯಾ, ಅಫ್ಘಾನಿಸ್ತಾನದಲ್ಲಿ ನಡೆಸುತ್ತಿರುವುದು ಒಂದು ಸಣ್ಣ ಕಾರ್ಯಾಚರಣೆಯೆನಿಸಿತ್ತು. 1988ರಲ್ಲಿ ರಷ್ಯಾ ದೇಶ, ಇನ್ನು ತಾನು ಇದನ್ನು ಮುಂದುವರಿಸುವುದರಲ್ಲಿ ಯಾವುದೇ ಅರ್ಥವಿಲ್ಲವೆಂದು ತಿಳಿದು ಸೈನ್ಯವನ್ನು ವಾಪಸ್ ಕರೆಸಿಕೊಂಡು ಕಾರ್ಯಾಚರಣೆಯನ್ನು ನಿಲ್ಲಿಸಿತು. ಅಫ್ಘಾನಿಸ್ತಾನದ ಭೌಗೋಳಿಕ ಪ್ರದೇಶಗಳನ್ನು ಹೊರಗಿನವರು ಅರ್ಥ ಮಾಡಿಕೊಳ್ಳುವುದು ಬಹಳ ಕಷ್ಟ. ಅಲ್ಲಿನ ಹವಾಮಾನ ಬದಲಾವಣೆಗಳನ್ನು ಊಹಿಸಿಕೊಳ್ಳುವುದು ಸುಲಭದ ಮಾತಲ್ಲ. ಕಿರಿದಾದ ಕಣಿವೆ ಪ್ರದೇಶಗಳಲ್ಲಿ ಸಾವಿರಾರು ವರ್ಷಗಳಿಂದ ವಾಸಿಸುತ್ತಿರುವ ಬುಡಕಟ್ಟು ಜನಾಂಗಕ್ಕೆ ಅಲ್ಲಿನ ಇಂಚಿಂಚು ಭೂಪ್ರದೇಶದ ಅನುಭವವಿದೆ. ಅತ್ಯಾಧುನಿಕ ಮಿಲಿಟರಿ ಉಪಕರಣಗಳ ಸಹಾಯದಿಂದ ಅಮೆರಿಕ ದೇಶ ಒಸಾಮಾ ಬಿನ್ ಲಾಡೆನ್ ವಿರುದ್ಧ ನಡೆಸಿದ ಕಾರ್ಯಾಚರಣೆಯಲ್ಲಿ ಹುಡುಕಾಡದ ಗುಹೆಗಳಿಲ್ಲ, ಆದರೂ ಒಸಾಮಾ ಅಫ್ಘಾನಿಸ್ತಾನದಲ್ಲಿ ಸಿಗಲಿಲ್ಲ. ಆಫ್ಘನ್ನರು ಮೂಲತಃ ಕಟ್ಟರ್ ಇಸ್ಲಾಂ ಸಂಪ್ರದಾಯವಾದಿಗಳು, ಅವರ ನೆಲದಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಸ್ಥಾಪಿಸಲು ಮುಂದಾದ ದೊಡ್ಡ ದೇಶಗಳು ಬರಿಗೈಯಲ್ಲಿ ವಾಪಸ್ ಬಂದಿವೆ.

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಕಡಿವಾಣ ಹಾಕಿ

ವಿಲಕ್ಷಣವಾಗಿರುವ ರೀಲ್‌ಗಳನ್ನು ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುವುದು ಈಗಿನ ಕೆಲ ಯುವಜನರ ಪ್ರವೃತ್ತಿಯಾಗಿಬಿಟ್ಟಿದೆ. ಕೆಲ ತಿಂಗಳ ಹಿಂದೆ ರಿಯಾಲಿಟಿ ಶೋ ಒಂದರಲ್ಲಿ ನಿರೂಪಕಿಯೊಬ್ಬರು ಒಬ್ಬ ಸ್ಪರ್ಧಿಗೆ 'ದೊಡ್ಡವನಾದ ಮೇಲೆ ಏನಾಗುತ್ತೀಯ?' ಎಂದು ಕೇಳಿದ್ದಕ್ಕೆ ಆ ಬಾಲಕ 'ಯುಟ್ಯೂಬರ್ ಆಗ್ತೀನಿ' ಎಂದು ಉತ್ತರಿಸಿದ. ಸಾಮಾಜಿಕ ಜಾಲತಾಣಗಳ ಪ್ರಭಾವ ಎಷ್ಟರ ಮಟ್ಟಿಗೆ ಇದೆ ಎಂಬುದನ್ನು ಇದು ತೋರಿಸುತ್ತದೆ.

ಇತ್ತೀಚೆಗೆ, ಬಾಲಕ-ಬಾಲಕಿ ಇಬ್ಬರು ಸಮವಸ್ತ್ರ ಧರಿಸಿ ಶಾಲಾ ಆವರಣದಲ್ಲಿ ಕನ್ನಡ ಚಲನಚಿತ್ರವೊಂದರ ಡ್ಯುಯೆಟ್ ಹಾಡಿಗೆ ರೀಲ್ಸ್ ಮಾಡಿರುವುದು ನೋಡಿ ನಿಜಕ್ಕೂ ಮುಜುಗರವಾಯಿತು. ವಿದ್ಯೆ ಕಲಿಸುವ ವಿದ್ಯಾಲಯದಲ್ಲಿ ಇಂಥ ರೀಲ್ಸ್ ಮಾಡಲು ಅವಕಾಶ ನೀಡಿದ್ದು ತರವೇ? ಇಂಥ ಪರಿಪಾಠಗಳಿಗೆ ಕಡಿವಾಣ ಹಾಕಬೇಕಿದೆ.

- ಟಿ.ಎಸ್.ಪ್ರತಿಭಾ, ಚಿತ್ರದುರ್ಗ

ಇನ್ನೂ ಚಲಿಸುತ್ತಿದೆ..

ಒಂದು ಸಾಧಾರಣ ಅನುಭವವನ್ನು ಹೇಳುತ್ತಾ, ಅದನ್ನು ಬೇರೊಂದು ಆಯಾಮಕ್ಕೆ ಒಯ್ಯುವ ಕಲೆ ಅಂಕಣಕಾರ ಶಿಶಿರ್ ಹೆಗಡೆಯವರಿಗೆ ಸಿದ್ಧಿಸಿದೆ. ಅವರ ಬರಹದ ವಿನ್ಯಾಸವದು. 'ಚಿಕ್ಕ ಪುಟ್ಟ ರಿಪೇರಿ ಕೊಡುವ ಖುಷಿ..' ಶೀರ್ಷಿಕೆಯ ಅವರ ಅಂಕಣಬರಹ (ಅ.31) ಇದಕ್ಕೆ ಸಾಕ್ಷಿ. ಸಣ್ಣ ಪುಟ್ಟ ರಿಪೇರಿಗಳು ದೊಡ್ಡ ಖುಷಿಯನ್ನೇ ನೀಡುತ್ತವೆ ಎಂಬ ಮಾತು ನಿಜ. ಕೆಲ ದಿನಗಳ ಹಿಂದೆ ನಮ್ಮ ಮನೆಯ ಗೋಡೆ ಗಡಿಯಾರವು ನಿಂತುಬಿಟ್ಟಿತು. ಏನೆಲ್ಲ ಮಾಡಿ ಹೊಸ ಬ್ಯಾಟರಿ ಹಾಕಿದರೂ ಅದು ಮಿಸುಕಾಡಲಿಲ್ಲ, ಬಿಸಾಡಿದರಾಯಿತು ಎಂದುಕೊಂಡೆನಾದರೂ, ಕೊನೆಯ ಪ್ರಯತ್ನವಾಗಿ ಅದರ ಹಿಂಭಾಗವನ್ನು ಬಿಚ್ಚಿ, ಅಪರೂಪಕ್ಕೆ ಬಿದ್ದ ಬಿಸಿಲಲ್ಲಿ ಕೆಲವು ತಾಸು ಇಟ್ಟು ತಂದು, ಮತ್ತೆ ಬ್ಯಾಟರಿ ಹಾಕಿದೆ. ಗಡಿಯಾರ ಇನ್ನೂ ಚಲಿಸುತ್ತಿದೆ...

- ಎಸ್.ಎಲ್.ಎಂ. ಪಾಟೀಲ, ಬೆಳಗಾವಿ

ತೇಜಸ್ವಿ ನೆನಪಾದರು

ಶಿಶಿರಕಾಲ ಅಂಕಣಬರಹ (ಅ.31) ಓದುವಾಗ ಪೂರ್ಣಚಂದ್ರ ತೇಜಸ್ವಿಯವರ 'ಜುಗಾರಿ ಕ್ರಾಸ್' ಕೃತಿ ನೆನಪಾಯಿತು. ಅದರಲ್ಲೂ ತೇಜಸ್ವಿಯವರು ತಮ್ಮ ಜೀಪನ್ನು ರಿಪೇರಿ ಮಾಡುವ ಸನ್ನಿವೇಶ ಬರುತ್ತದೆ.

ಆಗೆಲ್ಲಾ ರಿಪೇರಿ ಅಂದರೆ ಸಹಜ ಪ್ರಕ್ರಿಯೆಯಾಗಿತ್ತು. ಇಂಕ್ ಪೆನ್ ರಿಪೇರಿಯನ್ನಂತೂ ಎಲ್ಲರೂ ಮಾಡ್ತಾ ಇದ್ರು. ರಿಪೇರಿ ಆಗಲಿಲ್ಲ ಅಂದ್ರೆ, 'ಜುಗಾಡ್' ಮಾಡಿ ಸರಿಮಾಡುವುದು. ಮನೆಯಲ್ಲಿ ಎಂಜಿನಿಯರಿಂಗ್ ಓದುತ್ತಿರುವವರು ಇದ್ದರಂತೂ, ಏನೇ ಕೆಟ್ಟುಹೋದರೂ ಅವರು ರಿಪೇರಿ ಮಾಡಲೇಬೇಕು. ಇಲ್ಲವಾದರೆ, 'ಏನ್ ಕಲೀತಿದ್ದೀಯ ಕಾಲೇಜಲ್ಲಿ, ಅಷ್ಟೂ ಬರಲ್ವಾ?' ಅಂತಿದ್ರು ಮನೆಯಲ್ಲಿನ ಕೆಲ ಹಿರಿಯರು. ಅವರ ಪ್ರಕಾರ, ಎಂಜಿನಿಯರ್‌ಗಳು ಅಂದರೆ ಕೆಟ್ಟುಹೋಗಿರೋ ರೇಡಿಯೋ, ಫ್ರಿಜ್, ವಾಷಿಂಗ್ ಮಷಿನ್ ಎಲ್ಲವನ್ನೂ ರಿಪೇರಿ ಮಾಡಬೇಕು! ಆಗೆಲ್ಲಾ, ರಿಪೇರಿ ಅಂಗಡಿ ಅಂತಾನೇ ಇರ್ತಾ ಇದ್ವು. ಈಗಿನ ಸಾಮಾನುಗಳ ರಿಪೇರಿಗೆ ಅಂಕಣಕಾರರು ಹೇಳಿದ ಹಾಗೆ ಆಯಾಯಾ ಸರ್ವೀಸ್ ಸೆಂಟರ್‌ಗಳಿಗೇ ಹೋಗಬೇಕು. ವಾರಂಟಿ ಮುಗಿದ ಮೇಲೆ 'ಎಎಂಸಿ' ತಗೋಬೇಕು.

ಸಾಮಾನುಗಳ ರಿಪೇರಿಗಿಂತ ಮನಸ್ಸುಗಳ ರಿಪೇರಿ ಬಹಳ ಮುಖ್ಯ. ಸಾಮಾನು ಬೇರೆಯದು ತಗೋಬಹುದು, ಆದರೆ ಸಂಬಂಧಗಳ ರಿಪೇರಿ ಆಗದೆ ಇದ್ರೆ ಕಷ್ಟ, ಅದಕ್ಕೇ ಇರಬೇಕು ವಿಚ್ಛೇದನಗಳು ಜಾಸ್ತಿ ಆಗ್ತಾ ಇರೋದು. ಒಟ್ಟಿನಲ್ಲಿ, ಹಳೆಯದನ್ನು ನೆನಪಿಸಿದ ಮತ್ತು ಸಂಬಂಧಗಳ ರಿಪೇರಿಯ ಮಹತ್ವದ ಬಗ್ಗೆ ತಿಳಿಸಿದ ಬರಹವಿದು ಎಂದು ಹೇಳಬಲ್ಲೆ.

- ವೆಂಕಟೇಶ್, ಬೆಂಗಳೂರು

ಹೇಮಂತದ ಧಾವಂತ: ಮುಗ್ಧ ಮನಸು, ಸ್ನಿಗ್ಧ ತಿನಿಸು

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ

ಡಾ.ಸಾಧನಶ್ರೀ
vveditoped@gmail.com

ಪ್ರಕೃತಿಮಾತೆಯ ಹೊಸ ರೂಪವನ್ನು ನೋಡಲು ನಾವೆಲ್ಲರೂ ಸಿದ್ಧರಾಗೋಣ. ಅರೆ, ಏನಪ್ಪಾ ಇದು ಎಂದು ಯೋಚಿಸುತ್ತಿದ್ದೀರಾ? ಪ್ರಕೃತಿಯಲ್ಲಿ ಶರತ್ ಋತುವು ಕಳೆದು ಈಗ ಹೇಮಂತ ಋತು ಪ್ರಾರಂಭವಾಗುವ ಕಾಲ. ಹೇಮಂತ ಋತು ಎಂದರೆ ಚಳಿಗಾಲದ ಆಗಮನ. ಈ ಸಮಯದಲ್ಲಿ ಹೊರಗಿನ ಶೀತಲತೆಯ ಪ್ರಭಾವದಿಂದ ನಮ್ಮ ದೇಹದಲ್ಲಿ ಅಗ್ನಿಯು ಉತ್ತೇಜನಗೊಳ್ಳುತ್ತದೆ. ಇದರ ಪ್ರಭಾವದಿಂದ ಹಸಿವು ಹೆಚ್ಚಾಗುತ್ತದೆ. ಈ ಸಮಯದಲ್ಲಿ ನಮ್ಮ ಅಗ್ನಿಯು ಹೆಚ್ಚಿನ ಆಹಾರವನ್ನು ಬೇಡುತ್ತದೆ. ಅಂತೆಯೇ ಶೀತಕಾಲದಲ್ಲಿ ದೇಹದ ಬಲವು ಅತ್ಯುತ್ತಮವಾಗಿರುತ್ತದೆ. ಪ್ರತಿನಿತ್ಯವೂ ಬೆಳಗ್ಗೆ ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು, ಮಲಮೂತ್ರಾದಿಗಳ ವಿಸರ್ಜನೆಯನ್ನು ಮುಗಿಸಿ, ದೇಹಕ್ಕೆ ಸೂಕ್ತವಾದಂಥ ಎಣ್ಣೆಯನ್ನು ಸವರಿಕೊಂಡು, ವ್ಯಾಯಾಮ ಮಾಡಿ, ಬಿಸಿನೀರಿನ ಸ್ನಾನವನ್ನು ಮಾಡಿದರೆ, ಅದು ದೇಹ-ಇಂದ್ರಿಯ-ಮನಸ್ಸುಗಳಿಗೆ ಉತ್ಸಾಹ, ಬಲ ಮತ್ತು ಲವಲವಿಕೆಯನ್ನು ನೀಡುತ್ತದೆ. ಚಳಿಗಾಲದಲ್ಲಿ ನಮ್ಮ ದೇಹಬಲವು ಉತ್ತಮವಾಗಿರುವ ಕಾರಣ ಹೆಚ್ಚಿನ ವ್ಯಾಯಾಮವನ್ನು ಮಾಡಬಹುದು. ಉತ್ತಮವಾದ ವ್ಯಾಯಾಮ ಮತ್ತು ಅಭ್ಯಂಗ ಸ್ನಾನದ ಆಚರಣೆಯನ್ನು ನಾವು ಚಳಿಗಾಲದಲ್ಲಿ ಇಟ್ಟುಕೊಂಡರೆ, ಅದು ಪೂರ್ತಿ ವರ್ಷ ನಮ್ಮನ್ನು ಕಾಪಾಡುವುದರಲ್ಲಿ ಸಂಶಯವಿಲ್ಲ, ಇನ್ನು ಈ ಕಾಲವು ಮಧುರರಸ ಪ್ರಧಾನವಾದ, ಜಿಡ್ಡಿನಂಶ ಇರುವ ಆಹಾರವನ್ನು ಸೇವಿಸಲು ಸೂಕ್ತ ಕಾಲ. ಇದು ನಮಗೆ ಉತ್ತಮವಾದ ಪುಷ್ಟಿಯನ್ನು ನೀಡಿ, ಶರೀರದ ಬೆಳವಣಿಗೆಗೆ ಸಹಾಯ ಮಾಡುತ್ತದೆ. ವಿಶೇಷವಾಗಿ ಬೆಳೆಯುವ ಮಕ್ಕಳಿಗೆ ಇಂಥ ಆಹಾರವನ್ನು ಶೀತಕಾಲದಲ್ಲಿ ನೀಡುವುದು ಬಹಳ ಪ್ರಯೋಜನಕಾರಿ. ಹಾಗಾಗಿ, ಇಂದಿನ ಸಂಚಿಕೆಯಲ್ಲಿ ಈ ಚಳಿಗಾಲದಲ್ಲಿ ಮಕ್ಕಳಿಗೆ ನೀಡಬಹುದಾದ ಪುಷ್ಟಿಕರ ಆಹಾರವನ್ನು, ಆಯುರ್ವೇದದ ಚೌಕಟ್ಟಿನಲ್ಲಿ ಅದನ್ನು ತಯಾರಿಸುವ ವಿಧಾನವನ್ನು ತಿಳಿದುಕೊಳ್ಳೋಣ. ಬಳಸುವ ಮುನ್ನ ನೆನಪಿನಲ್ಲಿಡಬೇಕಾದ ಅಂಶವೆಂದರೆ- ಇದನ್ನು ಮಕ್ಕಳ ಹಸಿವೆ ಮತ್ತು ಜೀರ್ಣಶಕ್ತಿಯನ್ನು ಗಮನಿಸಿ ಕೊಡುವುದು ಉತ್ತಮ. ಹಸಿವೆಯಿದ್ದಾಗ ಪೌಷ್ಟಿಕ ಆಹಾರವನ್ನು ನೀಡಿದರೆ ಅದರಿಂದ ಪ್ರಯೋಜನಗಳು ಹಲವು. ಹಸಿವೆ ಕಡಿಮೆ ಇದ್ದಾಗ, ಜೀರ್ಣಶಕ್ತಿ ಕುಗ್ಗಿದಾಗ, ಜ್ವರ, ನೆಗಡಿ, ಕೆಮ್ಮುಗಳಿದ್ದಾಗ ಇದನ್ನು ನೀಡಬಾರದು.

ನೆಲ್ಲಿಕಾಯಿ ಜಾಮ್

ಬೇಕಾಗುವ ಪದಾರ್ಥಗಳು: 2 ಬಟ್ಟಲು ಬೆಟ್ಟದ ನೆಲ್ಲಿಕಾಯಿ ತುರಿ, 2 ಬಟ್ಟಲು ಸಕ್ಕರೆ ಅಥವಾ ಕಲ್ಲು ಸಕ್ಕರೆ ಪುಡಿ, 2 ಬಟ್ಟಲು ತುಪ್ಪ, ಏಲಕ್ಕಿ ಪುಡಿ ಕಾಲು ಚಮಚ

ಮಾಡುವ ವಿಧಾನ: ಬೆಟ್ಟದ ನೆಲ್ಲಿಕಾಯಿಯನ್ನು ಚೆನ್ನಾಗಿ ನೀರಿನಲ್ಲಿ ತೊಳೆದು ನಯವಾಗಿ ತುರಿಯಬೇಕು. ಒಂದು ದಪ್ಪ ತಳದ ಪಾತ್ರೆಗೆ ಎರಡು ಬಟ್ಟಲು ಸಕ್ಕರೆ ಮತ್ತು ಎರಡು ಬಟ್ಟಲು ನೀರನ್ನು ಹಾಕಿ ಅದನ್ನು ಕುದಿಯಲು ಇಡಬೇಕು. ಇದು ತಳ ಹಿಡಿಯದ ಹಾಗೆ ಮತ್ತೆ ಮತ್ತೆ ತಿರುಗಿಸುತ್ತಿರಬೇಕು. ಈ ಮಿಶ್ರಣವು ಒಂದು ಕುದಿ ಬಂದ ಮೇಲೆ ತುರಿದಿಟ್ಟುಕೊಂಡ ಎರಡು ಬಟ್ಟಲು ನೆಲ್ಲಿಕಾಯಿಯನ್ನು ಹಾಕಿ ಚೆನ್ನಾಗಿ ಬೇಯಿಸಬೇಕು. ಅದರ ನೀರಿನ ಅಂಶವೆಲ್ಲವೂ ಹೋಗುವವರೆಗೆ ಚೆನ್ನಾಗಿ ಬೇಯಿಸತಕ್ಕದ್ದು. ಸತತವಾಗಿ ತಿರುಗಿಸುತ್ತಿರಬೇಕು. ನೀರು ಪೂರ್ತಿ ಕಡಿಮೆಯಾದ ಮೇಲೆ ಅದಕ್ಕೆ ತುಪ್ಪವನ್ನು ಹಾಕಿ ಸ್ವಲ್ಪ ತಿರುಗಿಸಿ. ಯಾವ ಕಾರಣಕ್ಕೂ ತಳ ಹಿಡಿಯದಂತೆ ಎಚ್ಚರ ವಹಿಸತಕ್ಕದ್ದು. ಮಿಶ್ರಣವು ತಳಬಿಟ್ಟ ನಂತರ ಪಾತ್ರೆಯನ್ನು ಒಲೆಯಿಂದ ಕೆಳಗಿಳಿಸಿ, ಅದಕ್ಕೆ ಏಲಕ್ಕಿ ಪುಡಿಯನ್ನು ಹಾಕಿ ತಿರುಗಿಸಿ ತಣ್ಣಗಾಗಲು ಬಿಡಬೇಕು. ನೆಲ್ಲಿಕಾಯಿಯಿಂದ ತಯಾರಿಸಿದ ಸವಿಯಾದ ಜಾಮ್ ಈಗ ಸಿದ್ಧ. ಇದನ್ನು ಒಂದು ಸ್ವಚ್ಛವಾದ ಗಾಜಿನ ಶೀಶೆಯಲ್ಲಿ ಶೇಖರಿಸಿದರೆ ಬಹಳ ದಿನಗಳವರೆಗೂ ಬಳಸಬಹುದು. ಇದನ್ನು ದೋಸೆ, ಚಪಾತಿ, ರೊಟ್ಟಿಯ ಜತೆಗೆ ತಿನ್ನಲು ಬಹಳ ರುಚಿ. ಮಕ್ಕಳಿಗಂತೂ ಇದು ಅತ್ಯಂತ ಪ್ರಿಯ.

ಇದರ ಪ್ರಮುಖ ಉಪಯೋಗಗಳು: ಇದೊಂದು ಉತ್ತಮ ರಸಾಯನ. ಆಯಸ್ಸನ್ನು ವೃದ್ಧಿ ಮಾಡಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಮಲಬದ್ಧತೆಯನ್ನು ನಿವಾರಿಸುತ್ತದೆ. ಹಸಿವೆ ಮತ್ತು ಜೀರ್ಣಶಕ್ತಿಯನ್ನು ವೃದ್ಧಿ ಮಾಡಿ ಪಿತ್ತವನ್ನು ಶಮನ ಮಾಡುತ್ತದೆ. ವಿಶೇಷವಾಗಿ ಮಕ್ಕಳಿಗೆ ಪುಷ್ಟಿಯನ್ನು ಕೊಡುತ್ತದೆ. ಕೂದಲು ಉದುರುವುದನ್ನು ತಡೆದು ಸೊಂಪಾಗಿ ಬೆಳೆಯಲು ಸಹಾಯಕ. ಹೃದಯದ ಆರೋಗ್ಯಕ್ಕೆ ಹಿತಕರ. ಸುಸ್ತು, ಆಯಾಸವನ್ನು ಕಡಿಮೆ ಮಾಡಿ ಲವಲವಿಕೆಯನ್ನು ನೀಡುತ್ತದೆ.

ಬ್ರಾಹ್ಮೀ ಲೇಹ್ಯ

ಬೇಕಾಗುವ ಪದಾರ್ಥಗಳು: ಒಂದೆಲಗದ ಸೊಪ್ಪು 2 ಬಟ್ಟಲು, ಬೆಲ್ಲ 2 ಬಟ್ಟಲು, ಜೀರಿಗೆ ಪುಡಿ 1 ಚಮಚ, ಧನಿಯ ಪುಡಿ 1 ಚಮಚ, ಒಣದ್ರಾಕ್ಷಿ 1/4 ಬಟ್ಟಲು, ಉತ್ತುತ್ತೆ 1/4 ಬಟ್ಟಲು, ಬಾದಾಮಿ 5ರಿಂದ 6, ಏಲಕ್ಕಿ ಪುಡಿ 1/2 ಚಮಚ, ಗಸಗಸೆ 1 ಚಮಚ, ತುಪ್ಪ 1/2 ಬಟ್ಟಲು.

ಮಾಡುವ ವಿಧಾನ: ಬೆಲ್ಲಕ್ಕೆ ಸ್ವಲ್ಪ ನೀರು ಹಾಕಿ ಕರಗಿಸಿ, ಶೋಧಿಸಿಕೊಳ್ಳಬೇಕು. ಗಸಗಸೆಯನ್ನು ಸ್ವಲ್ಪ ಲಘುವಾಗಿ ಹುರಿದುಕೊಂಡು ಅದಕ್ಕೆ ಒಣದ್ರಾಕ್ಷಿ, ಉತ್ತುತ್ತೆ, ಬಾದಾಮಿ, ಗಸಗಸೆ, ಧನಿಯಾ ಮತ್ತು ಜೀರಿಗೆ ಪುಡಿಯನ್ನು ಒಟ್ಟಿಗೆ ಸೇರಿಸಿ ಸ್ವಲ್ಪ ನೀರು ಬೆರೆಸಿ ನುಣ್ಣಗೆ ರುಬ್ಬಿಕೊಳ್ಳಬೇಕು. ಒಂದೆಲಗವನ್ನು ಬೇರುಸಮೇತ ತೆಗೆದುಕೊಂಡು, ಸ್ವಚ್ಛ ಮಾಡಿ, ಚೆನ್ನಾಗಿ ತೊಳೆದು, ಸಣ್ಣಗೆ ಹೆಚ್ಚಿಕೊಂಡು, ಸ್ವಲ್ಪ ನೀರು ಬೆರೆಸಿ ನುಣ್ಣಗೆ ರುಬ್ಬಿಕೊಳ್ಳಬೇಕು. ನಂತರ ಬಟ್ಟೆಯ ಸಹಾಯದಿಂದ ಅದರ ರಸವನ್ನು ಹಿಂಡಿ ತೆಗೆದು ಇಟ್ಟುಕೊಳ್ಳಬೇಕು.

ಒಂದೆಲಗದ ರಸವನ್ನು ಒಂದು ದಪ್ಪ ತಳದ ಪಾತ್ರೆಗೆ ಹಾಕಿ ಕಾಯಿಸಲು ಇಡಬೇಕು. ಹಸಿವಾಸನೆ ಹೋಗುವವರೆಗೂ ಇದನ್ನು ಕಾಯಿಸತಕ್ಕದ್ದು. ನಂತರ ಕರಗಿಸಿದ ಬೆಲ್ಲವನ್ನು ಹಾಕಿ ಮಧ್ಯಮ ಉರಿಯಲ್ಲಿ ಕಾಯಿಸಬೇಕು. ಒಂದು ಕುದಿ ಬಂದ ಮೇಲೆ, ನುಣ್ಣಗೆ ರುಬ್ಬಿದ ಮಿಶ್ರಣವನ್ನು ಹಾಕಿ ಚೆನ್ನಾಗಿ ತಿರುಗಿಸಿ ನೀರಿನ ಅಂಶವೆಲ್ಲ ಕಡಿಮೆಯಾಗುವವರೆಗೆ ಸಣ್ಣ ಉರಿಯಲ್ಲಿ ಬೇಯಿಸಬೇಕು. ಪದೇ ಪದೇ ಕೈಯಾಡಿಸತಕ್ಕದ್ದು. ಗಟ್ಟಿಯಾಗಿ ಲೇಹದ ಹದಕ್ಕೆ ಬಂದ ನಂತರ ಏಲಕ್ಕಿ ಪುಡಿ ಮತ್ತು ತುಪ್ಪವನ್ನು ಹಾಕಿ ತಳ ಹಿಡಿಯದ ಹಾಗೆ ಮತ್ತೆ ತಿರುಗಿಸಬೇಕು. ನಂತರ ಒಲೆಯಿಂದ ಕೆಳಗಿಳಿಸಿದರೆ ಒಂದೆಲಗದ ಲೇಹ ಸಿದ್ಧ. ಇದನ್ನು ಗಾಜಿನ ಶೀಶೆಯಲ್ಲಿ ಶೇಖರಿಸಿ ಇಟ್ಟುಕೊಳ್ಳಬಹುದು. ಇದನ್ನು ಒಂದು ಚಮಚ ನಿತ್ಯವೂ ಖಾಲಿ ಹೊಟ್ಟೆಯಲ್ಲಿ ಬಿಸಿ ಹಾಲು ಅಥವಾ ಬಿಸಿ ನೀರಿನೊಂದಿಗೆ ಸೇವಿಸುವುದು ಉತ್ತಮ.

ಇದರ ಪ್ರಯೋಜನಗಳು: ಇದು ಮಕ್ಕಳ ಏಕಾಗ್ರತೆ ಮತ್ತು ಜ್ಞಾಪಕ ಶಕ್ತಿಯನ್ನು ಹೆಚ್ಚಿಸುತ್ತದೆ. ಉತ್ತಮ ನಿದ್ದೆಯನ್ನು ನೀಡಿ ನರಗಳ ದುರ್ಬಲತೆಯನ್ನು ಸರಿಪಡಿಸುತ್ತದೆ. ದೇಹಕ್ಕೆ ತಂಪನ್ನು ಎರೆದು ಪಿತ್ತವನ್ನು ಶಮನ ಮಾಡುತ್ತದೆ. ಮಕ್ಕಳಿಗೆ ಪುಷ್ಟಿ ನೀಡಿ ಮಿದುಳಿನ ಕಾರ್ಯವನ್ನು ಚುರುಕುಗೊಳಿಸುತ್ತದೆ

ಮಖಾನ ಲಡ್ಡು

ಬೇಕಾಗುವ ಪದಾರ್ಥಗಳು: ಮಖಾನ (ಕಮಲದ ಬೀಜ) 4 ಬಟ್ಟಲು, ಭತ್ತದ ಅರಳು 1 ಬಟ್ಟಲು, ಒಣಕೊಬ್ಬರಿ 1 ಬಟ್ಟಲು, ಬಾದಾಮಿ 1/2 ಬಟ್ಟಲು, ಒಣದ್ರಾಕ್ಷಿ 1/4 ಬಟ್ಟಲು, ಗೋಡಂಬಿ 1/4 ಬಟ್ಟಲು, ಬೆಲ್ಲ 2 ಬಟ್ಟಲು, ಗಸಗಸೆ 2 ಚಮಚ, ಏಲಕ್ಕಿ ಪುಡಿ 1/2 ಚಮಚ, ತುಪ್ಪ 1 ಬಟ್ಟಲು.

ತಯಾರಿಸುವ ವಿಧಾನ: ಬೆಲ್ಲಕ್ಕೆ ಎರಡು ಬಟ್ಟಲು ನೀರು ಹಾಕಿ ಪಾಕ ಮಾಡಲು ಇಡಬೇಕು. ಮಧ್ಯೆ ಮಧ್ಯೆ ತಿರುಗಿಸುತ್ತಾ ಇರಬೇಕು. ಮಖಾನವನ್ನು ಗರಿಗರಿಯಾಗುವವರೆಗೆ ಸಣ್ಣ ಉರಿಯಲ್ಲಿ ಹುರಿದುಕೊಂಡು ತಣ್ಣಗಾಗಲು ಬಿಡಿ. ಅಂತೆಯೇ, ಭತ್ತದ ಅರಳನ್ನು ಕೂಡ ಲಘುವಾಗಿ ಹುರಿದುಕೊಳ್ಳಬೇಕು. ಒಣಕೊಬ್ಬರಿಯನ್ನು ತೇವಾಂಶ ಹೋಗುವವರೆಗೆ ಬಿಸಿ ಮಾಡಿಕೊಳ್ಳಿ. ಬಾದಾಮಿಯನ್ನು ಸಣ್ಣ ಉರಿಯಲ್ಲಿ ಹುರಿದಿಟ್ಟುಕೊಳ್ಳಬೇಕು. ಎಲ್ಲ ಪದಾರ್ಥಗಳನ್ನು ಬೇರೆ ಬೇರೆಯಾಗಿ ಪುಡಿ ಮಾಡಿಕೊಂಡು ಬಾದಾಮಿಯನ್ನು ಮಾತ್ರ ಸ್ವಲ್ಪ ತರಿತರಿಯಾಗಿ ಪುಡಿ ಮಾಡಿಕೊಳ್ಳಬೇಕು.

ಬೆಲ್ಲ ಒಂದೆಳೆ ಪಾಕ ಬಂದ ಕೂಡಲೇ ಒಲೆಯಿಂದ ಇಳಿಸಿ. ಒಣದ್ರಾಕ್ಷಿ ಮತ್ತು ಗೋಡಂಬಿಯನ್ನು ತುಪ್ಪದಲ್ಲಿ ಕೆಂಪಗಾಗುವವರೆಗೆ ಹುರಿದುಕೊಳ್ಳಬೇಕು. ಹಾಗೆಯೇ, ಗಸಗಸೆಯನ್ನು ಸಹ ಹುರಿದುಕೊಳ್ಳಬೇಕು. ಪುಡಿ ಮಾಡಿಕೊಂಡ ಎಲ್ಲ ಪದಾರ್ಥಗಳನ್ನು ಸೇರಿಸಿಕೊಂಡು, ಹುರಿದಿಟ್ಟುಕೊಂಡ ಒಣದ್ರಾಕ್ಷಿ, ಗೋಡಂಬಿ ಮತ್ತು ಗಸಗಸೆಯನ್ನು ಹಾಕಿ, ಅರ್ಧ ಬಟ್ಟಲು ತುಪ್ಪವನ್ನು ಬಿಸಿ ಮಾಡಿಕೊಂಡು ಹಾಕಿ ಚೆನ್ನಾಗಿ ಮಿಶ್ರಣ ಮಾಡಿಕೊಳ್ಳಿ. ಈಗ ಬೆಲ್ಲದ ಪಾಕವನ್ನು ನಿಧಾನವಾಗಿ ಸೇರಿಸುತ್ತಾ ಇಷ್ಟ ಬಂದ ಗಾತ್ರದ ಉಂಡೆಗಳನ್ನು ಮಾಡಬೇಕು. ಹೀಗೆ ಮಾಡಿದರೆ ಮಖಾನ ಲಡ್ಡು ಸಿದ್ಧ

ಮಖಾನ ಲಡ್ಡುವಿನ ಲಾಭಗಳು: ಇದು ಮಕ್ಕಳಿಗೆ ಉತ್ತಮ ಪುಷ್ಟಿದಾಯಕ ಆಹಾರ. ದೇಹಕ್ಕೆ ಬಲಕರವೂ ಆಗಿದ್ದು ವಾತ-ಪಿತ್ತವನ್ನು ಶಮನ ಮಾಡುತ್ತದೆ. ಇದು ಮೂಳೆ ಮಾಂಸಖಂಡಗಳ ಬೆಳವಣಿಗೆಗೆ ಸಹಾಯಕ.

ಖರ್ಜೂರ ಹಲ್ವಾ

ಬೇಕಾಗುವ ಪದಾರ್ಥಗಳು: ಖರ್ಜೂರ 2 ಬಟ್ಟಲು, ಕ್ಯಾರೆಟ್ 1 ಬಟ್ಟಲು, ಬೆಲ್ಲ 2 ಬಟ್ಟಲು, ಏಲಕ್ಕಿ ಪುಡಿ 1/4 ಚಮಚ, ಬಾದಾಮಿ 1/4 ಬಟ್ಟಲು, ಪಿಸ್ತಾ 1/4 ಬಟ್ಟಲು, ತುಪ್ಪ 1/2 ಬಟ್ಟಲು.

ಮಾಡುವ ವಿಧಾನ: ಮೆತ್ತಗಿರುವ ಖರ್ಜೂರವನ್ನು ತೆಗೆದುಕೊಂಡು ನೀರಿನಲ್ಲಿ ತೊಳೆದುಕೊಳ್ಳಬೇಕು. ಅದರ ಬೀಜವನ್ನು ಬೇರ್ಪಡಿಸಬೇಕು. ಕ್ಯಾರೆಟ್ ಅನ್ನು ಹೋಳುಗಳಾಗಿ ಮಾಡಿಕೊಳ್ಳಬೇಕು. ಈಗ ಖರ್ಜೂರ ಮತ್ತು ಕ್ಯಾರೆಟ್ ಅನ್ನು ನೀರಲ್ಲಿ ಹಾಕಿ ಬೇಯಿಸಿಕೊಳ್ಳಬೇಕು. ನಂತರ ನೀರನ್ನು ಬಸಿದು ಎರಡನ್ನೂ ನುಣ್ಣಗೆ ರುಬ್ಬಿಕೊಳ್ಳಬೇಕು. ಬಾದಾಮಿ ಮತ್ತು ಪಿಸ್ತಾವನ್ನು ಸಣ್ಣದಾಗಿ ಹೆಚ್ಚಿಕೊಂಡು ತುಪ್ಪದಲ್ಲಿ ಹುರಿದಿಟ್ಟುಕೊಳ್ಳಬೇಕು. ಒಂದು ದಪ್ಪ ತಳದ ಪಾತ್ರೆಯಲ್ಲಿ ಎರಡು ಕಪ್ಪು ನೀರನ್ನು ಹಾಕಿ, ಅದಕ್ಕೆ ಬೆಲ್ಲ ಹಾಕಿ, ಮಧ್ಯಮ ಉರಿಯಲ್ಲಿ ಕುದಿಯಲು ಇಡಬೇಕು. ಪಾಕ ಬರುವವರೆಗೂ ಅದನ್ನು ಕಾಯಿಸಿ ಪಾಕ ಬಂದ ಮೇಲೆ ರುಬ್ಬಿದ ಮಿಶ್ರಣವನ್ನು ಹಾಕಿ ಚೆನ್ನಾಗಿ ತಿರುಗಿಸಿಕೊಳ್ಳಬೇಕು. ನಂತರ ಹುರಿದಿಟ್ಟುಕೊಂಡ ಬಾದಾಮಿ, ಪಿಸ್ತಾ ಮತ್ತು ಏಲಕ್ಕಿ ಪುಡಿಯನ್ನು ಹಾಗೂ ತುಪ್ಪವನ್ನು ಹಾಕಿ ಚೆನ್ನಾಗಿ ತಿರುಗಿಸಿ, ತಳ ಬಿಟ್ಟು ಬರುವವರೆಗೂ ತಿರುಗಿಸುತ್ತಿರಬೇಕು. ಹಲ್ವಾದ ಹದಕ್ಕೆ ಬಂದ ಮೇಲೆ ಒಲೆಯಿಂದ ಕೆಳಗಿಳಿಸಿ, ಒಂದು ತಟ್ಟೆಗೆ ತುಪ್ಪ ಸವರಿ, ಅದರ ಮೇಲೆ ಹರಡಬೇಕು. ಅದನ್ನು ಬೇಕಾದ ಆಕಾರಕ್ಕೆ ಕತ್ತರಿಸಿ ತಣ್ಣಗಾಗಲು ಬಿಡಬೇಕು. ಈಗ ರುಚಿಯಾದ ಖರ್ಜೂರದ ಹಲ್ವಾ ಸಿದ್ಧ.

ಮುಖ್ಯ ಉಪಯೋಗಗಳು: ಮಕ್ಕಳ ದೇಹದ ಬೆಳವಣಿಗೆ ಮತ್ತು ಬುದ್ಧಿಶಕ್ತಿಯನ್ನು ಹೆಚ್ಚಿಸುತ್ತದೆ. ಮೂಳೆಗಳಿಗೆ ಬಲವನ್ನು ನೀಡಿ ರಕ್ತವನ್ನು ವೃದ್ಧಿ ಮಾಡುತ್ತದೆ. ಮಲಬದ್ಧತೆಯನ್ನು ನಿವಾರಿಸಿ ಮೂಲವ್ಯಾಧಿಯನ್ನು ಶಮನ ಮಾಡುತ್ತದೆ. ಸುಸ್ತು ಆಯಾಸಗಳನ್ನು ನೀಗಿಸುತ್ತದೆ.

ಆಯುರ್ವೇದದ ಪ್ರಕಾರ, ಚಳಿಗಾಲವು ದೇಹದ ಪೋಷಣೆ ಮತ್ತು ಬಲವರ್ಧನೆಗೆ ಅತ್ಯುತ್ತಮ ಕಾಲ. ಈ ಋತುವಿನಲ್ಲಿ ಮನಸ್ಸು ಮತ್ತು ದೇಹಕ್ಕೆ ಬಲವನ್ನು ನೀಡುವ ಸಾತ್ವಿಕ ಆಹಾರ ಅವಶ್ಯಕ. ಆಮ್ಲಾ ಜಾಮ್, ಬ್ರಾಹ್ಮೀ ಲೇಹ, ಮಖಾನಾ ಲಡ್ಡು, ಖರ್ಜೂರ ಹಲ್ವಾ ಮುಂತಾದ ಖಾದ್ಯಗಳು ಮಕ್ಕಳಿಗೆ ಪೋಷಣೆಯ ಜತೆಗೆ ಸಂತೃಪ್ತಿಯ ಅನುಭವವನ್ನು ಕೊಡುತ್ತವೆ. ಇಂಥ ಆಹಾರಗಳು ಶೀತ ಋತುವಿನ ಅಗ್ನಿಯನ್ನು ಸಮತೋಲನಗೊಳಿಸಿ, ದೇಹವನ್ನು ದೃಢಗೊಳಿಸುತ್ತವೆ. ಹೀಗಾಗಿ, ಈ ಚಳಿಗಾಲದಲ್ಲಿ ಆಯುರ್ವೇದದ ಮಾರ್ಗದರ್ಶನದಂತೆ ಪೋಷಕ ತಿನಿಸುಗಳಿಂದ ಮಕ್ಕಳ ಆರೋಗ್ಯದ ನೆಲೆಯನ್ನು ಬಲಪಡಿಸೋಣ.

ಸಮಾಚಾರ ಸಣ್ಣದಲ್ಲಿ

ಏಕತಾ ದಿವಸ್‌ನಲ್ಲಿ ದೇಶೀ ತಳಿ ಶ್ವಾನ

ಏಕತಾ ನಗರ: ಗುಜರಾತ್ ರಾಜ್ಯದ 'ಏಕತಾ ನಗರ'ದಲ್ಲಿ ಶುಕ್ರವಾರ ನಡೆದ 'ರಾಷ್ಟ್ರೀಯ ಏಕತಾ ದಿನ'ದ ಮೆರವಣಿಗೆಯಲ್ಲಿ ಭಾರತೀಯ ತಳಿಯ ಶ್ವಾನಗಳು ಬಿಎಸ್‌ಎಫ್ ಯೋಧರೊಂದಿಗೆ ಸಾಹಸ ಪ್ರದರ್ಶನ, ಪಥಸಂಚಲನದಲ್ಲಿ ಕಾಣಿಸಿಕೊಂಡವು.



ದೇಶೀ ತಳಿ ಶ್ವಾನಗಳಾದ ಮುಧೋಳ ಮತ್ತು ರಾಮ್‌ಪುರ ಹೌಂಡ್ ತಳಿ ಶ್ವಾನಗಳ ಸಾಹಸ ಪ್ರದರ್ಶನಕ್ಕೆ ಜನರು ಮೆಚ್ಚುಗೆ ಚಪ್ಪಾಳೆ ತಟ್ಟಿದರು. ದೇಶೀ ತಳಿ ಶ್ವಾನಗಳ ಯುದ್ಧತಂತ್ರ ಮತ್ತು ಕಾರ್ಯಾಚರಣೆಯ ಕೌಶಲಗಳನ್ನು ವಿಶೇಷ ಪ್ರದರ್ಶನ ಮೆಚ್ಚುಗೆ ಗಳಿಸಿದೆ. ಇದು ಸ್ವಾವಲಂಬಿ ಮತ್ತು ಹೆಮ್ಮೆಯ ಭಾರತದ ಕೆ 9 ಶಕ್ತಿಯ ಸಂಕೇತವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ದೇಶೀ ತಳಿ ಶ್ವಾನಗಳನ್ನು ಪ್ರಶಂಸಿಸಿದ್ದಾರೆ. ಪ್ರಧಾನಿ ಮೋದಿ ಅವರ ಸೂಚನೆ ಮೇರೆಗೆ ರಾಂಪುರ ಹೌಂಡ್ ಮತ್ತು ಮುಧೋಳ ತಳಿ ಶ್ವಾನಗಳಿಗೆ ತರಬೇತಿ ನೀಡಿ ಗಡಿ ಭಾಗದಲ್ಲಿ ಮತ್ತು ನಕ್ಸಲ್ ನಿಗ್ರಹ ಕಾರ್ಯಾಚರಣೆಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ ಎಂಬುದು ಗಮನಾರ್ಹ.

ಅರಮನೆಯಿಂದ ಆ್ಯಂಡ್ರ್ಯೂ ಹೊರಕ್ಕೆ

ಲಂಡನ್: ಲೈಂಗಿಕ ಕೃತ್ಯಗಳ ಅಪರಾಧಿ ಜೆಫ್ರಿ ಎಪ್‌ಸ್ಟೀನ್ ಜತೆ ಸಂಬಂಧ ಹೊಂದಿದ್ದಾರೆಂಬ ಹಿನ್ನೆಲೆಯಲ್ಲಿ ಪ್ರಿನ್ಸ್ ಆ್ಯಂಡ್ರ್ಯೂ (69) ವಿರುದ್ಧ ಕ್ರಮ ಕೈಗೊಳ್ಳುವಂತೆ ಬಹಳ ಒತ್ತಡ ಕೇಳಿಬಂದಿದ್ದರಿಂದ ಕಿಂಗ್ ಚಾರ್ಲ್ಸ್-3, ಸಹೋದರನ ವಿರುದ್ಧ ಕಠಿಣ ಕ್ರಮವನ್ನೇ ಜರುಗಿಸಿದ್ದಾರೆ.



ಪ್ರಿನ್ಸ್ ಆಂಡ್ರ್ಯೂ ಅವರಿಗೆ ನೀಡಲಾಗಿದದ ಬಿರುದುಗಳನ್ನು ವಾಪಸ್ ಪಡೆದು ಅರಮನೆಯಿಂದಲೇ ಹೊರಹಾಕಿದ್ದಾರೆ. ಈ ವಿಚಾರವನ್ನು ಬಕಿಂಗ್‌ಹ್ಯಾಮ್ ಅರಮನೆಯೇ ಶುಕ್ರವಾರ ಪ್ರಕಟಿಸಿದೆ. ರಾಜಮನೆತನ ತಲೆತಗ್ಗಿಸುವಂತಹ ಲೈಂಗಿಕ ಆಪಾದನೆ ಕೇಳಿಬಂದಿದ್ದರಿಂದ ಕಿಂಗ್ ಚಾರ್ಲ್ಸ್-3ಗೆ ಈ ಕ್ರಮ ಕೈಗೊಳ್ಳುವುದು ಅನಿವಾರ್ಯವಾಯಿತು. ಆಂಡ್ರ್ಯೂವನ್ನು ಇನ್ನು ಮುಂದೆ ಪ್ರಿನ್ಸ್ ಎಂದು ಕರೆಯುವಂತಿಲ್ಲ. ಆಂಡ್ರ್ಯೂ ಮೌಂಟ್‌ಬ್ಯಾಟನ್ ವಿಂಡ್ಸರ್ ಎಂದಷ್ಟೇ ಕರೆಯಬಹುದಾಗಿದೆ. ಅಲ್ಲದೇ, ಆಂಡ್ರ್ಯೂ ಅವರು ವಿಂಡ್ಸರ್ ಕೋಟೆ ಬಳಿಯಿರುವ ರಾಯಲ್ ಲಾಡ್ಜ್ ಭವನವನ್ನು ಖಾಲಿ ಮಾಡಬೇಕಾಗುತ್ತದೆ ಎಂದು ಅರಮನೆ ಮೂಲಗಳು ತಿಳಿಸಿವೆ.

ಪಂಜಾಬಿನಲ್ಲೂ ಕೇಜ್ರಿ ಐಷಾರಾಮಿ ಬಂಗಲೆ

ದೆಹಲಿ: ದೆಹಲಿಯಲ್ಲಿ ಆಮ್ ಆದ್ಮಿ ಪಕ್ಷದ ನಾಯಕ ಅರವಿಂದ್ ಕೇಜ್ರಿವಾಲ್ 'ಶೀಷ್ ಮಹಲ್' ಕಾರಣಕ್ಕೆ ವಿವಾದಕ್ಕೆ ಒಳಗಾಗಿದ್ದರು. ಈಗ ಮತ್ತೊಂದು 'ಶೀಷ್ ಮಹಲ್' ವಿವಾದ 'ಎಎಪಿ' ಸರಕಾರ ಇರುವ ಪಂಜಾಬ್ ರಾಜ್ಯದ ಚಂಡೀಗಢದಲ್ಲೂ ಕೇಳಿಬಂದಿದೆ. ದೆಹಲಿ ಸಿಎಂ ಆಗಿದ್ದಾಗ ಕೇಜ್ರಿವಾಲ್, ತೆರಿಗೆದಾರರ ಹಣದಿಂದ 45 ಕೋಟಿ ರು.ಗಳನ್ನು ಬಳಸಿ ತಮಗೆ ಹಂಚಿಕೆಯಾಗಿದ್ದ ಬಂಗಲೆ ನವೀಕರಿಸಿದ್ದಾರೆ ಎಂಬ ಆರೋಪ ಈ ಹಿಂದೆ ಕೇಳಿಬಂದಿತ್ತು. ಈಗಲೂ ಚಂಡೀಗಢದ ಸೆಕ್ಟರ್ 2ರಲ್ಲಿ ಕೇಜ್ರಿವಾಲ್‌ಗೆ ನೀಡಲಾಗಿದೆ ಎಂದು ಹೇಳಲಾದ ಐಷಾರಾಮಿ ಬಂಗಲೆ ವಿವಾದಕ್ಕೆ ಮೂಲವಾಗಿದೆ. 2 ಎಕರೆಗಳಷ್ಟು ವಿಸ್ತೀರ್ಣದಲ್ಲಿ 7-ಸ್ಟಾರ್ ಶ್ರೇಣಿಯ ಬಂಗಲೆಯನ್ನು ಪಂಜಾಬ್ ಸರಕಾರ ಪಕ್ಷದ ನಾಯಕ ಕೇಜ್ರಿವಾಲ್‌ಗೆ ಮಂಜೂರು ಮಾಡಿದೆ. ಇದನ್ನು ಆಮ್ ಆದ್ಮಿ ಪಕ್ಷ ನಿಯಂತ್ರಿಸುತ್ತದೆ. ಕೇಜ್ರಿವಾಲ್ ಮತ್ತೊಂದು ಭವ್ಯ 'ಶೀಷ್ ಮಹಲ್' ನಿರ್ಮಿಸಿದ್ದಾರೆ ಎಂದು ಬಿಜೆಪಿ ದೆಹಲಿ ಘಟಕ ಟೀಕಿಸಿದೆ.

ಕಡೆಗೂ ಅಫ್ಘಾನಿಸ್ತಾನ, ಪಾಕ್ ಕದನ ವಿರಾಮ

ಇಸ್ತಾನ್‌ಬುಲ್: ಪಾಕಿಸ್ತಾನ ಹಾಗೂ ಅಫ್ಘಾನಿಸ್ತಾನ ಕಡೆಗೂ ಕದನ ವಿರಾಮಕ್ಕೆ ಒಪ್ಪಿಕೊಂಡಿವೆ ಎಂದು ಟರ್ಕಿ ದೇಶದ ವಿದೇಶಾಂಗ ಸಚಿವಾಲಯ ಶುಕ್ರವಾರ ಮಾಹಿತಿ ನೀಡಿದೆ. ಇದೇ ವಿಚಾರವಾಗಿ ಮುಂದಿನ ಸುತ್ತಿನ ಮಾತುಕತೆ ನ.6ರಂದು ನಡೆಯಲಿದೆ ಎಂದು ಸಚಿವಾಲಯದ ವಕ್ತಾರರು ಹೇಳಿದ್ದಾರೆ. ಇಸ್ತಾನ್‌ಬುಲ್‌ನಲ್ಲಿ ಕಳೆದ ವಾರ ನಡೆದಿದ್ದ ಎರಡೂ ದೇಶಗಳ ಸಭೆಯಲ್ಲಿ ಶಾಂತಿ ಮಾತುಕತೆ ವಿಫಲವಾಗಿತ್ತು.

{ಅಶೋಕ್ ಗೆಹ್ಲೋಟ್} ಕಾಂಗ್ರೆಸ್ ನಾಯಕ

ಬಿಹಾರ ವಿಧಾನಸಭೆ ಚುನಾವಣೆಗೆ ಎನ್‌ಡಿಎ ಪ್ರಣಾಳಿಕೆ 'ಸುಳ್ಳುಗಳ ಸರಮಾಲೆ'. ಪ್ರಣಾಳಿಕೆ ಬಿಡುಗಡೆ ಸುದ್ದಿಗೋಷ್ಠಿ ಕೇವಲ 26 ಸೆಕೆಂಡ್‌ನಲ್ಲೇ ಮುಗಿದುಹೋಗಿದೆ. ಏಕೆಂದರೆ, ವೇದಿಕೆಯಲ್ಲಿದ್ದ ನಾಯಕರಿಗೆ ಪತ್ರಕರ್ತರ ಪ್ರಶ್ನೆಗಳನ್ನು ಎದುರಿಸಲು ಹೆದರಿಕೆಯಾಗಿದೆ. ಸಿಎಂ ನಿತೀಶ್ ಕುಮಾರ್ ಮಾತನಾಡಲೇ ಇಲ್ಲ. ಪ್ರಜಾಪ್ರಭುತ್ವಕ್ಕಿದು ಅಪಾಯದ ಸಂಕೇತ.



ಹಾಲಿ ಅಧ್ಯಕ್ಷೆಯೇ ಗೆಲ್ಲುವರೆಂಬ ಮಾಹಿತಿ ಕೇಳಿ ಸಿಡಿದೆದ್ದ ಪ್ರತಿಪಕ್ಷ | ಪ್ರಮುಖ ನಗರಗಳಲ್ಲಿ ಹಿಂಸಾತ್ಮಕ ಪ್ರತಿಭಟನೆ, ವಾಹನಗಳಿಗೆ ಬೆಂಕಿ
ಪೊಲೀಸರ ಮೇಲೆಯೂ ಹಲ್ಲೆ, ಠಾಣೆಗಳಿಗೂ ದಾಳಿ | ಬುಧವಾರದಿಂದಲೇ ಹಲವೆಡೆ ಕರ್ಫ್ಯೂ ಜಾರಿ, ಇಂಟರ್ನೆಟ್ ಸ್ಥಗಿತ

ತಾಂಜೇನಿಯಾದಲ್ಲಿ ಚುನಾವಣಾ ಹಿಂಸೆಗೆ 700 ಬಲಿ

ಆರುಷಾ: ಪೂರ್ವ ಆಫ್ರಿಕಾ ಖಂಡದ ದೇಶ ತಾಂಜೇನಿಯಾದಲ್ಲಿ ಚುನಾವಣೆಗೆ ಸಂಬಂಧಿಸಿದಂತೆ ಮೂರು ದಿನಗಳಿಂದ ಹಿಂಸಾಚಾರ, ಪ್ರತಿಭಟನೆ ನಡೆಯುತ್ತಿದೆ. ಮೂರು ದಿನಗಳ ಹಿಂಸಾಚಾರದಲ್ಲಿ 700 ಜನರು ಹತರಾಗಿದ್ದಾರೆ ಎಂದು ದೇಶದ ಪ್ರಮುಖ ಪ್ರತಿಪಕ್ಷ 'ಛಡೆಮಾ' ಶುಕ್ರವಾರ ಹೇಳಿದೆ.

ದಾರ್ ಎಸ್ ಸಲಾಮ್ ಭಾಗದಲ್ಲಿ 350 ಮಂದಿ ಹಾಗೂ ಮೋಂಝಾ ಭಾಗದಲ್ಲಿ 200ಕ್ಕೂ ಅಧಿಕ ಜನರು ಹಿಂಸೆಯಿಂದ ಕೂಡಿದ ಪ್ರತಿಭಟನೆ, ಹೋರಾಟಗಳಲ್ಲಿ ಸಾವಿಗೀಡಾಗಿದ್ದಾರೆ. ಉಳಿದೆಡೆಯಿಂದಲೂ ನೂರಾರು ಮಂದಿ ಸಾವಿಗೀಡಾಗಿರುವ ಸುದ್ದಿಗಳು ಬರುತ್ತಿವೆ. ಏನಿಲ್ಲವೆಂದರೂ 700ಕ್ಕೂ ಅಧಿಕ ಮಂದಿ ಸಾವಿಗೀಡಾಗಿದ್ದಾರೆ ಎಂದು 'ಛಡೆಮಾ' ಪಕ್ಷದ ವಕ್ತಾರ ಜಾನ್ ಕಿಟೊಕಾ 'ಎಎಫ್‌ಪಿ' ಸುದ್ದಿಸಂಸ್ಥೆಗೆ ಶುಕ್ರವಾರ ಹೇಳಿಕೆ ನೀಡಿದ್ದಾರೆ.

ದೇಶದ ಭದ್ರತಾ ಇಲಾಖೆಯ ಅಧಿಕಾರಿಗಳೂ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಜನರು ಸಾವಿಗೀಡಾಗಿರುವುದನ್ನು ದೃಢಪಡಿಸಿದ್ದಾರೆ. ಟಾಂಜೇನಿಯನ್ ಸೇನೆಯಲ್ಲಿಯೂ ಇದೇ ಮಾತುಗಳು ಕೇಳಿಬರುತ್ತಿವೆ ಎಂದು ಎಎಫ್‌ಪಿ ವರದಿ ಪ್ರಕಟಿಸಿದೆ.

ಪ್ರತಿಭಟನೆ: ತಾಂಜೇನಿಯಾದಲ್ಲಿ ಸಾರ್ವತ್ರಿಕ ಚುನಾವಣೆ ನಡೆಯುತ್ತಿದ್ದು, ಬುಧವಾರ ಮತದಾನವಾಗಿದೆ. ಹಾಲಿ ಅಧ್ಯಕ್ಷೆಯಾದ ಸಮಿಯಾ ಸುಲುಹು ಹಸನ್ ಅವರ ಪರವಾಗಿಯೇ ಈ ಬಾರಿಯೂ ಜನರ ತೀರ್ಪು ಹೊರಬೀಳುವ ಸಾಧ್ಯತೆ ಇದೆ. ಸಮಿಯಾ ನೇತೃತ್ವದ ಆಡಳಿತ ಪಕ್ಷ 'ಛಾಮಾ ಛಾ ಮಪಿಂದುಝಿ'(ಸಿಸಿಎಂ) ಪಕ್ಷವೇ ಈ ಬಾರಿಯೂ ಗೆಲ್ಲಲಿದೆ ಎಂಬ ಮಾತುಗಳು ಬುಧವಾರ ಕೇಳಿಬಂದವು. ಅದರ ಬೆನ್ನಲ್ಲೇ ಪ್ರತಿಪಕ್ಷ 'ಛಡೆಮಾ' ಬೆಂಬಲಿಗರು ಪ್ರತಿಭಟನೆ ಆರಂಭಿಸಿದ್ದಾರೆ. ಇದೇ ಕಾರಣವಾಗಿ ದೇಶದ ವಿವಿಧೆಡೆ ಹಿಂಸಾಚಾರ ಭುಗಿಲೆದ್ದಿದೆ.

ಟಾಂಜೇನಿಯಾದ ಆರುಷಾ ನಗರದಲ್ಲಿ ವಾಹನಗಳು, ಪೀಠೋಪಕರಣಗಳಿಗೆ ಬೆಂಕಿ ಹಚ್ಚಿರುವ ಪ್ರತಿಭಟನಾಕಾರರು.

ಪ್ರತಿಭಟನಾಕಾರರು ಆರುಷಾ, ದಾರ್ ಎಸ್ ಸಲಾಮ್, ಮೋಂಝಾ, ದೊಡೊಮಾ ಮತ್ತಿತರ ನಗರಗಳಲ್ಲಿ ಹಿಂಸಾಚಾರ ಆರಂಭಿಸಿದ್ದಾರೆ. ಪೊಲೀಸ್ ಠಾಣೆಗಳ ಮೇಲೆಯೇ ದಾಳಿ ಮಾಡಿದ್ದಾರೆ. ಪೊಲೀಸ್ ವಾಹನಗಳಿಗೂ ಬೆಂಕಿ ಇಟ್ಟಿದ್ದಾರೆ. ಭದ್ರತಾ ಕಾರ್ಯಕ್ಕೆ ನಿಯೋಜನೆಗೊಂಡಿದ್ದ ಪೊಲೀಸರನ್ನೂ ಅಟ್ಟಾಡಿಸಿಕೊಂಡು ಹೊಡೆದಿದ್ದಾರೆ. ಹಿಂಸಾಚಾರ ವ್ಯಾಪಕವಾಗಿದ್ದರಿಂದ ನೂರಾರು ಜನರ ಸಾವಿಗೆ ಕಾರಣವಾಗಿದೆ ಎಂದು ವರದಿಯಾಗಿದೆ.

ಕರ್ಫ್ಯೂ ಜಾರಿ, ಇಂಟರ್ನೆಟ್ ಸ್ಥಗಿತ

ಹಿಂಸಾಚಾರ ವ್ಯಾಪಕವಾಗುತ್ತಿದ್ದಂತೆಯೇ ತಾಂಜೇನಿಯಾ ಸರಕಾರ ದೇಶದ ಹಲವು ನಗರಗಳಲ್ಲಿ ಕರ್ಫ್ಯೂ ವಿಧಿಸಿದೆ, ಇಂಟರ್ನೆಟ್ ಸಂಪರ್ಕವನ್ನು ಕಡಿತಗೊಳಿಸಿದೆ. ಟಾಂಜೇನಿಯಾದ ಹಲವು ನಗರಗಳಲ್ಲಿ 3ನೇ ದಿನವಾದ ಶುಕ್ರವಾರವೂ ಕರ್ಫ್ಯೂ ಮುಂದುವರಿದಿತ್ತು. ಇಂಟರ್ನೆಟ್ ಸಂಪರ್ಕ ಶುಕ್ರವಾರವೂ ಲಭ್ಯವಿರಲಿಲ್ಲ. ಇದರಿಂದಾಗಿ ವಿವಿಧ ದೇಶಗಳಿಂದ ವರದಿಗಾಗಿ ಆಗಮಿಸಿದ್ದ ಪತ್ರಕರ್ತರಿಗೆ ಸುದ್ದಿಗಳನ್ನು ತಮ್ಮ ಮಾಧ್ಯಮ ಸಂಸ್ಥೆಗಳ ಕೇಂದ್ರ ಕಚೇರಿಗೆ ಮುಟ್ಟಿಸುವುದೇ ಕಷ್ಟವಾಯಿತು. ಮೂರು ದಿನಗಳಾದರೂ ಹಿಂಸಾಚಾರ ಕೊನೆಗೊಂಡಿಲ್ಲ. ರಸ್ತೆಗಳಲ್ಲಿ ಅಲ್ಲಲ್ಲೇ ಅರ್ಧಂಬರ್ಧ ಸುಟ್ಟುಹೋಗಿರುವ ವಾಹನಗಳೇ ಕಾಣಿಸುತ್ತಿವೆ. ಶುಕ್ರವಾರವೂ ಪ್ರತಿಪಕ್ಷಗಳು ಕಾರ್ಯಕರ್ತರು ಪ್ರತಿಭಟನೆ ಮುಂದುವರಿಸಿದ್ದಾರೆ. ಸರಕಾರಿ ಸ್ವತ್ತುಗಳಿಗೆ ಭಾರಿ ಹಾನಿಯಾಗಿದೆ. ರಸ್ತೆ ಬದಿ ನಿಲುಗಡೆಯಾಗಿದ್ದ ವಾಹನಗಳಲ್ಲಿ ಬಹುತೇಕ ವಾಹನಗಳು ಪ್ರತಿಭಟನಾಕಾರರಿಟ್ಟ ಬೆಂಕಿಯಲ್ಲಿ ಸುಟ್ಟುಹೋಗಿವೆ.

ಝಂಝಿಬಾರ್ ಫಲಿತಾಂಶ ಪ್ರಕಟ

ತಾಂಜೇನಿಯಾದಲ್ಲಿನ ಪ್ರವಾಸಿಗರ ಪ್ರಮುಖ ಆಕರ್ಷಣೆಯ ಪ್ರದೇಶವೆನಿಸಿರುವ ಝಂಝಿಬಾರ್ ಪ್ರಾಂತ್ಯದಲ್ಲಿನ ಚುನಾವಣಾ ಫಲಿತಾಂಶ ಶುಕ್ರವಾರ ಹೊರಬಿದ್ದಿದೆ. ಇದು ಅರೆ ಸ್ವಾಯತ್ತ ಪ್ರಾಂತ್ಯವಾಗಿದೆ. ಈ ಪ್ರಾಂತ್ಯದ ಹಾಲಿ ಅಧ್ಯಕ್ಷ ಹುಸೇನ್ ಮಿವಿನಿ ಸಿಸಿಎಂ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಚಲಾವಣೆಯಾದ ಮತಗಳಲ್ಲಿ ಶೇ.78.8ರಷ್ಟು ಮತಗಳನ್ನು ಗಳಿಸಿ ಭರ್ಜರಿ ಜಯಭೇರಿ ಬಾರಿಸಿದ್ದಾರೆ. ಆದರೆ, ಈ ಫಲಿತಾಂಶವನ್ನು ಒಪ್ಪಿಕೊಳ್ಳುವುದಕ್ಕೆ ಪ್ರಮುಖ ಪ್ರತಿಪಕ್ಷ ಎಸಿಟಿ ವಾಝುಲೆಂದೊ ನಿರಾಕರಿಸಿದೆ. ಮತಗಟ್ಟೆಗಳಲ್ಲಿ ಅಕ್ರಮವಾಗಿದೆ. ನಕಲಿ ಮತದಾನದ ಮೂಲಕ ಹಾಲಿ ಅಧ್ಯಕ್ಷ ಗೆಲುವು ತೋರಿಸಿದ್ದಾರೆ. ಈ ಫಲಿತಾಂಶವನ್ನು ಒಪ್ಪಲು ಸಾಧ್ಯವೇ ಇಲ್ಲ ಎಂದು 'ಎಸಿಟಿ-ವಾಝುಲೆಂದೊ' ಪಕ್ಷದ ಹಿರಿಯ ನಾಯಕರೊಬ್ಬರು ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ.

ಶಾಂತಿ ಕಾಯ್ದುಕೊಳ್ಳಿ: ವಿಶ್ವಸಂಸ್ಥೆ

ತಾಂಜೇನಿಯಾದಲ್ಲಿನ ಹಿಂಸಾಚಾರ- 700 ಜನರ ಸಾವಿನ ಸುದ್ದಿ ಕೇಳಿ ಆಘಾತ ವ್ಯಕ್ತಪಡಿಸಿರುವ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ವಿಭಾಗದ ವಕ್ತಾರ ಸೈಫ್ ಮ್ಯಾಗ್ಯಾಂಗೊ, ದಯವಿಟ್ಟು ಶಾಂತಿ ಕಾಪಾಡಿಕೊಳ್ಳಿ. ಹಿಂಸೆಯನ್ನು ತ್ಯಜಿಸಿ ಎಂದು ಮನವಿ ಮಾಡಿದ್ದಾರೆ. ಪ್ರತಿಭಟನೆ ನಿಯಂತ್ರಿಸಲು ಸೇನಾಪಡೆಗಳನ್ನು ಬಳಸಿರುವುದಕ್ಕೆ ಸೈಫ್ ವಿರೋಧ ವ್ಯಕ್ತಪಡಿಸಿದ್ದಾರೆ.

ಆರ್‌ಎಸ್‌ಎಸ್‌ನಿಂದ ಕಾನೂನು ಸಮಸ್ಯೆ-ನಿಷೇಧ ಅಗತ್ಯ: ಖರ್ಗೆ

ದೆಹಲಿ: ದೇಶದಲ್ಲಿ ಕಾನೂನು- ಸುವ್ಯವಸ್ಥೆ ಸಮಸ್ಯೆಗಳನ್ನು ಸೃಷ್ಟಿಸುತ್ತಿರುವ ಹಿಂದೂ ಸಂಘಟನೆಗಳನ್ನು ನಿಷೇಧಿಸ ಬೇಕೆಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶುಕ್ರವಾರ ಹೇಳಿದ್ದಾರೆ.

ಮಾಜಿ ಪ್ರಧಾನಿ ಇಂದಿರಾ ಗಾಂಧಿ 41ನೇ ಪುಣ್ಯತಿಥಿ ಹಾಗೂ ಸರದಾರ್ ವಲ್ಲಭಭಾಯಿ ಪಟೇಲ್ 150ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಉಕ್ಕಿನ ಮನುಷ್ಯ ಮತ್ತು ಉಕ್ಕಿನ ಮಹಿಳೆ ಇಬ್ಬರೂ ದೇಶದ ಏಕತೆ-ಸಮಗ್ರತೆಗೆ ಶ್ರಮಿಸಿದ್ದಾರೆ ಎಂದರು. ಬಿಜೆಪಿ-ಆರ್‌ಎಸ್‌ಎಸ್ ಕಾರಣದಿಂದಲೇ ದೇಶದಲ್ಲಿ ಕಾನೂನು-ಸುವ್ಯವಸ್ಥೆ ಸಮಸ್ಯೆ ಉಂಟಾಗುತ್ತಿದೆ. ಹಾಗಾಗಿ ಹಿಂದೂ ಸಂಘಟನೆಗಳನ್ನು ನಿಷೇಧಿಸಬೇಕು. ಇದು ನನ್ನ ವೈಯಕ್ತಿಕ ಅಭಿಪ್ರಾಯ ಎಂದರು.

1948ರಲ್ಲಿ ಶ್ಯಾಮಪ್ರಸಾದ್ ಮುಖರ್ಜಿ ಅವರಿಗೆ ಸರದಾರ್ ವಲ್ಲಭಬಾಯಿ ಪಟೇಲ್ ಅವರು ಬರೆದ ಪತ್ರವನ್ನು ಉಲ್ಲೇಖಿಸಿದ ಖರ್ಗೆ, ಪಟೇಲರು ಆಗ ಆರ್‌ಎಸ್‌ಎಸ್ ನಿಷೇಧಕ್ಕೆ ಸೂಚಿಸಿದ್ದರು. ಅದು ದೇಶದ ಜಾತ್ಯತೀತ ರಚನೆ ಹಿತಾಸಕ್ತಿಗಾಗಿ ತೆಗೆದುಕೊಂಡ ಹೆಜ್ಜೆಯಾಗಿತ್ತು ಎಂದರು.

ಗಾಂಧಿ-ಗೋಡ್ಸೆ, ಆರ್‌ಎಸ್‌ಎಸ್ ಮತ್ತು 2002ರ ಗಲಭೆ ವಿಚಾರಗಳನ್ನು ಎನ್‌ಸಿಇಆರ್‌ಟಿ ಪಠ್ಯದಿಂದ ತೆಗೆದುಹಾಕುವ ಮೂಲಕ ಮೋದಿ ಸರಕಾರ ಇತಿಹಾಸವನ್ನು ವಿರೂಪಗೊಳಿಸಿದೆ ಎಂದು ಟೀಕಿಸಿದರು. ರಾಜ್ಯ ಅಥವಾ ಕೇಂದ್ರ ಸರಕಾರದ ಸೇವೆಯಲ್ಲಿ ಇರುವಾಗ ಆರ್‌ಎಸ್‌ಎಸ್‌ಗೆ ಕೆಲಸ ಮಾಡಬಾರದು, ಜಮಾತ್-ಎ- ಇಸ್ಲಾಮಿ ಚಟುವಟಿಕೆಗಳಲ್ಲೂ ಭಾಗಿಯಾಗಬಾರದು ಎಂದು ಸರ್ದಾರ್ ವಲ್ಲಭಬಾಯಿ ಪಟೇಲ್ ಅವರೇ ದಶಕಗಳ ಹಿಂದೆಯೇ ಹೇಳಿದ್ದರು. ಆರ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಸರಕಾರಿ ಸಿಬ್ಬಂದಿ ಭಾಗಿ ಆಗುವುದನ್ನು ಪಟೇಲರೇ ನಿಷೇಧಿಸಿದ್ದರು. ಆಗ ಅವರು ಆರ್‌ಎಸ್‌ಎಸ್ ವಿರುದ್ಧ ಹೇರಿದ್ದ ನಿಷೇಧವನ್ನು ನರೇಂದ್ರ ಮೋದಿ ಸರಕಾರ 2024ರಲ್ಲಿ ತೆಗೆದುಹಾಕಿದೆ. ಈಗ ಮತ್ತೆ ನಿಷೇಧ ಹೇರಬೇಕೆಂದು ಒತ್ತಾಯಿಸುವೆ ಎಂದು ಖರ್ಗೆ ಹೇಳಿದ್ದಾರೆ.

ಭಾರತಕ್ಕೇ ಇಡೀ ಕಾಶ್ಮೀರ: ಪಟೇಲ್ ಯತ್ನಕ್ಕೆ ನೆಹರು ತಡೆ

ಕೆವಾಡಿಯ: ಭಾರತದ ಮೊದಲ ಉಪ ಪ್ರಧಾನಿ-ಗೃಹ ಸಚಿವ ಸರ್ದಾರ್ ವಲ್ಲಭಬಾಯಿ ಪಟೇಲ್ ಅವರು ಇಡೀ ಜಮ್ಮು-ಕಾಶ್ಮೀರ ರಾಜ್ಯವನ್ನು ಭಾರತ ಗಣರಾಜ್ಯದಲ್ಲಿ ಸೇರಿಸಲು ಬಯಸಿದ್ದರು. ಆದರೆ ಆಗ ಪ್ರಧಾನಿಯಾಗಿದ್ದ ಜವಹರಲಾಲ್ ನೆಹರೂ ಅದಕ್ಕೆ ಅವಕಾಶ ನೀಡಲಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ನೆನಪಿಸಿಕೊಂಡರು.



ಗುಜರಾತ್ ರಾಜ್ಯದಲ್ಲಿ ಕೆವಾಡಿಯ ಪ್ರದೇಶದಲ್ಲಿನ 'ಏಕತಾ ನಗರ'ದಲ್ಲಿರುವ 'ಸರ್ದಾರ್ ವಲ್ಲಭಬಾಯಿ ಪಟೇಲ್' ಅವರ ಬೃಹತ್ 'ಏಕತಾ ಪ್ರತಿಮೆ' ಬಳಿ ಶುಕ್ರವಾರ ನಡೆದ 'ರಾಷ್ಟ್ರೀಯ ಏಕತಾ ದಿನ' ಆಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಮೋದಿ, ಸರ್ದಾರ್ ವಲ್ಲಭಬಾಯಿ ಪಟೇಲ್ ಅವರು ದೇಶ ಸ್ವಾತಂತ್ರ್ಯಗೊಂಡ ಸಂದರ್ಭ ರಾಜಪ್ರಭುತ್ವದಲ್ಲಿದ್ದ ಎಲ್ಲಾ ರಾಜ್ಯಗಳನ್ನೂ ಒಪ್ಪಿಸಿ 'ಭಾರತ ಗಣತಂತ್ರ' ದೇಶದ ರಚನೆಗೆ ಶ್ರಮಿಸಿದರು. ಅದೇ ವೇಳೆ ಜಮ್ಮು-ಕಾಶ್ಮೀರದ ಇಡೀ ಭಾಗವನ್ನು ಭಾರತದಲ್ಲಿ ಒಗ್ಗೂಡಿಸಲು ಬಯಸಿದ್ದರು. ಆದರೆ ಅವರ ಆಸೆಗೆ ನೆಹರೂ ಅಡ್ಡಬಂದರು. ಬಳಿಕ ಕಾಶ್ಮೀರವನ್ನೇ ಪ್ರತ್ಯೇಕವಾಗಿರಿಸಲಾಯಿತು. ಅದಕ್ಕೇ ಬೇರೆಯದೇ ಸಂವಿಧಾನ ಮತ್ತು ಪ್ರತ್ಯೇಕ ಧ್ವಜ ಬಳಸಿಕೊಳ್ಳಲು ಅವಕಾಶ ಮಾಡಿಕೊಡಲಾಯಿತು. ಅಂದಿನ ಕಾಂಗ್ರೆಸ್ ಸರಕಾರ ಮಾಡಿದ ಈ ಪ್ರಮಾದದಿಂದಾಗಿ ಭಾರತ ದೇಶ ಏಳೂವರೆ ದಶಕಗಳ ಕಾಲ ಬಳಲುವಂತಾಯಿತು ಎಂದರು. ದೇಶ ಸ್ವಾತಂತ್ರ್ಯಗೊಂಡ ಸಂದರ್ಭದಲ್ಲಿ ದೇಶಾದ್ಯಂತ 550ಕ್ಕೂ ಹೆಚ್ಚು ರಾಜಪ್ರಭುತ್ವಗಳಿದ್ದವು. ಅವುಗಳನ್ನೆಲ್ಲಾ ಒಗ್ಗೂಡಿ 'ಸಮಗ್ರ ಭಾರತ' ದೇಶವನ್ನು ರಚಿಸಲು ಸಾಧ್ಯವಾಗಿದ್ದು ಪಟೇಲ್ ಅವರ ನಾಯಕತ್ವದಿಂದ ಎಂದು ಮೋದಿ ಶ್ಲಾಘಿಸಿದರು. ಬೇರಾರಿಂದಲೂ ಸಾಧ್ಯವಾಗದ ಈ ಮಹತ್ ಕಾರ್ಯವನ್ನು ಪಟೇಲ್ ಅವರು ಸಾಧ್ಯವಾಗಿಸಿದರು ಎಂದು ಸ್ಮರಿಸಿದರು.

ಪಟೇಲ್ ಅವರಿಗೆ, 'ಏಕ ಭಾರತ, ಶ್ರೇಷ್ಠ ಭಾರತ' ಎಂಬ ಕಲ್ಪನೆಯಿತ್ತು. ಅದೇ ಅವರಿಗೆ ಅತ್ಯಂತ ಮುಖ್ಯವಾಗಿತ್ತು. ಇತಿಹಾಸ ಬರೆಯುವ ಸಮಯವನ್ನು ವ್ಯರ್ಥ ಮಾಡಬಾರದು, ಆದರೆ ಇತಿಹಾಸವನ್ನು ರಚಿಸಲು ಶ್ರಮಿಸಬೇಕೆಂದು ನಂಬಿದ್ದರು ಎಂದರು.

ರಾಷ್ಟ್ರೀಯ ಏಕತಾ ದಿನ

ಭಾರತದ ಉಕ್ಕಿನ ಮನುಷ್ಯ ಎಂದು ಕರೆಸಿಕೊಳ್ಳುವ ಸರ್ದಾರ ವಲ್ಲಭಬಾಯಿ ಪಟೇಲ್ ಅವರ ಪರಂಪರೆಯನ್ನು ನೆನಪು ಮಾಡಿಕೊಳ್ಳುವ ಸಲುವಾಗಿ ಪ್ರತಿವರ್ಷವೂ ಅ.31ರಂದು 'ರಾಷ್ಟ್ರೀಯ ಏಕತಾ ದಿವಸ್' 2014ರಿಂದಲೂ ಆಚರಿಸಲಾಗುತ್ತಿದೆ. ಏಕತಾ ದಿವಸ್ ಪ್ರತಿಜ್ಞೆಯನ್ನು ಬೋಧಿಸಲು ಮತ್ತು ರಾಷ್ಟ್ರೀಯ ಏಕತಾ ದಿನದ ಮೆರವಣಿಗೆಯಲ್ಲಿ ಪ್ರಧಾನಿ ಮೋದಿ ಅವರೂ ಭಾಗವಹಿಸಿದ್ದರು. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ನೃತ್ಯ-ಸಂಗೀತ ಕಾರ್ಯಕ್ರಮಗಳು ಆಕರ್ಷಕವಾಗಿದ್ದವು.

ರಾಷ್ಟ್ರಪತಿ ಸಂದೇಶ

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಏಕತಾ ದಿವಸ್ ಪ್ರಯುಕ್ತ ದೇಶದ ನಾಗರಿಕರಿಗೆ ಶುಭಕೋರಿದರು. ಬಲವಾದ, ಸಾಮರಸ್ಯ ಮತ್ತು ಅತ್ಯುತ್ತಮ ಭಾರತವನ್ನು ನಿರ್ಮಿಸಲು ಎಲ್ಲರೂ ಸಂಕಲ್ಪ ತೊಡೋಣ ಎಂದು ಕರೆ ನೀಡಿದರು. ಸರ್ದಾರ್ ಪಟೇಲರು ಮಹಾನ್ ದೇಶಭಕ್ತ, ದಾರ್ಶನಿಕ ನಾಯಕ ಮತ್ತು ರಾಷ್ಟ್ರ ನಿರ್ಮಾಪಕರಾಗಿದ್ದರು, ಅವರು ತಮ್ಮ ಅಚಲವಾದ ಸಂಕಲ್ಪ, ಅದಮ್ಯ ಧೈರ್ಯ ಮತ್ತು ಪ್ರವೀಣ ನಾಯಕತ್ವದ ಮೂಲಕ ದೇಶವನ್ನು ಏಕೀಕರಿಸುವ ಐತಿಹಾಸಿಕ ಕಾರ್ಯವನ್ನು ಸಾಧಿಸಿದರು ಎಂದು ಸ್ಮರಿಸಿದರು.

ಅಮೆರಿಕ ರಕ್ಷಣಾ ಸಚಿವ ಪೀಟರ್-ರಾಜನಾಥ್ ಸಿಂಗ್ ಸಹಿ

ಸುಂಕ ಸಮರ ಮಧ್ಯೆ ದಶಕದ ರಕ್ಷಣಾ ಒಪ್ಪಂದ

ಕೌಲಾಲಂಪುರ: 10 ವರ್ಷಗಳ ರಕ್ಷಣಾ ಒಪ್ಪಂದಕ್ಕೆ ಭಾರತ-ಅಮೆರಿಕ ಶುಕ್ರವಾರ ಕೌಲಾಲಂಪುರದಲ್ಲಿ ಸಹಿ ಹಾಕಿವೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಅಮೆರಿಕ ರಕ್ಷಣಾ ಸಚಿವ ಪೀಟರ್ ಹೆಗ್ಸೆತ್ ಕೌಲಾಲಂಪುರದಲ್ಲಿ ನಡೆದ ದ್ವಿಪಕ್ಷೀಯ ಸಭೆಯಲ್ಲಿ ಮಹತ್ವದ ರಕ್ಷಣಾ ಒಪ್ಪಂದಕ್ಕೆ ಸಹಿ ಹಾಕಿದರು. ಇದು ಉಭಯ ರಾಷ್ಟ್ರಗಳ ನಡುವಿನ ಬೆಳೆಯುತ್ತಿರುವ ಕಾರ್ಯತಂತ್ರದ ಸಂಕೇತ ಎಂದು ರಾಜನಾಥ್ ಸಿಂಗ್ ಬಣ್ಣಿಸಿದರು.

ಅಮೆರಿಕಕ್ಕೆ ರಫ್ತಾಗುವ ಭಾರತದ ಸರಕುಗಳ ಮೇಲೆ ಅಮೆರಿಕ ಶೇ.50ರಷ್ಟು ಪ್ರತಿಸುಂಕ ವಿಧಿಸಿರುವುದು ಮತ್ತು ರಷ್ಯಾದಿಂದ ಕಚ್ಚಾತೈಲ ಖರೀದಿಸಬೇಡಿ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒತ್ತಾಯಿಸುತ್ತಿರುವುದರಿಂದ ಎರಡೂ ದೇಶಗಳ ಸಂಬಂಧ ತೀವ್ರ ಒತ್ತಡಕ್ಕೆ ಸಿಲುಕಿದೆ. ಸಂಬಂಧ ಹಾಳಾಗದಂತೆ ತಡೆಯಲು ಉಭಯ ದೇಶಗಳ ಪ್ರಯತ್ನವೇ ಈ ಒಪ್ಪಂದವಾಗಿದೆ ಎನ್ನಲಾಗಿದೆ. 'ಅಮೆರಿಕ-ಭಾರತ ನಡುವಿನ ಪ್ರಮುಖ ರಕ್ಷಣಾ ಪಾಲುದಾರಿಕೆ ಚೌಕಟ್ಟು ಬಿಗಿಗೊಳಿಸಲೆಂದೇ 10 ವರ್ಷಗಳ ಈ ಒಪ್ಪಂದಕ್ಕೆ ಸಹಿ ಹಾಕಿದ್ದೇವೆ. ಇದು ಎರಡೂ ದೇಶಗಳ ರಕ್ಷಣಾ ಪಾಲುದಾರಿಕೆಯಲ್ಲಿ ಹೊಸ ಯುಗ ಸೃಷ್ಟಿಸಲಿದೆ. ದ್ವಿಪಕ್ಷೀಯ ಸಂಬಂಧದ ಪ್ರಮುಖ ಆಧಾರಸ್ತಂಭವಾಗಿರಲಿದೆ ಎಂದು ರಾಜನಾಥ್ ಸಿಂಗ್ ಹೇಳಿದ್ದಾರೆ. ಈ ಒಪ್ಪಂದ ನಮ್ಮ ರಕ್ಷಣಾ ಪಾಲುದಾರಿಕೆ ಮುನ್ನಡೆಸುತ್ತದೆ. ಪ್ರಾದೇಶಿಕ ಸ್ಥಿರತೆಗೆ ಮೂಲಾಧಾರವಾಗಿದೆ ಎಂದು ಅಮೆರಿಕ ರಕ್ಷಣಾ ಸಚಿವ ಹೆಗ್ಸೆತ್ ಹೇಳಿದ್ದಾರೆ.

ಕೌಲಾಲಂಪುರದಲ್ಲಿ ಅಮೆರಿಕ-ಭಾರತ ರಕ್ಷಣಾ ಸಚಿವರಾದ ಪೀಟರ್ ಹೆಗ್ಸೆತ್ ಮತ್ತು ರಾಜನಾಥ್ ಸಿಂಗ್ ಶುಕ್ರವಾರ ಒಪ್ಪಂದಕ್ಕೆ ಸಹಿ ಹಾಕಿದರು.

'ಆಸಿಯಾನ್'ನ ಸದಸ್ಯ ರಾಷ್ಟ್ರಗಳು ಮತ್ತು ಅದರ ಕೆಲ ಪಾಲುದಾರ ದೇಶಗಳನ್ನು ಒಳಗೊಂಡ ಸಭೆಯಲ್ಲಿ ಇಬ್ಬರೂ ನಾಯಕರು ಭಾಗವಹಿಸಿದ್ದಾರೆ.

ಬಿಹಾರ ಮತದಾರರಿಗೆ 'ಎನ್‌ಡಿಎ' ಪ್ರಣಾಳಿಕೆ ಆಕರ್ಷಣೆ

ಕೋಟಿ ಜನಕ್ಕೆ ನೌಕರಿ, ಕೋಟಿ ಲಕ್‌ಪತಿ ದೀದಿ

ಪಟನಾ: ಬಿಜೆಪಿ-ಜೆಡಿಯು ನೇತೃತ್ವದ 'ಎನ್‌ಡಿಎ' ಮೈತ್ರಿಕೂಟ ಶುಕ್ರವಾರ ಬಿಹಾರ ವಿಧಾನಸಭೆ ಚುನಾವಣೆಗೆ ಪ್ರಣಾಳಿಕೆ ಬಿಡುಗಡೆ ಮಾಡಿದೆ. ರಾಜ್ಯದ ಒಂದು ಕೋಟಿ ಯುವಜನರಿಗೆ ಉದ್ಯೋಗ, ಒಂದು ಕೋಟಿ 'ಲಕ್ಷಪತಿ ದೀದಿ' ಸೃಷ್ಟಿ, ನಾಲ್ಕು ನಗರಗಳಲ್ಲಿ ಮೆಟ್ರೊ, ರೈಲು ಸೇವೆ ಮತ್ತು ಏಳು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳ ನಿರ್ಮಾಣದ ಭರವಸೆಯನ್ನೂ ನೀಡಲಾಗಿದೆ.

ಅಲ್ಲದೇ ರಾಜ್ಯದ ವಿವಿಧೆಡೆ 7 ಎಕ್ಸ್‌ಪ್ರೆಸ್ ವೇಗಳು, 10 ಕೈಗಾರಿಕಾ ಪಾರ್ಕ್‌ಗಳು, ಕೆಜಿಯಿಂದ ಪಿಜಿವರೆಗೆ ಗುಣಮಟ್ಟದ ಉಚಿತ ಶಿಕ್ಷಣ ಮತ್ತು ಉನ್ನತ ಶಿಕ್ಷಣ ಪಡೆಯುತ್ತಿರುವ ಎಸ್‌ಸಿ ಸಮುದಾಯದ ವಿದ್ಯಾರ್ಥಿಗಳಿಗೆ ಮಾಸಿಕ 2000 ರು. ವಿದ್ಯಾರ್ಥಿವೇತನ ನೀಡುವುದಾಗಿಯೂ ಪ್ರಣಾಳಿಕೆಯಲ್ಲಿ ಭರವಸೆ ನೀಡಲಾಗಿದೆ.

ಎನ್‌ಡಿಎ ಮೈತ್ರಿಕೂಟ ಮತ್ತೆ ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ, ಬಿಹಾರದಲ್ಲಿ ವಿಶ್ವದರ್ಜೆಯ ವೈದ್ಯಕೀಯ ಕೇಂದ್ರ, ಪ್ರತಿ ಜಿಲ್ಲೆಗೊಂದು ವೈದ್ಯ ಕಾಲೇಜು ಸ್ಥಾಪಿಸುವುದಾಗಿ ಹಾಗೂ ಬಡವರಿಗೆ 5 ಲಕ್ಷ ರು.ವರೆಗೆ ಉಚಿತ ಚಿಕಿತ್ಸೆ ಮತ್ತು ಉಚಿತ ಪಡಿತರ, ಅಲ್ಲದೇ 50 ಲಕ್ಷಕ್ಕೂ ಹೆಚ್ಚು ಮನೆಗಳನ್ನು ಬಡವರಿಗೆ ನಿರ್ಮಿಸಿ ಕೊಡುವುದಾಗಿ 70 ಪುಟಗಳ ಪ್ರಣಾಳಿಕೆಯಲ್ಲಿ ತಿಳಿಸಲಾಗಿದೆ.

ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ, ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ಸಚಿವರಾದ ಜಿತಿನ್‌ರಾಮ್ ಮಾಂಝಿ, ಚಿರಾಗ್ ಪಾಸ್ವಾನ್ ಮತ್ತು ಮೈತ್ರಿಕೂಟದ ಇತರೆ ಪಕ್ಷಗಳ ನಾಯಕರು ಜಂಟಿ ಸುದ್ದಿಗೋಷ್ಠಿಯಲ್ಲಿದ್ದರು.

ಪಟನಾದಲ್ಲಿ ಶುಕ್ರವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಸಿಎಂ ನಿತೀಶ್ ಕುಮಾರ್, ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ಡಿಸಿಎಂ ಸಾಮ್ರಾಟ್ ಚೌಧರಿ, ಕೇಂದ್ರ ಸಚಿವರಾದ ಜಿತಿನ್‌ರಾಮ್ ಮಾಂಝಿ, ಚಿರಾಗ್ ಪಾಸ್ವಾನ್ ಮತ್ತಿತರರು ಎನ್‌ಡಿಎ ಪ್ರಣಾಳಿಕೆ ಬಿಡುಗಡೆ ಮಾಡಿದರು.

2,790 ಭಾರತೀಯರು ಅಮೆರಿಕದಿಂದ ಗಡಿಪಾರು

ದೆಹಲಿ: ಅಮೆರಿಕದಲ್ಲಿ ಅಕ್ರಮವಾಗಿ ವಾಸಿಸುತ್ತಿದ್ದ 2,790 ಭಾರತೀಯ ಪ್ರಜೆಗಳು 2025ರ ಜನವರಿಯಿಂದ ಈವರೆಗೆ ಗಡಿಪಾರಾಗಿ ಬಂದಿದ್ದಾರೆ.

ವಿದೇಶಾಂಗ ಸಚಿವಾಲಯ ವಕ್ತಾರ ರಣಧೀರ್ ಜೈಸ್ವಾಲ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜನರ ವಲಸೆ ವಿಚಾರದಲ್ಲಿ ಭಾರತ-ಅಮೆರಿಕ ನಡುವೆ ಸ್ಥಾಪಿತ ಕಾನೂನು ಮತ್ತು ರಾಜತಾಂತ್ರಿಕ ಕಾರ್ಯವಿಧಾನಗಳನ್ನು ಅನುಸರಿಸಲಾಗುತ್ತದೆ. ಆದರೆ, ಈ ವ್ಯಕ್ತಿಗಳು ಅಮೆರಿಕದ ವಲಸೆ ನಿಯಮ ಮತ್ತು ಮಾನದಂಡಗಳನ್ನು ಪೂರೈಸದೇ ಅಕ್ರಮವಾಗಿ ನುಸುಳಿದ್ದರು. ಅವರೆಲ್ಲರೂ ಭಾರತಕ್ಕೆ ಹಿಂದಿರುಗುವ ಮೊದಲು ಅವರ ದಾಖಲೆ ಪತ್ರಗಳು ಮತ್ತು ರಾಷ್ಟ್ರೀಯತೆ ವಿಚಾರವನ್ನು ಪರಿಶೀಲಿಸಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಬ್ರಿಟನ್‌ನಿಂದಲೂ ಈ ವರ್ಷ 100 ಭಾರತೀಯರನ್ನು ದಾಖಲೆ ಪರಿಶೀಲನೆ ನಂತರ ಗಡೀಪಾರು ಮಾಡಲಾಗಿದೆ ಎಂದರು.

ಇತ್ತೀಚೆಗೆ ಅಮೆರಿಕ ವಲಸೆ ನಿಯಮಗಳನ್ನು ಕಠಿಣಗೊಳಿಸಿದ ಬಳಿಕ ಅಮೆರಿಕಕ್ಕೆ ಅಕ್ರಮವಾಗಿ ನುಸುಳುವ ಭಾರತೀಯರ ಸಂಖ್ಯೆ ಕಡಿಮೆಯಾಗಿದೆ. 2025ರಲ್ಲಿನ ಅಮೆರಿಕಕ್ಕೆ ಭಾರತೀಯ ಅಕ್ರಮ ವಲಸಿಗರ ಸಂಖ್ಯೆ 4 ವರ್ಷಗಳಲ್ಲೇ ಕನಿಷ್ಠ ಮಟ್ಟದಲ್ಲಿದೆ.

2024ರ ಅಕ್ಟೋಬರ್ ಮತ್ತು 2025ರ ಸೆಪ್ಟೆಂಬರ್ ಅವಧಿಯಲ್ಲಿ ಅಮೆರಿಕಕ್ಕೆ ಅಕ್ರಮ ಮಾರ್ಗದಲ್ಲಿ ಪ್ರವೇಶಿಸಲೆತ್ನಿಸಿದ 34,146 ಭಾರತೀಯರನ್ನು ಅಮೆರಿಕ ವಲಸೆ ಅಧಿಕಾರಿ ಬಂಧಿಸಿದ್ದಾರೆ. ಇದಕ್ಕೂ ಹಿಂದಿನ ವರ್ಷದಲ್ಲಿ 90,415 ಬಂಧನವಾಗಿತ್ತು.

ಸಂತ್ರಸ್ತೆ ಜತೆ ವಿವಾಹ: ಪೋಕ್ಸೋ ಶಿಕ್ಷೆ ರದ್ದು

ದೆಹಲಿ: ಅತ್ಯಾಚಾರ ಪ್ರಕರಣದ ಸಂತ್ರಸ್ತೆಯನ್ನೇ ವಿವಾಹವಾಗಿ ಮಗುವಿನ ತಂದೆಯಾಗಿದ್ದ ಆರೋಪಿಗೆ ಸುಪ್ರೀಂ ಕೋರ್ಟ್ ಪೋಕ್ಸೊ ಪ್ರಕರಣವನ್ನೇ ರದ್ದುಗೊಳಿಸುವ ಮೂಲಕ ಶಿಕ್ಷೆಯಿಂದ ವಿನಾಯಿತಿ ನೀಡಿದೆ. ಆ ಮೂಲಕ ದಂಪತಿಗೆ ನೆಮ್ಮದಿಯ ಬದುಕಿಗೆ ದಾರಿ ಮಾಡಿಕೊಟ್ಟಿದೆ. ಪೋಕ್ಸೊ ಕಾಯಿದೆಯಡಿ ಪೋಕ್ಸೊ ನ್ಯಾಯಲಯದಿಂದ ಜೈಲು ಶಿಕ್ಷೆಗೆ ಗುರಿಯಾಗಿದ್ದ ವ್ಯಕ್ತಿಯು ನಂತರದಲ್ಲಿ ಪತ್ನಿ ಜತೆ ಪ್ರೀತಿಯಿಂದ ಸಂಸಾರ ಸಾಗಿಸುತ್ತಿದ್ದ ಸಂಗತಿಯನ್ನು ಸಾಕ್ಷ್ಯಗಳ ಮೂಲಕ ಮನವರಿಕೆ ಮಾಡಿಕೊಂಡ ಸುಪ್ರೀಂ ಕೋರ್ಟ್ ಶಿಕ್ಷೆಯನ್ನೇ ರದ್ದುಗೊಳಿಸಿದೆ. ಆರೋಪಿ ಮತ್ತು ಸಂತ್ರಸ್ತೆ ನಡುವಿನ ದೈಹಿಕ ಸಂಬಂಧ ಸಮ್ಮತಿಯದಾಗಿತ್ತು. ಕಾಮದಿಂದಲ್ಲ, ಪ್ರೇಮದ ಕಾರಣಕ್ಕೆ ಕೃತ್ಯ ನಡೆದಿದೆ ಎಂದು ಅಭಿಪ್ರಾಯಪಟ್ಟ ನ್ಯಾಯಮೂರ್ತಿ ದೀಪಂಕರ ದತ್ತ ಮತ್ತು ನ್ಯಾ.ಎ.ಜಿ.ಮಸೀಹ್ ಅವರ ಪೀಠ ಯುವಕನನ್ನು ಆರೋಪದಿಂದ ಮುಕ್ತಗೊಳಿಸಿದೆ.

ತಮಿಳುನಾಡಿನ ಯುವಕ ಪ್ರೀತಿಸಿದ ಬಾಲಕಿಯೊಂದಿಗೆ ಓಡಿಹೋಗಿ ಲೈಂಗಿಕ ಸಂಪರ್ಕ ಬೆಳೆಸಿದ್ದ. ಬಾಲಕಿಯ ಪೋಷಕರ ದೂರಿನ ಮೇರೆಗೆ ಪೋಕ್ಸೊ ಪ್ರಕರಣ ದಾಖಲಿಸಲಾಗಿತ್ತು. ಆತನಿಗೆ ವಿಚಾರಣಾ ನ್ಯಾಯಾಲಯ 5 ಮತ್ತು 10 ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಲಾಗಿತ್ತು. ಮದ್ರಾಸ್ ಹೈಕೋರ್ಟ್ ಕೂಡಾ 2021ರ ಸೆಪ್ಟೆಂಬರ್‌ನಲ್ಲಿ ತೀರ್ಪು ಎತ್ತಿಹಿಡಿದಿತ್ತು.

ಎಸ್‌ಐಆರ್ ಭಯಕ್ಕೆ 57ರ ವ್ಯಕ್ತಿ ಆತ್ಮಹತ್ಯೆ

ಕೋಲ್ಕತ್ತ: ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯಲ್ಲಿ ಪ್ರದೀಪ್ ಕರ್(57) ಎಂಬಾತ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಪ್ರದೀಪ್ ಸಾವಿಗೂ ಮುನ್ನ ಬರೆದ ಪತ್ರದಲ್ಲಿ 'ಮತದಾರರ ಪಟ್ಟಿ ಪರಿಷ್ಕರಣೆ'(ಎಸ್‌ಐಆರ್) ಮತ್ತು ರಾಷ್ಟ್ರೀಯ ನಾಗರಿಕರ ನೋಂದಣಿ(ಸಿಎಆರ್) ಬಗೆಗಿನ ಆತಂಕವೇ ತನ್ನ ಈ ನಿರ್ಧಾರಕ್ಕೆ ಕಾರಣ ಎಂದು ಬರೆದಿದ್ದಾನೆ ಎನ್ನಲಾಗಿದೆ.



ಕಾಕತಾಳೀಯ ಎನ್ನುವಂತೆ ಭಾರತೀಯ ಚುನಾವಣಾ ಆಯೋಗ ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್) ಆರಂಭಿಸಿದ ಮರುದಿನವೇ ಘಟನೆ ನಡೆದಿರುವುದು ಕುತೂಹಲಕ್ಕೆ ಕಾರಣವಾಗಿದೆ. ಖಾರ್ಡಾದ ಅಗರ್ಪಾರಾ ಅಪಾರ್ಟ್‌ಮೆಂಟ್‌ನಲ್ಲಿರುವ ಕೊಠಡಿಯಲ್ಲಿ ಪ್ರದೀಪ್ ಶವ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಕೊಠಡಿಯಲ್ಲಿ ಒಂದು ಡೈರಿ ಸಿಕ್ಕಿದ್ದು, ಒಂದು ಪುಟದಲ್ಲಿ 'ಎಸ್‌ಐಆರ್' ಮತ್ತು ಸಿಎಆರ್ ತನ್ನ ಆತಂಕಕ್ಕೆ ಕಾರಣ ಎಂದು ಬರೆದಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿರುವುದಾಗಿ ಸ್ಥಳೀಯ ಮಾಧ್ಯಮ ವರದಿ ಮಾಡಿವೆ.

ಆದರೆ, ಕೈಬರಹದ ಸತ್ಯ ತಿಳಿಯಲು ಡೈರಿಯನ್ನು ವಿಧಿವಿಜ್ಞಾನ ಪರೀಕ್ಷೆಗೆ ಕಳುಹಿಸಿಕೊಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಾನೊಬ್ಬನೇ ಏಕೆ ಬೈಗುಳ ಕೇಳಬೇಕು: ಸಚಿವ ಗಡ್ಕರಿ

ದೆಹಲಿ: ರಾಷ್ಟ್ರೀಯ ಹೆದ್ದಾರಿಗಳು ಕಳಪೆಯಾಗಿದ್ದರೆ ನಾನೊಬ್ಬನೇ ಏಕೆ ನಿಂದನೆಗೆ ಒಳಗಾಗಬೇಕು? ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಪ್ರಶ್ನೆ ಮುಂದಿಟ್ಟಿದ್ದಾರೆ.

ಅಲ್ಲದೇ, ರಾಷ್ಟ್ರೀಯ ಹೆದ್ದಾರಿ ನಿರ್ಮಿಸಿದ ಗುತ್ತಿಗೆದಾರ, ನಿರ್ವಹಿಸಿದ ಅಧಿಕಾರಿ ಮತ್ತು ನಿಗಾ ಇರಿಸಬೇಕಿದ್ದ ಇಂಜಿನಿಯರ್‌ಗಳ ಹೆಸರು-ಸಂಪರ್ಕ ವಿವರಗಳಿರುವ ಕ್ಯುಆರ್-ಕೋಡ್ ಅನ್ನು ದೊಡ್ಡ ಬೋರ್ಡ್‌ಗಳಲ್ಲಿ ಅಳವಡಿಸಿ ಹೆದ್ದಾರಿಗಳಲ್ಲಿ ರಸ್ತೆ ಕಳಪೆ ಆಗಿರುವಲ್ಲಿ ಸ್ಥಾಪಿಸಲಾಗುವುದು. ರಸ್ತೆ ದುಃಸ್ಥಿತಿಗೆ ಯಾರು ಕಾರಣ ಎಂಬುದು ಜನರಿಗೂ ತಿಳಿಯುತ್ತದೆ ಎಂದು ಗಡ್ಕರಿ ಹೇಳಿದರು. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಂಚರಿಸುವ ವಾಹನಗಳ ಚಾಲಕರು, ಮಾಲೀಕರು, ಪ್ರಯಾಣಿಕರು ಕಳಪೆ ರಸ್ತೆ ನಿರ್ಮಿಸಿದ್ದು ಯಾರು ಎಂಬುದನ್ನು ತಿಳಿದುಕೊಳ್ಳಲು ಈ ಫಲಕಗಳಿಂದ ಅವಕಾಶವಾಗುತ್ತದೆ ಎಂದಿದ್ದಾರೆ. ವಾಹನ ಚಾಲಕರು ಈ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ ಕಳಪೆ ಕಾಮಗಾರಿಗೆ ಕಾರಣವಾದವರ ಬಗ್ಗೆ ಮಾಹಿತಿ ಪಡೆದು ಅವರನ್ನು ನಿಂದಿಸಬಹುದು ಎಂದಿದ್ದಾರೆ.

ಸಮಾಚಾರ ಸಣ್ಣದಲ್ಲ

ರೋಹಿತ್ ಪರ ಮುಂಬೈ ಸ್ಪಷ್ಟನೆ

ಮುಂಬೈ: ಮುಂದಿನ ಆವೃತ್ತಿಯ ಐಪಿಎಲ್ ಪ್ರಾರಂಭಕ್ಕೆ ಇನ್ನೂ ಸಾಕಷ್ಟು ಸಮಯವಿದೆ. ಇದರ ನಡುವೆಯೇ ಸ್ಟಾರ್ ಬ್ಯಾಟ್ಸ್‌ಮನ್ ರೋಹಿತ್ ಶರ್ಮಾ ಅವರ ಐಪಿಎಲ್ ಭವಿಷ್ಯದ ಬಗ್ಗೆ ಚರ್ಚೆಗಳು

ಆರಂಭವಾಗಿವೆ. ಕಳೆದ ಎರಡು ದಿನಗಳಿಂದ ಅವರು ಮುಂದಿನ ಆವೃತ್ತಿಯಲ್ಲಿ ಮುಂಬೈ ಇಂಡಿಯನ್ಸ್ ತೊರೆದು ಕೋಲ್ಕತ್ತಾ ನೈಟ್ ರೈಡರ್ಸ್ ಫ್ರಾಂಚೈಸಿ ಸೇರುತ್ತಾರೆ ಎಂಬ ಸುದ್ದಿಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿವೆ. ಎರಡು ವರ್ಷಗಳ ಹಿಂದೆ ರೋಹಿತ್ ಅವರನ್ನು ಮುಂಬೈ ನಾಯಕತ್ವದಿಂದ ತೆಗೆದು ಹಾಕಲಾಗಿತ್ತು. ಹಾಗಾಗಿ ಮುಂಬೈ ತೊರೆದು ಮುಂದಿನ ಸೀಸನ್‌ನಲ್ಲಿ ಕೆಕೆಆರ್ ಪರ ಆಡಲು ಬಯಸುತ್ತಿದ್ದಾರೆ ಎಂಬ ಮಾತುಗಳು ಕೇಳಿ ಬರಲಾರಂಭಿಸಿವೆ. ಇದೇ ವಿಚಾರವಾಗಿ ಮುಂಬೈ ಇಂಡಿಯನ್ಸ್ ಪ್ರತಿಕ್ರಿಯೆ ಕೂಡಾ ನೀಡಿದೆ. ಸುದ್ದಿ ವೈರಲ್ ಆಗುತ್ತಿದ್ದಂತೆ ಮುಂಬೈ ಇಂಡಿಯನ್ಸ್ ಫ್ರಾಂಚೈಸಿ ಸಹ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಂಚಿಕೊಂಡು ಎಲ್ಲಾ ವದಂತಿಗಳಿಗೆ ಅಂತ್ಯ ಹಾಡಿದೆ. ಮುಂಬೈ ಲೋಗೋ ಹೊಂದಿರುವ ರೋಹಿತ್ ಅವರ ಫೋಟೋವನ್ನು ಸಹ ಹಂಚಿಕೊಂಡಿದೆ.

ಎರಡನೇ ಟಿ20 ಪಂದ್ಯ | ತೀವ್ರ ಕುಸಿತ ಕಂಡ ಭಾರತದ ಬ್ಯಾಟಿಂಗ್ | ಆಸ್ಟ್ರೇಲಿಯಾಕ್ಕೆ 1-0 ಮುನ್ನಡೆ

ಆಸೀಸ್ ವಿರುದ್ಧ ಭಾರತಕ್ಕೆ ಸೋಲು

ಮೆಲ್ಬೋರ್ನ್: ಪ್ರವಾಸಿ ಭಾರತದ ವಿರುದ್ಧ ಇಲ್ಲಿ ನಡೆದ 2ನೇ ಟಿ20 ಪಂದ್ಯದಲ್ಲಿ ಆಸ್ಟ್ರೇಲಿಯಾ 4 ವಿಕೆಟ್ ಜಯ ಸಾಧಿಸಿದೆ. ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡವು ಅತ್ಯಂತ ಕಳಪೆ ಬ್ಯಾಟಿಂಗ್ ಪ್ರದರ್ಶನ ತೋರಿ ಕೇವಲ 125ಕ್ಕೆ ಆಲೌಟ್ ಆಯಿತು. ಅಭಿಷೇಕ್ ಶರ್ಮಾ 68 ರನ್ ಗಳಿಸಿದರೆ, ಹರ್ಷಿತ್ ರಾಣಾ 35 ರನ್ ಗಳಿಸಿದರು. 126 ರನ್ ಗುರಿಯನ್ನು ಬೆಂಬತ್ತಿದ ಆಸ್ಟ್ರೇಲಿಯಾ ತಂಡ ಕೇವಲ 13.2 ಓವರ್‌ಗಳಲ್ಲಿ 6 ವಿಕೆಟ್ ಗೆಲುವಿನ ಗುರಿ ತಲುಪಿತು.

ಆಸ್ಟ್ರೇಲಿಯಾದ ಮೊದಲ ವಿಕೆಟ್‌ಗೆ ಮಾರ್ಷ್-ಹೆಡ್ ಜೋಡಿ 51 ರನ್‌ಗಳ ಭರ್ಜರಿ ಜತೆಯಾಟ ನೀಡಿತು. ಟ್ರಾವಿಸ್ ಹೆಡ್ 15 ಎಸೆತಗಳಲ್ಲಿ 3 ಬೌಂಡರಿ, 1 ಸಿಕ್ಸರ್ ಸಹಿತ 28 ರನ್ ಗಳಿಸಿ ವರುಣ್ ಚಕ್ರವರ್ತಿಗೆ ವಿಕೆಟ್ ಒಪ್ಪಿಸಿದರು. ನಂತರ ನಾಯಕ ಮಾರ್ಷ್ ಜೊತೆ ಸೇರಿದ ಇಂಗ್ಲಿಸ್ 38 ರನ್ ಸೇರಿಸಿದರು. ಈ ಹಂತದಲ್ಲಿ ಕಣಕ್ಕಿಳಿದ ಕುಲ್ದೀಪ್ ಯಾದವ್ 26 ಎಸೆತಗಳಲ್ಲಿ 2 ಬೌಂಡರಿ, 4 ಸಿಕ್ಸರ್‌ಗಳ ಸಹಿತ 46 ರನ್ ಗಳಿಸಿದ್ದ ಮಾರ್ಷ್ ವಿಕೆಟ್ ಪಡೆದರು. ಆ ನಂತರ ಆಸ್ಟ್ರೇಲಿಯಾ ದಿಢೀರ್ ಕುಸಿತ ಅನುಭವಿಸಿತು.

ನಂತರ ಕ್ರೀಸ್‌ಗೆ ಬಂದ ಟಿಮ್ ಡೇವಿಡ್ ಕೇವಲ 2 ಎಸೆತಗಳಲ್ಲಿ 1 ರನ್ ಗಳಿಸಿ ವರುಣ್ ಚಕ್ರವರ್ತಿಗೆ ವಿಕೆಟ್ ಒಪ್ಪಿಸಿದರು. ಜೋಸ್ ಇಂಗ್ಲಿಸ್ ಹಾಗೂ ಮಿಚೆಲ್ ಓವೆನ್ 22 ರನ್‌ಗಳ ಜತೆಯಾಟ ಪ್ರದರ್ಶಿಸಿದರು. 20 ಎಸೆತಗಳಲ್ಲಿ 20 ರನ್ ಗಳಿಸಿದ ಇಂಗ್ಲಿಸ್, ಕುಲ್ದೀಪ್ ಯಾದವ್ ಬೌಲಿಂಗ್‌ನಲ್ಲಿ ಎಲ್‌ಬಿಡಬ್ಲ್ಯು ಆದರು. ಅವರ ಬೆನ್ನಲ್ಲೇ ಬುಮ್ರಾ ಬೌಲಿಂಗ್‌ನಲ್ಲಿ 10 ಎಸೆತಗಳಲ್ಲಿ 14 ರನ್ ಗಳಿಸಿದ್ದ ಓವೆನ್ ಹಾಗೂ ಮ್ಯಾಥ್ಯೂ ಶಾರ್ಟ್ ಖಾತೆ ತೆರೆಯದೇ ಬ್ಯಾಕ್ ಟು ಬ್ಯಾಕ್ ಎಸೆತದಲ್ಲಿ ಔಟ್ ಆದರು. ಸ್ಟೋಯಿನಿಸ್ ಅಜೇಯ

6 ರನ್ ಗಳಿಸಿ ಆಸೀಸ್ ತಂಡವನ್ನು ಗೆಲುವಿನ ಗಡಿ ದಾಟಿಸಿದರು. ಆಸ್ಟ್ರೇಲಿಯಾ 13.2 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು ಗೆಲುವಿನ ಗಡಿ ದಾಟಿತು. ಭಾರತದ ಪರ ಜಸ್ಪ್ರೀತ್ ಬುಮ್ರಾ 26 ರನ್‌ಗೆ 2 ವಿಕೆಟ್, ವರುಣ್ ಚಕ್ರವರ್ತಿ 23 ರನ್‌ಗೆ 2 ವಿಕೆಟ್, ಕುಲ್ದೀಪ್ ಯಾದವ್ 45 ರನ್‌ಗೆ 2 ವಿಕೆಟ್ ಪಡೆದರಾದರೂ ಭಾರತದ ಸೋಲನ್ನು ತಪ್ಪಿಸಲು ಆಗಲಿಲ್ಲ. 5 ಪಂದ್ಯಗಳ ಸರಣಿಯಲ್ಲಿ ಆಸ್ಟ್ರೇಲಿಯಾ 1-0 ಮುನ್ನಡೆ ಪಡೆದುಕೊಂಡಿದೆ.

ಭಾರತ ಕಳಪೆ ಬ್ಯಾಟಿಂಗ್: ಟಾಸ್ ಸೋತು ಬ್ಯಾಟಿಂಗ್ ಮಾಡಿದ ಭಾರತ ತಂಡ 18.4 ಓವರ್‌ಗಳಲ್ಲಿ 126 ರನ್‌ಗಳಿಗೆ ಆಲೌಟ್ ಆಯಿತು. ಅಭಿಷೇಕ್ ಶರ್ಮಾ 37 ಎಸೆತಗಳಲ್ಲಿ 8 ಬೌಂಡರಿ, 2 ಸಿಕ್ಸರ್‌ಗಳ ಸಹಿತ 68 ರನ್ ಗಳಿಸಿದರು. ಅವರ ಜತೆಯಾದ ಹರ್ಷಿತ್ ರಾಣಾ 33 ಎಸೆತಗಳಲ್ಲಿ 3 ಬೌಂಡರಿ, 1 ಸಿಕ್ಸರ್ ಸಹಿತ 35 ರನ್ ಗಳಿಸಿದರು. ಭಾರತದ ಉಳಿದ ಯಾವ ಬ್ಯಾಟರ್ ಕೂಡ ಎರಡಂಕಿ ಮೊತ್ತ ದಾಟಲಿಲ್ಲ.

ಉಪನಾಯಕ 1, ಸಂಜು ಸ್ಯಾಮ್ಸನ್ 2, ನಾಯಕ ಸೂರ್ಯಕುಮಾರ್ 1, ತಿಲಕ್ ವರ್ಮಾ 0, ಅಕ್ಷರ್ ಪಟೇಲ್ 7, ಶಿವಂ ದುಬೆ 4 ಗಳಿಸಿದರೆ ಕುಲ್ದೀಪ್ ಯಾದವ್ ಮತ್ತು ಜಸ್ಪ್ರೀತ್ ಬುಮ್ರಾ ಕೂಡಾ ಖಾತೆ ತೆರೆಯದೇ ಔಟ್ ಆದರು.

ಜೋಶ್ ಹೇಜಲ್‌ವುಡ್ 13 ರನ್‌ಗೆ 3 ವಿಕೆಟ್, ಕ್ಸೇವಿಯರ್ ಬಾರ್ಟ್ಲೆಟ್ 39 ರನ್‌ಗೆ 2 ವಿಕೆಟ್, ನೇಥನ್ ಎಲ್ಲಿಸ್ 21ರನ್‌ಗೆ 2 ವಿಕೆಟ್, ಮಾರ್ಕಸ್ ಸ್ಟೋಯಿನಿಸ್ 24 ರನ್‌ಗೆ 1 ವಿಕೆಟ್ ಪಡೆದು ಭಾರತ ತಂಡವನ್ನು ಅಲ್ಪಮೊತ್ತಕ್ಕೆ ನಿಯಂತ್ರಿಸಿದರು.

ಜೀಸಸ್‌ಗೆ ಥ್ಯಾಂಕ್ಸ್ ಹೇಳಿ ಕಣ್ಣೀರಿಟ್ಟ ಜೆಮಿಮಾ ರೊಡ್ರಿಗಸ್

ದೇವರಿಗೆ ನಾನು ಚಿರಋಣಿ

ಮುಂಬೈ: ಗುರುವಾರ ಆಸ್ಟ್ರೇಲಿಯಾ ವಿರುದ್ಧ ಮಹಿಳಾ ಏಕದಿನ ವಿಶ್ವಕಪ್ ಸೆಮಿಫೈನಲ್ ಪಂದ್ಯದಲ್ಲಿ ಭಾರತ ತಂಡದ ಗೆಲುವಿನ ಕಾರಣರಾದ ಜೆಮಿಮಾ ರೊಡ್ರಿಗಸ್ ಪಂದ್ಯದ ಬಳಿಕ ಭಾವುರಾಗಿದ್ದಾರೆ. ಆನಂದಭಾಷ್ಪ ಸುರಿಸುತ್ತಾ ತಮ್ಮ ಅನುಭವವನ್ನು ಹೇಳಿಕೊಂಡಿದ್ದು, 'ಈ ಟೂರ್ನಿಯಲ್ಲಿ ನಾನು ಆತಂಕದಿಂದ ಪ್ರತಿದಿನ ಅಳುತಿದ್ದೆ ಹಾಗೂ ಆತಂಕಕ್ಕೆ ಒಳಗಾಗುತ್ತಿದ್ದೆ. ಸೆಮಿ ಫೈನಲ್‌ನಲ್ಲಿ ನಾನು ಮಾಡು ಇಲ್ಲವೇ ಮಡಿ ಪ್ರದರ್ಶನವನ್ನು ತೋರಲೇಬೇಕಾಗಿತ್ತು. ನಾನು ಜೀಸಸ್‌ಗೆ ಧನ್ಯವಾದ ಹೇಳಲು ಬಯಸುತ್ತೇನೆ. ಪಂದ್ಯದ ಕೊನೆಯ ಹಂತದಲ್ಲಿ ನಾನು ಸಾಕಷ್ಟು ಪ್ರಯತ್ನ ಮಾಡುತ್ತಾ ದೇವರ ಮೇಲೆ ಹೊರೆ ಹಾಕಿದ್ದೆ. ನಾನೆಂದೂ ದೇವರಿಗೆ ನಾನು ಚಿರ ಋಣಿ' ಎಂದು ಹೇಳಿದ್ದಾರೆ.

'ಹರ್ಮನ್‌ಪ್ರೀತ್ ಕೌರ್ ಕ್ರೀಸ್‌ಗೆ ಬಂದಾಗ, ಒಂದು ಒಳ್ಳೆಯ ಜತೆಯಾಟ ಬೇಕೆಂದು ಮನವರಿಕೆಯಾಗಿತ್ತು. ಬಳಿಕ ಪ್ರತಿಯೊಂದು

ಎಸೆತದಲ್ಲಿಯೂ ದೀಪ್ತಿ ನನ್ನ ಬಳಿ ಮಾತನಾಡುತ್ತಾ ಪ್ರೋತ್ಸಾಹ ನೀಡುತ್ತಿದ್ದರು. ನಾನು ಮುಂದುವರಿಯಲು ಕಷ್ಟಪಡಲಾರಂಭಿಸಿದಾಗ, ನನ್ನ ಸಹ ಆಟಗಾರ್ತಿಯರು ಪ್ರೋತ್ಸಾಹಿಸುತ್ತಿದ್ದರು. ನಾನು ಒಬ್ಬಳೇ ಏನನ್ನೂ ಮಾಡಿಲ್ಲ. ಗ್ಯಾಲರಿಯಲ್ಲಿ ಕುಳಿತಿದ್ದ ಪ್ರತಿಯೊಬ್ಬರೂ ನನ್ನನ್ನು ಹುರಿದುಂಬಿಸುತ್ತಿದ್ದರು ಹಾಗೂ ಪ್ರೋತ್ಸಾಹ ನೀಡುತ್ತಿದ್ದರು, ಇದರಿಂದ ನಾನು ಪ್ರೇರಣೆಗೊಂಡು ಆಡುತ್ತಿದ್ದೆ, ಆ ಮೂಲಕ ಭಾರತ ಗೆದ್ದು ಪಂದ್ಯಶ್ರೇಷ್ಠ ಪುರಸ್ಕೃತಳಾದೆ' ಎಂದು ಜೆಮಿಮಾ ರೊಡ್ರಿಗಸ್ ತಿಳಿಸಿದ್ದಾರೆ.

ಕರಾವಳಿ ಮೂಲದ ಜೆಮಿಮಾ

ಆಸೀಸ್ ವಿರುದ್ಧ ದಾಖಲೆಯ ಭಾರತದ ಗೆಲುವಿಗೆ ಕಾರಣರಾದ ಜೆಮಿಮಾ ರಾಡ್ರಿಗಸ್ ಅವರು ಕರಾವಳಿ ಮೂಲದವರು. ಅವರ ಈ ಸಾಧನೆ ಕಂಡು ಕನ್ನಡಿಗರು ಪುಳಕಿತರಾಗಿದ್ದಾರೆ. ಅದೂ ಅಲ್ಲದೆ ತುಳುನಾಡು ಮತ್ತು ಕರಾವಳಿ ಕರ್ನಾಟಕದ ಭಾಗದವರೂ ಹೆಮ್ಮೆಪಟ್ಟಿದಾರೆ. ಜೆಮಿಮಾ ಮುಂಬೈನಲ್ಲಿ ಹುಟ್ಟಿ ಬೆಳೆದರೂ, ಅವರಿಗೆ ಕರಾವಳಿಯ ನಂಟು ಬಹಳ ಇದೆ. ಅವರ ತಂದೆ ಇವಾನ್ ರೋಡ್ರಿಗಸ್ ಮಂಗಳೂರಿನವರು. ಆಕೆಯ ತಾಯಿ ಲ್ಯಾವಿಟಾ ರೋಡ್ರಿಗಸ್ ಉಡುಪಿಯವರಾಗಿದ್ದಾರೆ.

ನೆಲದಿಂದ 1,148 ಎತ್ತರದಲ್ಲಿ ಫುಟ್ಬಾಲ್ ಕ್ರೀಡಾಂಗಣ ನಿರ್ಮಿಸಲು ಯೋಜನೆ

ಸೌದಿ: ಗಾಳಿಯಲ್ಲಿ ತೇಲುವ ಸ್ಟೇಡಿಯಂ

ರಿಯಾದ್ (ಸೌದಿ): ನೆಲದಿಂದ ಸುಮಾರು 1,148 ಅಡಿಗಳ ಎತ್ತರದಲ್ಲಿ ಒಂದು ಫುಟ್ಬಾಲ್ ಕ್ರೀಡಾಂಗಣವನ್ನು ನಿರ್ಮಿಸಲು ಸೌದಿ ಅರೇಬಿಯಾ ಸರಕಾರ ನಿರ್ಧರಿಸಿದೆ. ಇದನ್ನು ಗಾಳಿಯಲ್ಲಿ ತೇಲುವ ಕ್ರೀಡಾಂಗಣದಂತೆ ನಿರ್ಮಿಸಬೇಕೆಂಬುದು ಅಲ್ಲಿನ ಸರಕಾರದ ಕನಸಾಗಿದ್ದು ದೊಡ್ಡ ಬಜೆಟ್‌ನಲ್ಲಿ ನಿರ್ಮಿಸುವ ಯೋಜನೆ ಹಮ್ಮಿಕೊಂಡಿದೆ.

ಸೌದಿ ಅರೇಬಿಯಾಕ್ಕೆ 2034 ಫುಟ್ಬಾಲ್ ವಿಶ್ವಕಪ್ ಆತಿಥ್ಯ ಸಿಕ್ಕಿದೆ. ಅಷ್ಟರೊಳಗಾಗಿ ಗಾಳಿಯಲ್ಲಿ ತೇಲುವ ಕ್ರೀಡಾಂಗಣವನ್ನು



ನಿರ್ಮಿಸಿ ಅದರಲ್ಲೇ 2034ರ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಯ ಫೈನಲ್ ಪಂದ್ಯವನ್ನು ಆಡಿಸಲು ಸೌದಿ ಅರೇಬಿಯಾ ಸರಕಾರ ಕನಸು ಕಾಣುತ್ತಿದೆ. ಸ್ಟೇಡಿಯಂ ನಿರ್ಮಾಣದ ಪ್ರಾಥಮಿಕ ಹಂತದಲ್ಲಿ ಎರಡು ದೊಡ್ಡ ಆಕಾಶದೆತ್ತರದ ಗೋಪುರಗಳನ್ನು ನಿರ್ಮಿಸಲಾಗುತ್ತದೆ. ಆ ಎರಡು ಗೋಪುರಗಳ ನಡುವೆ ಕ್ರೀಡಾಂಗಣವನ್ನು ಕಟ್ಟಿ ಅದನ್ನು ತೊಟ್ಟಿಲ ರೀತಿಯಲ್ಲಿ ಆ ಎರಡೂ ಗೋಪುರಗಳ ನಡುವೆ ತೂಗಿಹಾಕಲಾಗುತ್ತದೆ. ಸೌದಿಯಲ್ಲಿ ಆಗಾಗ ಬೀಸುವ ಬಿರುಗಾಳಿ ತಡೆದು ಒಂದಿಷ್ಟೂ ಅಲುಗಾಡದಂತೆ ನಿರ್ಮಿಸಲೂ ಉದ್ದೇಶಿಸಲಾಗಿದೆ.

ಸುಮಾರು 46,000 ಮಂದಿ ಕೂರಬಹುದಾದಷ್ಟು ಆಸನಗಳನ್ನು ಆ ಸ್ಟೇಡಿಯಂನಲ್ಲಿ ಅಳವಡಿಸಲಾಗುತ್ತದೆ. ಎರಡೂ ಗೋಪುರಗಳಲ್ಲಿ ಹೈ ಸ್ಪೀಡ್ ಲಿಫ್ಟ್‌ಗಳು, ಆ ಗೋಪುರದಿಂದ ಈ ಗೋಪುರಕ್ಕೆ ಸಾಗಲು ಆಟೋಮೇಟೆಡ್ ಪಾಡ್‌ಗಳನ್ನು ನಿರ್ಮಿಸಲಾಗುತ್ತದೆ. ಕ್ರೀಡಾಂಗಣದ ಲೈಟಿಂಗ್‌ನಿಂದ ಹಿಡಿದು ಗೋಪುರಗಳ ಲಿಫ್ಟ್‌ಗಳು, ಆಟೋಮೇಟೆಡ್ ಪಾಡ್‌ಗಳಿಗೆ ಬೇಕಾಗುವ ವಿದ್ಯುತ್ತನ್ನು ಸೌರಶಕ್ತಿ ಹಾಗೂ ನವೀಕರಿಸಬಹುದಾದ ಇಂಧನಗಳಿಂದ ಪಡೆಯಲು ಸರಕಾರ ನಿರ್ಧರಿಸಲಾಗಿದೆ.

ಕೊಹ್ಲಿ, ರೋಹಿತ್, ತೆಂಡೂಲ್ಕರ್, ಕೋಚ್ ಗಂಭೀರ್ ಸೇರಿದಂತೆ ಹಲವರಿಂದ ಮೆಚ್ಚುಗೆ

ಮಹಿಳಾ ತಂಡಕ್ಕೆ ಪ್ರಶಂಸೆಯ ಮಹಾಪೂರ

ನವಿ ಮುಂಬೈ: ಇಲ್ಲಿನ ಡಿ.ವೈ ಪಾಟೀಲ್ ಕ್ರೀಡಾಂಗಣದಲ್ಲಿ ನಡೆದ ರೋಮಾಂಚಕ ಮಹಿಳಾ ವಿಶ್ವಕಪ್ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾವನ್ನು ಸೋಲಿಸುವ ಮೂಲಕ ಭಾರತ ಮಹಿಳಾ ತಂಡ ಫೈನಲ್ ಪ್ರವೇಶಿಸಿತು. ತಂಡದ ಈ ಸಾಧನೆಗೆ ಭಾರತ ಪುರುಷರ ತಂಡದ ಮಾಜಿ ನಾಯಕರಾದ ವಿರಾಟ್ ಕೊಹ್ಲಿ , ರೋಹಿತ್ ಶರ್ಮ, ಸಚಿನ್ ತೆಂಡೂಲ್ಕರ್, ಕೋಚ್ ಗೌತಮ್ ಗಂಭೀರ್ ಸೇರಿ ದಂತೆ ಹಲವರು ಮೆಚ್ಚುಗೆ ಸೂಚಿಸಿದ್ದಾರೆ, ಜತೆಗೆ ಚೊಚ್ಚಲ ವಿಶ್ವಕಪ್ ಗೆಲುವಿಗೆ ಶುಭ ಹಾರೈಸಿದ್ದಾರೆ.

'ಆಸ್ಟ್ರೇಲಿಯಾದಂತಹ ಬಲಿಷ್ಠ ಎದುರಾಳಿಯ

ವಿರುದ್ಧ ನಮ್ಮ ತಂಡಕ್ಕೆ ಸಿಕ್ಕ ಗೆಲುವು ನಿಜಕ್ಕೂ ಅದ್ಭುತ. ಆಟಗಾರ್ತಿಯರ ಅದ್ಭುತ ಚೇಸಿಂಗ್ ಮತ್ತು ಇಡೀ ಪಂದ್ಯದಲ್ಲಿ ಜೆಮಿಮಾ ಅವರ ಅಸಾಧಾರಣ ಪ್ರದರ್ಶನ. ಟೀಮ್ ಇಂಡಿಯಾ ಆಟ ಶಭಾಷ್' ಎಂದು ವಿರಾಟ್ ಕೊಹ್ಲಿ ಟ್ವೀಟ್ ಮಾಡಿದ್ದಾರೆ.

'ಜೆಮಿ ರೋಡ್ರಿಗಸ್ ಮತ್ತು ಹರ್ಮನ್‌ಪ್ರೀತ್ ಕೌರ್ ಜತೆಯಾಟ ನಿಜಕ್ಕೂ ಅದ್ಭುತ. ಮಹಿಳಾ ತಂಡಕ್ಕೆ ಅಭಿನಂದನೆಗಳು. ಚೆಂಡಿನೊಂದಿಗೆ ಆಟವ ನ್ನು ಜೀವಂತವಾಗಿರಿಸಿಕೊಂಡಿದ್ದೀರಿ' ಎಂದು ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಟ್ವೀಟ್ ಮಾಡಿದ್ದಾರೆ.

ಭಾನುವಾರದಂದು ನಡೆಯಲಿರುವ ಫೈನಲ್‌ನಲ್ಲಿ ಭಾರತ ತಂಡವು ದಕ್ಷಿಣ ಆಫ್ರಿಕಾ ವಿರುದ್ಧ ಸೆಣಸಲಿದೆ. ಗುಂಪು ಹಂತದಲ್ಲಿ ದಕ್ಷಿಣ ಆಫ್ರಿಕಾ ತಂಡವು ಹರ್ಮನ್‌ಪ್ರೀತ್ ಕೌರ್ ನೇತೃತ್ವದ ತಂಡವನ್ನು ಸೋಲಿಸಿತ್ತು. ಆದರೆ ಆಸ್ಟ್ರೇಲಿಯಾ ವಿರುದ್ಧದ ಗೆಲುವಿನ ಬಳಿಕ ಮಹಿಳಾ ತಂಡದ ಆತ್ಮವಿಶ್ವಾಸ ಇಮ್ಮಡಿಯಾಗಿದೆ.

ನಾರಾಯಣನ ಕಾಡಿದ ಕೋಣ



ಚಿತ್ರ : ಕೋಣ
ನಿರ್ದೇಶಕ : ಎಸ್.ಹರಿಕೃಷ್ಣ
ನಿರ್ಮಾಣ : ಕುಪ್ಪಂಡಾಸ್ ಪ್ರೊಡಕ್ಷನ್
ತಾರಾಗಣ : ಕೋಮಲ್, ತನಿಶಾ, ರಿತ್ವಿ, ಕೀರ್ತಿರಾಜ್ ಮುಂತಾದವರು.
ರೇಟಿಂಗ್ : ★★★

ಅದೊಂದು ಹಳ್ಳಿ ಅಲ್ಲಿ ಇಂದಿಗೂ ಹಳೆಯ ಸಂಪ್ರಾದಾಯಗಳು ಮುಂದುವರಿದಿರುತ್ತವೆ. ಅಲ್ಲಿನ ಹಬ್ಬದಲ್ಲಿ ಕೋಣವನ್ನು ಬಲಿಕೊಡುವಾಗ ಪೊಲೀಸರು ತಡೆದಿರುತ್ತಾರೆ. ಮುಂದೆ ಹಬ್ಬ ಮಾಡಲೇಬೇಕು ಕೋಣವನ್ನು ಬಲಿ ಕೊಡಲೇಬೇಕು ಇಲ್ಲದಿದ್ದರೆ ಊರಿಗೆ ಕೆಡುಕಾಗುತ್ತದೆ ಎಂದು ಆ ಊರಿನ ಹಿರಿಯರು ನಿರ್ಧರಿಸಿರುತ್ತಾರೆ. ಅದಕ್ಕೆ ತಕ್ಕಂತೆ ಕೋಣವೂ ಸಿದ್ಧವಾಗಿರುತ್ತದೆ. ಇತ್ತ ಹಳ್ಳಿ ಅಂದ ಮೇಲೆ ಮನರಂಜನೆ ಬೇಡವೇ, ಹಾಗಾಗಿ ನಾಟಕ ಕಂಪನಿಯನ್ನು ಕರೆಸುತ್ತಾರೆ. ಹಬ್ಬದ ನಿಮಿತ್ತಾ ತಮ್ಮೂರಿಗೆ ಬಂದವರು ಕಂಕಣ ಕಟ್ಟಿಕೊಂಡು ಹಬ್ಬ ಮುಗಿಯುವವರೆಗೂ ಅಲ್ಲಿಯೇ ಇರಬೇಕು. ಇಲ್ಲವಾದರೆ ಅವರಿಗೂ ಕೆಡುಕಾಗುತ್ತದೆ ಎಂಬ ನಂಬಿಕೆ ಇರುತ್ತದೆ. ಇತ್ತ ನಾಟಕದವರ ಜತೆಗೆ ನಾರಾಯಣ ಆ ಹಳ್ಳಿಗೆ ಸೇರುತ್ತಾನೆ. ತನ್ನ ಪಾಡಿಗೆ ಜೋತಿಷ್ಯ ಹೇಳಿಕೊಂಡು ಬದುಕುತ್ತಿದ್ದ ನಾರಾಯಣ ನಾಟಕ ಮಂಡಳಿಯವರ ಜತೆಗೆ ಸೇರಿ ಇಕ್ಕಟ್ಟಿಗೆ ಸಿಲುಕುತ್ತಾನೆ. ಈ ನಡುವೆಯೇ ಬಲಿ ಕೊಡಲು ತಂದಿದ್ದ ಕೋಣವೂ ಕಾಣೆಯಾಗುತ್ತದೆ. ಹಾಗಾಗಿ ಮುಂದೆ ಆ ಊರಿನಲ್ಲಿ ಹಲವು ವಿಚಿತ್ರ ಘಟನೆಗಳು ಕಾಣಿಸಿಕೊಳ್ಳುತ್ತವೆ. ಅದು ಯಾಕೆ, ಏನು ಎಂಬುದನ್ನು ಚಿತ್ರ ನೋಡಿಯೇ ತಿಳಿಯಬೇಕು. ಕೋಣ ಹಾರರ್, ಥ್ರಿಲ್ಲರ್ ಬೆರೆತ ಸಿನಿಮಾವಾಗಿದ್ದು, ಅದಕ್ಕೆ ಕಾಮಿಡಿ ಬೆರೆಸಿ ಎಲ್ಲರಿಗೂ ಮೆಚ್ಚುಗೆಯಾಗುವಂತೆ ಕಟ್ಟಿಕೊಡುವಲ್ಲಿ ನಿರ್ದೇಶಕ ಎಸ್.ಹರಿಕೃಷ್ಣ ಯಶಸ್ವಿಯಾಗಿದ್ದಾರೆ. ಜ್ಯೋತಿಷಿ ನಾರಾಯಣನಾಗಿ ಕೋಮಲ್ ಅದ್ಭುತ ಅಭಿನಯ ತೋರಿದ್ದಾರೆ. ಈ ಹಿಂದಿನ ಸಿನಿಮಾಗಳಿಗಿಂತ ಕೋಮಲ್ ವಿಭಿನ್ನವಾಗಿ ಕಾಣಿಸಿಕೊಂಡಿದ್ದಾರೆ. ತನಿಶಾ ಕುಪ್ಪಂಡ ಸಹಜಾಭಿನಯದ ಮೂಲಕ ಮನಗೆಲ್ಲುತ್ತಾರೆ. ರಿತ್ವಿ ಜಗದೀಶ್ ತುಂಟಾಟದ ಹುಡುಗಿಯಾಗಿ ಇಷ್ಟವಾಗುತ್ತಾರೆ. ಕೀರ್ತಿರಾಜ್ ಊರಿನ ಮುಖಂಡರಾಗಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಕಾಮಿಡಿ ಕಲಾವಿದರ ದಂಡೇ ಚಿತ್ರದಲ್ಲಿದೆ. ಒಟ್ಟಾರೆ ಕೋಣ ಎಲ್ಲರೂ ಕುಳಿತು ನೋಡಬಹುದಾದ ಕಾಮಿಡಿ ಜತೆಗೆ ಥ್ರಿಲ್ಲರ್ ಬೆರೆತ ಚಿತ್ರವಾಗಿದೆ.

ಸಾಲಗಾರರ ಸಹಕಾರ ಸಂಘದಿಂದ ಬಂದ ಗಾನ

ಚಂದನವನದಲ್ಲಿ ವಿಭಿನ್ನ ಶೀರ್ಷಿಕೆಯ ಸಿನಿಮಾಗಳು ತೆರೆಗೆ ಬರುತ್ತಿವೆ. ಅವುಗಳಲ್ಲಿ ಸಾಲಗಾರರ ಸಹಕಾರ ಸಂಘವೂ ಒಂದು. ಈ ಚಿತ್ರದ ಹಾಡು ಬಿಡುಗಡೆಯಾಗಿದ್ದು, ಸಂಗೀತ ಪ್ರಿಯರನ್ನು ಸೆಳೆಯುತ್ತಿದೆ.

ಡಾ.ಶ್ರೀಧರ್ ಗುರೂಜಿ ಮತ್ತು ನಟಿ ಬೃಂದಾ ಆಚಾರ್ಯ ಹಾಡು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಚಿತ್ರದಲ್ಲಿ ಐದು ಹಾಡುಗಳಿದ್ದು, ವಿ.ಹರಿಕೃಷ್ಣ, ಜೋಗಿ ಪ್ರೇಮ್, ನವೀನ್ ಸಜ್ಜು ಹಾಗೂ ಎಂ.ಎಂ. ತ್ಯಾಗರಾಜ್ ಹಾಡಿಗೆ ದನಿಯಾಗಿದ್ದಾರೆ.

ಪಂಟ್ರು, ಗೆಳೆಯ ಚಿತ್ರವನ್ನು ನಿರ್ದೇಶನ ಮಾಡಿರುವ ಆರ್. ವಿಕ್ರಮ್ ಧನಂಜಯ್ ಕಥೆ, ಚಿತ್ರಕಥೆ, ಸಂಭಾಷಣೆ, ಸಾಹಿತ್ಯ ಬರೆದು ನಿರ್ದೇಶನ ಮಾಡಿದ್ದಾರೆ. ಎಸ್‌ಎನ್‌ಎಲ್ ಎನ್‌ಎಸ್ ಎಂಟರ್‌ಟೇನರ್ಸ್ ಹಾಗೂ ಹವಿಶ್ ಸಿನಿ ಕ್ರಿಯೇಶನ್ಸ್ ಬ್ಯಾನರ್‌ನಲ್ಲಿ ಎ. ಕುಮರೇಶ್ ಮತ್ತು ಸುನೀಲ್ ಕುಮಾರ್ ಒಟ್ಟಾಗಿ ಚಿತ್ರ ನಿರ್ಮಾಣ ಮಾಡಿದ್ದಾರೆ.

ಸಾಲ ಕೊಡಿಸುವ ಕೆಂಪೇಗೌಡನಾಗಿ ಕಾಮಿಡಿ ಕಿಲಾಡಿಗಳು ಖ್ಯಾತಿಯ ಲೋಕೇಶ್ ನಟಿಸಿದ್ದು, ಸಾಲಗಾರನಾಗಿ ಜಾಲಿ ಮಾಡಿ ವ್ಯಥೆ ಪಡುವ ಪಾತ್ರದಲ್ಲಿ ಪ್ರವೀಣ್ ಕುಮಾರ್ ಕಾಣಿಸಿಕೊಂಡಿದ್ದಾರೆ. ಪೂಜಾ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಉಳಿದಂತೆ ರಂಗಾಯಣ ರಘು, ಹೊನ್ನವಳ್ಳಿ ಕೃಷ್ಣ, ಲಕ್ಷ್ಮಿ ಸಿದ್ದಯ್ಯ ಮುಂತಾದವರು ತಾರಾಗಣದಲ್ಲಿದ್ದಾರೆ.

ನಮ್ಮ ಚಿತ್ರದ ಶೀರ್ಷಿಕೆ ನೋಂದಣಿ ಮಾಡಿಸಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದಾಗ ಸಕರಾತ್ಮಕ, ನಕರಾತ್ಮಕ ಪ್ರತಿಕ್ರಿಯೆಗಳು ಬಂದವು. ಇದನ್ನು ಗಮನಿಸಿ ಒನ್‌ಲೈನ್ ಸ್ಟೋರಿ ಸಿದ್ದಪಡಿಸಿಕೊಂಡೆ. ನಾಲ್ಕು ನಿರುದ್ಯೋಗಿ ಯುವಕರು ಕಾರಣ ಇಲ್ಲದೆ ಸಾಲ ಮಾಡುತ್ತಾರೆ. ನಂತರ ಬಡ್ಡಿ ಕಟ್ಟಲು ಮತ್ತೆ ಸಾಲದ ಹಿಂದೆ ಹೋಗುತ್ತಾರೆ. ಕೊನೆಗೆ ಅಸಹಾಯಕ ಪರಿಸ್ಥಿತಿ ಬಂದಾಗ ತಮ್ಮಂತೆ ಸಾಲ ಮಾಡಿರುವವರನ್ನು ಒಗ್ಗೂಡಿಸಿ ಸಂಘ ಶುರು ಮಾಡಿ ಸರಕಾರಕ್ಕೆ ಬೇಡಿಕೆ ಸಲ್ಲಿಸುತ್ತಾರೆ. ಅದು ಏನು, ಅದಕ್ಕೆ ಸರಕಾರವು ಯಾವ ರೀತಿ ಸ್ಪಂದನೆ ಕೊಡುತ್ತದೆ ಎಂಬುದನ್ನು ಸಿನಿಮಾ ನೋಡಿ ತಿಳಿಯಬೇಕು ಎನ್ನುತ್ತಾರೆ ನಿರ್ದೇಶಕ ವಿಕ್ರಮ್ ಧನಂಜಯ್.

ಛಾಯಾಗ್ರಹಣ ಅನಿರುದ್ದ್, ಸಂಕಲನ ಗಣೇಶ್ ನಿರ್ಚಾಲ್, ಶೇಷಾಚಲ ಕುಲಕರ್ಣಿ ಅವರದಾಗಿದೆ. ಬೆಂಗಳೂರು, ತೀರ್ಥಹಳ್ಳಿ, ಚಿಕ್ಕಮಗಳೂರಿನ ಸುಂದರ ತಾಣಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ಜನವರಿಗೆ ಚಿತ್ರ ತೆರೆಗೆ ಬರಲಿದೆ.

ಮಹಾಕಾಳಿಯಾದ ಭೂಮಿ ಶೆಟ್ಟಿ

ಹನುಮಾನ್ ಸಿನಿಮಾ ನಿರ್ದೇಶಿಸಿ ಸೈ ಎನಿಸಿಕೊಂಡಿರುವ ಪ್ರಶಾಂತ್ ವರ್ಮಾ ಸಾಲು ಸಾಲು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಈ ನಡುವೆಯೇ ಸೂಪರ್ ಹೀರೊ ಯೂನಿವರ್ಸ್‌ನ ಮೂರನೇ ಸಿನಿಮಾ ಘೋಷಣೆ ಮಾಡಿದ್ದಾರೆ. ಇದು ಭಾರತದ ಮೊದಲ ಮಹಿಳಾ ಸೂಪರ್ ಹೀರೊ ಕಥೆಯನ್ನು ಒಳಗೊಂಡಿದ್ದು, ಮಹಾಕಾಳಿ ಶೀರ್ಷಿಕೆಯಲ್ಲಿ ಸಿನಿಮಾ ಸೆಟ್ಟೇರಿದೆ. ಈ ಚಿತ್ರದ ಫಸ್ಟ್ ಲುಕ್ ಅನಾವರಣವಾಗಿದೆ.

ಚಿತ್ರದಲ್ಲಿ ಕುಂದಾಪುರದ ಬೆಡಗಿ ಭೂಮಿ ಶೆಟ್ಟಿ ಮಹಾಕಾಳಿ ಅವತಾರವೆತ್ತಿದ್ದಾರೆ. ಫಸ್ಟ್ ಲುಕ್‌ನಲ್ಲಿ ಭೂಮಿ ಶೆಟ್ಟಿ ರೌದ್ರಾವತಾರ ತಾಳಿದ್ದಾರೆ. ಮುಖವನ್ನು ಕೆಂಪು ಹಾಗೂ ಚಿನ್ನದ ಬಣ್ಣದಿಂದ ಅಲಂಕಾರಗೊಳಿಸಲಾಗಿದೆ. ಸಾಂಪ್ರದಾಯಿಕ ಆಭರಣಗಳನ್ನು ತೊಟ್ಟು ದೈವಿಕ ಅನುಭವ ನೀಡುವ ಗೆಟಪ್‌ನಲ್ಲಿ ಭೂಮಿ ಕಾಣಿಸಿಕೊಂಡಿದ್ದಾರೆ.

ಮಹಾಕಾಳಿ ಸಿನಿಮಾಗೆ ಪ್ರಶಾಂತ್ ಕಥೆ ಬರೆದಿದ್ದು, ಮಹಿಳಾ ನಿರ್ದೇಶಕಿ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿರುವುದು ವಿಶೇಷ. ಈ ಹಿಂದೆ ಮಾರ್ಟಿನ್ ಲೂಥರ್ ಕಿಂಗ್ ಚಿತ್ರ ನಿರ್ದೇಶಿಸಿದ್ದ ಪೂಜಾ ಅಪರ್ಣಾ ಕೊಲ್ಲೂರು, ಮಹಾಕಾಳಿಯ ಸಾರಥ್ಯ ವಹಿಸಿಕೊಂಡಿದ್ದಾರೆ.

ಪಶ್ಚಿಮ ಬಂಗಾಳದ ಆರಾಧ್ಯ ದೈವವಾಗಿರುವ ಕಾಳಿಯ ಹಿನ್ನೆಲೆ, ಅಲ್ಲಿನ ನೆಲದ ಸಂಸ್ಕೃತಿಯನ್ನು ಸಿನಿಮಾ ರೂಪದಲ್ಲಿ ಕಟ್ಟಿಕೊಡಲಾಗುತ್ತಿದೆ. ಆರ್‌ಕೆಡಿ ಸ್ಟುಡಿಯೋಸ್ ಬ್ಯಾನರ್‌ನಲ್ಲಿ ರಮೇಶ್ ದುಗ್ಗಲ್ ಮಹಾಕಾಳಿ ಸಿನಿಮಾವನ್ನು ನಿರ್ಮಾಣ ಮಾಡುತ್ತಿದ್ದಾರೆ. ಮಹಾಕಾಳಿ ಭಾರತೀಯ ಭಾಷೆ ಮಾತ್ರವಲ್ಲದೆ ಇತರ ವಿದೇಶಿ ಭಾಷೆಗಳಲ್ಲಿಯೂ ರಿಲೀಸ್ ಆಗಲಿದೆ.

ಕಿರುತೆರೆಯ ಧಾರಾವಾಹಿ ಹಾಗೂ ಸಿನಿಮಾಗಳಲ್ಲಿ ನಟಿಸಿ ಮನಗೆದ್ದಿರುವ ನಟ ರಾಜೇಶ್ ಧ್ರುವ, ಪೀಟರ್ ಚಿತ್ರದ ಮೂಲಕ ನಾಯಕನಾಗಿ ಎಂಟ್ರಿಕೊಡುತ್ತಿದ್ದಾರೆ. ಈಗಾಗಲೆ ಪೋಸ್ಟರ್ ಹಾಗೂ ಹಾಡಿನ ಮೂಲಕ ನಿರೀಕ್ಷೆ ಹೆಚ್ಚಿಸಿರುವ ಪೀಟರ್ ಚಿತ್ರದ ಟೀಸರ್ ಬಿಡುಗಡೆಯಾಗಿದೆ. ಸಸ್ಪೆನ್ಸ್, ಥ್ರಿಲ್ಲರ್ ಡ್ರಾಮಾ ಹಾಗೂ ಪ್ರೇಮಕಥೆಯ ಜತೆಗೆ ಫ್ಯಾಮಿಲಿ ಕಂಟೆಂಟ್ ಇದ್ದು, ಜನಪ್ರಿಯ ಚೆಂಡೆ ಮೇಳವನ್ನು ಟೀಸರ್‌ನಲ್ಲಿ ಕಟ್ಟಿಕೊಡಲಾಗಿದೆ. ಪ್ರತಿಮಾ ನಾಯಕ್, ಜಾನ್ವಿ ರಾಯಲ, ರಘು ಪಾಂಡೇಶ್ವರ ಹೊಸ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. ರಾಮ ನಾಡಗೌಡ, ವರುಣ್ ಪಟೇಲ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

ದೂರದರ್ಶನ ಚಿತ್ರ ಖ್ಯಾತಿಯ ಸುಕೇಶ್ ಶೆಟ್ಟಿ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದು, ಈ ಬಾರಿ ಸುಕೇಶ್ ಸೆನ್ಸಿಟಿವ್ ಸಸ್ಪೆನ್ಸ್ ಡ್ರಾಮಾ ಕಥಾಹಂದವರನ್ನು ಪ್ರೇಕ್ಷಕರಿಗೆ ಉಣಬಡಿಸಲಿದ್ದಾರೆ. ಈಗ ಬಿಡುಗಡೆಯಾಗಿರುವ ಟೀಸರ್ ಸಿನಿಮಾದ ಬಗ್ಗೆ ಮತ್ತಷ್ಟು ಕುತೂಹಲ ಹೆಚ್ಚುವಂತೆ ಮಾಡಿದೆ. ರವಿ ಹೀರೆಮಠ್ ಹಾಗೂ ರಾಕೇಶ್ ಹೆಗಡೆ ವೃದ್ಧಿ ಸ್ಟುಡಿಯೋಸ್ ಬ್ಯಾನರ್‌ನಲ್ಲಿ ಪೀಟರ್ ಸಿನಿಮಾವನ್ನು ನಿರ್ಮಿಸಿದ್ದಾರೆ. ಗುರುಪ್ರಸಾದ್ ನರ್ನಾಡ್ ಛಾಯಾಗ್ರಹಣ, ನವೀನ್ ಶೆಟ್ಟಿ ಸಂಕಲನ, ??ದೇವರಾಜ್ ಕಲಾ ನಿರ್ದೇಶನ ಈ ಚಿತ್ರಕ್ಕಿದೆ. ಪೀಟರ್ ಪ್ಯಾನ್ ಇಂಡಿಯಾ ಸಿನಿಮಾವಾಗಿ ರಿಲೀಸ್ ಆಗಲಿದೆ.

ಪೀಟರ್ ಟೀಸರ್ ರಿಲೀಸ್

ಸುಲಭದಲ್ಲಿ ದುಡ್ಡು ಮಾಡಲು ಬಹುತೇಕರು ಅಡ್ಡದಾರಿ ಹಿಡಿಯುತ್ತಾರೆ ಅದರಲ್ಲಿ ಬೆಟ್ಟಿಂಗ್ ದಂಧೆಯೂ ಒಂದು. ಬೆಟ್ಟಿಂಗ್ ಲೋಕದ ಕಥೆ ವ್ಯಥೆಯನ್ನೇ ಬ್ರ್ಯಾಟ್ ಹೊತ್ತು ಬಂದಿದೆ. ಆತ ಕೃಷ್ಟಿ, ಪೊಲೀಸ್ ಪೇದೆ ಮಹಾದೇವಯ್ಯನ ಮಗ. ಶಿಸ್ತಿನ ಸಿಪಾಯಿಯಾದ ಅಪ್ಪನಿಗೆ, ಅದಕ್ಕೆ ತದ್ವಿರುದ್ಧವಾದ ಮಗ. ಕೃಷ್ಟಿ ಚಿಕ್ಕಂದಿನಲ್ಲೇ ಇಸ್ಪೀಟ್ ಚಟ ಹತ್ತಿಸಿಕೊಂಡಿರುತ್ತಾನೆ. ಚಾಲಾಕಿಯಾದ ಕೃಷ್ಟಿ, ಗೆದ್ದು ಸಾಕಷ್ಟು ಹಣವನ್ನು ಜೇಬಿಗಿಳಿಸಿಕೊಳ್ಳುತ್ತಿರುತ್ತಾರೆ. ಹಾಗಾಗಿ ಹಣದ ಆಸೆಯಿಂದ ಇಸ್ಪೀಟ್‌ನತ್ತಲೇ ಹೆಚ್ಚಿನ ಗಮನ ಇರುತ್ತದೆ. ಆದರೆ ಹಾಗೋ ಹೀಗೋ ಅವರ ಅಜ್ಜಿಯ ಒತ್ತಾಯಕ್ಕೆ ಮಣಿದು ಬೆಟ್ಟಿಂಗ್‌ನಿಂದ ದೂರವಿರಲು ನಿರ್ಧಾರ ಮಾಡುತ್ತಾನೆ. ಬಳಿಕ ಡೆಲಿವರಿ ಬಾಯ್ ಆಗಿ ಕೆಲಸಕ್ಕೆ ಸೇರಿ ಸಿಗುವ ಸಂಬಳದಲ್ಲಿಯೇ ಸಂತೃಪ್ತನಾಗಿರುತ್ತಾನೆ. ಈ ನಡುವೆ ಒಂದು ಘಟನೆ ನಡೆಯುತ್ತದೆ. ಅದಿರಿಂದ ಜೀವನದಲ್ಲಿ ಹಣ ಎಷ್ಟು ಮುಖ್ಯ ಎಂಬುದನ್ನು ತಿಳಿದುಕೊಂಡು ಮತ್ತೆ ಬೆಟ್ಟಿಂಗ್‌ನತ್ತ ಮುಖ ಮಾಡುತ್ತಾನೆ. ಅಷ್ಟಕ್ಕೂ ಆ ಘಟನೆ ಏನು, ಅಲ್ಲಿಂದ ಹೇಗೆ ಬೆಟ್ಟಿಂಗ್ ಲೋಕದಲ್ಲಿ ಮುಳಗುತ್ತಾನೆ ಅದರಿಂದ ಯಾವೆಲ್ಲಾ ಸಮಸ್ಯೆಗಳನ್ನು ಎದಿರಿಸುತ್ತಾನೆ

ಬೆಟ್ಟಿಂಗ್ ಲೋಕದಲ್ಲಿ ನರಳಾಟ

ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು.

ಕೌಸಲ್ಯಾ ಸುಪ್ರಜಾ ರಾಮ ಚಿತ್ರದಲ್ಲಿ ಪ್ರಾಮಾಣಿಕ ಮಗನ ಕಥೆ ಹೇಳಿದ್ದ ನಿರ್ದೇಶಕ ಶಶಾಂಕ್, ಬ್ರ್ಯಾಟ್‌ನಲ್ಲಿ ಅಪ್ರಾಮಾಣಿಕ ಮಗನ ಕಥೆ ಹೇಳಿದ್ದಾರೆ. ಹೆಚ್ಚಾಗಿ ಲವ್, ಸೆಂಟಿಮೆಂಟ್ ಸ್ಟೋರಿಯನ್ನೇ ಹೆಣೆಯುತ್ತಿದ್ದ ಶಶಾಂಕ್, ಬ್ರ್ಯಾಟ್‌ನಲ್ಲಿ ಸಸ್ಪೆನ್ಸ್, ಥ್ರಿಲ್ಲರ್ , ಆ್ಯಕ್ಷನ್ ಅಂಶಗಳನ್ನು ಸೇರಿಸಿ ತೆರೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಒಂದೊಂದು ಬಾರಿ ಬ್ರ್ಯಾಟ್, ಲಕ್ಕಿ ಭಾಸ್ಕರ್ ಚಿತ್ರವನ್ನು ನೆನಪಿಸುತ್ತದೆ. ಆದರೆ ಅದಕ್ಕಿಂತ ಭಿನ್ನವಾದ

ಚಿತ್ರ : ಬ್ರ್ಯಾಟ್
ನಿರ್ದೇಶನ : ಶಶಾಂಕ್
ನಿರ್ಮಾಣ : ಮಂಜುನಾಥ ಕಂದಕೂರು
ರೇಟಿಂಗ್ : 3

ಸ್ಟೋರಿ ಇಲ್ಲಿದೆ. ಡಾರ್ಲಿಂಗ್ ಕೃಷ್ಣ ತಮ್ಮ ಪಾತ್ರಕ್ಕೆ ಜೀವತುಂಬಿ ನಟಿಸಿದ್ದಾರೆ. ಕೃಷ್ಣ ಆ್ಯಕ್ಷನ್‌ನಲ್ಲಿಯೂ ಮನಗೆದ್ದಿದ್ದಾರೆ. ಮನೀಶಾ ಕಂದಕೂರು ನಟನೆಯಲ್ಲಿ ಇನ್ನೊಂದಷ್ಟು ಪಳಗಬೇಕು ಅನ್ನಿಸುತ್ತದೆ. ಅಚ್ಯುತ್ ಕುಮಾರ್ ಸಹಜಾಭಿನಯದ ಮೂಲಕ ಇಷ್ಟವಾಗುತ್ತಾರೆ. ಉಳಿದಂತೆ ಚಿತ್ರದ ಸಂಗೀತ, ಛಾಯಾಗ್ರಹಣಕ್ಕೆ ಫುಲ್ ಮಾರ್ಕ್ಸ್ ನೀಡಬಹುದು. ನೀನೆ ನಾನಂತೆ... ಹಾಡು ಗುನುಗುತ್ತದೆ.